ಕರ್ನಾಟಕ ಸರ್ಕಾರ

ಕನ್ನಡ ಕಟ್ಟಿದವರು ಮಾಲೆ



# ಜಯದೇವಿತಾಯಿ ಲಿಗಾಡೆ

## ಡಾ. ಸೋಮನಾಥ ಯಾಳವಾರ

ಕನ್ನಡ ಪುಸ್ತಕ ಪ್ರಾಧಿಕಾರ

ಕನ್ನಡ ಕಟ್ಟಿದವರು ಮಾಲೆ

ಪ್ರಧಾನ ಸಂಪಾದಕರು

ಡಾ. ಸಿದ್ಧಲಿಂಗಯ್ಯ

ಸಂಪಾದಕರು

ಡಾ. ಕರೀಗೌಡ ಬೀಚನಹಳ್ಳಿ

# ಜಯದೇವಿತಾಯಿ ಲಿಗಾಡೆ

ಡಾ. ಸೋಮನಾಥ ಯಾಳವಾರ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಬೆಂಗಳೂರು-೫೬೦ ೦೦೨

**JAYADEVI TAYI LIGADE** A Monograph on Jayadevi Tayi Ligade. Written by Dr. Somanatha Yalavara. Published By ***B.H. Mallikarjun,*** Administrative Officer, Kannada Pustaka Pradhikara, Kannada Bhavana, J.C. Road, Bengaluru - 560 002.

© ಈ ಆವೃತ್ತಿಯ ಗ್ರಂಥಸ್ವಾಮ್ಯ - ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

First Impression : 2011
Pages : xiv + 102
Copies : 1000
Price : ₹ 60/-

ಮೊದಲನೆಯ ಮುದ್ರಣ : ೨೦೧೧
ಪುಟಗಳು : xii +೧೦೨
ಪ್ರತಿಗಳು : ೧೦೦೦
ಬೆಲೆ : ₹ ೬೦/-

ಕರಡು ತಿದ್ದಿದವರು : ಲೇಖಕರು

ಪ್ರಕಾಶಕರು:
**ಬಿ.ಎಚ್.ಮಲ್ಲಿಕಾರ್ಜುನ ಕೆ.ಸಿ.ಎ.ಎಸ್.**
ಆಡಳಿತಾಧಿಕಾರಿಗಳು
**ಕನ್ನಡ ಪುಸ್ತಕ ಪ್ರಾಧಿಕಾರ**
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು-೫೬೦ ೦೦೨

ಮುದ್ರಕರು :
**ಮೆ॥ ಪ್ರಿಂಟ್‌ಪಾರ್ಕ್**
೧೪೯೬/೪, ೩ನೇ ಅಡ್ಡರಸ್ತೆ, ಮರಿಯಪ್ಪನಪಾಳ್ಯ,
ಎಂ.ಕೆ.ಕೆ. ರಸ್ತೆ, ಬೆಂಗಳೂರು-೫೬೦ ೦೨೧
ದೂ : ೦೮೦-೨೩೪೨೨೮೩೮

# ಪ್ರಧಾನ ಸಂಪಾದಕರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರವು ವಿವಿಧ ಸಾಹಿತ್ಯ ಮಾಲೆಗಳಡಿಯಲ್ಲಿ ಮಹತ್ವದ ಪುಸ್ತಕಗಳನ್ನು ಪ್ರಕಟಿಸುತ್ತಾ ಬರುತ್ತಿದೆ. ಪುಸ್ತಕೋದ್ಯಮವನ್ನು ಜನಪರವಾಗಿಸುವುದರ ಜೊತೆಗೆ ಜನಸಾಮಾನ್ಯರಿಗೆ ಸುಲಭ ಬೆಲೆಯಲ್ಲಿ ಪುಸ್ತಕಗಳು ಲಭ್ಯವಾಗಬೇಕೆಂಬ ದೃಷ್ಟಿಯಿಂದ ಈ ಮಾಲೆಗಳನ್ನು ಪ್ರಾಧಿಕಾರವು ಪ್ರಾರಂಭಿಸಿರುತ್ತದೆ.

ಈ ದೃಷ್ಟಿಯಿಂದ ಪ್ರಾಧಿಕಾರವು ಕೈಗೊಂಡಿರುವ ಮಹತ್ವದ ಯೋಜನೆಗಳಲ್ಲಿ 'ಕನ್ನಡ ಕಟ್ಟಿದವರು ಮಾಲೆ'ಯೂ ಒಂದು. ಕನ್ನಡನಾಡು, ನುಡಿ, ಕಲೆ, ಸಂಸ್ಕೃತಿಯೇ ಮೊದಲಾದ ವಿವಿಧ ಕ್ಷೇತ್ರಗಳಲ್ಲಿ ಅಪಾರವಾದ ಸೇವೆಯನ್ನು ಸಲ್ಲಿಸಿಯೂ ಅಜ್ಞಾತರಾಗಿ ಉಳಿದ ವ್ಯಕ್ತಿಗಳನ್ನು ಒಳಗೊಂಡಂತೆ ಕನ್ನಡ ನಾಡು, ನುಡಿಯನ್ನು ಕಟ್ಟುವಲ್ಲಿ ನೆರವಾದ ಮಹನೀಯರನ್ನು ಕುರಿತು ಕಿರುಹೊತ್ತಿಗೆಗಳನ್ನು ಈ ಮಾಲೆಯಡಿ ಪ್ರಕಟಿಸಲಾಗುತ್ತಿದೆ. ಈ ಮಾಲೆಯನ್ನು ಅತ್ಯಂತ ರಚನಾತ್ಮಕವಾಗಿ ರೂಪಿಸಬೇಕೆಂಬ ದೃಷ್ಟಿಯಿಂದ ಒಂದು ಸಂಪಾದಕ ಮಂಡಳಿಯನ್ನು ಪ್ರಾಧಿಕಾರವು ರಚಿಸಿತು. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಪ್ರೊ. ಸುಕನ್ಯಾ ಮಾರುತಿ, ಡಾ. ಎಚ್.ಟಿ. ಪೋತೆ, ಶ್ರೀ ಪ್ರಕಾಶ್ ಕಂಬತ್ತಳ್ಳಿ ಇವರನ್ನು ಸದಸ್ಯರನ್ನಾಗಿಯೂ ಪ್ರಾಧಿಕಾರವು ನೇಮಿಸಿತು. ಕನ್ನಡ ನಾಡು ನುಡಿ ಕ್ಷೇತ್ರದಲ್ಲಿ ಅಪಾರ ಪರಿಶ್ರಮವನ್ನು ಹೊಂದಿರುವ ಈ ಮಹನೀಯರು ಈ ಮಾಲಿಕೆಯಡಿ ಬರೆಸಬೇಕಾದ ನೂರಾರು ವ್ಯಕ್ತಿಗಳ ಹಾಗೂ ಅವರನ್ನು ಕುರಿತು ಬರೆಯಬಹುದಾದ ಲೇಖಕರ ಪಟ್ಟಿಯನ್ನು ಪರಿಶ್ರಮವಹಿಸಿ ಸಿದ್ಧಪಡಿಸಿಕೊಟ್ಟು ಉಪಕರಿಸಿರುತ್ತಾರೆ. ಸಂಪಾದಕ ಮಂಡಳಿಯು ಸಮರ್ಥವಾಗಿ ಈ ಮಾಲಿಕೆಯ ಹಸ್ತಪ್ರತಿಗಳನ್ನು ಪರಿಶೀಲಿಸಿ ಕೊಟ್ಟಿರುತ್ತದೆ. ಸಂಪಾದಕರಾದ ಡಾ. ಕರೀಗೌಡ ಬೀಚನಹಳ್ಳಿ ಅವರಿಗೆ, ಸಂಪಾದಕ ಸಮಿತಿಯ ಸದಸ್ಯರಿಗೆ ಹಾಗೂ ಎಲ್ಲ ಲೇಖಕರಿಗೆ ನನ್ನ ಕೃತಜ್ಞತೆಗಳು.

ಈ ಮಾಲೆಯ ಪುಸ್ತಕಗಳನ್ನು ಹೊರತರುವಲ್ಲಿ ಪ್ರಾರಂಭದಿಂದ ವಿಶೇಷ ಆಸಕ್ತಿ ವಹಿಸಿದ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ ಅವರಿಗೆ, ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ. ಮುಕುಂದನ್

ಅವರಿಗೆ, ಶ್ರೀ ಜೆ.ಎನ್. ಶ್ಯಾಮರಾವ್ ಅವರಿಗೆ ಹಾಗೂ ಪ್ರಾಧಿಕಾರದ ಎಲ್ಲಾ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ ಅಭಾರಿಯಾಗಿದ್ದೇನೆ. ಈ ಮಾಲೆಯ ಎಲ್ಲಾ ಕೃತಿಗಳನ್ನು ಕನ್ನಡ ವಾಚಕರು ತುಂಬುಹೃದಯದಿಂದ ಸ್ವಾಗತಿಸುತ್ತಾರೆಂದು ಆಶಿಸುತ್ತೇನೆ.

(ಡಾ. ಸಿದ್ಧಲಿಂಗಯ್ಯ)
ಅಧ್ಯಕ್ಷರು

# ಕನ್ನಡ ಕಟ್ಟಿದವರು ಮಾಲೆ

ಪ್ರಧಾನ ಸಂಪಾದಕರು

**ಡಾ. ಸಿದ್ಧಲಿಂಗಯ್ಯ**

ಸಂಪಾದಕರು

**ಡಾ. ಕರೀಗೌಡ ಬೀಚನಹಳ್ಳಿ**

ಸಂಪಾದಕ ಮಂಡಳಿ

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

ಶ್ರೀ ಹೊರೆಯಾಲ ದೊರೆಸ್ವಾಮಿ

ಪ್ರೊ. ಸುಕನ್ಯಾ ಮಾರುತಿ

ಡಾ. ಎಚ್. ಟಿ. ಪೋತೆ

ಶ್ರೀ ಪ್ರಕಾಶ್ ಕಂಬತ್ತಳ್ಳಿ

ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ

ಆಡಳಿತಾಧಿಕಾರಿಗಳು

# ಅರಿಕೆ

ಕರ್ನಾಟಕವು ಏಕೀಕರಣಗೊಂಡು ಈಗಾಗಲೇ ಅರ್ಧಶತಮಾನ ದಾಟಿ ಹೋಗಿದೆ ಪ್ರತಿವರ್ಷ ನಾವು ಸಂಭ್ರಮ, ಸಂತೋಷದಿಂದ ರಾಜ್ಯೋತ್ಸವವನ್ನು ಆಚರಿಸುತ್ತಿದ್ದೇವೆ, ಆದರೂ ಗಡಿನಾಡ ಸಮಸ್ಯೆಗಳು ಇನ್ನೂ ಜೀವಂತವಾಗಿ ಉಳಿದಿವೆ. ಕವಿರಾಜ ಮಾರ್ಗಕಾರ ಹೇಳುವ ಕನ್ನಡ ನಾಡು ಈಗಿಲ್ಲ. ನಮ್ಮ ಪ್ರಾಚೀನ ಕನ್ನಡ ನಾಡಿನ ಪ್ರಮುಖ ಭಾಗಗಳು ಸುತ್ತ ಮುತ್ತಲ ರಾಜ್ಯದ ಗಡಿಯಲ್ಲಿ ಸೇರಿಕೊಂಡಿವೆ. ಈ ಗಡಿ ಸಮಸ್ಯೆ ಇಂದಿಗೂ ಬಿಡಿಸಲಾರದ ಒಂದು ಕಗ್ಗಂಟಾಗುತ್ತಿರುವುದು ವಿಪರ್ಯಾಸದ ಸಂಗತಿ. ಅದರಲ್ಲೂ ಮಹಾರಾಷ್ಟ್ರ ಗಡಿನಾಡ ಪ್ರದೇಶದ ಕನ್ನಡ ಜನತೆಯ ಬದುಕು ಅಭದ್ರ ಸ್ಥಿತಿಯಲ್ಲಿರುವುದು ನಮ್ಮ ನೇತಾರರ ಕಣ್ಣಿಗೆ ಕಾಣದ ಕಟು ಸತ್ಯವಾಗಿದೆ. ಇತ್ತೀಚಿನ ಬೆಳಗಾವಿಯ ಘಟನೆಯೇ ಇದಕ್ಕೆ ಸಾಕ್ಷಿ. ಬೆಳಗಾವಿ ಪ್ರಕರಣದ ನಂತರವೂ ಇಂತಹ ಅನೇಕ ಘಟನೆಗಳು ಗಗಿನಾಡಿನಲ್ಲಿ ನಡೆಯುತ್ತಿರುವುದನ್ನು ನೋಡಿದರೆ ಈ ಗಡಿ ಸಮಸ್ಯೆಯ ಜಟಿಲತೆ ಕಣ್ಕಟ್ಟುತ್ತದೆ. ಗಡಿನಾಡ ಕನ್ನಡಿಗರು ಭಾಷಾ ಸಮಸ್ಯೆ, ಶಿಕ್ಷಣ ಸಮಸ್ಯೆ , ಶಿಕ್ಷಕರ ಕೊರತೆ.ಅಭಿವೃದ್ಧಿ ಸಮಸ್ಯೆಗಳಂತಹ ಹಲವು ಹತ್ತು ಸಮಸ್ಯೆಗಳ ಸುಳಿಯಲ್ಲಿ ಸಿಲುಕಿ ದಿನಾಲು ನಲುಗಿ ಹೋಗುತ್ತಿದ್ದಾರೆ ಈ ಗಡಿ ಪ್ರದೇಶದ ಕನ್ನಡ ಜನತೆಯ ಬದುಕನ್ನು ನಿರ್ಲಕ್ಷಿಸಿ ತಮ್ಮ ಲಾಭಕ್ಕಾಗಿ ಮಹಾರಾಷ್ಟ್ರ ಸರ್ಕಾರ ಹಲವು ಏಕೀಕರಣ ಸಮಿತಿಗಳನ್ನು ರಚಿಸಿ ತನ್ನ ತಾಳಕ್ಕೆ ತಕ್ಕಂತೆ ಅವುಗಳನ್ನು ಕುಣಿಸುತ್ತ ಬಂದು ಕನ್ನಡ ನಾಡಿಗೆ ಅನ್ಯಾಯ ಬಗೆದಿದೆ. ಕನ್ನಡ ನಾಡು ನುಡಿಗೆ ಅನೇಕ ಸಲ ಅಗೌರವ ತೋರುತ್ತ ಬಂದಿರುವ ಮಹಾರಾಷ್ಟ್ರವನ್ನು ಕೇಂದ್ರವೂ ಪರೋಕ್ಷವಾಗಿ ಪ್ರೋತ್ಸಾಹಿಸುತ್ತಿರುವುದು ಆತಂಕಕಾರಿ ಸಂಗತಿ ಎನ್ನುಬಹುದು. ಇಂದಿನ ಈ ಸ್ಥಿತಿ ಬಗೆಹರಿಯವ ಲಕ್ಷಣಗಳು ಕಾಣದಿರುವುದು ದುರ್ದೈವದ ವಿಷಯ

ಗಡಿನಾಡಿನ ಕನ್ನಡದ ಈ ಸಮಸ್ಯೆಯ ಸೂಕ್ಷ್ಮತೆಯನ್ನು ಈ ಮೊದಲೇ ತಿಳಿದಿದ್ದ ಜಯದೇವಿ ತಾಯಿ ಲಿಗಾಡೆಯವರು ಅಖಂಡ ಕರ್ನಾಟಕದ ಸಲುವಾಗಿ ಸ್ವಾತಂತ್ರ್ಯ ಪೂರ್ವದಲ್ಲಿಯೇ ಹೋರಾಟಕ್ಕಿಳಿದಿದ್ದರು. ಅನ್ಯಭಾಷೆಯನ್ನು ಮಾತಾಡುತ್ತಿದ್ದ ಕನ್ನಡಿಗರನ್ನು ಎಚ್ಚರಿಸಿದರು. ಸೊಲ್ಲಾಪುರದಲ್ಲಿ 'ಕನ್ನಡ ಕೋಟೆ'ಯನ್ನು ಕಟ್ಟಿದರು. ಕನ್ನಡ ನಾಡಿನ ಭವ್ಯ ಭವಿಷ್ಯಕ್ಕಾಗಿ ತಮ್ಮತನವನ್ನಿತ್ತು ಅದನ್ನು ಬೆಳೆಸಿದ ಕೀರ್ತಿ ತಾಯಿ ಯವರದು. ಕನ್ನಡವೆಂದರೆ ಸದಾ ಕುಣಿವ ಅವರಿಗೆ ಕನ್ನಡವೇ ಅಭಿಮಾನದ ತವರು, ಅದನ್ನೇ ಉಸಿರನ್ನಾಗಿ ಮಾಡಿಕೊಂಡು ಕನ್ನಡಕ್ಕಾಗಿ ತಮ್ಮ ಜೀವನವನ್ನು ಮುಡಿ ಪಾಗಿಟ್ಟು ಕನ್ನಡದ ಮಣ್ಣಲ್ಲೇ ಬೆರೆತು ಹೋಗಿರುವ ದಿವ್ಯ ಚೇತನ ಅವರು. ಅವರ ಉತ್ಸಾಹ, ಸಾಹಿತ್ಯಸೇವೆ, ಕತೃತ್ವಶಕ್ತಿ ಅನುಪಮವಾದುದು. ಕನ್ನಡ ಗೌರವಾಭಿಮಾನ ವನ್ನು ಗಡಿಭಾಗದಲ್ಲಿ ಮತ್ತು ಮಹಾರಾಷ್ಟ್ರದಲ್ಲಿ ಮಾನ್ಯವಾಗುವಂತೆ ಮಾಡಿದ ಯಶಸ್ಸು ಅವರದು, 'ಗಡಿನಾಡಿನ ಸಿಂಹಿಣಿ' ಎಂದು ಕರೆಸಿಕೊಂಡಿರುವ ಲಿಗಾಡೆ ತಾಯಿಯವರು ಗಡಿನಾಡನ್ನು ಒಂದುಗೂಡಿಸಲು ಶ್ರಮಿಸಿದರು. "ಸಮತೆಯ ಹಾಲೊಳಗೆ, ಮಮತೆಯ

ಸಕ್ಕರೆ, ಸುಮನದಿ ಕೈಯಿಂದ ಬೆರೆಸಿ ಸಹಕರಿಸಿದ ಸಮನಾದ ಬದುಕು ಬೆಳೆಯಲಿ" ಎಂದು ತಮ್ಮ ಜೀವನದುದ್ದಕ್ಕೂ ಬಯಸುತ್ತ ಆ ದಿಸೆಯಲ್ಲೇ ಅಗಾಧವಾದ ಸಾಹಿತ್ಯವನ್ನು ರಚಿಸಿದರು.

ಜಯದೇವಿಯವರು ಕನ್ನಡ ಸಾಹಿತ್ಯಕ್ಕೆ ಕೊಟ್ಟಿರುವ ಕೊಡುಗೆ ಅಪಾರ ಅವರ "ಸಿದ್ಧರಾಮೇಶ್ವರ ಪುರಾಣ" ಕನ್ನಡ ಸಾರಸ್ವತ ಲೋಕದಲ್ಲೊಂದು ಮೈಲುಗಲ್ಲು. ಅವರ ಇನ್ನುಳಿದ ಕಾವ್ಯಗಳು ಉತ್ತಮ ಕೃತಿಗಳು. ಜಯದೇವಿ ತಾಯಿಯವರ ಸಿದ್ಧರಾಮನ ಮೇಲಿನ ಭಕ್ತಿ ಅನನ್ಯವಾದುದು, ಅದನ್ನು ತಮ್ಮೆಲ್ಲ ಕೃತಿಗಳಲ್ಲಿ ಹೆಪ್ಪುಗಟ್ಟಿಸಿರುವ ಅವರು ತ್ರಿಪದಿ ಛಂದಸ್ಸಿನಲ್ಲಿ ಮೀಸಲಿಟ್ಟಿದ್ದಾರೆ ವಚನಕಾರ್ತಿಯಾಗಿ, ಅನುಭಾವಿಯಾಗಿ, ಶರಣೆಯಾಗಿ, ಕನ್ನಡದ ಕಣ್ಮಣಿಯಾಗಿ, ವಿಶೇಷವಾಗಿ ತಾಯಿಯಾಗಿ, ಅವರು ನೀಡಿರುವ ಸಾಹಿತ್ಯ, ಕನ್ನಡ ನಾಡು ನುಡಿ ಕಟ್ಟಿರುವ ಅವರ ಹೋರಾಟ, ಎಂದೆಂದೂ ಆದರಣೀಯವಾದುದು. ಕನ್ನಡ ನಾಡು ಎಂದೂ ಮರೆಯಲಾರದ ಅವರ ಸಾಮಾಜಿಕ ಸೇವೆ ಬಹುಮುಖವಾದುದು.

ಇಂಥ ಮಹಾನ್ ವ್ಯಕ್ತಿತ್ವವನ್ನು ರೂಪಿಸಿಕೊಂಡ 'ಜಯದೇವಿ ತಾಯಿ ಲಿಗಾಡೆ'ಯವರ ಜೀವನ ಸಾಧನೆಗಳನ್ನು ಕುರಿತು 'ಕನ್ನಡ ಕಟ್ಟಿದವರು' ಮಾಲಿಕೆಯಲ್ಲಿ ಕನ್ನಡದ ಪ್ರತಿಷ್ಠಿತ ಸಂಸ್ಥೆ 'ಕನ್ನಡ ಪ್ರಾಧಿಕಾರ ಪುಸ್ತಕ ರಚಿಸಲು ಆದೇಶಿಸಿದ್ದು ಶ್ಲಾಘನೀಯ' ಈ 'ಕನ್ನಡ ಕುಲ ರಕ್ಷಕಿಯನ್ನು ಕುರಿತು ಬರೆಯದವರಿಲ್ಲ' ಸೂರ್ಯ ನಾರಾಯಣ ಚಡಿಗರು' 'ಅಭಿನಂದನ ಗ್ರಂಥ' 'ಜಯದೇವಿ ತಾಯಿ'ಯನ್ನು ಸಂಪಾದಿಸಿದ್ದಾರೆ. ಡಾ॥ ಸರೋಜಿನಿ ಚವಲಾರರು 'ಜಯದೇವಿ ತಾಯಿ ಲಿಗಾಡೆ' ಎಂಬ ಪ್ರಬಂಧವನ್ನು (ಕ.ಸಾ.ಪ.ದಿಂದ) ಪ್ರಕಟಿಸಿದ್ದಾರೆ ಬಿ.ಎಸ್.ಸ್ವಾಮಿಯವರು 'ಶರಣೆ ಜಯದೇವಿ ತಾಯಿ' ಎಂಬ ಚಿಕ್ಕ ಪುಸ್ತಕವನ್ನು ರಚಿಸಿರುವರು ಹೊಸಗನ್ನಡ ಸಾಹಿತ್ಯ ನಿರ್ಮಾಪಕರು ಮಾಲಿಕೆಯಲ್ಲಿ ಕ.ಸಾ.ಪ.ದಿಂದ ಡಾ. ಚನ್ನಾಂಬಿಕಾ ಪಾವಟೆಯವರು 'ಜಯದೇವಿ ತಾಯಿ ಲಿಗಾಡೆ' ಕೃತಿಯನ್ನು ಪ್ರಕಟಗೊಳಿಸಿದ್ದಾರೆ. ಈ ಎಲ್ಲರನ್ನು ಸ್ಮರಣೆಯಲ್ಲಿಟ್ಟುಕೊಂಡು 'ಗಡಿನಾಡ ಕನ್ನಡತಿ ಜಯದೇವಿ ತಾಯಿ ಲಿಗಾಡೆ' ಎಂಬ ಈ ಕೃತಿಯನ್ನು ಕನ್ನಡಿಗರಿಗೆ ಸಮರ್ಪಿಸುತ್ತಿದ್ದೇನೆ. ಈ ಕೃತಿ ರಚನೆಗೆ ಅವಕಾಶ ಮಾಡಿಕೊಟ್ಟ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯನವರಿಗೂ ಮಲ್ಲೇಪುರಂ.ಜಿ. ವೆಂಕಟೇಶ್ ಅವರಿಗೂ ಆತ್ಮೀಯರಾದ ಎಚ್.ಟಿ. ಪೋತೆಯವರಿಗೂ ಕೃತಜ್ಞತೆಗಳು. ಈ ಕೃತಿ ರಚನೆಗೆ ಪುಸ್ತಕಗಳನ್ನು ಒದಗಿಸಿ ಸಹಕರಿಸಿದ ಡಾ. ಜಗನ್ನಾಥ ಹೆಬ್ಬಾಳೆ, ಡಾ. ಗಂಗಾಂಬಿಕೆ ಪಾಟೀಲ, ಡಾ. ಬಸವರಾಜ ಬಲ್ಲೂರ, ಡಾ. ಅರುಣಾ ಎಸ್. ಇವರಿಗೂ ಬರವಣಿಗೆಯಲ್ಲಿ ಸಹಾಯ ಸಹಕಾರ ನೀಡಿದ ಅರ್ಧಾಂಗಿ ಸೌ. ಸುಲೋಚನಾ ಹಾಗೂ ಮಗಳು ಶಾಂತಲಾ ಮಗ ಮೃತ್ಯುಂಜಯ ಅವರಿಗೂ ಹೃತ್ಪೂರ್ವಕ ಕೃತಜ್ಞತೆಗಳು.

ಡಾ. ಸೋಮನಾಥ ಯಾಳವಾರ
ಲೇಖಕರು

# ಸಂಪಾದಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಪುಸ್ತಕ ಪ್ರಾಧಿಕಾರವು 'ಕನ್ನಡ ಕಟ್ಟಿದವರು ಮಾಲೆ'ಯಡಿಯಲ್ಲಿ ಕನ್ನಡ ನಾಡು, ನುಡಿ, ಸಾಹಿತ್ಯ, ಶಿಕ್ಷಣ, ಕಲೆ, ಸಂಸ್ಕೃತಿ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಅಪರೂಪದ ವ್ಯಕ್ತಿಗಳ ಜೀವನ, ಸಾಧನೆ, ವ್ಯಕ್ತಿತ್ವ ಮತ್ತು ಈ ನಿಟ್ಟಿನಲ್ಲಿ 'ಸಂಪಾದಕ ಸಮಿತಿ'ಯೊಂದನ್ನು ರಚಿಸಿ ನಮ್ಮನ್ನು ಆಹ್ವಾನಿಸಿದಾಗ ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಸಂತೋಷದಿಂದ ನಾವು ಒಪ್ಪಿಕೊಂಡೆವು. ಅನಂತರ ಈ ಸಮಿತಿಯು ಸೇರಿ ಹಲವು ಸಭೆಗಳನ್ನು ನಡೆಸಿ ಈ ಮಾಲೆಯ ಪುಸ್ತಕಗಳ ಸ್ವರೂಪ, ಬರೆಸಬೇಕಾದ ವ್ಯಕ್ತಿಗಳ ಹಾಗೂ ಬರೆಯುವ ಲೇಖಕರ ಪಟ್ಟಿ ಇದನ್ನೆಲ್ಲಾ ಸಿದ್ಧಪಡಿಸಲಾಯಿತು. ಈ ಮಾಲೆಯ ಪುಸ್ತಕಗಳು ಮುಖ್ಯವಾಗಿ ಈ ಕೆಳಕಂಡ ರೀತಿಯಲ್ಲಿ ಮೂರು ಮುಖ್ಯ ವಿಷಯಗಳನ್ನು ಒಳಗೊಂಡಿರಬೇಕೆಂದು ತೀರ್ಮಾನಿಸಿ ಕಾರ್ಯೋನ್ಮುಖ ರಾದೆವು.

೧. ಆಯಾ ವ್ಯಕ್ತಿಗಳ ಬಾಲ್ಯ, ವಿದ್ಯಾಭ್ಯಾಸ, ಕೌಟುಂಬಿಕ ಹಿನ್ನೆಲೆ - ವಿವರಗಳನ್ನು, ಗಣ್ಯರೊಡನೆ ಒಡನಾಟ, ಪಡೆದ ಪ್ರೇರಣೆ-ಪ್ರಭಾವಗಳು, ಭಾಗವಹಿಸಿದ ಚಳುವಳಿ- ಹೋರಾಟಗಳು, ಸಂಘಟನೆಗಳು, ನಾಡು-ನುಡಿ-ಸಾಹಿತ್ಯ-ಸಂಸ್ಕೃತಿಗೆಸಲ್ಲಿಸಿದ ಸೇವೆಗಳು, ಮಾನವೀಯ ಗುಣ-ನಡತೆ ಇತ್ಯಾದಿ ವಿವರಗಳನ್ನು ಅಡಕವಾಗಿ ಈ ಪುಸ್ತಕಗಳಲ್ಲಿ ಅಳವಡಿಸಿ ಬರೆಯಬೇಕು.

೨. ಆಯಾ ವ್ಯಕ್ತಿಗಳ ಜೀವನ ಹಾಗೂ ಸಾಧನೆಗಳನ್ನು ದಾಖಲು ಮಾಡುವಾಗ ಅಧಿಕೃತ ದಾಖಲೆಗಳನ್ನು ಅವಲಂಬಿಸಿ ಬರೆಯಬೇಕು; ಆದಷ್ಟು ಕ್ಷೇತ್ರಕಾರ್ಯ ಮಾಡಿ ಮಾಹಿತಿಗಳನ್ನು ಕಲೆಹಾಕಿ ವಸ್ತುನಿಷ್ಠವಾಗಿ ನಿರೂಪಿಸಬೇಕು.

೩. ಎಲ್ಲಾ ಬರೆಯ ಓದುಗರನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಪುಸ್ತಕಗಳನ್ನು ಸರಳವಾಗಿ, ಸಂಕ್ಷಿಪ್ತವಾಗಿ ಮತ್ತು ಸ್ಪಷ್ಟವಾಗಿ ಬರೆಯಬೇಕು.

ಹಲವಾರು ಜನ ಎಲೆಮರೆಯ ಕಾಯಂತೆ, ಕರ್ನಾಟಕದ ಏಳ್ಗೆಗಾಗಿ ದುಡಿದು ಕಣ್ಮರೆಯಾಗಿದ್ದಾರೆ. ಆದರೆ ಅಂತಹವರ ಬಗ್ಗೆ ಸಾಹಿತ್ಯ ಚರಿತ್ರೆಯಲ್ಲಿ ಒಂದು ಸಣ್ಣ ದಾಖಲೆಯೂ ಸಿಗುವುದಿಲ್ಲ. ಈ ನಿಟ್ಟಿನಲ್ಲಿ ಶ್ರಮಿಸಿದ ಅನೇಕ ಜನರ ಹೋರಾಟದ ಕಥೆ ನೇಪಥ್ಯಕ್ಕೆ ಸರಿದು ಹೋಗಿದೆ. ಅಂತಹ ವ್ಯಕ್ತಿಗಳ ಚರಿತ್ರೆಯನ್ನು ಇಂದು ಹುಡುಕಿ ಹೊರ ತೆಗೆದು ದಾಖಲಿಸಿ ಅವರ ಸೇವೆಯ.ನ್ನು ಕೃತಜ್ಞತೆಯಿಂದ ಸ್ಮರಿಸಬೇಕಾಗಿದೆ. ಇಂತಹವರ ಹೋರಾಟದ ಜೀವನವು ಮುಂದಿನ ಪೀಳಿಗೆಗೆ ಆದರ್ಶವೂ ಅನುಕರಣೀಯವೂ ಆಗಬೇಕಾಗಿದೆ. ಈ ಪುಸ್ತಕಗಳಲ್ಲಿ ದೊಡ್ಡ ಗ್ರಂಥಗಳಲ್ಲಿ ಹೇಳಬಹುದಾದ ವಿವರಗಳೆಲ್ಲವನ್ನೂ ಹೇಳಲಾಗದಿದ್ದರೂ ಸೂಕ್ಷ್ಮವಾಗಿ, ಸಂಕ್ಷಿಪ್ತವಾಗಿ

ಮತ್ತು ಪರಿಣಾಮಕಾರಿಯಾಗಿ ಹೇಳಲಾಗಿದೆ. ಈ ಪುಸ್ತಕಗಳನ್ನು ಓದುವಾಗ ಇವರ ವ್ಯಕ್ತಿತ್ವ, ಸಾಧನೆ, ಹೋರಾಟ, ವಿಚಾರಲಹರಿ, ಆಸಕ್ತಿಗಳು ಇನ್ನಷ್ಟು ಸ್ಫುಟಗೊಳ್ಳುತ್ತಾ ಹೋಗುತ್ತವೆ; ಇವರ ವಿಷಯಗಳಲ್ಲಿ ಪ್ರೀತ್ಯಾದರಗಳು ಇಮ್ಮಡಿಗೊಳ್ಳುವುದರ ಜೊತೆಗೆ ಕನ್ನಡ ಪುನರುಜ್ಜೀವನದ ಸಂದರ್ಭಗಳು ಹಾಗೂ ಸವಾಲುಗಳು ಸ್ಫುಟಗೊಳ್ಳುತ್ತವೆ. ಇವರು ಬರೀ ಕನ್ನಡ ನಾಡು, ನುಡಿ, ಸಾಹಿತ್ಯ ಕಟ್ಟಿದವರು ಮಾತ್ರವಲ್ಲ; ಇವರು ಕನ್ನಡ ಸಂಸ್ಕೃತಿಯ ನಿರ್ಮಾಪಕರೂ ಹೌದು. ಕನ್ನಡ ಸಂಸ್ಕೃತಿಯ ಬಗೆಗೆ ಮತ್ತು ಕನ್ನಡಿಗರ ಬದುಕಿನ ಬಗೆಗೆ ಕೆಲಸ ಮಾಡುವ ಯಾರಿಗಾದರೂ ಈ ವ್ಯಕ್ತಿಗಳು ಪ್ರೇರಕಶಕ್ತಿಗಳಾಗಿದ್ದಾರೆ.

ಮೊದಲಿಗೆ ಇಂತಹ ನೂರು ಜನ ಮಹನೀಯರ ಬಗ್ಗೆ ಕಿರುಹೊತ್ತಿಗೆಗಳನ್ನು ಬರೆಸಬೇಕೆಂದು ಸಮಿತಿಯು ಪಟ್ಟಿ ಮಾಡಿ ಬರೆದುಕೊಡುವಂತೆ ನೂರು ಜನ ನುರಿತ ಲೇಖಕರನ್ನು ಗುರುತಿಸಿ ಅವರಿಗೆ ಪತ್ರ ಬರೆಯಲಾಯಿತು. ಆದರೆ ಬರೆಯುವವರು ಸಿಗುವುದು ಬಹಳ ಕಷ್ಟ ಎಂಬ ಸಂಗತಿ ನಂತರ ನಮಗೆ ಮನವರಿಕೆಯಾಯಿತು. ಕೊನೆಗೆ ಈ ಮಾಲೆಗೆ ಇನ್ನೂ ಕೆಲವರು ಬರೆಯುತ್ತಿರುವುದಾಗಿ ತಿಳಿಸಿದ್ದರೂ, ಬರೆದು ಬಂದಂತಹ ಹಸ್ತಪ್ರತಿಗಳು ೩೫ ಮಾತ್ರ. ಅವುಗಳನ್ನೆಲ್ಲಾ ಸಂಪಾದಕ ಮಂಡಳಿಯ ಸದಸ್ಯರೆಲ್ಲಾ ಓದಿ, ಪರಿಶೀಲಿಸಿ, ತಿದ್ದುಪಡಿಗಳಿದ್ದರೆ ಲೇಖಕರಿಗೆ ಅವುಗಳನ್ನು ಸೂಚಿಸಿ ನಂತರ ಹಸ್ತಪ್ರತಿಗಳನ್ನು ಮುದ್ರಣಕ್ಕೆ ಅಂತಿಮಗೊಳಿಸಲಾಯಿತು.

ಈ ಯೋಜನೆಯ ಪ್ರತಿಯೊಂದು ಹಂತದಲ್ಲಿಯೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯ ಅವರು ತಮ್ಮ ಸಲಹೆ, ಸಹಾಕರವನ್ನು ನೀಡಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ ಅವರು, ಅಧ್ಯಕ್ಷರ ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ. ಮುಕುಂದನ್ ಅವರು ಹಾಗೂ ಅವರ ಸಿಬ್ಬಂದಿ, ಇಂತಹ ಜವಾಬ್ದಾರಿಯನ್ನು ವಹಿಸಿದ ಕನ್ನಡ ಪುಸ್ತಕ ಪ್ರಾಧಿಕಾರದ ಗೌರವಾನ್ವಿತ ಸದಸ್ಯರು - ಇವರೆಲ್ಲರ ಸಲಹೆ, ಸಹಕಾರ ನಮಗೆ ದೊರೆತಿರುತ್ತದೆ. ಇದರ ಸಂಪಾದಕ ಸಮಿತಿ ಸದಸ್ಯರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಪ್ರೊ. ಸುಕನ್ಯಾ ಮಾರುತಿ, ಡಾ. ಎಚ್.ಟಿ. ಪೋತೆ, ಶ್ರೀ ಪ್ರಕಾಶ್ ಕಂಬತ್ತಹಳ್ಳಿ - ಇವರೆಲ್ಲರ ಸಲಹೆ, ಸಹಕಾರ ಹಾಗೂ ಸಾಮೂಹಿಕ ಪ್ರಯತ್ನದ ಫಲವಾಗಿ ಈ ಕೃತಿಗಳು ಸಕಾಲದಲ್ಲಿ ಪ್ರಕಟವಾಗಲು ಕಾರಣವಾಗಿದೆ. ಹೀಗೆ ಇಂತಹ ಒಂದು ಅಪರೂಪದ ಯೋಜನೆ ಯೊಂದನ್ನು ಅನುಷ್ಠಾನಗೊಳಿಸಲು ನೆರವಾದ ಎಲ್ಲರಿಗೂ ಸಂಪಾದಕ ಸಮಿತಿಯ ಪರವಾಗಿ ಕೃತಜ್ಞತೆಗಳು.

**ಡಾ. ಕರೀಗೌಡ ಬೀಚನಹಳ್ಳಿ**
ಸಂಪಾದಕ

## ೧. ಪೀಠಿಕೆ

ಆಡಳಿತಾತ್ಮಕ ಕಾರಣಗಳಿಗಾಗಿ ಬ್ರಿಟಿಷರು ಬಂಗಾಲವನ್ನು ವಿಭಜಿಸಿದಾಗ ಆರಂಭವಾದ ಪ್ರತಿಭಟನೆ, ಭಾಷಾವಾರು ಪ್ರಾಂತ್ಯ ರಚನೆಗೆ ಪ್ರೇರಣೆ ನೀಡಿತು. ಸು.೨೨ಕ್ಕಿಂತ ಹೆಚ್ಚು ಆಡಳಿತಗಳಲ್ಲಿ ಹಂಚಿಹೋಗಿದ್ದ ಕರ್ನಾಟಕವನ್ನು ಒಂದುಗೂಡಿಸವ ಪ್ರಯತ್ನದಲ್ಲಿ ಕರ್ನಾಟಕದ ಎಲ್ಲ ಭಾಗದ ಜನರು ಹೋರಾಟ ಮಾಡಿದರು. ಅನೇಕ ಅಡ್ಡಿ ಆತಂಕಗಳ ನಡುವೆ ಕರ್ನಾಟಕ ಒಂದಾಯಿತಾದರೂ ಮೂಲ ಕರ್ನಾಟಕದ ಹಲವು ಭಾಗಗಳು ಮಹಾರಾಷ್ಟ್ರ, ಆಂದ್ರ ಪ್ರದೇಶಕ್ಕೆ ಸೇರಿಕೊಂಡವು. ಈ ನಿಟ್ಟಿನಲ್ಲಿ ಹೋರಾಟ ಮಾಡಿದವರ ಮಾಲಿಕೆಯಲ್ಲಿ 'ಜಯದೇವಿ ತಾಯಿ ಲಿಗಾಡೆ' ಯವರೂ ಒಬ್ಬರು.

'ಜಯದೇವಿ ತಾಯಿ' ಯವರು ಮಹಾಕವಿಯತ್ರಿ ಸಮಾಜ ಸೇವಕಿ, ಶರಣೆ. ಸಿದ್ಧರಾಮನ ಪರಮ ಭಕ್ತೆಯಾಗಿದ್ದ ಇವರು ಕರ್ನಾಟಕದ ಏಕೀಕರಣಕ್ಕಾಗಿ ದುಡಿದವರಾಗಿದ್ದಾರೆ. ಗಡಿನಾಡಿನಲ್ಲಿ ಬಾಳಿಹೋಗಿರುವ ಇವರು ಮಹಾನ್ ದೇಶಾಭಿಮಾನಿ ಹಾಗೂ ಉಜ್ವಲ ಕನ್ನಡಾಭಿಮಾನಿಯಾಗಿದ್ದರು. ಅಖಂಡ ಕರ್ನಾಟಕದ ಕನಸು ಕಂಡ 'ತಾಯಿ' ಯವರು ಕರ್ನಾಟಕ ಏಕೀಕರಣಕ್ಕಾಗಿ ಹೋರಾಡಿ ತಮ್ಮ ಜೀವನವನ್ನು ನಾಡು ನುಡಿಗಾಗಿ ಮೀಸಲಿಟ್ಟು 'ಗಡಿನಾಡ ಸಿಂಹಿಣಿ' ಎನಿಸಿಕೊಂಡಿದ್ದರು. 'ಗಡಿಭಾಗವೆಂದರೂ ಕಡಿಮೆಯಿಲ್ಲ ಕನ್ನಡಕೆ ಉಡಿಯ ತುಂಬುವೆ ಪದಗಳಿಂದ' ಎಂದು ಹಾಡುತ್ತ, ಹಲವಾರು ಪ್ರಮುಖ ವೇದಿಕೆಗಳ ಮೂಲಕ ಸಭೆಗಳಲ್ಲಿ ಭಾಗವಹಿಸಿ ಭಾಷಣಗಳನ್ನು ಮಾಡುತ್ತ ಕನ್ನಡ ಕಹಳೆಯನ್ನು ಮೊಳಗಿಸಿದವರು. ಪತಿಯ ಮರಣ, ದೈಹಿಕ ಅನಾರೋಗ್ಯದ ಸಂದರ್ಭಗಳಲ್ಲೂ ಸಮಾಜ ಸೇವೆಯನ್ನು ಬಿಡದೆ ಈ ತಾಯಿಯವರು ಸಾಂಸಾರಿಕ, ಸಾಮಾಜಿಕ ಹಾಗೂ ಸಾಹಿತ್ಯಕ ಬದುಕಿನಲ್ಲಿ ಸಮಸ್ಥಿತಿಯನ್ನು ಕಂಡುಕೊಂಡವರು. ಅವರ ಕನ್ನಡ ಪ್ರೀತಿ, ಜನ ಕಲ್ಯಾಣ ಸೇವೆ, ಅನುಪಮವಾದುದು. "ನನ್ನ ನೆತ್ತರಿನಿಂದ ಕರ್ನಾಟಕ ಏಕೀಕರಣ ಸಾಧ್ಯವಾಗುತ್ತಿದ್ದರೆ ಇಗೋ ಇಂದೇ ಕೊಡಲು ಸಿದ್ಧಳಿದ್ದೇನೆ" ಎಂದು ಬೇಲೂರು ಸಾಹಿತ್ಯ ಸಮ್ಮೇಳನದಲ್ಲಿ ಗರ್ಜಿಸಿದ ಡಾ. ಜಯದೇವಿ ತಾಯಿಯವರ ಕರ್ನಾಟಕ ಸಂರಕ್ಷಣೆ ಹಾಗೂ ಕನ್ನಡ ಪ್ರೀತಿಗೆ ಪ್ರೇರಣೆ, ಅವರ ಬಾಲ್ಯ ಜೀವನ ಹಾಗೂ ಅವರು ಬಾಳಿ ಹೋಗಿರುವ ಕೌಟುಂಬಿಕ ಹಾಗೂ ಸಾಮಾಜಿಕ ಪರಿಸರವೆನ್ನಬಹುದು.

## ೨. ಜನನ – ಬಾಲ್ಯ ಜೀವನ

ಸೊಲ್ಲಾಪುರದ ಚನ್ನಬಸಪ್ಪ ಮಡಕೆ ಹಾಗೂ ಸಂಗವ್ವನವರ ಮೂರನೆಯ ಮಗುವಾಗಿ ಜನಿಸಿದರು. ದಿನಾಂಕ ೨೩-೦೬-೧೯೧೨ರಲ್ಲಿ ಜನಿಸಿದ ಇವರು, ಹುಟ್ಟಿದಾಗಲೇ ಆಕರ್ಷಕವಾಗಿದ್ದರು. ಉದ್ದನೆಯ ಮೂಗು, ಬಟ್ಟಲಗಣ್ಣು, ದುಂಡುಮುಖ, ಬಿಳಿಯ ಬಣ್ಣದ ಕೂಸು ನೋಡುಗರ ಕಣ್ಮನ ಸೆಳೆಯುತ್ತಿತ್ತು. ತಾಯಿ ಸಂಗವ್ವನವರು ದೇವರಿಂದ ಬೇಡಿ ಬಯಸಿ ಹಡೆದ ಹೆಣ್ಣು ಮಗು ಇದಾಗಿದ್ದರಿಂದ ಆ ತಾಯಿಗೆ ತುಂಬಾ ಸಂತೋಷವಾಗಿತ್ತು. ತಂದೆ ಚನ್ನಬಸಪ್ಪನವರಿಗಂತೂ ಈ ಮಗು ಜನಿಸಿದಾಗ ಹಿಗ್ಗೋ ಹಿಗ್ಗು ಗಾಜಿನ ಗೊಂಬೆಯಂತಿದ್ದ ಈ ಮಗುವಿಗೆ ಹದಿಮೂರನೆಯ ದಿನಕ್ಕೆ "ಜಯದೇವಿ" ಎಂದು ನಾಮಕರಣ ಮಾಡಿದರು.

ಅಜ್ಜ ವಾರದ ಮಲ್ಲಪ್ಪನವರ ಪ್ರೀತಿ, ತಂದೆಯ ಮಮತೆ ಹಾಗೂ ತಾಯಿ ಅಜ್ಜಿಯರ ವಾತ್ಸಲ್ಯದ ತೊಟ್ಟಿಲಲ್ಲಿ ಬೆಳೆದ 'ಜಯದೇವಿ' ಬಾಲ್ಯದಿಂದಲೇ 'ತುಂಬು ಜೀವನ ಪದ್ಧತಿ'ಯನ್ನು ಪಡೆದುಕೊಂಡಳು. ಮಕ್ಕಳಿಗೆ "ಮನೆಯೇ ಮೊದಲ ಪಾಠಶಾಲೆ ಜನನಿ ತಾನೆ ಮೊದಲ ಗುರು" ಎಂಬಂತೆ ಜಯದೇವಿಗೆ ತಾಯಿಯಿಂದ ಮನೆಯಲ್ಲಿ ಆರಂಭಿಕ ಶಿಕ್ಷಣ ದೊರಕಿತು. ದಯಾಪರರು, ವಿನಯವಂತರು ಹಾಗೂ ಬುದ್ಧಿವಂತರಾಗಿದ್ದ ತಂದೆಯೊಂದಿಗೆ ಮುದ್ದು ಮುದ್ದು ಮಾತನಾಡುತ್ತ, ತಾಯಿಯ ಸುತ್ತ ಮುತ್ತ ಓಡಾಡುತ್ತ, ಅವರ ದೈನಂದಿನ ಕಾರ್ಯಗಳನ್ನು ಕುತೂಹಲದಿಂದ ಗಮನಿಸುತ್ತ ಜಯದೇವಿ ಬೆಳೆದಳು. ತಾಯಿ ಸಂಗವ್ವನವರು ದೇವರ ಹಾಡು, ಸುಬೋಧಪ್ರದ ಹಾಡುಗಳನ್ನು ಮಗಳಿಗೆ ಹೇಳಿಕೊಡುತ್ತಿದ್ದರು. ಚಿಕ್ಕ ಬಾಲಕಿ ಅವುಗಳನ್ನು ಭಕ್ತಿಯಿಂದ ಕೈ ಮುಗಿದು ಹಾಡುತ್ತಿದ್ದಳು. ಮನೆಯಲ್ಲಲ್ಲದೆ ಧಾರ್ಮಿಕ ಸಭೆ ಸಮಾರಂಭಗಳಲ್ಲಿ ಅವಳು ಧೈರ್ಯದಿಂದ ಹಾಡುವುದನ್ನು ಜನ ಹೊಗಳು ತ್ತಿದ್ದರು.

'ಬೆಳೆಯುವ ಸಿರಿ ಮೊಳಕೆಯಲ್ಲಿ' ಎಂಬಂತೆ ಜಯದೇವಿ ಚಿಕ್ಕಂದಿನಿಂದಲೇ ಚುರುಕಾದ ಮಗುವಾಗಿದ್ದಳು. ಅವರಿಗಿಂತ ಮೊದಲು ಹುಟ್ಟಿದ ಗಂಡು ಮಗು, ನಂತರದ ಹೆಣ್ಣು ಮಗು 'ಶ್ರೀ ದೇವಿ' ಚಿಕ್ಕಂದಿನಿಂದಲೇ ತೀರಿಕೊಂಡರು ನಂತರ ಹುಟ್ಟಿದ ಮೂರು ಜನ ಗಂಡು ಮಕ್ಕಳೊಂದಿಗೆ ಈಕೆಯು ಹೆಣ್ಣಾಗಿದ್ದರೂ ಗಂಡು ಹುಡುಗನಂತೆಯೇ ಬೆಳೆದಳು. ಶಾಲೆಗೆ ಬಿಡುವು ದೊರೆತಾಗ ಕೈಗೆ ಸಿಕ್ಕ ಪುಸ್ತಕ ಓದುವುದರಲ್ಲಿಯಾಗಲಿ ಇಲ್ಲವೆ ಪೂಜೆ ಮಾಡುತ್ತ ಮೈ ಮರೆಯುವುದರಲ್ಲಿ ಅವಳು ಕಾಲ ಕಳೆಯುತ್ತಿದ್ದಳು.

ಜಯದೇವಿಯವರದು ಶ್ರೀಮಂತ ಮನೆತನ, ಅವರ ಮನೆಯವರು ವರ್ಷದ ಆರು ತಿಂಗಳು ಮನೆಯಲ್ಲುಳಿದುಕೊಂಡು ಉಳಿದ ಆರು ತಿಂಗಳು ಊರ ಹೊರಗಿನ ತೋಟದ ಮನೆಯಲ್ಲಿ ವಾಸಿಸುತ್ತಿದ್ದರು. ಹಸಿರು ತುಂಬಿದ ಪ್ರಕೃತಿಯ

# ಪರಿವಿಡಿ


ಪ್ರಧಾನ ಸಂಪಾದಕರ ಮಾತು v
ಸಂಪಾದಕರ ಮಾತು vii
ಅರಿಕೆ ix
೧) ಪೀಠಿಕೆ ೧
೨) ಜನನ–ಬಾಲ್ಯ ಜೀವನ ೨
೩) ವಿದ್ಯಾಭ್ಯಾಸ ೩
೪) ಕೌಟುಂಬಿಕ ವಿವರ ೪
೫) ವೈವಾಹಿಕ ಜೀವನ ೭
೬) ಆಸಕ್ತಿ ಕ್ಷೇತ್ರಗಳು ೯
೭) ಪಡೆದ ಪ್ರೇರಣೆಗಳು ೧೨
೮) ವಿವಿಧ ಕ್ಷೇತ್ರಗಳಲ್ಲಿನ ಸಾಧನೆ ೧೩
೯) ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆ ೩೩
❁ ಜಯಗೀತೆ ೩೫
❁ ತಾಯಿಯ ಪದಗಳು ೩೭
❁ ತಾರಕ ತಂಬೂರಿ ೩೯
❁ ಸಿದ್ಧರಾಮ ೪೦
❁ ಅರಿವಿನಾಗರದಲ್ಲಿ ೪೧
❁ ಬಂದೇವು ಕಲ್ಯಾಣಕ ೪೩
೧೦) ಶ್ರೀ ಸಿದ್ಧರಾಮ ಪುರಾಣ ೪೮
೧೧) ಭಾಗವಹಿಸಿದ ಚಳುವಳಿಗಳು, ಸಂಘಟನೆಗಳು, ಮತ್ತು ಹೋರಾಟಗಳು ೫೯
* ಮಹತ್ವದ ಸಂಗತಿಗಳು ೭೧
೧೨) ಕನ್ನಡ ನಾಡು ನುಡಿ ಹಾಗೂ ಸಂಸ್ಕೃತಿ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳು ೭೨
* ಕರ್ನಾಟಕ ಏಕೀಕರಣಕ್ಕಾಗಿ ಹೋರಾಟ ೭೩
* ಕನ್ನಡ ಕುಲ ರಕ್ಷಣೆ ೮೨
* ಕನ್ನಡ ಕಟ್ಟಿದ ಪ್ರಸಂಗಗಳು – ಸಂದರ್ಭಗಳು ೮೫
೧೩) ಅನುಬಂಧ
* ಗ್ರಂಥ ಋಣ ೯೨
* ಭಾವ ಚಿತ್ರಗಳು ೯೩

ಮಧ್ಯದಲ್ಲಿ ಇನ್ನೂರು ಮುನ್ನೂರು ರೈತ ಕುಟುಂಬಗಳಿರುತ್ತಿದ್ದವು. ಅಲ್ಲೆಲ್ಲ ರೈತ ಮಕ್ಕಳೊಂದಿಗೆ ಆ ತೋಟದ ಸುತ್ತೆಲ್ಲ ಓಡಾಡುತ್ತಿದ್ದಳು. ಅವರೊಂದಿಗೆ ಆಟ ಪಾಠದಲ್ಲಿ ಮಗ್ನಳಾಗುತ್ತಿದ್ದಳು, ಅಲ್ಲಿಯ ಮಕ್ಕಳಿಂದ ಕಲ್ಲು ಮಣ್ಣು ತರಸಿ ಗುಡಿಕಟ್ಟಿ, ಮಣ್ಣಿನಿಂದ ಲಿಂಗಮಾಡಿ ದೇವಾಲಯದಲ್ಲಿಟ್ಟು ಪೂಜಿಸುತ್ತಿದ್ದಳು. ಒಮ್ಮೊಮ್ಮೆ ಬಹಳ ಹೊತ್ತು ಅಲ್ಲಿರುವ ಹೂಗಳನ್ನು ಆ ಲಿಂಗದ ಮೇಲಿಟ್ಟು ಪೂಜಿಸುತ್ತ ಕುಳಿತು ಬಿಡುತ್ತಿದ್ದಳು. ತಾಯಿಯಿಂದ ಡಬ್ಬಿಯಲ್ಲಿ ತಿನ್ನಲು ತಂದಿದ್ದ ವಸ್ತುಗಳನ್ನು ನೈವೇದ್ಯಮಾಡಿ ಸುತ್ತಲಿರುವ ರೈತ ಮಕ್ಕಳಿಗೆಲ್ಲ ಪ್ರಸಾದವೆಂದು ಹಂಚುತ್ತಿದ್ದಳು. ಆ ಬಡಮಕ್ಕಳನ್ನು ತುಂಬಾ ಪ್ರೀತಿಯಿಂದ ಕಾಣುತ್ತಿದ್ದ ಈ ಬಾಲಕಿಯು ಅವರ ಗುಡಿಸಲುಗಳಿಗೆ ಹೋಗಿ ಬರುತ್ತಿದ್ದಳು. ತಾನು ತಿನ್ನುವುದನ್ನು ಅವರಿಗೂ ಹಂಚಿಕೊಟ್ಟು ಆನಂದ ಪಡುತ್ತಿದ್ದಳು. ಚಿಕ್ಕಂದಿನಿಂದಲೂ ಅವಳು ಮೇಲು– ಕೀಳು ಬಡವ – ಬಲ್ಲಿದ ಎಂಬ ಭೇಧಭಾವವನ್ನು ಎಂದೂ ವ್ಯಕ್ತಪಡಿಸಲಿಲ್ಲ. ಜಯದೇವಿಗೆ ಗಿಳಿ, ಗುಬ್ಬಿ, ಬೆಕ್ಕು, ನಾಯಿ, ದನಕರುಗಳ ಮೇಲೆಯೂ ಅತಿ ಪ್ರೀತಿಯಿತ್ತು. ಅವುಗಳನ್ನವಳು ಸದಾ ಕಾರುಣ್ಯ ದೃಷ್ಟಿಯಿಂದ ನೋಡುತ್ತಿದ್ದ ಅನೇಕ ಉದಾಹರಣೆಗಳು ಅವಳ ಬಾಲ್ಯ ಜೀವನದಲ್ಲಿ ಕಾಣ ಸಿಗುತ್ತವೆ.

## ೩. ವಿದ್ಯಾಭ್ಯಾಸ :

ಸೊಲ್ಲಾಪುರದಲ್ಲಿ ಆಗ ಕನ್ನಡ ಶಾಲೆಗಳಿರಲಿಲ್ಲ. ಜನ ರಲ್ಲಿ ಕನ್ನಡದ ಬಗ್ಗೆ ಒಲವು, ಅಭಿಮಾನವಿದ್ದರೂ ಮಕ್ಕಳನ್ನು ಮರಾಠಿ ಶಾಲೆಗೆ ಕಳಿಸುವುದು ಅನಿವಾರ್ಯವಾಗಿತ್ತು 'ಜಯದೇವಿ' ಯನ್ನು ಅವಳ ಆರನೆಯ ವಯಸ್ಸಿಗೆ ಮರಾಠಿ ಶಾಲೆಗೆ ಸೇರಿಸಲಾಯಿತು. ಓದಿನಲ್ಲಿ ಇವಳು ಅತ್ಯಂತ ಚುರುಕು ಓದಿನ ಕಡೆಗೆ ತುಂಬಾ ಆಸಕ್ತಿಯಿದ್ದ ಅವಳು ಮನೆಗೆ ಬಂದರೂ ಪುಸ್ತಕ ಹಿಡಿದು ಕೂರುತ್ತಿದ್ದಳು. ಅವರ ಮನೆಯ ಪಡಶಾಲೆಯ ಎತ್ತರದಲ್ಲಿ ಹಚ್ಚಿಟ್ಟ ದೀಪದ ಬೆಳಕಿನಲ್ಲಿ ಓದುತ್ತಿರುವುದನ್ನು ಗಮನಿಸಿದ ಅಜ್ಜಿ ಗೌರವ್ವ ಅವಳಿಗೆ ಕಣ್ಣು ನೋವಾಗುತ್ತದೆ, ಓದುವುದು ಸಾಕು ಏಳು ತಾಯಿ ಎಂದು ಹೇಳಿದರೂ ಕೇಳುತ್ತಿರಲಿಲ್ಲವಂತೆ. ಸಾಹಿತ್ಯ ಸಂಗೀತವೆರಡರಲ್ಲೂ ಆಸಕ್ತಿಯಿದ್ದ ಅವರು ಓದಿದ್ದು ಪ್ರೌಢಶಾಲೆಯವರೆಗೆ ಮಾತ್ರ. ಮರಾಠಿ ಶಾಲೆಯಲ್ಲಿ ಏಳನೆಯ ತರಗತಿಯವರೆಗೆ ಮರಾಠಿಯನ್ನು, ಅನಂತರ ಪ್ರೌಢಶಾಲೆಯಲ್ಲಿ ಇಂಗ್ಲಿಷನ್ನು ಕಲಿತರು. ಜಯದೇವಿ ಯವರ ತಾಯಿಯವರೇ 'ಮಹಿಳಾ ಜ್ಞಾನ ಮಂದಿರ' ತೆರೆದು ಅಲ್ಲಿ ಕನ್ನಡ ವಿದ್ಯಾಭ್ಯಾಸ ಕೊಡಿಸಿದರು.

'ಜಯದೇವಿ' ತಾಯಿಯವರಿಗೆ ಬಾಲ್ಯದಿಂದಲೂ ಕನ್ನಡದ ಮೇಲೆ ತುಂಬಾ ಅಭಿಮಾನವಿತ್ತು. ಏಕೆಂದರೆ ಕನ್ನಡ ಅವರ ಮಾತೃಭಾಷೆಯಾಗಿತ್ತು. 'ವೀರಶೈವ' ಸಂಪ್ರದಾಯದ 'ಜಯದೇವಿ'ಯವರು ನಂತರದಲ್ಲಿ 'ಗುರುಮಠಕಲ್'ನ ಶ್ರೀ ಶಾಂತವೀರ ಸ್ವಾಮಿಗಳಿಂದ 'ದೀಕ್ಷೆ' ಪಡೆದರು. ಶಿಕ್ಷಣವನ್ನು ಅಷ್ಟಕ್ಕೆ ನಿಲ್ಲಿಸಿದ ಇವರು ಮದುವೆಯಾಗಿ ಮೂರು ಮಕ್ಕಳನ್ನು ಪಡೆದ ಮೇಲೆ ಕನ್ನಡವನ್ನು ಕೆಲವೇ

ದಿನಗಳಲ್ಲಿ ಕಲಿತರು. ಬಾಲ್ಯದಲ್ಲಿ ಜಯದೇವಿಯು ತನ್ನ ಕೌಟುಂಬಿಕ ಪರಿಸರದಲ್ಲಿ ಕಲಿತ 'ಜೀವನ ಶಿಕ್ಷಣ' ತುಂಬಾ ಮಹತ್ವದ್ದು ಎನ್ನಬಹುದು.

### ೪. ಕೌಟುಂಬಿಕ ವಿವರ

'ಜಯದೇವಿ ತಾಯಿಯವರ ಸರ್ವತೋಮುಖ ಬೆಳವಣಿಗೆಯಲ್ಲಿ ಅವರ ಕೌಟುಂಬಿಕ ಪರಿಸರ ಬಹುಮುಖ್ಯವಾದುದು. ಸ್ವಾತಂತ್ರ್ಯ ಪೂರ್ವ ಭಾರತದಲ್ಲಿ ರಾಜಕೀಯ, ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ರಂಗಗಳಲ್ಲಿ ಸೊಲ್ಲಾಪುರಕ್ಕೆ ಒಂದು ವಿಶಿಷ್ಟ ಸ್ಥಾನವಿದೆ. ಈ ಸೊಲ್ಲಾಪುರವೇ ಜಯದೇವಿ ಹುಟ್ಟಿದ ಊರೂ ಹೌದು ಹಾಗೂ ಕೊಟ್ಟ ಊರು ಹೌದು, ಅವರ ವ್ಯಕ್ತಿತ್ವ ನಿರ್ಮಾಣ ದಲ್ಲಿ ಪ್ರಧಾನ ಪಾತ್ರವಹಿಸಿದ' 'ವಾರದಮನೆತನ' ಆಗರ್ಭ ಶ್ರೀಮಂತವಾಗಿತ್ತು. ಅದರ ಯಜಮಾನರಾದ ಮಲ್ಲಪ್ಪ ವಾರದವರು 'ಜಯದೇವಿಯ' ತಾತನವರು. ಅವರು ಕೃಷಿ ಹಾಗೂ ವ್ಯಾಪಾರಿ ಕ್ಷೇತ್ರಗಳೆರಡರಲ್ಲೂ ಅತಿ ಪ್ರಸಿದ್ಧರು. ಮಲ್ಲಪ್ಪ ನವರೆಂದರೆ ಸೊಲ್ಲಾಪುರ, ಸೊಲ್ಲಾಪುರವೆಂದರೆ ಮಲ್ಲಪ್ಪನವರು ಎನ್ನುವಷ್ಟು ಖ್ಯಾತಿವಂತ. ಜನಪ್ರಿಯ ವ್ಯಕ್ತಿಯ ಬೆಂಬಲ ಗಳಿಸಲು ಇಚ್ಛಿಸಿದ ಇಂಗ್ಲಿಷರು ಅವರನ್ನು 'ರಾವಬಹದ್ದೂರ' ಎಂಬ ಪದವಿಯನ್ನಿತ್ತು ಗೌರವಿಸಿದ್ದರು.

ಪ್ರಗತಿಶೀಲ ಮನೋಧರ್ಮದ ಮಲ್ಲಪ್ಪನವರು ಸ್ವಾತಂತ್ರ್ಯ ಪೂರ್ವದಲ್ಲಿ ರಾಷ್ಟ್ರೀಯ ಐಕ್ಯತೆಗಾಗಿ ಹೋರಾಡಿದವರು. ಮುಂಬೈ ಪುಣೆಗಳಲ್ಲಿ ನಡೆಯುತ್ತಿದ್ದ ರಾಷ್ಟ್ರೀಯ ಸಭೆಯ ಅಧಿವೇಶನಗಳಲ್ಲಿ ಸ್ವಾಗತ ಮಂಡಳಿಯ ಸಭಾಸದರ ಕೆಲಸವು ಇವರ ಪಾಲಿಗೆ ತಪ್ಪದೆ ಬರುತ್ತಿತ್ತೆಂದು 'ಪುಣ್ಯ ಶ್ಲೋಕವಾರದ'ದಲ್ಲಿ ಹೇಳಲಾಗಿದೆ. ೧೯೦೭ರಲ್ಲಿ ಕಾಂಗ್ರೆಸ್ ಅಧಿವೇಶನವು ಚತುಃ ಸೂತ್ರವನ್ನು (ಸ್ವರಾಜ್ಯ, ರಾಷ್ಟ್ರೀಯ ಶಿಕ್ಷಣ, ಸ್ವದೇಶಿ ಚಳುವಳಿ, ವಿದೇಶಿ ಬಹಿಷ್ಕಾರ) ಪಾಸು ಮಾಡಿದಾಗ ಅವುಗಳಲ್ಲಿ ಬಹಿಷ್ಕಾರವೊಂದನ್ನು ಬಿಟ್ಟು ಉಳಿದವುಗಳಿಗೆ ಮಲ್ಲಪ್ಪನವರು ಮಾನ್ಯತೆಯನ್ನು ನೀಡಿದ್ದರು. ಹಳ್ಳಿ, ಹಳ್ಳಿಗಳಲ್ಲಿ ಪ್ರಚಾರ ದೊರೆಯುವಂತೆಯೂ ಮಾಡಿದರು. ರಾಷ್ಟ್ರೀಯ ಶಿಕ್ಷಣ ವಿದ್ಯಾಲಯ ಸ್ಥಾಪನೆಗೆ ನಿಧಿ ಸಂಗ್ರಹಿಸುವ ಲೋಕಮಾನ್ಯ ತಿಲಕರಂತಹ ನಾಯಕರ ಸಭೆಗಳಲ್ಲಿ ಕ್ರಿಯಾಶೀಲರಾಗಿ ಭಾಗವಹಿಸಿದ್ದರು. ಅಷ್ಟೇ ಅಲ್ಲ ಉದ್ಯೋಗಪತಿಯಾಗಿದ್ದ ಮಲ್ಲಪ್ಪನವರು ತಿಲಕರಿಗೆ ಅನೇಕ ರೀತಿಯಲ್ಲಿ ನೆರವಾಗಿದ್ದರು. ಬ್ರಿಟೀಷ್ ಸರ್ಕಾರದ ವಿರುದ್ಧ ಕಾರ್ಯಾಚರಣೆ ಮಾಡಿದುದು ತಿಳಿದು ಆ ಸರಕಾರ 'ರಾವಸಾಹೇಬ' ಪದವಿಯನ್ನು ಒಂದು ವರ್ಷಕಾಲ ಹಿಂತೆಗೆದುಕೊಂಡಿತ್ತು. ಆದರೆ ಮಲ್ಲಪ್ಪನವರ ಅಪಾರ ಜನಪ್ರಿಯತೆಯನ್ನು ಮನಗಂಡು ಅವರನ್ನು ವಿರೋಧಿಸುವುದು ಸರಿಯಲ್ಲವೆಂದು ಭಾವಿಸಿ ಮತ್ತೆ ಅವರಿಗೆ 'ರಾವ ಬಹದ್ದೂರ' ಪದವಿ ಕೊಟ್ಟಿತ್ತು.

ಸೊಲ್ಲಾಪುರವನ್ನು ಒಂದು ಪ್ರಮುಖ ವ್ಯಾಪಾರಿ ಕೇಂದ್ರವನ್ನಾಗಿ ಬೆಳೆಸಿದ ಕೀರ್ತಿ ಮಲ್ಲಪ್ಪನವರದು. ಮುಂಬೈ, ಕರ್ನಾಟಕ ಮತ್ತು ಹೈದರಾಬಾದ್ ರಾಜ್ಯಗಳಿಗೆ

ಮಧ್ಯವರ್ತಿಯಾಗಿದ್ದ ಸೊಲ್ಲಾಪುರದಲ್ಲಿ ' ಬಟ್ಟೆಗಿರಣಿ ' ಸ್ಥಾಪಿಸಿ ಈ ಭಾಗದಲ್ಲಿ ಹತ್ತಿ ಬೆಳೆಯಲು ಪ್ರೋತ್ಸಾಹ ನೀಡಿದರು. ಪುಣೆ ಕೃಷಿ ಮಹಾವಿದ್ಯಾಲಯದ ಸಂಶೋಧನೆಗಳನ್ನು ಒಕ್ಕಲುತನಕ್ಕೆ ಬಳಸಿಕೊಂಡರು ಸೊಲ್ಲಾಪುರ ಭಾಗದಲ್ಲಿ ದೊಡ್ಡಶೇಂಗಾ, ಕಬ್ಬಿನ ಬೆಳೆ ಬೆಳೆಯುವ ಸಾಹಸ ಮಾಡಿದರು.ಸೊಲ್ಲಾಪುರದ ಸಾಮಾಜಿಕ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿಯೂ ಅವರು ಹೆಸರುವಾಸಿಯಾಗಿದ್ದರು. ಅಂದಿನ ಸಾಂಪ್ರದಾಯಿಕ ಸಮಾಜದಲ್ಲಿ ಸ್ತ್ರೀ ಶಿಕ್ಷಣದ ಅವಶ್ಯಕತೆ ಮತ್ತು ಮಹತ್ವವನ್ನರಿತು ಅದನ್ನು ಒದಗಿಸಲು ಶ್ರಮಿಸಿದವರಲ್ಲಿ ಮಲ್ಲಪ್ಪನವರು ಪ್ರಮುಖರೆನ್ನಬಹುದು. ತಮ್ಮ ನಿವಾಸದಲ್ಲಿಯೇ ವೀರಶೈವ 'ಮಹಿಳಾ ಜ್ಞಾನ ಮಂದಿರ'ದ ಸ್ಥಾಪನೆಗೆ ಅವಕಾಶ ಕಲ್ಪಿಸಿದರು. ಇನ್ನೊಂದೆಡೆಯಲ್ಲಿ ಸಂಸ್ಕೃತ ಪಾಠಶಾಲೆ ಮತ್ತು ಉಚಿತ ಬೋರ್ಡಿಂಗನ್ನು ನಡೆಸುತ್ತಿದ್ದರು, ನೂರಾರು ವಿದ್ಯಾರ್ಥಿಗಳು ಅಲ್ಲಿದ್ದರು. ಅಶಿಕ್ಷಿತ ಪ್ರೌಢ ಹೆಣ್ಣು ಮಕ್ಕಳು ಶಿಕ್ಷಣ ಪಡೆದು ಪ್ರಗತಿ ಸಾಧಿಸುವ ಯೋಜನೆಗಳನ್ನು ರೂಪಿಸಿದರು. ಮಲ್ಲಪ್ಪನವರ ಸಂಸ್ಥೆಯಿಂದ ಅನೇಕ ಪ್ರಮುಖ ಗ್ರಂಥಗಳು, ವಚನ ಸಾಹಿತ್ಯದ ಭಾಷಾಂತರ ಕೃತಿಗಳು ಬೆಳಕು ಕಂಡವು. ೧೯೧೦ರಲ್ಲಿ ವೀರಶೈವ ಮತ ಪ್ರಚಾರಕ ಸಂಘವು ಅಸ್ತಿತ್ವಕ್ಕೆ ಬಂತು. ಆ ಸಮಾಜೋನ್ನತಿಯನ್ನು ಗುರಿಯಾಗಿರಿಸಿಕೊಂಡು ಇದರ ಸಕ್ರೀಯ ಕಾರ್ಯಕರ್ತ ರಲ್ಲಿ ಮಲ್ಲಪ್ಪನವರು ಪ್ರಮುಖರಾಗಿದ್ದರು. ಅವರ ಆದರ್ಶತನ, ಮಹತ್ವಾಕಾಂಕ್ಷೆಗಳು ಅವರ ಮೊಮ್ಮಗಳ ಜೀವನ ಶ್ರೇಯಸ್ಸಿಗೆ ಬೆನ್ನೆಲುಬಾಗಿ ನಿಂತವು.

**ಚನ್ನಬಸಪ್ಪ ಮಡಕಿ** – ಶರಣಪ್ಪ ಹಾಗೂ ರುದ್ರಮ್ಮ ದಂಪತಿಗಳ ಮಗನಾದ ಚನ್ನಬಸಪ್ಪ ಮಡಕಿಯವರು 'ಜಯದೇವಿ ಲಿಗಾಡೆ'ಯವರ ತಂದೆ. ವಾರದ ಮಲ್ಲಪ್ಪನವರ ಮೊದಲನೆಯ ಹೆಂಡತಿಯ ಸೋದರನಾದ ಈತನು ಬಾಲ್ಯದಲ್ಲಿ ತಂದೆ–ತಾಯಿಯರನ್ನು ಕಳೆದುಕೊಂಡು ಮಲ್ಲಪ್ಪನವರ ಮಮತೆಯಲ್ಲಿ ಬೆಳೆದನು. ತಮ್ಮ ಕೌಟುಂಬಿಕ ಜೀವನದಲ್ಲಿ ಪುತ್ರ ಸಂತಾನದ ಕೊರತೆಯಿಂದ ಬಳಲುತ್ತಿದ್ದ ಮಲ್ಲಪ್ಪನವರು ಈತನಲ್ಲಿಯೇ ಮಗನ ಅಕ್ಕರತೆ ಕಂಡರು. ಚುರುಕು ಬುದ್ಧಿಯ ಚನ್ನಬಸಪ್ಪ ಸದೃಢ ಹಾಗೂ ಸಾಹಸೀ ಪ್ರವೃತ್ತಿಯವರಾಗಿದ್ದರು. ವಿನಯಶೀಲ ರಾಗಿದ್ದ ಅವರಿಗೆ ಯೋಗ್ಯವಾದ ಶಿಕ್ಷಣವನ್ನು ಮರಾಠಿ ಮತ್ತು ಇಂಗ್ಲೀಷ್ ಭಾಷೆಯಲ್ಲಿ ಕೊಡಿಸಿ ತಮ್ಮ ವ್ಯವಹಾರವನ್ನು ಪಳಗಿಸಿಕೊಂಡರು.

ವ್ಯವಹಾರದ ಸೂಕ್ಷ್ಮತೆಯರಿತುಕೊಂಡ ಚನ್ನಬಸಪ್ಪನವರು ಪ್ರೌಢವಯಸ್ಕರಾದಾಗ ಮಲ್ಲಪ್ಪನವರು ತಮ್ಮ ಮಗಳನ್ನೇ ಅವರಿಗೆ ಮದುವೆ ಮಾಡಿಕೊಟ್ಟರು. ಆತನಲ್ಲಿ ಸಂಯಮ, ಶಿಸ್ತಿನಂತಹ, ಶ್ರೇಷ್ಠ ಗುಣಗಳನ್ನು ಬೆಳೆಸಲು ಪ್ರಯತ್ನಿಸಿದರು. ತಮ್ಮ ಮಗಳು ಸಂಗವ್ವ ಅನಾರೋಗ್ಯದಿಂದ ತೀರಿಹೋದ ಮೇಲೆ ಅಳಿಯನನ್ನು ತಮ್ಮಲ್ಲಿಯೇ ಇರಿಸಿಕೊಂಡು ಮತ್ತೆ ಮೂರು ಮದುವೆಯನ್ನು

ಮಾಡಿದರು. ಅದರಲ್ಲಿ ಅದೇ ಊರಿನ ಗಾಬಣೆ ಮನೆತನದ ೧೧ ವರ್ಷದ ಭಾಗೀರತಿಯು ೩ನೆಯವಳು. ಅವಳಿಗೆ ತಮ್ಮ ಮಗಳ ಹೆಸರನ್ನಿಟ್ಟು 'ಸಂಗವ್ವ' ನೆಂದು ಕರೆದರು.

ಈ ದಂಪತಿಗಳಿಗೆ ಬೇಗನೇ ಮಕ್ಕಳಾಗಲಿಲ್ಲವೆಂದು ವ್ಯಥೆ ಪಟ್ಟರು ಚನ್ನಬಸಪ್ಪ-ಸಂಗವ್ವರಿಗೆ ಚೊಚ್ಚಿಲು ಗಂಡು ಮಗುವಾದಾಗ ಮಲ್ಲಪ್ಪನವರು ತಮ್ಮ ಕುಲೋದ್ಧಾರಕನೇ ಹುಟ್ಟಿದಷ್ಟು ಸಂತೋಷಪಟ್ಟರು. ಅಷ್ಟೇ ಅಲ್ಲ ತಮ್ಮ 'ಇಂದ್ರ ಭವನ' ಮನೆಯ ಮೇಲೆ ಪತಾಕೆ ತೋಪುಗಳನ್ನು ಹಾರಿಸಿದರಂತೆ. ಬಾಜಾ ಭಜಂತ್ರಿಯೊಂದಿಗೆ ತಮ್ಮ ಪರಿವಾರ ತಂದು ಆ ಮೊಮ್ಮಗನನ್ನು ನೋಡಿ ಹೋದರಂತೆ.

ಈ ಚನ್ನಬಸಪ್ಪ – ಸಂಗವ್ವರ ಮೂರನೆಯ ಮಗುವೇ ಜಯದೇವಿ.

**ಸಂಗವ್ವ ಮಡಕಿ** – 'ಜಯದೇವಿ' ಯವರ ತಾಯಿ 'ಸಂಗವ್ವ' ಸೊಲ್ಲಾಪುರದ ಒಂದು ಸುಸಂಸ್ಕೃತ ಮನೆತನದ ಹೆಣ್ಣು ಮಗಳು. ವಾರದ ಮಲ್ಲಪ್ಪನವರ ಮನೆಯಲ್ಲಿಯೇ ಸಾಕುಮಗಳಂತೆ ಬೆಳೆದವಳು. ಆಕೆ 'ಹಸ್ತ ಕುಶಲ ಪ್ರದರ್ಶನ' 'ಇನ್ ಫಂಟ್ ಮೆಡಿಕಲ್ ರಿಲೀಫ್' ಕಡೆಯಿಂದ ತರಬೇತಿ ಪಡೆದಳು. ಹೀಗಾಗಿ ವಾರದ ಮನೆಯಲ್ಲಿಯ 'ಜ್ಞಾನ ಮಂದಿರ'ದಲ್ಲಿ ಇವಳಿಗೆ ಹೆಚ್ಚಿನ ಹೊಣೆಗಾರಿಕೆಯನ್ನು ನೀಡಲಾಗಿತ್ತು. ಹಲವು ಹಾಡುಗಳನ್ನು ಬಲ್ಲ ಇವಳು ಹಾಡುತ್ತಿದ್ದಳು ಮತ್ತು ನಿರರ್ಗಳವಾಗಿ ಭಾಷಣವನ್ನು ಮಾಡುತ್ತಿದ್ದರು. ಸ್ತ್ರೀ ಶಿಕ್ಷಣದ ಬಗ್ಗೆ ಹೆಚ್ಚಿನ ಒಲವಿದ್ದುದರಿಂದ 'ಜ್ಞಾನ ಮಂದಿರದ'ದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸಂಗವ್ವನಿಗೆ ಸಕ್ರೀಯ ಪಾಲುಗಾರಿಕೆಯಿತ್ತು.

ಸ್ತ್ರೀ ಪರ ಚಿಂತನೆಯುಳ್ಳ, ಸೇವಾ ಮನೋಭಾವದ ಸಂಗವ್ವನವರು ಸ್ತ್ರೀ ಸಮಾಜದ ಉನ್ನತಿಗಾಗಿ ಹಗಲಿರುಳು ಶ್ರಮಿಸುತ್ತಿದ್ದರು. ಶ್ರಾವಣ ಮಾಸ, ನವಮಿಗಳಲ್ಲಿ ಮಹಿಳೆಯರನ್ನು ಸೇರಿಸಿ ಕೀರ್ತನೆ, ಭಜನೆ ಹಾಗೂ ದೇವಿ ಪುರಾಣಗಳನ್ನು ಹೇಳುತ್ತಿದ್ದರು, ಬಿಳಿಯ ಬಣ್ಣದ, ದುಂಡು ಮುಖದ, ತುಂಬು ಗಲ್ಲದ, ವಿಶಾಲ ಕಣ್ಣುಗಳ 'ಸಂಗವ್ವ' ನವರು ತಮ್ಮ ಅಗಲವಾದ ಹಣೆಗೆ ಭಸ್ಮ ಧರಿಸಿ, ದುಂಡಗೆ ಕುಂಕುಮದ ಬೊಟ್ಟು ಇಟ್ಟು ಕೊಂಡು ಸಾಕ್ಷಾತ್ ಸರಸ್ವತಿ ಲಕ್ಷ್ಮಿಯಂತೆ ಶೋಭಿಸುತ್ತ ಪುರಾಣ ಹೇಳುತ್ತಿದ್ದರಂತೆ. ಆಸ್ಪತ್ರೆ ಪ್ರಚಲಿತವಿರದ ಅಂದಿನ ಕಾಲದಲ್ಲಿ ಬಡವ – ಶ್ರೀಮಂತರೆಂಬ ಭೇಧವೆಣಿಸದೆ ಬಸುರಿ – ಬಾಣಂತಿಯರ ಸೇವೆ ಮಾಡುತ್ತಿದ್ದರು. ಅನೇಕ ಮಹಿಳೆಯರ ಹೆರಿಗೆಯನ್ನು ಮನೆಯಲ್ಲಿಯೇ ಮಾಡಿಸುತ್ತಿದ್ದರು, ಶಾಂತ ಸ್ವಭಾವದ ಇಂಥ ಧರ್ಮ ಶ್ರದ್ದೆಯ ತಾಯಿಯನ್ನು ನೋಡಿದ 'ಜಯದೇವಿ'ಯವರು – "ನನ್ನ ತಾಯಿ ಕೇವಲ ಹಡೆದ ಮಕ್ಕಳ ತಾಯಿಯಾಗಿರದೆ ಬಡವರ ತಾಯಿಯಾಗಿದ್ದಳು, ಅನಾಥರ ತಾಯಿಯಾಗಿದ್ದಳು,

ಅವರ ಸೇವೆ ಮಾಡುವುದರಲ್ಲಿ ಅವಳಿಗೆ ಎಲ್ಲಿಲ್ಲದ ಹುರುಪು, ಹುಮ್ಮಸ್ಸು ಬರುತ್ತಿದ್ದವು ಅವರ ಪಾಲನೆ ಪೋಷಣೆಯಲ್ಲಿ ನಿರತಳಾಗಿದ್ದ ನನ್ನ ಎಳೆಯ ಮನದ ಮೇಲೆ ಅವಳ ನಡೆ ಬಿಂಬಿಸುತ್ತ ನಡೆಯಿತು. ಆಳು ಕಾಳುಗಳ ಮೇಲೆ ತಾಯಿಯ ಪ್ರೀತಿ ಅಪಾರ" ವೆಂದು ೧೯೭೦ರ 'ಉತ್ಥಾನ' ಮಾಸಿಕ ಪತ್ರಿಕೆಯಲ್ಲಿ ಬರೆದಿದ್ದಾರೆ.

ಸುಸಂಸ್ಕೃತ ಮನಸ್ಸಿನ ಸಂಗಮ್ಮನವರಿಗೆ ಕಂದಾಚಾರ, ಮೂಢನಂಬಿಕೆಗಳ ಮೇಲೆ ನಂಬಿಕೆಯಿರಲಿಲ್ಲ. ಅವರೆಂದೂ ಮಾಟ ಮಂತ್ರ ಚೀಟಿ ಚಪಾಟಿ ಗಳನ್ನು ನಂಬಲಿಲ್ಲ. ನಿಂಬೆಕಾಯಿ ನಿವಾಳಿಸಿದ್ದು, ಮಂತ್ರಿಸಿ ಒಗೆದಿದ್ದು, ಮೆಣಸಿನ ಕಾಯಿ ಇಳಿಸಿ ರಸ್ತೆಯಲ್ಲಿ ಚೆಲ್ಲಿದ್ದನ್ನು ಎಂದೂ ಗಣನೆಗೆ ತೆಗೆದುಕೊಳ್ಳುತ್ತಿರಲಿಲ್ಲ ಇದನ್ನು ಪರರೂ ನಂಬಬಾರದೆಂದು ಹೇಳುತ್ತಿದ್ದರು. ಈ ರೀತಿಯ ವೈಚಾರಿಕ ಮನೋಭಾವದ ತಾಯಿ 'ಸಂಗವ್ವ'ನೊಂದಿಗೆ ಸಭೆ ಸಮಾರಂಭಗಳಲ್ಲಿ, 'ಮಹಿಳಾ ಜ್ಞಾನ ಮಂದಿರ', 'ಸರಸ್ವತಿ ಸದನ' ಗಳಲ್ಲಿ ಓಡಾಡುತ್ತಾ ಒಮ್ಮೊಮ್ಮೆ ಸುಶ್ರಾವ್ಯವಾಗಿ ಹಾಡುತ್ತ ಕೇಳುಗರ ಮನಸ್ಸನ್ನು ಗೆದ್ದಿದ್ದ 'ಜಯದೇವಿ'ಯನ್ನು ನೋಡಿದ ಅದೇ ಓಣಿಯ 'ಪ್ರಯಾಗ ಬಾಯಿ' ಯವರು ತಮ್ಮ ದತ್ತು ಪುತ್ರನಿಗೆ ಇವಳು ಸರಿಯಾದ ಜೋಡಿ ಎಂದು ತಮ್ಮ ಮಗನೊಂದಿಗೆ ಜಯದೇವಿಯವರ ಮದುವೆಯನ್ನು ನಿಶ್ಚಯಿಸಿದರು.

## ೫. ವೈವಾಹಿಕ ಜೀವನ

೧೯೨೬ರಲ್ಲಿ ಧನಾಢ್ಯ ಲಿಗಾಡೆ ಮನೆತನದ ಚನ್ನಮಲ್ಲಪ್ಪ ಎಂಬ ಹದಿನಾರು ವರ್ಷದ ವರನೊಂದಿಗೆ ೧೪ ವರ್ಷದ ಜಯದೇವಿಯವರ ವಿವಾಹವಾಯಿತು. ಎರಡು ಶ್ರೀಮಂತ ಮನೆತನಗಳ ಮದುವೆ ತುಂಬಾ ವೈಭವದಿಂದ ಜರುಗಿತು. ಆ ಕಾಲದಲ್ಲಿ ಹೆಣ್ಣಿನವರು ಒಂದೊಂದು ಸುರಗಿ ಕೊಡುವ ಪದ್ಧತಿಯಿದ್ದಾಗ, ಮಡಕಿಯವರು ದುಬಾರಿಯೆನಿಸಿದ ಐದು ಸುರಗಿ ಮಾಡಿ, ಐದು ಸುರಗಿ ಕೊಟ್ಟರೂ ಸಹ 'ಬೀಗಿತಿ ಸೀರಿ ಸುಮಾರು' ಎಂಬ ಕಾರಣವು ಜಯದೇವಿಯರ ಭಾವಿ ಜೀವನದ ಮೇಲೆ ಕಾಡಾಟ ನಡೆಸಿತು.

ತಾಯಿಯ ಮನೆಯಲ್ಲಿ ಸ್ವತಂತ್ರವಾಗಿ ಬೆಳೆದ 'ಜಯದೇವಿ ಲಿಗಾಡೆ' ಯವರಿಗೆ ಪತಿಯ ಪ್ರತಿಷ್ಠಿತ ಮನೆತನದಲ್ಲಿ ಅವಳು ಪಡಸಾಲೆಗೆ ಬರಲು ಸ್ವಾತಂತ್ರವಿರಲಿಲ್ಲ. ತೀರ ಸಂಪ್ರದಾಯದೊಂದಿಗೆ ಅತ್ತೆಯರ ಕಾಟವನ್ನು ಅವಳು ಎದುರಿಸಬೇಕಾಯಿತು, "ಆ ಮನೆತನದಲ್ಲಿ ಚಿಕ್ಕತ್ತೆ, ದೊಡ್ಡತ್ತೆ, ಅತ್ತೆ, ದತ್ತಕ ಅತ್ತೆ, ನನ್ನ ಯಜಮಾನರ ಸೋದರತ್ತೆ ಇವರೆಲ್ಲ ಹಿರಿಯರ ಮಧ್ಯದಲ್ಲಿ ನಾನೊಬ್ಬಳೇ ಚಿಕ್ಕವಳು" ಎಂದು ತಮ್ಮ ಲೇಖನದಲ್ಲಿ ನೆನಪಿಸಿಕೊಂಡಿದ್ದಾರೆ. ಇವರೆಲ್ಲರಲ್ಲಿ ಸಿಟ್ಟಿನ ಮೂರ್ತಿಯಾಗಿದ್ದ ದತ್ತಕ ಪಡೆದ ಅತ್ತೆ, ಪತಿಯ ಕೋಪ, ಸಹಿಸಲಸಾಧ್ಯವಾದಾಗ, ತಾಯಿ ಸಂಗವ್ವನ ಮೃದು ಹಿತವಚನಗಳು ಜಯದೇವಿಯವರಿಗೆ ಸಾಂತ್ವನ ನೀಡುತ್ತಿದ್ದವು. "ಅತ್ತೆಯ ಬಿರುಸು ನುಡಿಗಳು ನಿನಗೆ ಪಾಠ ಕಲಿಸಲು ಬಂದಿವೆ.

ಶಾಂತಿ ಸಹನೆಗಳು ಮೈಗೂಡಬೇಕು, ಹೆಣ್ಣು ಸಹಿಸಿಕೊಳ್ಳಲು ಹುಟ್ಟಿ ಬಂದವಳು" ಎಂದು ತಾಯಿ ಹೇಳುತ್ತಿದ್ದ ಮುತ್ತಿನಂತಹ ಮಾತುಗಳು ಮುಂದೆ ತಮಗೆ ದಾರಿದೀಪವಾದವು' ಎಂದು ಅವರು ಬರೆದಿದ್ದಾರೆ.

ಅತ್ತೆಯವರ ಮಾತು ಕೇಳಿ ಪತಿ ಚನ್ನಬಸಪ್ಪನವರು ಕೂಡಾ ಹೆಂಡತಿಯನ್ನು ತುಂಬಾ ದಂಡಿಸುತ್ತಿದ್ದರು. ಯಾವಾಗಲೂ ಒಂದಿಲ್ಲೊಂದು ನೆಪದಲ್ಲಿ ನೋವಿನ ಮೇಲೆ ಬರೆಯೆಳೆಯುವ ಮುದುಕಿಯರ ಮಧ್ಯೆ ಜಯದೇವಿ ಬದುಕಿದುದೇ ಆಶ್ಚರ್ಯವೆನ್ನಬಹುದು. ಆ ಮನೆತನಕ್ಕೆ ಕಾಲಿಟ್ಟ ಎರಡನೆಯ ಸೊಸೆಯ ವಾಚಾಳಿತನಕ್ಕೆ ರೋಸಿ ಹೋದ ಕುಟುಂಬವು ನಂತರದಲ್ಲಿ ಜಯದೇವಿಯವರ ಮೇಲೆ ಪ್ರೀತಿ, ವಾತ್ಸಲ್ಯ ತೋರಿ ಇವರ ಧಾರ್ಮಿಕ, ಸಾಮಾಜಿಕ, ಸೇವೆಗಳಿಗೆ ಬೆಂಬಲವಾಗಿ ನಿಂತರು. ಎಲ್ಲರ ಪ್ರೀತಿಯ ಕೋಡಿ ತನ್ನಡೆಗೆ ಸಾಗಿ ಬಂದಾಗ ಜಯದೇವಿಯವರಿಗೆ ಹೋದ ಜೀವ ಮರಳಿ ಬಂದಂತಾಯಿತು.

ಮರಾಠಿ ಶಾಲೆಯಲ್ಲಿ ಆರನೆಯ ತರಗತಿಯವರೆಗೆ ಕಲಿತಿದ್ದ ಲಿಗಾಡೆಯವರಿಗೆ ತಾಯಿ ಭಾಷೆ ಕನ್ನಡದಿಂದ ವಚನಗಳ ಬಳುವಳಿ ಸಿಕ್ಕಿತು. ಮೂರು ಮಕ್ಕಳ ತಾಯಿಯಾದ ಮೇಲೆ ಕನ್ನಡ ಕಲಿತು ಅದರ ಆಳವಾದ ಅಧ್ಯಯನಕ್ಕೆ ಅವಕಾಶ ಒದಗಿಸಿಕೊಂಡರು. ಕನ್ನಡ ಸಾಹಿತ್ಯದ ಕೆಚ್ಚನ್ನು ಶರಣರ ವಚನಗಳ ಮೂಲಕ ಇಲ್ಲಿ ಅರಗಿಸಿಕೊಂಡರು. ಆಧ್ಯಾತ್ಮ ಸಾಧನೆಯ ಒಂದೊಂದೇ ಹೆಜ್ಜೆಗಳನ್ನು ಹುಡಿಕಿಕೊಂಡರು. ಈಗಾಗಲೇ ರಾಮಾಯಣ, ಮಹಾಭಾರತ, ಭಗವದ್ಗೀತೆ, ಸಂತರ ಅಭಂಗಗಳನ್ನು ಚೆನ್ನಾಗಿ ಮನವರಿಕೆ ಮಾಡಿಕೊಂಡಿದ್ದರು, ಮರಾಠಿ ಭಾಷೆಯಷ್ಟು ಪ್ರಭುತ್ವವನ್ನು ಈಗ ಕನ್ನಡ ಭಾಷೆಯಲ್ಲೂ ಪಡೆದರು, ವ್ಯವಹಾರಕ್ಕೆ ಬೇಕಾಗುವಷ್ಟು ಇಂಗ್ಲೀಷನ್ನು ಕಲಿತಿದ್ದರು. ಈ ಎಲ್ಲ ಅಂಶಗಳು ಜಯದೇವಿಯರಿಗೆ ಹೊಸ ದಾರಿಯನ್ನು ತೋರಿದವು. ಅನಂತರದಲ್ಲಿ ಸಾಹಿತ್ಯ ರಚನೆ ಹಾಗೂ ಸಾಮಾಜಿಕ ಸೇವೆಯನ್ನು ತಮ್ಮ ಜೀವನದ ಗುರಿಯಾಗಿಸಿ ಕೊಂಡರು. ಅಖಂಡ ಕರ್ನಾಟಕದ ಕನಸು ಕಂಡು ಕರ್ನಾಟಕದ ಏಕೀಕರಣಕ್ಕಾಗಿ ಹೋರಾಡತೊಡಗಿದರು. ತಮ್ಮ ಜೀವನವನ್ನು ನಾಡು – ನುಡಿಗಾಗಿ ಮೀಸಲಿಟ್ಟರು ಅವರ ಈ ಸದುದ್ದೇಶದ ಹೋರಾಟದ ಸಂದರ್ಭದಲ್ಲಿ ಪತಿಯ ವಿಯೋಗ ವಾಯಿತು (೧೯೪೯) ಒಂದು ಕಡೆ ಮನೆಯ ವ್ಯವಹಾರಿಕ ತೊಂದರೆಗಳು ಇನ್ನೊಂದೆಡೆಯಲ್ಲಿ ದೈಹಿಕ ಅನಾರೋಗ್ಯ ಕಾಡತೊಡಗಿದವು. ಆದರೂ ಸಹ ಕನ್ನಡಸೇವೆ ಹಾಗೂ ಸಾಮಾಜಿಕ ಸೇವೆಯನ್ನು ಅವರು ಬಿಟ್ಟುಕೊಡಲಿಲ್ಲ.

ಪತಿಯ ಮರಣದ ನಂತರ ಕೌಟುಂಬಿಕ ಜೀವನದಲ್ಲಿ ಏರುಪೇರು ಗಳುಂಟಾಗಿ ಹೆಚ್ಚು ತೊಡಕುಗಳು ಬಂದು ನಿಂತವು, ಆಸ್ತಿಯ ಮೇಲಿನ ಹಿಡಿತಕ್ಕಾಗಿ ಅವರ ಮೈದುನ ಕೋರ್ಟ ಕಟ್ಟೆ ಹತ್ತಿದರು. ಅನಾರೋಗ್ಯದಿಂದ ಬಳಲುತ್ತಿದ್ದರೂ

ಸಹ ಅವರು ತಮ್ಮ ಮಕ್ಕಳಾದ ೧) ಶಶಿಕಲಾ ೨) ಶ್ರೀಕಂಠ ೩) ಪ್ರಭುರಾಜ ೪) ಬಸವರಾಜ ೫) ಲಲಿತಾ ಈ ಐವರು ಮಕ್ಕಳನ್ನು ಕಟ್ಟಿಕೊಂಡು ದೊಡ್ಡ ಆಸ್ತಿಯ ಹಾಗೂ ದೊಡ್ಡ ಸಂಸಾರದ ಜವಾಬ್ದಾರಿಯನ್ನು ನಿರ್ವಹಿಸಬೇಕಾಯಿತು. ಈ ಸಂದರ್ಭದಲ್ಲಿ ಆಸ್ತಿ ದುರುಪಯೋಗವಾಗಬಹುದೆಂದು ಮೈದುನ ಜಗದೇವರು ಸರಕಾರಕ್ಕೆ ಆಸ್ತಿಯನ್ನು ವಹಿಸಿಕೊಳ್ಳಬೇಕೆಂದು ಅರ್ಜಿ ಸಲ್ಲಿಸಿದ್ದರು. ಜಯದೇವಿ ಯವರ ತಂದೆ, ತಾಯಿಯವರ ಸಹಾಯದಿಂದ ಸರಕಾರ, ಇಲ್ಲಿ ಯಾವುದೇ ಹಸ್ತಕ್ಷೇಪವನ್ನು ಬಯಸಲಿಲ್ಲ. ಅಷ್ಟರಲ್ಲಿ ದೇಶವು ಸ್ವತಂತ್ರವಾಯಿತು ಲಿಗಾಡೆಯವರ ಆಸ್ತಿಯು ಮತ್ತೊಮ್ಮೆ ಸರಕಾರದ ವಶವಾಗುವುದು ತಪ್ಪಿಹೋಯಿತು.

ಸಾಮಾಜಿಕ ಜೀವನದಲ್ಲಿ ತಮ್ಮನ್ನು ತೊಡಗಿಸಿಕೊಂಡು ಮಕ್ಕಳೆಲ್ಲರಲ್ಲಿ ಪ್ರತಿಭೆ, ಸೇವಾಮನೋಭಾವನೆ, ದಯಾರ್ದ್ರತೆ, ಪ್ರೇಮಲ ಸ್ವಭಾವ, ಕಲೆ ಮತ್ತು ಸಾಹಿತ್ಯದಲ್ಲಿ ಅಭಿರುಚಿ ಮೂಡಿಸಿದರು. ಅವರೆಲ್ಲರ ವೈವಾಹಿಕ ಜೀವನದ ಸಫಲತೆಯನ್ನು ಕಂಡು ಸಂತೃಪ್ತರಾದರು. ದೇಶಪ್ರೇಮ, ಶರಣತತ್ವ, ಮತ್ತು ಕನ್ನಡಾಭಿಮಾನವನ್ನು ತುಂಬಿಕೊಂಡು ಬೆಳೆದ ತಾಯಿಯವರ ವೈಯಕ್ತಿಕ ಜೀವನ ಸಾಧನೆಯು ಮಕ್ಕಳ ಮೇಲೆ ತುಂಬಾ ಪ್ರಭಾವ ಬೀರಿದೆ. ಈ ಹಿನ್ನಲೆಯಲ್ಲಿ ಅವರ ಜೀವನದ ಸಫಲತೆ ಮುಂದುವರೆಯಿತು.

ಮುಂದೆ ತಾಯಿಯವರು ಸೊಲ್ಲಾಪುರದಿಂದ ೧೯೮೧ರ ಡಿಸೆಂಬರ್ ನಲ್ಲಿ ಬಸವಕಲ್ಯಾಣಕ್ಕೆ ಬಂದು ನೆಲೆಸಿದರು. ಬಸವಾದಿ ಶರಣರ ಪಾದದಿಂದ ಪುನೀತ ವಾದ ಈ ಪ್ರದೇಶದಲ್ಲಿ ಶರಣರಂತೆ ಬಾಳುವ ಪ್ರಯತ್ನಕ್ಕೆ ಬದ್ಧರಾಗಿದ್ದುಕೊಂಡು, ಜನತೆಯ ಕಲ್ಯಾಣಕ್ಕಾಗಿ ತಮ್ಮ ಜೀವನವನ್ನು ಮೀಸಲಾಗಿರಿಸಲು ಆಲೋಚಿಸಿ ಇಲ್ಲಿ "ಭಕ್ತಿಭವನವನ್ನು ನೂತನ ಅನುಭವ ಮಂಟಪದ ಹತ್ತಿರ ನಿರ್ಮಿಸಿಕೊಂಡರು. ತಮ್ಮ ಆಧ್ಯಾತ್ಮಿಕ ಬದುಕಿಗೆ, ಸಾಮಾಜಿಕ ಸೇವೆ ಹಾಗೂ ಸಾಹಿತ್ಯಕ ಸೃಷ್ಟಿಯನ್ನು ಸಮನ್ವಯಗೊಳಿಸಿಕೊಂಡು ಅದಕ್ಕೊಂದು ಹೊಸ ಆಯಾಮ ನೀಡಲು ಹೆಣಗಿದರು. ಅದರಲ್ಲಿ ಯಶಸ್ಸನ್ನೂ ಪಡೆದರು ಅವರಿಂದ ಅನೇಕ ಕೃತಿಗಳು ವಿಷೇಶವಾಗಿ 'ಶ್ರೀ ಸಿದ್ಧರಾಮ ಪುರಾಣ' ಮಹಾಕಾವ್ಯ ತ್ರಿಪದಿಯಲ್ಲಿ ಮೂಡಿ ಬಂದಿತು. ಕನ್ನಡ ನಾಡು, ನುಡಿ, ಸಾಹಿತ್ಯ ಹಾಗೂ ಸಾಂಸ್ಕೃತಿಕ ಬದುಕಿಗೆ ಅತ್ಯಂತ ಮಹತ್ವದ ಕೊಡುಗೆ ನೀಡಿದ ತಾಯಿಯವರು ದಿನಾಂಕ ೨೫-೭-೧೯೮೬ರಲ್ಲಿ ಅವರಿಚ್ಚೆಯಂತೆ ಐಕ್ಯವಾದರು. ಅವರ ಪಾರ್ಥಿವ ಶರೀರವನ್ನು ಬಸವ ಕಲ್ಯಾಣದಲ್ಲಿ ಸಮಾಧಿಗೊಳಿಸಲಾಗಿದೆ.

## ೬. ಆಸಕ್ತಿ ಕ್ಷೇತ್ರ

ಜಯದೇವಿಯವರು ತಮ್ಮ ಜೀವನದ ಕಷ್ಟದ ಸಮಯದಲ್ಲಿ ತಾಯಿಯ ನುಡಿ ಮತ್ತು ಲಿಂಗಪೂಜಾ ನಿಷ್ಠೆಯಲ್ಲಿ ಮನವನ್ನು ತೊಡಗಿಸುತ್ತಿದ್ದರು. ಎಲ್ಲ ಅಡ್ಡಿ ಆತಂಕಗಳನ್ನು ದೂರ ಸರಿಸಿ ನೂರೊಂದು ಹೂ ಪತ್ರೆಗಳನ್ನು ತಮ್ಮ ತೋಟದಿಂದ

ಆರಿಸಿ ತಂದು ಲಿಂಗಪೂಜೆ ಮಾಡಿಕೊಂಡ ಮೇಲೆ ತಪ್ಪದೆ ಸಿದ್ದರಾಮೇಶ್ವರನ ಗುಡಿಗೆ ಹೋಗಿ ದರ್ಶನ ಮಾಡಿಕೊಂಡು ಬಂದು ಊಟ ಮಾಡುವುದು ಅವರ ಜೀವನದ ಪದ್ಧತಿಯಾಗಿತ್ತು. ಸಿದ್ಧರಾಮನ ಗುಡಿಯಿಂದ ಬರುವಾಗ ಸಾದ್ಯವಾದಷ್ಟು ದಾನ ಮಾಡುವ ಪರಿಪಾಠ ಮಾಡಿಕೊಂಡಿದ್ದರು ಮಕ್ಕಳ ಆರೈಕೆ, ಮನೆಯ ಕೆಲವು ವಿಷಯಗಳಲ್ಲಿ ಅವರು ನಿರ್ಲಿಪ್ತರಾಗಿದ್ದರು ಧಾರ್ಮಿಕ ಬದುಕಿನಲ್ಲಿ ಆಸಕ್ತಿಯಿರುವ ಜಯದೇವಿಯವರು ಚಿಕ್ಕಂದಿನಿಂದಲೇ ದೈವಾರಾಧಕ ರಾಗಿದ್ದರೆನ್ನಬಹುದು.

ದೇಶಪ್ರೇಮ, ಸಾಮಾಜಿಕ ಕಾರ್ಯ, ವಚನ ಸಾಹಿತ್ಯದ ಅಧ್ಯಯನದಲ್ಲಿ 'ಜಯದೇವಿ'ಯವರಿಗೆ ತುಂಬಾ ಆಸಕ್ತಿಯಿತ್ತು. ಮನೆ ತುಂಬಾ ಮಕ್ಕಳು, ಹಿರಿಯರ ಮಾರ್ಗದರ್ಶನವಿತ್ತು. ಆಗಾಗ ಭಾಷಣಗಳಿಗೆ ಹೋದರೆ ಮನೆಯವರನ್ನೆಲ್ಲ ಕರೆದುಕೊಂಡು ಹೋಗುವುದು ರೂಢಿಸಿಕೊಂಡಿದ್ದರು. ಇಂಗ್ಲೀಷರು ಆಗೊಮ್ಮೆ 'ಲಿಂಗಾಯಿತ ಬಟಾಲಿಯನ್' ತಯಾರಿಸಲು ಭಾಷಣ ಮಾಡಬೇಕೆಂದು ಕೇಳಿಕೊಂಡಾಗ 'ಜಯದೇವಿ' ಯವರು ಅದನ್ನು ತಿರಸ್ಕರಿಸಿದರು. ಇದರಿಂದ ದಂಪತಿಗಳಲ್ಲಿ ಸ್ವಲ್ಪ ತಾತ್ವಿಕ ವಿರಸವುಂಟಾಯಿತು. ಆದರೂ ಅತ್ತೆಯವರು ದೇಶಕ್ಕಾಗಿ ,ಸಮಾಜಕ್ಕಾಗಿ ಧಾರ್ಮಿಕ ಕಾರ್ಯ ಮಾಡುವುದರಲ್ಲಿ ಆಸಕ್ತರಾಗಿದ್ದ ಜಯದೇವಿ ಯರನ್ನು ಪ್ರೋತ್ಸಾಹಿಸಿದರು. ಬರಬರುತ್ತ ವೀರಶೈವ ಮಹಿಳಾ ಜ್ಞಾನ ಮಂದಿರದ ಕಾರ್ಯ ಚಟುವಟಿಕೆಗಳಲ್ಲಿ ಅಮ್ಮ ಬಸಮ್ಮ, ಗೌರಮ್ಮ ವಾರದರಂತೆ, ತಾಯಿಸಂಗವ್ವ ನಂತೆ ಸಕ್ರಿಯವಾಗಿ ಪಾಲ್ಗೊಳ್ಳಲು ಮುಂದಾದರು.

ಜಯದೇವಿಯವರು ಹುಟ್ಟಿದ್ದು ಶೀಮಂತರ ಮನೆಯಲ್ಲಿ ಕೊಟ್ಟಿದ್ದೂ ಶ್ರೀಮಂತರ ಮನೆಗೆ. ಹೀಗಾಗಿ ಅಲ್ಲಿಯ ವೈಭವ ವಿಲಾಸಗಳಿಗೆ ಯಾವುದೇ ಕಡಿವಾಣಗಳಿರಲಿಲ್ಲ ಆದರೂ ಜಯದೇವಿಯವರು ಇಂಥ ವೈಭವದ ಬದುಕನ್ನು ಬಾಳಲು ಅವರು ಆಸಕ್ತರಾಗಲಿಲ್ಲ. ಅವರ ವೈಯಕ್ತಿಕ ಜೀವನವು ಆಡಂಬರದ ಸೋಂಕಿಲ್ಲದೆ ಸಾದಾ ಬದುಕಾಗಿತ್ತು. ಸರಳ ಬದುಕನ್ನು ಹಾಗೂ ಸಮಾಜ ಸೇವೆಯನ್ನು ಅವರು ಆಸಕ್ತಿಯಿಂದ ಆರಿಸಿಕೊಂಡರು. ಕೊರಳಲ್ಲಿ ರುದ್ರಾಕ್ಷಿ ಮಾಲೆ ಶುಭ್ರ ಸಾದಾ ಬಿಳಿ ವಸ್ತ್ರಗಳನ್ನುಳಿದರೆ ಬೇರೆ ಅಲಂಕಾರಗಳಿರಲಿಲ್ಲ. ಮುತ್ತು, ರತ್ನ, ಚಿನ್ನ, ಬೆಳ್ಳಿ, ವಜ್ರ ವೈಢೂರ್ಯಗಳು ಅವರ. ಮನೆಯಲ್ಲಿ ಬೇಕಾದಷ್ಟಿದ್ದರೂ ಜಯದೇವಿಯವರಿಗೆ ಅವುಗಳ ಬಗೆಗೆ ತೃಣಮಾತ್ರ ಆಸಕ್ತಿಯಿರಲಿಲ್ಲ ದೈವಭಕ್ತಿ, ಕನ್ನಡ ನುಡಿ ಭಕ್ತಿಗಳ ಸಂಗಮ ಅವರ ಜೀವನವಾಗಿತ್ತು.

ಹೆಚ್ಚು ಓದುವುದನ್ನು ಜನಕಲ್ಯಾಣಕ್ಕಾಗಿ ದುಡಿಯುವುದನ್ನು ತಮ್ಮ ಜೀವನದ ಗುರಿಯನ್ನಾಗಿಸಿಕೊಂಡಿದ್ದ ಇವರು, ಜೀವನದ ತುಂಬ ಅಧಿಕಾರದ ಲಾಲಸೆಗೆ ಬೀಳದೆ ಆದರ್ಶ ಜೀವನ ಸಾಗಿಸಿದರು, ತಮ್ಮ ಆಸಕ್ತಿಯ ಕಾರ್ಯಗಳಾದ

ಧಾರ್ಮಿಕ ಸೇವೆಯನ್ನು ವೀರಶೈವ ಮಹಾಸಭೆಯ ಮೂಲಕ ಹಾಗೂ ಸಮಾಜ ಸೇವೆಯನ್ನು 'ಮಹಿಳಾ ಜ್ಞಾನ ಮಂದಿರ'ದ ಮೂಲಕ ಆರಂಭಿಸಿದರು ಹೈದರಾಬಾದಿನ ರಜಾಕಾರರ ಹಾವಳಿಯಿಂದ ಕಂಗೆಟ್ಟು ಬಂದ ನಿರಾಶ್ರಿತರಾದವರಿಗೆ ಜಯಜದೇವಿಯವರು ಆಶ್ರಯ ಕೊಟ್ಟು ಎಲ್ಲರಿಗೂ 'ತಾಯಿ' ಎನಿಸಿದರು.

ಜಯದೇವಿಯವರ ಧಾರ್ಮಿಕ ಸೇವಾಸಕ್ತಿಗೆ ಕಾರಣೀಭೂತರಾದವರೆಂದರೆ ಅದರ ತಾತ ವಾರದ ಮಲ್ಲಪ್ಪನವರು, ನಾಲತವಾಡ ವೀರೇಶ್ವರ ಶರಣರು ಹಾಗೂ ಅವರ ತಾಯಿ ಸಂಗವ್ವನವರು, ವಾರದ ಮಲ್ಲಪ್ಪನವರು ಸೊಲ್ಲಾಪುರದಲ್ಲಿ ವೀರಶೈವ ಧರ್ಮದ ಮುಖಂಡರೆನಿಸಿದ್ದರು. ಇವರ ಮನೆ ಶ್ರೀ ಸಿದ್ಧರಾಮೇಶ್ವರ ದೇವಾಲಯದ ಹತ್ತಿರವೇ ಇತ್ತು ಅದನ್ನು ಇಂದ್ರ ಭವನ ಎಂದು ಕರೆಯಲಾಗುತಿತ್ತು. ಶಿಲ್ಪಕಲಾ ಕೃತಿಗಳಿಂದ ಕೂಡಿದ ಆ ಭವ್ಯ ಬಂಗಲೆಯು ಈ ಭಾಗದಲ್ಲಿಯೇ ಪ್ರಸಿದ್ಧವಾಗಿತ್ತು. ಬೊಂಬಾಯಿಯನ್ನು ಬಿಟ್ಟರೆ ಅಂಥ ಕಟ್ಟಡ ಬೇರೆಲ್ಲಿಯೂ ಇರಲಿಲ್ಲವೆಂದು ಜನ ಹೇಳುತ್ತಿದ್ದರು. ಆ ಭವ್ಯ ಬಂಗಲೆಯನ್ನು ನೋಡಲೆಂದೇ ದೂರದೂರದ ಜನರು ಬರುತ್ತಿದ್ದರು. ಆ ಮನೆಯ ವಾತಾವರಣ ಧಾರ್ಮಿಕ ವಾಗಿತ್ತು. ಅಲ್ಲಿ ಪುರಾಣ, ಕೀರ್ತನೆಗಳು, ನಡೆಯತೊಡಗಿದ್ದವು ದಾನ ಧರ್ಮ ಗಳಲ್ಲಿ ಆ ಮನೆತನದ್ದು ಎತ್ತಿದ ಕೈ. ಮನೆಯಲ್ಲಿ ಪಾದಪೂಜೆ, ಜಂಗಮ ದಾಸೋಹ ಗಳು ಆಗಾಗ ಜರುಗುತ್ತಿದ್ದವು. ಈ ಮನೆಗೆ ನಾಲತವಾಡ ಶರಣರು ಆಗಾಗ ಬಂದು ಪಾದಪೂಜೆ ಪ್ರಸಾದ ಮಾಡಿಕೊಂಡು ಹೋಗುತ್ತಿದ್ದರು ಇದನ್ನೆಲ್ಲ ಕುತೂಹಲದಿಂದ ನೋಡುತ್ತಿದ್ದ 'ಜಯದೇವಿ' ಅದರಲ್ಲಿ ಅಪಾರ ಆಸಕ್ತಿ ಹೊಂದಿದ್ದರು.

ಮೊಣಕಾಲಿನವರೆಗೆ ಪಂಚೆ, ಮೈಮೇಲೆ ತೇಪೆ ಹಾಕಿದ ನಿಲುವಂಗಿ, ಕೊರಳಲ್ಲಿ ರುದ್ರಾಕ್ಷಿ, ಹಣೆಗೆ ವಿಭೂತಿ, ಕಾಂತಿ ತುಂಬಿದ ಕಂಗಳ ವೀರಶೈವ ಮಹಾಶರಣರು, ಮನೆಗೆ ಬಂದರೆ 'ಜಯದೇವಿ' ಯವರು ತುಂಬಾ ಸಂಭ್ರಮ ಪಡುತ್ತಿದ್ದರು. ಅವರ ಪೂಜೆಗೆ ಸಿದ್ಧರಾಗಿ ಕುಳಿತಾಗ ತಾನು ಹಿಗ್ಗಿನಿಂದ ಸ್ನಾನ ಮಾಡಿ, ವಿಭೂತಿ ಧರಿಸಿಕೊಂಡು ಅಂಗೈಯಲ್ಲಿ ಇಷ್ಟಲಿಂಗ ಹಿಡಿದುಕೊಂಡು ಅವರನ್ನು ತದೇಕ ಚಿತ್ತದಿಂದ ನೋಡುತ್ತ ಅವರಂತೆ ಪೂಜಿಸಿಕೊಳ್ಳುವುದರಲ್ಲಿ ಆಸಕ್ತಿ ಬೆಳೆಸಿಕೊಂಡರು. ತಾಯಿಯ ಶಿವಪೂಜೆಯಲ್ಲಿ ಸಹಾಯ ಮಾಡುವುದು,ಮಂತ್ರ ಹೇಳುವುದು, ಆಗ ತನಗೆ ಬರುತ್ತಿದ್ದ ವಚನ ಭಕ್ತಿಗೀತೆಗಳನ್ನು ಕೇಳುಗರು ಮಂತ್ರ ಮುಗ್ಧರಾಗುವಂತೆ ಹಾಡುತ್ತಿದ್ದರು. ಜಯದೇವಿ ಚಿಕ್ಕವಳಿದ್ದಾಗ ಎಷ್ಟೋ ಸಲ ಹೊರ ಜಗತ್ತಿನ ಅರಿವಿಲ್ಲದೆ ಭಕ್ತಿ ಭಾವದಲ್ಲಿ ಮುಳುಗಿ ಹೋಗುತ್ತಿದ್ದ ಸಂದರ್ಭಗಳೂ ಇವೆ, ಆಟ ಪಾಠಗಳಲ್ಲಿಯೂ ತುಂಬಾ ಆಸಕ್ತಿಯುಳ್ಳ ಇವರು ಬಡಮಕ್ಕಳನ್ನು ತನ್ನೊಂದಿಗೆ ಕರೆದುಕೊಂಡು ಆಟವಾಡುತ್ತಿದ್ದರು.

ಜಯದೇವಿಯವರಿಗೆ ನಾಡು ನುಡಿ ರಾಷ್ಟ್ರಗಳ ಬಗೆಗೆ ಅಪಾರ ಕಾಳಜಿಯಿತ್ತು ಕನ್ನಡವನ್ನು ಅವರು ತುಂಬಾ ಗೌರವಾಭಿಮಾನದಿಂದ ಕಾಣುತ್ತಿದ್ದರು.

ಸೊಲ್ಲಾಪುರದಲ್ಲಿ ಅವರಿಗೆ ಬಾಲ್ಯದಲ್ಲಿ ಕನ್ನಡ ಕಲಿಯಲಾಗಲಿಲ್ಲ ಆಗ ಮರಾಠಿ ಶಾಲೆಗೆ ಹೋದರು, ಆದರೆ ಅವರು ಮೂರು ಮಕ್ಕಳ ತಾಯಿಯಾದ ಬಳಿಕ ಕನ್ನಡವನ್ನು ಕಲಿತು ಅದರಲ್ಲಿಯೇ ಸಾಹಿತ್ಯ ರಚಿಸಲು ತೊಡಗಿದರು. ಅವರ ಮನೆ ಮಾತು ಕನ್ನಡವಾಗಿತ್ತು ಹೀಗಾಗಿ,ಕನ್ನಡವು ತಾಯಿಯವರ ಹೋರಾಟ, ಭಕ್ತಿ, ಹಂಬಲ, ಯಾತನೆ, ಹಾಗೂ ಫಲಗಳೆಲ್ಲ ಇವರೊಂದಿಗಿದ್ದು ಆ ತಾಯಿಯವರ ಜೊತೆಯಲ್ಲಿ ತಾನೂ ಸಿದ್ಧರಾಮನ ದರ್ಶನ ಪಡೆಯಿತು. ಕೃತಿಗಳಲೆಲ್ಲ ಅವರ ಆಸಕ್ತಿಯ 'ಕನ್ನಡ ನಾಡು ನುಡಿ ಸಿದ್ಧರಾಮ' ಪರಿಸರವೆಲ್ಲ ಪಡಿಮೂಡಿ ನಿಂತಿರುವುದನ್ನು ಕಾಣಬಹುದು. ಏಕೀಕರಣವಾದ ಬಳಿಕವು ದುರ್ದೈವದಿಂದ ಕರ್ನಾಟಕದಿಂದ ಹೊರಗುಳಿದ ಭಾಗಗಳನ್ನು ಮತ್ತೆ ಕರ್ನಾಟಕದಲ್ಲಿ ಸೇರಿಸಲು ಅವರು ಬದುಕಿನುದ್ದಕ್ಕೂ ಹೋರಾಡಿದರು. ಅವರದು ನಾಡು ನುಡಿ ರಾಷ್ಟ್ರಕ್ಕಾಗಿ ಶುಭ ಚಿಂತನ, ಆ ಚಿಂತನವನ್ನು ಕಾರ್ಯರಂಗಕ್ಕಿಳಿಸುವ ಪ್ರಕ್ರಿಯೆ, ಸಾಮರ್ಥ್ಯ, ಛಲವೆಲ್ಲ ಅವರದೇ ಆದ ಆಸಕ್ತಿಯ ಮೇಲೆ ನಿಂತಿರುವಂತಹದ್ದು.

ಎಲ್ಲರಲ್ಲಿ ಒಂದೇ ಬಗೆಯ ವಾತ್ಸಲ್ಯ ಭಾವ ತಾಯಿಯವರದು ರಾಜಕಾರಣಿಗಳಿಂದ ಹಿಡಿದು ಸಾಮಾನ್ಯನವರೆಗೆ ಅವರನ್ನು ಕಾಣಲು ಯಾರೇ ಬರಲಿ ಅವರೊಡನೆ ಅಂತಃಕರಣದ ಮಾತನಾಡುತ್ತಿದ್ದರು. ಮನೆಗೆ ಬಂದವರೊಂದಿಗೆ ಹೇಗೆ ನಡೆದುಕೊಳ್ಳಬೇಕೆಂಬುದನ್ನು – ಅವರು

"ಬಂದವರಿಗೆ ಬಾ ಅನ್ನು ಮನತುಂಬಿ ಮಾತಾಡು
ಬಂದ ಸಂಗತಿ ತಿಳಿಕೋಳೊ
ಬಂದ ಸಂಗತಿ ತಿಳಿಕೊಳೋ । ಅಣ್ಣಯ್ಯ
ಚಂದಲ್ಲೊ ಗಮ್ಮ ಗರುವಿಕಿ" ಎಂದಿದ್ದಾರೆ

ವಿನಯ, ನಿಷ್ಪಕ್ಷತೆ, ನಿಷ್ಕಪಟ ಮನೋಭಾವದ ಜಯದೇವಿಯವರು ಸಿದ್ಧರಾಮನನ್ನು ಕಂಡ ಮಹಂತರು. ತುಂಬು ಜೀವನದ ಪ್ರತೀಕವಾಗಿರುವ ಅವರು ಎಲ್ಲರಿಗೂ ಸಿದ್ಧರಾಮನನ್ನು ತೋರಿಸಲು ಪ್ರಯತ್ನಿಸುವಂಥವರಾಗಿದ್ದರು. ಮಾತು ಕಡಿಮೆ ಕೃತಿ ಹೆಚ್ಚುಳ್ಳ ಅವರ ಸಾತ್ವಿಕ ವ್ಯಕ್ತಿತ್ವದ ದರ್ಶನ ಮಾಡಿಕೊಂಡವರೆಲ್ಲರೂ ಸನ್ಮಾರ್ಗದಲ್ಲಿ ಮುನ್ನಡೆದು ಬದುಕಿನಲ್ಲಿ ಯಶ ಕಂಡಿದ್ದಾರೆ. ಅಂತಹ ಭವ್ಯತೆ ಹಾಗೂ ಸಂದೇಶ ಪಡೆದ ಅವರ ವ್ಯಕ್ತಿತ್ವದ ಕ್ರಿಯೆಗಳಲ್ಲಿ ಅಂಥಹ ಆಸಕ್ತಿಗಳೇ ತುಂಬಿ ತುಳುಕುತ್ತಿರುವುದನ್ನು ಅರಿಯಬಹುದು.

## ೭. ಪಡೆದ ಪ್ರೇರಣೆಗಳು

ಜಯದೇವಿ ತಾಯಿಯವರ ಜೀವನ ತೀರಾ ಅಲೌಕಿಕವಾದುದಲ್ಲ. ಅಲ್ಲಿ ಪವಾಡಗಳು ಇಲ್ಲ. ಅದು ಅದ್ಭುತ ರಮ್ಯ ಘಟನೆಗಳಿಂದ ಕೂಡಿಯೂ ಇಲ್ಲ. ಸಹಜ

ಜೀವನ ಅವರದು. ಮೊಗ್ಗು ಮೆಲ್ಲ ಮೆಲ್ಲನೆ ನಸುನಗುತ ಹೂವಾಗಿ ಅರಳಿದಂತೆ, ಸುವಾಸನೆಯನ್ನು ಎಲ್ಲೆಡೆ ಹರಡಿದಂತೆ ದೀಪ ಹಚ್ಚಿದಂತೆ ಅವರ ಬದುಕು ಸಹಜವಾದುದು. ಆ ಸಹಜ ಜೀವನದಲ್ಲಿಯೇ ಆಚಾರ ವಿಚಾರಗಳಿಂದ ನಡೆ ನುಡಿಗಳಿಂದ ಮಾನವತೆಯು ಮಾಗಿ ದೈವತ್ವವಾಯಿತು. ಈ ಮಾಗುವಿಕೆಯ ರೀತಿಯನ್ನು ಅದ್ಬುತ ರಮ್ಯವೆಂದು ಹೇಳಬಹುದಾದರೂ ಅದು ನೆಲ ಬಿಟ್ಟು ಸಂದಿಲ್ಲ ಸಾಮಾನ್ಯತೆಯಿಂದ ಹೊರಗಿಲ್ಲ. ಯಾರೂ ಈ ಜೀವನ ಕ್ರಮವನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಪಕ್ವವಾಗಬಹುದು. ಈ ಪಕ್ವವಾಗುವ ಪರಿ ಎಲ್ಲರಿಗೂ ಸಿಗುಬಹುದಾದಂತಹದ್ದು. ಅದಕ್ಕೊಂದು ಸಾಧನೆ ಬಹುಮುಖ್ಯ ಎಂಬುದನ್ನು ಅರಿಯಬಹುದು.

## ೮) ವಿವಿಧ ಕ್ಷೇತ್ರಗಳಲ್ಲಿನ ಸಾಧನೆ

೧೯ನೆಯ ಶತಮಾನದ ಹೊತ್ತಿನಲ್ಲಿ ಭಾರತದಲ್ಲಿ ಬ್ರಿಟೀಷರ ಪ್ರಭುತ್ವ ನೆಲೆಗೊಂಡು ಜೀವನದ ವಿವಿಧ ಕ್ಷೇತ್ರಗಳಲ್ಲಿ ಬದಲಾವಣೆಯಾಯಿತು. ಬ್ರಿಟೀಷರು ತಮ್ಮ ಹಿಡಿತವನ್ನು ಇನ್ನಷ್ಟು ಬಿಗಿಗೊಳಿಸಲು ಸಾರ್ವತ್ರಿಕ ಶಿಕ್ಷಣವನ್ನು ತರಲು ಆಲೋಚಿಸಿದರು. ಈ ಮೂಲಕ ಶಿಕ್ಷಣದಲ್ಲಿ ಇಂಗ್ಲೀಷ್ ಭಾಷೆಯನ್ನು ಹೇರಲು ಪ್ರಯತ್ನಿಸುತ್ತಿದ್ದರು. ಇದರಿಂದ ವಿವಿಧ ಭಾಷೆಗಳನ್ನು ಮಾತನಾಡುತ್ತಿದ್ದ ಭಾರತೀಯರಿಗೆ ಇಂಗ್ಲೀಷ್ ಭಾಷೆಯ ಸಂಪರ್ಕವೊದಗಿಸಿತು. ಆದಿಕಾಲದಿಂದ ಒಂದೇ ರೀತಿಯಲ್ಲಿ ಸಾಗಿ ಬಂದಿದ್ದ ವಿದ್ಯಾ ಕ್ಷೇತ್ರದಲ್ಲಿ ಬದಲಾವಣೆಯ ಗಾಳಿ ಬೀಸಲಾರಂಭಿಸಿತು. ಮೇಲು ಕೀಳು, ಹೆಣ್ಣು ಗಂಡುಗಳೆಂಬ ಭೇದ ಭಾವವಿಲ್ಲದೆ ಶಿಕ್ಷಣ ಕ್ಷೇತ್ರವು ಜಾರಿಯಲ್ಲಿ ಬಂತು. ಇದು ದೇಶದ ಮೇಲೆ ಪರಿಣಾಮವನ್ನುಂಟು ಮಾಡಿತು. ಭಾಷೆ ಭಾಷೆಗಳಲ್ಲಿ, ಜಾತಿ ಜಾತಿಗಳಲ್ಲಿ ಆಚಾರ ವಿಚಾರಗಳಲ್ಲಿ ಇಲ್ಲಿಯವರೆಗೆ ಬೇರೆ ಬೇರೆಯಾಗಿದ್ದ ಜನಮನವು ಒಂದೇ ವೇದಿಕೆಯ ಮೇಲೆ ಒಂದಾಗುವ ಸಂದರ್ಭ ಮೂಡತೊಡಗಿತು. ಅನೇಕ ದೊಡ್ಡ ದೊಡ್ಡ ಊರುಗಳಲ್ಲಿ ಶಾಲೆಗಳಲ್ಲಿ ಆರಂಭವಾದವು.

ಈ ಸಂದರ್ಭದಲ್ಲಿ ಸೊಲ್ಲಾಪುರದಲ್ಲಿಯೂ ಈ ಶೈಕ್ಷಣಿಕ ಹೊಸತನ ಆರಂಭಗೊಂಡಿತು. ೧೮೮೫ರ ಸುಮಾರಿಗೆ ಇಲ್ಲಿ ಅನೇಕ ಶೈಕ್ಷಣಿಕ ಚಟುವಟಿಕೆಗಳು ಪ್ರಾರಂಭವಾದವು. ಆ ಕಾಲದಲ್ಲಿ ಮಲ್ಲಪ್ಪ ದೇಶಮುಖರು, ತಾತ್ಯಾಸಾಹೇಬ, ಕಾನಿಟಕರ್, ವಾರದ ಮಲ್ಲಪ್ಪನವರು ಇಂಥ ಸುಧಾರಣೆಗೆ ಕೈಯಿಕ್ಕಿದರು. ಅವರೆಲ್ಲರು ಒಂದೆಡೆ ಸೇರಿಕೊಂಡು ಸಮಾಜದ ಉದ್ಧಾರಕ್ಕಾಗಿ ಹಲವು ಯೋಜನೆ ಗಳನ್ನು ಹಾಕಿಕೊಂಡರು. ಅವುಗಳಲ್ಲಿ ಅತ್ಯಂತ ಪ್ರಮುಖವಾದುದು ಸ್ತ್ರೀ ಶಿಕ್ಷಣ.

ಈ ಕಾಲದ ಮಹಿಳೆಯರು ಮನೆಯ ನಾಲ್ಕು ಗೋಡೆಗಳ ಮಧ್ಯದಲ್ಲಿಯೇ ಇರುತ್ತಿದ್ದರು. ಅವರು ಅಂದಿನ ರಾಜಕೀಯ ಸ್ಥಿತಿಯ ಬಗೆಗೆ ಅವಜ್ಞತೆಯಿಂದಿರು

ತ್ತಿದ್ದರು. ಆರ್ಥಿಕವಾಗಿ ಪರಾವಲಂಬಿಗಳಾಗಿದ್ದ ಇವರು ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿನಿಂದ ತುಂಬಾ ದೂರವುಳಿದಿದ್ದರು. ಹೀಗಾಗಿ ಮಹಿಳೆಯರು ಸುಧಾರಿಸುವವರೆಗೆ ಈ ದೇಶದ ಪ್ರಗತಿ ಸಾಧ್ಯವಿಲ್ಲವೆಂದರಿತ ಅಂದಿನ ಮುಖಂಡರು ಸ್ತ್ರೀ ಶಿಕ್ಷಣಕ್ಕೆ ಮೊದಲ ಆದ್ಯತೆ ನೀಡಿದರು ಹೀಗಾಗಿ ಆ ಕಾಲದ ಶ್ರೀಮಂತರ ಮನೆಯ ಹಾಗೂ ಹಿರಿಯ ಅಧಿಕಾರಿಗಳ ಮನೆಯ ಹೆಣ್ಣು ಮಕ್ಕಳು ಒಂದು ಗೂಡಲು ಅವರಿಗೆ ಒಂದು ನೆಲೆ ಹುಡುಕಬೇಕಾಗಿತ್ತು. ಈ ದಿಸೆಯಲ್ಲಿ ಸೊಲ್ಲಾಪುರದಲ್ಲಿ ೧೮೮೯ರಲ್ಲಿ 'ಸರಸ್ವತಿ ಮಂದಿರ' ವನ್ನು ಆರಂಭಿಸಲಾಯಿತು. ಈ ಮಂದಿರದಲ್ಲಿ ಮಹಿಳೆಯರು ಮೊದಲು ಅರಿಷಿಣ ಕುಂಕುಮಕ್ಕೆಂದು ಪ್ರತಿವಾರ ಸೇರಲು ಆರಂಭಿಸಿದರು. ಆಗ ಆ ಊರಿನ ಪ್ರಮುಖ ಮನೆತನದ ಮಹಿಳೆಯರೆಲ್ಲ ಸೇರಿಕೊಳ್ಳಲು ಪ್ರಾರಂಭಿಸಿದಾಗ ಅವರು ಕೆಲವು ಮಹಿಳಾ ಜಾಗೃತಿ ತರುವ ಕಾರ್ಯಕ್ರಮ ರೂಢಿಸಿಕೊಂಡರು. ಆ ಸಂದರ್ಭದಲ್ಲಿ ಸ್ತ್ರೀ ಶಿಕ್ಷಣದ ಅವಶ್ಯಕತೆಯ ಅರಿವನ್ನು ಅರಿತುಕೊಂಡರು. ಆ ನಿಟ್ಟಿನಲ್ಲಿ ಪ್ರೌಢ ಸ್ತ್ರೀ ಶಿಕ್ಷಣದ ಯೊಜನೆ ಕಾರ್ಯರೂಪಕ್ಕಿಳಿಯಿತು.

ಅನಂತರದ ಕೆಲವೇ ದಿನಗಳಲ್ಲಿ ಸರಸ್ವತಿ ಮಂದಿರದ ಚಟುವಟಿಕೆಗಳು ಗಣನೀಯವಾಗಿ ಬೆಳೆದು ಬಂದವು. ಅಲ್ಲಿ ಹೆಣ್ಣು ಮಕ್ಕಳಿಗೆ ಪ್ರೋತ್ಸಾಹ ದಾಯಕವಾಗಿದ್ದ ರಂಗೋಲಿ, ಕಸೂತಿ ಕಲೆಯನ್ನು ಕಲಿಸುವುದು, ಆಟಪಾಠಗಳಲ್ಲಿ ಅವರ ಆಸಕ್ತಿ ಮೂಡಿಸುವ, ರಾಜಕೀಯ ತಿಳುವಳಿಕೆಯನ್ನುಂಟುಮಾಡುವ, ಕಾರ್ಯಕಲಾಪಗಳು ನಡೆದವು. ಹೆಣ್ಣು ಮಕ್ಕಳಿಗೆ ದೇಶದ ಸುದ್ದಿ ಸಮಾಚಾರ ತಿಳಿಸಲು ವೃತ್ತ ಪತ್ರಿಕೆಗಳನ್ನು ಓದಿ ಹೇಳುತ್ತಿದ್ದರು. ಹೀಗಾಗಿ ಆ ಮಂದಿರವು ಎಲ್ಲ ವರ್ಗದ ಮಹಿಳೆಯರನ್ನು ಆಕರ್ಷಿಸತೊಡಗಿತು.

ಔದ್ಯೋಗಿಕ ಕ್ಷೇತ್ರವೆಂದು ಪ್ರಸಿದ್ಧವಾಗಿದ್ದ ಸೊಲ್ಲಾಪುರದಲ್ಲಿ ಅನೇಕ ಜನರು ಬಂದು ನೆಲೆಸತೊಡಗಿದರು. ಈಗಾಗಲೇ ಅಲ್ಲಿ ಉದ್ಯೋಗಪತಿಗಳಾದ ಕನ್ನಡಿಗರಿದ್ದರು. ಹೆಚ್ಚಿನ ಸಂಖ್ಯೆಯ ಮರಾಠಿಗರಿದ್ದರು. ಗುಜರಾತಿಗಳು ಬಂದು ನೆಲೆಯೂರಿದರು. ಹೀಗಾಗಿ ಈ ಮೂರು ಮುಖ್ಯ ಭಾಷಾ ಜನತೆಗಾಗಿ ಮೂರು ಮಹಿಳಾ ಮಂದಿರಗಳನ್ನು ನಂತರದಲ್ಲಿ ಸ್ಥಾಪಿಸಬೇಕಾಯಿತು. ಆ ನಿಮಿತ್ತವಾಗಿ ಈ ಮೊದಲೇ ಇದ್ದ 'ಸರಸ್ವತಿ ಮಂದಿರವು' ಮರಾಠಿಯವರಿಗಾಗಿ 'ಶಂಕರರಾವ್ ದೇಶಾಮಕರರ' ಮನೆಯಲ್ಲಿ ಸ್ಥಾಪಿತಗೊಂಡರೆ, ಗುಜರಾತಿ ಭಾಷಿಕರಾದ ಜೈನರಿಗಾಗಿ 'ಶ್ರಾವಿಕಾಶ್ರಮ'ವು ನೇಮಿಚಂದ್ರರ ಮನೆಯಲ್ಲಿ ಹಾಗೂ ಕನ್ನಡಿಗರಾದ ವೀರಶೈವ ವಾರದ ಮಲ್ಲಪ್ಪನವರ ಮನೆಯಲ್ಲಿ 'ವೀರಶೈವ ಮಹಿಳಾ ಜ್ಞಾನಮಂದಿರ'ವು ಹುಟ್ಟಿಕೊಂಡವು. ಇದರಿಂದ ಎಲ್ಲ ಗೃಹಿಣಿಯರಿಗೆ ಅವರವರ ಭಾಷೆಗಳಲ್ಲಿ ಹೆಚ್ಚಿನ ಜ್ಞಾನ ಪಡೆಯುವ ಅವಕಾಶ ದೊರೆಯಿತು.

'ವೀರಶೈವ ಮಹಿಳಾ ಜ್ಞಾನ ಮಂದಿರ'ಕ್ಕೆ ವಾರದ ಮಲ್ಲಪ್ಪನವರ ಧರ್ಮಪತ್ನಿಯರಾದ ಬಸವ್ವ ಬಾಯಿ, ಗೌರವ್ವ ಬಾಯಿಯವರು ಮೇಲ್ವಿಚಾರಕರಾಗಿದ್ದರು. ಅದರ ಕಾರ್ಯದರ್ಶಿಯಾಗಿ ಸಂಗವ್ವ ಮಡಕಿಯವರು ಅವರಿಗೆ ನೆರವಾಗುತ್ತಿದ್ದರು ಆಗ "ಜಯದೇವಿ" ಯು ತಾಯಿಯೊಂದಿಗೆ ಅಲ್ಲಿಗೆ ಹೋಗುತ್ತಿದ್ದರು. ಅಲ್ಲಿ ಮಡಕಿ ಸಂಗವ್ವನವರು ಪುರಾಣಗಳನ್ನೋದಿ ಹೇಳುತ್ತಿದ್ದರು ಹಾಡು ಹಾಡು ಹಾಡುತ್ತಿದ್ದರು, ಸಾಮೂಹಿಕ ಭಜನೆ, ಸಂಪ್ರದಾಯದ ಹಾಡುಗಳನ್ನು ಹೇಳುವ ಆ ಸಂದರ್ಭಗಳಲ್ಲಿ ಜಯದೇವಿಯರು ಭಾಗಿಯಾಗುತ್ತಿದ್ದರು ಈ ಸಂದರ್ಭವು ಜಯದೇವಿಯವರ ಕಾರ್ಯಕ್ಷಮತೆಯನ್ನು ಹೆಚ್ಚಿಸುವಲ್ಲಿ ತುಂಬಾ ನೆರವಾಯಿತು.

ಈ ಮಹಿಳಾ ಜ್ಞಾನ ಮಂದಿರವು ಸೊಗಸಾಗಿ ಬೆಳೆಯಿತು, ಅದಕ್ಕೊಂದು ಸ್ವತಂತ್ರ ಕಟ್ಟಡವಾಯಿತು. ಸರಕಾರದಿಂದ ಧನ ಸಹಾಯ ಪಡೆದು ಅದಕ್ಕೆ ೧೯೩೨ ರ ಸಮಯದಲ್ಲಿ 'ಜಯದೇವಿ' ಯವರು ಅದರ ಮೇಲ್ವಿಚಾರಕರಾಗಿ ಸೇವೆಯನ್ನು ಸಲ್ಲಿಸುತ್ತಿದ್ದ ಸಂಗತಿಯು ಆ ಮಂದಿರದ ಪತ್ರದಿಂದ ತಿಳಿದು ಬರುತ್ತದೆ. ಇವರ ಮೇಲ್ವಿಚಾರಕತ್ವದಲ್ಲಿ ನಡೆಯುತ್ತಿದ್ದಾಗ ಆ ಜ್ಞಾನ ಮಂದಿರದ ಹೆಸರು ಜನಪ್ರಿಯವಾಗಿತ್ತು ಹೀಗಾಗಿ ಒಮ್ಮೆ ಶಿಕ್ಷಣ ಸಚಿವರು ಆ ಮಂದಿರಕ್ಕೆ ಭೇಟಿ ಕೊಟ್ಟಿದ್ದ ಸಂಗತಿಯು ತಿಳಿದು ಬರುತ್ತದೆ ಈ ಮಂದಿರದ ಮೂಲಕ ಜಯದೇವಿಯವರು ಅನೇಕ ಸಾಮಾಜಿಕ ಕಾರ್ಯಗಳನ್ನು ಪೂರೈಸಿದರು. ಸೊಲ್ಲಾಪುರಕ್ಕೆ ಒಮ್ಮೆ 'ಕಾಲರಾ ರೋಗ' ಕಾಲಿಕ್ಕಿತು ಅದು ಒಂದರ್ಥದಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಸೇವೆಯನ್ನು ಒರೆಗೆ ಹಚ್ಚುವ ಕಾಲವೆನ್ನಬಹುದು ಆ ಸಮಯದಲ್ಲಿ ಈ 'ಮಹಿಳಾ ಜ್ಞಾನಮಂದಿರ'ವು ಮುಂಚೂಣಿಯಲ್ಲಿ ಕಾರ್ಯ ಮಾಡಿತು. ಜಯದೇವಿಯವರ ನೇತೃತ್ವದಲ್ಲಿ ಸೇವಾ ಸಿದ್ಧತೆಗಳನ್ನು ಮಾಡಿಕೊಂಡು ಆ ರೋಗ ನಿವಾರಣೆಗೆ ಯೋಗ್ಯ ಕ್ರಮಗಳನ್ನು ಕೈಗೊಳ್ಳುವಲ್ಲಿ ಇದು ನೆರವಾಯಿತು. 'ಜಯದೇವಿ' ಯವರು ಅಲ್ಲಲ್ಲಿ ನಾಗರಿಕರ ಸಭೆ ಕರೆದು, ಜನರು ವಹಿಸಬೇಕಾದ ಮುಂಜಾಗ್ರತೆ, ಪಡೆಯಬಹುದಾದ ಸಹಾಯಗಳನ್ನು ಕುರಿತು ಭಾಷಣಗಳನ್ನು ಮಾಡುತ್ತ, ಅವರಲ್ಲಿ ಧೈರ್ಯ ತುಂಬಿದ ಪ್ರಸಂಗಗಳನ್ನು ಆ ಕಾಲದ (೨೭–೦೮ –೧೯೪೫ರ ಸರ್ಕಾರ) ಪತ್ರಿಕೆ ತಿಳಿಸುತ್ತದೆ.

೧೯೪೭ ಕ್ಕಿಂತ ಮುಂಚೆ ಮೊದಲು ರಾಜಕೀಯವಾಗಿ ಎಚ್ಚೆತ್ತಿದ್ದ ಸಮಗ್ರ ಭಾರತ ದೇಶ ಮೈ ಕೊಡವಿಕೊಂಡು ಮೇಲೆದ್ದು ಸ್ವಾತಂತ್ರ ಚಳುವಳಿಯನ್ನು ನಡೆಸುತ್ತಿತ್ತು. ಈ ಸಂದರ್ಭದಲ್ಲಿ ಗಾಂಧೀಜಿಯವರ ತತ್ವ ಪ್ರಣಾಳಿಕೆಗೆ ಮಾರು ಹೋಗದ ಭಾರತೀಯನಿರಲಿಲ್ಲ 'ಜಯದೇವಿ'ಯವರು ಆ ಪ್ರಭಾವದ ಸೆಳೆತಕ್ಕೆ ಸಿಕ್ಕು ನೂಲು ತೆಗೆಯುವ, ಸ್ವದೇಶಿ ಬಟ್ಟೆ ಬಳಸುವ ತತ್ವಕ್ಕೆ ಬದ್ಧರಾದರು. ತಮ್ಮ 'ಮಹಿಳಾ ಜ್ಞಾನ ಮಂದಿರದ'ದಲ್ಲೂ ಅದನ್ನು ಕಾರ್ಯರೂಪಕ್ಕೆ ತಂದರು. ಈ ಮೂಲಕ

ಅವರು 'ಸ್ವದೇಶಿ' ವಸ್ತುಗಳನ್ನು ಬಳಸುವ ಕಠೋರ ನಿರ್ಧಾರ ಕೈಗೊಂಡು ಜನಸಾಮಾನ್ಯನ ಮೇಲೆ ಪ್ರಭಾವವನ್ನು ಮಾಡಿದರು.

ಜಯದೇವಿ ತಾಯಿಯವರು ಕಟ್ಟಾ ದೇಶಾಭಿಮಾನಿಗಳು. ಒಳಿತು ಕೆಡುಕುಗಳನ್ನು ಅವರು ರಾಷ್ಟ್ರದ ಹಿತದೃಷ್ಟಿಯಿಂದಲೇ ನಿರ್ಧರಿಸುತ್ತಿದ್ದರು. ಗಂಭೀರವಾದ ಯಾವುದೇ ಸಮಸ್ಯೆಯ ಪರಿಹಾರಕ್ಕಾಗಿ ಸಭೆ ಮಾಡುವುದಾಗಲಿ, ಸತ್ಯಾಗ್ರಹ ಮಾಡುವುದಾಗಲಿ, ಪ್ರತಿಭಟಿಸುವುದಾಗಲಿ, ಅವರು ದೇಶದ ಹಿತದೃಷ್ಟಿಯಿಂದ ಅತ್ಯಂತ ಕೂಲಂಕುಶವಾಗಿ ವಿಚಾರಿಸಿ ನಿರ್ಣಯ ತೆಗೆದುಕೊಳ್ಳುತ್ತಿದ್ದರು. ಬ್ರಿಟೀಷರಿಗೆ 'ತನು ಮನ ಧನಸೇ ಮದತಕರನಾ ಹರಾಮ ಹೈ' ಎಂಬುದನ್ನು ಗಾಂಧೀಜಿಯವರು ಘೋಷಿಸುವ ಮೊದಲೇ ಜಯದೇವಿ ಯವರು ಅರಿತಿದ್ದರು.

೧೯೪೭ಕ್ಕಿಂತ ಮೊದಲು ಜಯನಿಕೇತನದಲ್ಲಿ ರಾಷ್ಟ್ರೀಯ ಸೇವಾದಳದ ಪ್ರೌಢ ಸ್ತ್ರೀ ಶಾಖೆಯನ್ನು ಆರಂಭಿಸಿದ್ದರೆಂದು ಪತ್ರಿಕೆಯು (ಸೊಲ್ಲಾಪುರ ಸಮಾಚಾರ ೨೫-೦೭೧೯೪೭, ೧೯-೦೭-೧೯೪೭) ತಿಳಿಸುತ್ತದೆ ರಾಷ್ಟ್ರದ ಹಿತ ಚಿಂತನೆಗಾಗಿ, ರಾಜಕೀಯ, ಸಾಮಾಜಿಕ ವಿಷಯಗಳ ಮೇಲೆ ಸಂಘರ್ಷವಾಗಿ ಚರ್ಚೆಯನ್ನು ನಡೆಸಲಾಗುತಿತ್ತು. ಆ ಸಂದರ್ಭದಲ್ಲಿ ಜಯದೇವಿಯವರು 'ವೀರಶೈವ ಮಹಿಳಾ ಜ್ಞಾನ ಮಂದಿರ' ದಲ್ಲಿ ರಾಷ್ಟ್ರ ನಾಯಕರನ್ನು ಕುರಿತು ಭಾಷಣಗಳನ್ನು ಇಡುತ್ತಿದ್ದರು. ಆಗ ದೇಶಭಕ್ತ ಜಾಜೂಟಿ ರಾಮಕೃಷ್ಣನಂಥವರು ಲೋಕಮಾನ್ಯ ಟಿಳಕರ ಬಗ್ಗೆ ಹಾಗೂ ಉಳಿದ ಕೆಲವು ನಾಯಕರ ಬಗೆಗೆ ಭಾಷಣ ಮಾಡಿ ಮಹಿಳೆಯರಲ್ಲಿ ದೇಶಪ್ರೇಮವನ್ನು ತುಂಬುತ್ತಿದ್ದರು. ಇಂಥ ಜಾಗೃತಿಯನ್ನುಂಟು ಮಾಡಲು 'ಜಯದೇವಿ'ಯವರು ಜ್ಞಾನ ಮಂದಿರವನ್ನು ಬಳಸಿಕೊಂಡಿರುವುದು ಮಹತ್ವದ ಸಾಧನೆ ಎನ್ನಬಹುದು. ಜಯದೇವಿಯವರು ಪ್ರಥಮ ಸ್ವಾತಂತ್ರೋತ್ಸವವನ್ನು ತುಂಬಾ ವಿಶಿಷ್ಟವಾಗಿ ಆಚರಿಸಿ ಗಮನ ಸೆಳೆದರು. ಆ ಸಮಯದಲ್ಲಿ ಮಹಿಳೆಯರನ್ನು ಜೊತೆ ಮಾಡಿಕೊಂಡು ಇಪ್ಪತ್ತನಾಲ್ಕು ತಾಸು ನೂಲು ತೆಗೆಯುವ ಸ್ಪರ್ಧೆಯನ್ನು ಏರ್ಪಡಿಸಿದ್ದರು. ನಗರದ ಮಧ್ಯಭಾಗದ ಸ್ಥಳದಲ್ಲಿ ವ್ಯಾಖ್ಯಾನ ಮಾಲೆಯನ್ನು ನಡೆಸಿದರು. ಆ ವ್ಯಾಖ್ಯಾನ ಮಾಲೆಗೆ ಆರಿಸಿಕೊಂಡ ವಿಷಯಗಳೆಂದರೆ ೧) ಸ್ತ್ರೀಯರ ದೃಷ್ಟಿಯಲ್ಲಿ ದೇಶದ ಪುನರ್ರಚನೆ ೨) ಸಧ್ಯದ ಸ್ಥಿತಿ ಮತ್ತು ಮಹಿಳಾ ಪರಿಷತ್ತಿನ ಕಾರ್ಯ ೩) ಅಪೌರುಷೇಯ ವಾಙ್ಮಯದಲ್ಲಿ ಅಭಿಜಾತ ವಾಙ್ಮಯ ೪) ಸ್ವಾತಂತ್ರ್ಯ ಯುಗದಲ್ಲಿ ಸ್ತ್ರೀ ಶಿಕ್ಷಣ ೫) ಸ್ವಾತಂತ್ರ್ಯ ಯುಗದಲ್ಲಿ ಹೊಸಸೃಷ್ಟಿ ೬) ಸ್ವತಂತ್ರ ಹಿಂದೂಸ್ಥಾನದಲ್ಲಿ ಸ್ತ್ರೀಯರ ಕರ್ತವ್ಯಗಳು ಮತ್ತು ಸುಭಾಷ್‌ಚಂದ್ರ ಬೋಸ್ ಎಂಬುವುಗಳು ಈ ಕಾರ್ಯಕ್ರಮವನ್ನು ೪-೧೨-೪೭ರಿಂದ ೯-೧೨-೪೭ ರವರೆಗೆ ನಡೆಸಲಾಯಿತು. ಆ ಸಮಯದಲ್ಲಿ ಹೆಚ್ಚು ಜನರು ಭಾಗವಹಿಸಿ, ತತ್ಕಾಲೀನ ವಿಷಯಗಳನ್ನು

ಅರಿತುಕೊಂಡರು ಈ ರೀತಿಯ ಕಾರ್ಯಕ್ರಮಗಳನ್ನು ಸಂಘಟಿಸಿ ತಮ್ಮ ಕತೃತ್ವ ಶಕ್ತಿಯನ್ನು ವ್ಯಕ್ತಗೊಳಿಸಿದ್ದಾರೆ ಜಯದೇವಿಯವರು.

### ಸ್ತ್ರೀ ಶಿಕ್ಷಣ ಕಾರ್ಯಕ್ರಮ

'ವೀರಶೈವ ಮಹಿಳಾ ಜ್ಞಾನ ಮಂದಿರ'ದ ಕಾರ್ಯಕ್ರಮಗಳು ಮೊದಲು ಆಮೆಗತಿಯಲ್ಲಿ ಆರಂಭವಾಗಿದ್ದವು ಬಸವ್ವಬಾಯಿಯವರ ಕಾಲದಲ್ಲಿ ಆಗಾಗ ಹೊಸ ಹೊಸ ಸಮಸ್ಯೆಗಳು ತಲೆ ಎತ್ತಿ ನಿಲ್ಲುತ್ತಿದ್ದವು 'ಸ್ತ್ರೀ ಶಿಕ್ಷಣ' ವನ್ನು ಸನಾತನಿಗಳು ಸಂಪ್ರದಾಯಸ್ತರು ಮನಃಪೂರ್ವಕವಾಗಿ ಒಪ್ಪುತ್ತಿರಲಿಲ್ಲ. ಈಗಾಗಲೇ ಬೇರೆ ರಾಷ್ಟ್ರಗಳಲ್ಲಿ ಚಾಲನೆಯಲ್ಲಿದ್ದ ಸ್ತ್ರೀ ವಿಮೋಚನಾ ಆಂದೋಲನವು ಕೆಲವರಿಗೆ ಸರಿಕಂಡಿರಲಿಲ್ಲ. ಸ್ತ್ರೀ ವಿಮೋಚನೆಗೊಂಡರೆ ಸುಶಿಕ್ಷಿತ ಮಹಿಳೆಯರು ಮನೆಗೆಲಸ ಮಾಡುವುದಿಲ್ಲವೆಂಬ ತಪ್ಪು ಅಭಿಪ್ರಾಯ ಎಲ್ಲೆಡೆ ಹಬ್ಬಿತ್ತು. ಹೀಗಾಗಿ ಜಯದೇವಿ ಯವರು ಮೊದಲು ಈ ಭಾವನೆಗಳನ್ನು ದೂರಮಾಡಲು ಹೋರಾಡಬೇಕಾಯಿತು. ಆ ನಿಮಿತ್ತವಾಗಿ ಅವರು ದಿನಾಂಕ೧೬-೦೯-೧೯೪೨ ರ ಸೊಲ್ಲಾಪುರ ಸಮಾಚಾರ ಪತ್ರಿಕೆಯಲ್ಲಿ 'ಸ್ತ್ರೀ ಶಿಕ್ಷಣ' ಕುರಿತು ಕಾರ್ಯಕ್ರಮ ಏರ್ಪಡಿಸಲು ಹಾಗೂ ಸಂದರ್ಶಿಸಲು ಒಂದು ಪ್ರಕಟಣೆ ಕೊಟ್ಟರು. ಅದೇನೆಂದರೆ – "ಸ್ತ್ರೀಯರು ಶುಶಿಕ್ಷಿತರಾಗುವುದು ಧರ್ಮಸಮ್ಮತ. ಕೇವಲ ಪರುಷರಷ್ಟೇ ಉಚ್ಚ ಶಿಕ್ಷಣ ಹೊಂದುವುದರಿಂದ ಅಷ್ಟು ಪ್ರಯೋಜನವಾಗುವುದಿಲ್ಲ. ಯಾಕೆಂದರೆ ಎಲೆಗಳ ಮೇಲೆ ನೀರೆರೆಚುವುದರಿಂದ ಗಿಡಕ್ಕೆ ಉಪಯೋಗವಾಗುವುದಿಲ್ಲ, ಬೇರಿಗೆ ನೀರು ಹಾಕುವುದರಿಂದ ಗಿಡಕ್ಕೆ ಉಪಯೋಗವಾಗುವಂತೆ, ಸ್ತ್ರೀ ಶಿಕ್ಷಣವು ಸಮಾಜದ ಅಭಿವೃದ್ಧಿಗೆ ಅವಶ್ಯಕ" ಎಂದು ತಿಳಿಸಿದರು. ಇದು ಜನತೆಯಲ್ಲಿ ಜಾಗೃತಿ ತರಲು ತುಂಬಾ ಉಪಯೋಗವಾಯಿತು.

ಅಲ್ಲದೇ ಈ ಮೊದಲು ದಿನಾಂಕ ೨೪-೦೪-೧೯೩೯ರಂದು ವೀರಶೈವ ಮಹಾಸಭೆಯ ಮಹಿಳಾ ಪರಿಷತ್ತಿನ ಅಧ್ಯಕ್ಷಿಣಿಯಾಗಿ 'ಶರಣ ಸಂದೇಶ' ವಿಷಯದ ಮೇಲೆ ಮಾಡಿದ ಭಾಷಣವು ಸ್ತ್ರೀಪರ ಕಾಳಜಿಯನ್ನು ಹೊಂದಿರುವಂತಹದ್ದು– "ನಮ್ಮ ದೇಶದ ಸಂಸ್ಕೃತಿಯನ್ನು ನಾವು ಉಳಿಸಿಕೊಂಡರೆ ಪರಕೀಯರ ಅನುಕರಣೆಗೆ ಸ್ಥಾನ ದೊರೆಯುವುದಿಲ್ಲ. ಗೃಹನಿರ್ವಹಣೆಯಲ್ಲಿ ಮಹಿಳೆಯರು ಅರ್ಧಪಾಲುದಾರರು. ಅವರು ಅರ್ಧಾಂಗಿನಿಯರಾಗಿದ್ದರೂ ಮನೆಯಲ್ಲಿ ಅಡಿಗೆ, ಮಕ್ಕಳ ಆರೋಗ್ಯ ಮನೆಯವರ ಲಾಲನೆ–ಪಾಲನೆ ಈ ಮೊದಲಾದ ಕಾರ್ಯಗಳು ಸ್ತ್ರೀಯರಿಂದಲೇ ನಡೆಯಬೇಕು. ಬಾಳು ಸುಗಮವಾಗಿ ಸಾಗಬೇಕಾದರೆ ಸ್ತ್ರೀಯರ ಮೇಲೆ ಪುರುಷರಷ್ಟೇ ಜವಾಬ್ದಾರಿ ಇದೆ. ಪುರುಷರು ರತ್ನವಾದರೆ ಸ್ತ್ರೀಯರು ಆ 'ರತ್ನದ ಖಣಿ' ಎಂದು ಸಾರಿರುವುದು ತುಂಬಾ ಮಹತ್ವದ ಸಂಗತಿ ಈ ವರದಿಯಿಂದ ಜಯದೇವಿಯವರು ಪುರುಷರಲ್ಲಿ ಅವರ ಮಹತ್ವವನ್ನು ತಿಳಿಯಪಡಿಸುವ ದೃಷ್ಟಿಯಲ್ಲಿ ಸ್ತ್ರೀ ಶಕ್ತಿ ಎಷ್ಟು ಪ್ರಧಾನವಾದುದು ಎಂಬುದನ್ನು

ಸಮಾಜಕ್ಕೆ ಮನವರಿಕೆ ಮಾಡಿಕೊಡುವುದರೊಂದಿಗೆ ಸ್ತ್ರೀ ಪ್ರಗತಿಯೂ ಅಷ್ಟೇ ಮುಖ್ಯವೆಂಬುದನ್ನು ಎತ್ತಿ ತೋರಿಸಿರುವುದು ಗಮನಾರ್ಹ ಅಂಶವಾಗಿದೆ.

ಜಯದೇವಿಯವರು ಶಿಕ್ಷಣವನ್ನು ಕುರಿತು ಬೇರೆ ಬೇರೆ ಸಂದರ್ಭಗಳಲ್ಲಿ ತುಂಬಾ ಅರ್ಥವತ್ತಾಗಿ ಮಾತನಾಡಿರುವುದನ್ನು ಗಮನಿಸಬಹುದು ಶಿಕ್ಷಣವೆಂದರೆ ಒಂದೆರಡು ಭಾಷೆಗಳನ್ನು ಮಾತನಾಡಲು ಕಲಿಯುವುದಷ್ಟೇ ಅಲ್ಲ, ನಿತ್ಯ ಜನೋಪಯೋಗಿ ಗೃಹ ವಿಜ್ಞಾನ, ತಾಂತ್ರಿಕ ಶಿಕ್ಷಣ, ಉನ್ನತ ಶಿಕ್ಷಣ ಕಲಿಯಬೇಕು ಎಂಬುದು ಅವರ ವಿಚಾರ. ಬ್ರಿಟೀಷರು ಹೇಳುತ್ತಿದ್ದ ಅಕ್ಷರ ಜ್ಞಾನವನ್ನುಅವರು 'ಗಿಳಿ ಪಾಠ' ಶಿಕ್ಷಣ ಎನ್ನುತ್ತಿದ್ದರು. ಇದು ಇಂಗ್ಲೀಷರ ವ್ಯವಹಾರಕ್ಕೆ ಮಾತ್ರ ಅನುಕೂಲ ಅದನ್ನು ಬಿಟ್ಟು ಜೀವನದ ಅಧಃಪತನಕ್ಕೆ ಕಾರಣವಾದ ಅಜ್ಞಾನವನ್ನು ಹೊಡೆದೋಡಿಸಲು ಸುಸಂಸ್ಕೃತ ಬದುಕನ್ನು ಕಟ್ಟಿಕೊಳ್ಳುವ ಶಿಕ್ಷಣ ಬೇಕು. ಇದು ಬರಬೇಕಾದರೆ ಮೊದಲು ಅನಕ್ಷರತೆ ತೊಲಗಬೇಕು. "ಹಸಿರು ಕ್ರಾಂತಿ ಹೊಟ್ಟೆಯ ಹಸಿವನ್ನು ಹಿಂಗಿಸಿದರೆ, ಅಕ್ಷರ ಕ್ರಾಂತಿಯು ಬುದ್ಧಿಯ ಹಸಿವನ್ನು ಹಿಂಗಿಸುವುದೆಂದು" ಅವರು ೪೮ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಹೇಳಿದರು.

ಸುವ್ಯವಸ್ಥಿತ ಸಮಾಜರಚನೆಗೆ ಸುಸಂಸ್ಕೃತ ಜನಾಂಗಬೇಕು ಈ ಸುಸಂಸ್ಕೃತಿಯ ತವರುಮನೆ ಸ್ತ್ರೀ ಶಿಕ್ಷಣ. ಸಮಾಜದಲ್ಲಿ 'ಸುಖ ಶಾಂತಿ' ನೆಲೆಸುವಂತೆ ಮಾಡುವುದು ಧರ್ಮದ ಗುರಿ. ಅಲ್ಲಿಯ ಬಡತನ, ದುಃಖ ಹಾಗೂ ವರ್ಗ ಕಲಹಕ್ಕೆ ಕಾರಣ ಅಜ್ಞಾನ. ಇದನ್ನು ಇಲ್ಲದಂತೆ ಮಾಡಿ ಸಮಾಜ ರಚಿಸುವುದೇ ಶಿಕ್ಷಣ. ಅದರಲ್ಲೂ ಸ್ತ್ರೀ ಶಿಕ್ಷಣ ಹೆಚ್ಚು ಮುಖ್ಯವೆಂದು ಜಯದೇವಿ ಯವರು ತಮ್ಮ ಅನೇಕ ಭಾಷಣಗಳಲ್ಲಿ ಒತ್ತಿ ಒತ್ತಿ ಹೇಳುತ್ತಿದ್ದರು ಶಿಕ್ಷಣ ಪ್ರಸಾರ ಮಾಡಲು ಸ್ತ್ರೀಯರಲ್ಲಿ ಸಾಮಾಜಿಕ, ರಾಜಕೀಯ ಪ್ರಜ್ಞೆ ಬೆಳೆಸಲು ವೃತ್ತ ಪತ್ರಿಕೆಗಳು ಅವಶ್ಯವೆಂದು ಅರಿತಿದ್ದ ಜಯದೇವಿಯವರು ಆಕಾರಣಕ್ಕಾಗಿ ಕನ್ನಡ ವೃತ್ತ ಪತ್ರಿಕೆಗಳನ್ನು ತರಿಸಿ 'ಜಯನಿಕೇತನ'ದಲ್ಲಿಟ್ಟು ಎಲ್ಲರಿಗೂ ಓದಲು ಅನುಕೂಲ ಮಾಡಿಕೊಡುತ್ತಿದ್ದರು.

೧೨-೦೫-೧೯೪೫ರ 'ಸೊಲ್ಲಾಪುರ ಸಮಾಚಾರ' ಪತ್ರಿಕಾ ವರದಿ ಪ್ರಕಾರ ಮಹಿಳೆಯರ ಸರ್ವಾಂಗೀಣ ಪ್ರಗತಿಗೆ ಶಿಕ್ಷಣವೊಂದೇ ಸಾಲದು, ಇನ್ನೂ ಅನೇಕ ಸೌಲಭ್ಯಗಳನ್ನು ಅವರಿಗೆ ಒದಗಿಸುವುದು ಅವಶ್ಯವೆಂದು ಜಯದೇವಿಯವರು ತಮ್ಮ ಅನೇಕ ಭಾಷಣಗಳಲ್ಲಿ ಹೇಳುತ್ತಿದ್ದರು. ಮಹಿಳೆಯರಿಗಾಗಿ ಪತ್ರಿಕೆಗಳು ಕೆಲವು ಯೋಜನೆಗಳನ್ನು ರೂಪಿಸಿಕೊಡಬೇಕೆಂದು ತಿಳಿಸುತ್ತಿದ್ದರು. ಹಳ್ಳಿಗಳಲ್ಲಿ ಅಕ್ಕನ ಬಳಗಗಳು ಸ್ಥಾಪಿತಗೊಂಡು, ನಿಧಿ ಸಂಗ್ರಹಮಾಡಿ, ಮಹಿಳೆಯರ ಅಭಿವೃದ್ಧಿಗಾಗಿ ವಿನಿಯೋಗಿಸಬೇಕು. ಈ ಮೂಲಕ ಮಹಿಳೆಯರು ರಾಷ್ಟ್ರೀಯ ಕಾರ್ಯಗಳಲ್ಲಿ ಹಾಗೂ ಸಾಹಿತ್ಯಿಕ ಕ್ಷೇತ್ರಗಳಲ್ಲಿ ಭಾಗವಹಿಸಲು ಸಾಧ್ಯವಾಗುತ್ತದೆ. ಅದಲ್ಲದೆ

ಸರಕಾರವು ಬಾಲವಿಧವಾ ವಿವಾಹಗಳನ್ನು ಜಾರಿಗೆ ತಂದು ಕಾಯ್ದೆ ರಚಿಸಲು ಒತ್ತಾಯಿಸಬೇಕು. ಜನತೆ ಮತ್ತು ಸರಕಾರಗಳೆರಡೂ ಈ ದಿಸೆಯಲ್ಲಿ ಸಹಕರಿಸಿದರೆ ಮಹಿಳೆಯರ ಪ್ರಗತಿ ಸಾಧ್ಯವೆಂದು ಜಯದೇವಿ ನಂಬಿದ್ದರು.

ಮಹಿಳೆಯರಿಗಾಗಿ ಶಿಕ್ಷಣ ಪ್ರಸಾರ ಮಾಡುವ ಯೋಜನೆಗಳನ್ನು ಜಯದೇವಿಯವರು ಭಾಷಣಗಳಲ್ಲಿ ಮಾತ್ರ ಹೇಳಿದವರಲ್ಲ: ಅದನ್ನು ತಾವೇ ಸ್ವತಃ ಜಾರಿಯಲ್ಲಿ ತರಲು ಪ್ರಯತ್ನಿಸಿದರು. ಅಪ್ಪಾಸಾಹೇಬರು ಸ್ಥಾಪಿಸಿದ ಮಹಿಳಾ ಜ್ಞಾನ ಮಂದಿರದ ಚಟುವಟಿಕೆಗಳು ಹೆಚ್ಚುತ್ತಾ ಬಂದಂತೆ ಅದಕ್ಕೆ ಸ್ವತಂತ್ರ ಕಟ್ಟಡ ಬೇಕಾಯಿತು. ಆ ಸಂಧರ್ಭದಲ್ಲಿ ಅಪ್ಪಾ ಸಾಹೇಬ ತೀರಿ ಹೋದರು. ಅದರ ಎಲ್ಲ ಜವಾಬ್ದಾರಿಯನ್ನು ಜಯದೇವಿಯವರ ತಾಯಿಯವರು ವಹಿಸಿಕೊಂಡರು ಸೊಲ್ಲಾಪುರದಲ್ಲಿ ಇದಕ್ಕಾಗಿ ಕಟ್ಟಡ ನಿರ್ಮಾಣಕ್ಕೆ ಸ್ಥಳ ದೊರಕಿಸುವುದು ಕಷ್ಟ ಸಾಧ್ಯವಾಯಿತು. ಆಗ ಸಂಗವ್ವನವರ ಅಳಿಯಂದಿರಾದ ಚನ್ನಮಲ್ಲಪ್ಪ ಲಿಗಾಡೆ ಯವರನ್ನು ನಿವೇಶನ ಕೊಡಲು ಒಪ್ಪಿಸಿದರು. ಆ ಸ್ಥಳವು ಅತ್ಯಂತ ಬೆಲೆಬಾಳು ವಂತಹದ್ದು. ಊರ ನಡುವೆ ಅರ್ಧ ಎಕರೆಯಷ್ಟಿತ್ತು ಅದನ್ನು ಕೊಡುವಾಗ ಚನ್ನಮಲ್ಲಪ್ಪನವರು ಅಲ್ಲಿ ಸ್ಥಾಪಿಸುವ ಶಾಲೆಗೆ ತಮ್ಮ ಧರ್ಮಪತ್ನಿ ಜಯದೇವಿ ಯವರ ಹೆಸರಿಡಬೇಕೆಂದು ಹೇಳಿದರು. ಅದಕ್ಕೆ ಆಡಳಿತ ಮಂಡಳಿಯವರು ಒಪ್ಪಿಕೊಂಡರು. ಈ ವಿಷಯ ತಿಳಿದ ಜಯದೇವಿಯವರು ತಮ್ಮದು ಒಂದು ಮಾತು ನಡೆಸಿಕೊಡಲು ಸೂಚಿಸಿದರು. ಅದೇನೆಂದರೆ. 'ಜಯದೇವಿ ತಾಯಿ ಕನ್ಯಾಶಾಲೆ' ಎಂದಿರಬೇಕಾದರೆ ಅಲ್ಲಿ ಕನ್ನಡ ಶಾಲೆಯನ್ನು ನಡೆಸಬೇಕೆಂದರು. ಅದಕ್ಕೆ ಎಲ್ಲರೂ ಒಪ್ಪಿದರು, ಹೀಗಾಗಿ ೧೯೪೦ರ ಹೊತ್ತಿಗೆ ಇಲ್ಲಿಯವರೆಗೆ ಮರಾಠಿಯಲ್ಲಿ ನಡೆಯುತ್ತಿದ್ದ ಚಟುವಟಿಕೆಗಳು ಮಹಿಳಾ ಜ್ಞಾನ ಮಂದಿರದ 'ಜಯದೇವಿ ತಾಯಿ ಕನ್ಯಾಶಾಲೆ'ಯೆಂದು ನಾಮಕರಣಗೊಂಡು ಕನ್ನಡದಲ್ಲಿ ನಡೆಯತೊಡಗಿದವು. ಇಲ್ಲಿ ೨೫ ವರ್ಷ ಕನ್ನಡ ಶಾಲೆ ನಡೆಯಿತು. ತಮ್ಮ ಹೆಣ್ಣು ಮಕ್ಕಳನ್ನು ಕರ್ನಾಟಕಕ್ಕೆ ಕೊಡುವ ವಿಚಾರದಿಂದ ಇಲ್ಲಿ ಅವರಿಗೆ ಕನ್ನಡ ಕಲಿಸಿದರು. ಮುಂದೆ ಮರಾಠಿ ಅಭಿಮಾನಿಯಾಗಿದ್ದ ಕಾಡಾದಿ ಮಡೆಪ್ಪನವರು ಸಿದ್ದೇಶ್ವರ ದೇವಸ್ಥಾನ ಸಮಿತಿ ಅಧ್ಯಕ್ಷರಾದ ಮೇಲೆ ಈ ಕನ್ನಡ ಶಾಲೆಯನ್ನು ತೆಗೆಯಲು ಇಚ್ಛಿಸಿದಾಗ ಜಯದೇವಿಯವರು ಆಗ ನನ್ನ ಹೆಸರನ್ನು ಬಿಟ್ಟು 'ಸಿದ್ಧರಾಮೇಶ್ವರ ಶಾಲೆ'ಯೆಂದು ಕರೆಯಿರಿ ಎಂದರು. ಈಗ ಇದು ಸಿದ್ಧರಾಮೇಶ್ವರ ಹೆಸರಲ್ಲಿ ಮರಾಠಿ ಶಾಲೆಯಾಗಿ ನಡೆದಿರುವುದನ್ನು ಕಾಣಬಹುದು.

ಮಹಿಳೆಯರಿಗೆ ಸಾಹಿತ್ಯದಲ್ಲಿ ಅಭಿರುಚಿ ಮೂಡಿಸಲು ಅವರು ಅನೇಕ ಅಕ್ಕನ ಬಳಗ, ವೃದ್ಧಾಶ್ರಮಗಳಲ್ಲಿ ವಚನ ಗಾಯನ ಸ್ಪರ್ಧೆಗಳನ್ನು ಏರ್ಪಡಿಸುತ್ತಿದ್ದರು. ವಿದ್ಯಾರ್ಥಿನಿಯರನ್ನು ಪ್ರೋತ್ಸಾಹಿಸಲು ಅನೇಕ ಶಾಲಾ ಕಾಲೇಜುಗಳಲ್ಲಿ ನಗದು ಬಹುಮಾನ, ಪ್ರಶಸ್ತಿ ಫಲಕಗಳನ್ನು ಕೊಡಮಾಡಿದ್ದರು. ಈ ಲಾಭ ಪಡೆದ ಶಾಲೆಗಳು

ಅನೇಕ ಇವೆ. 'ಜಯದೇವಿ'ಯವರ ಧನಸಹಾಯದಿಂದ ಧಾರವಾಡದ ಜಯದೇವಿ ತಾಯಿ ಮಾಧ್ಯಮಿಕ ಶಾಲೆ, ಹುಬ್ಬಳ್ಳಿಯ ಭಾರತಿ ಹೈಸ್ಕೂಲುಗಳು ಈಗಲೂ ನಡೆಯುತ್ತಿವೆ. ಅವರ ಸಮಯೋಚಿತ ನೆರವು ಹಾಗೂ ಉದಾರ ದೇಣಿಗೆಯಿಂದ ಅನೇಕ ಹೆಸರಾಂತ ವ್ಯಕ್ತಿಗಳು ವಿದ್ಯೆಗಳಿಸಿದ್ದಾರೆ. ಈ ರೀತಿಯಲ್ಲಿ ಅವರು ಸ್ತ್ರೀ ಶಿಕ್ಷಣಕ್ಕೆ ನೀಡಿದ ಆದ್ಯತೆ ಗಮನಾರ್ಹವಾದುದು ಈ ಕ್ಷೇತ್ರದಲ್ಲಿ ಅವರದೊಂದು ದೊಡ್ಡ ಸಾಧನೆ ಎನ್ನಬಹುದು.

**ವರದಕ್ಷಿಣೆ ಪದ್ಧತಿಗೆ ವಿರೋಧ:** ಭಾರತದಲ್ಲಿ ಬಾಲ್ಯವಿವಾಹ, ಸತಿ ಸಹಗಮನ, ವಿಧವಾ ಸಮಸ್ಯೆಗಳು ಅನಾಗರಿಕ ಪರಂಪರೆಯ ಪ್ರತೀಕವಾಗಿದ್ದವು ಇವುಗಳನ್ನು ತೊಲಗಿಸಲು ರಾಜಾರಾಮ ಮೋಹನರಾಯ, ಬಾಲಗಂಗಾಧರ ತಿಲಕ ಹಾಗೂ ಮಹರ್ಷಿ ಕರ್ವೆಯವರು ಹೋರಾಟ ಮಾಡಿದರು ಇವರೊಂದಿಗೆ ಸೇರಿಕೊಂಡ ಅನೇಕ ಪ್ರಮುಖ ವ್ಯಕ್ತಿಗಳ ಈ ಪ್ರತಿಭಟನೆಯ ಫಲವಾಗಿ ದೇಶದಾದ್ಯಂತ ಬದಲಾವಣೆಯ ಹೊಸಗಾಳಿ ಬೀಸತೊಡಗಿತು. ಇದರಿಂದ ಪ್ರಭಾವಿತರಾದ ಜಯದೇವಿಯವರ 'ವರದಕ್ಷಿಣೆ' ಪದ್ಧತಿಯು ಸಹ ಒಂದು ಅ ಸಂಸ್ಕೃತಿಯ ಲಕ್ಷಣವೆಂದು ತಿಳಿಸುತ್ತಾ ಅದರ ವಿರುದ್ಧ ಹೋರಾಟಕ್ಕಿಳಿದರು.

ವರದಕ್ಷಿಣೆಯನ್ನು ಕೊಳ್ಳುವುದೆಂದರೆ ಒಂದರ್ಥದಲ್ಲಿ ಮಕ್ಕಳನ್ನು ಮಾರಿ ಕೊಳ್ಳುವುದು ಇದು ಧರ್ಮಶಾಸ್ತ್ರಕ್ಕೆ ವಿರುದ್ಧವಾದುದು ಅದು ಪರಮ ಪಾತಕವೆಂದು ೧೯೭೦ರಲ್ಲಿ ಸಾರಿದರು. ವೀರಶೈವ ಮಹಾಸಭೆಯ ಅಧಿವೇಶನದ ಅಧ್ಯಕ್ಷೆಯಾಗಿ, ಕೆಲವೊಮ್ಮೆ ಕಾರ್ಯಕ್ರಮದ ಉದ್ಘಾಟಕಿಯಾಗಿ ಇಂಥ ಎಚ್ಚರಿಕೆಯ ಮಾತನ್ನು ಹೇಳಿದರು. ಸಾಲದ ಹೊರೆಹೊತ್ತುಕೊಂಡು ದುಂದು ವೆಚ್ಚಮಾಡಿ ಮದುವೆ ಮಾಡುವುದನ್ನು ಅವರು ಸದಾ ವಿರೋಧಿಸುತ್ತಿದ್ದರು. ತೆರವು ತೆಗೆದುಕೊಳ್ಳುವುದ ನ್ನಾಗಲಿ, ವರದಕ್ಷಿಣೆ ಪಡೆಯುವುದನ್ನಾಗಲಿ ಅವರು ಯಾವಾಗಲೂ ಖಂಡಿಸು ತ್ತಿದ್ದರು. ನಿರಾಡಂಬರವಾಗಿ ನಡೆಸುತಿದ್ದ ಕ್ರಿಶ್ಚಿಯನ್ ಪದ್ಧತಿಯ ವಿವಾಹವನ್ನು ಅವರು ಬೆಂಬಲಿಸುತ್ತಿದ್ದರು ಯಾವುದೇ ಧರ್ಮ ಜನಾಂಗದವರಲ್ಲಿದ್ದ ಒಳ್ಳೆಯ ಆಚಾರ ವಿಚಾರಗಳನ್ನು ಯಾವಾಗಲೂ ಸ್ವೀಕರಿಸುತ್ತಿದ್ದ ಜಯದೇವಿಯವರು 'ವರದಕ್ಷಿಣೆ ಪದ್ಧತಿ ಸಮಾಜಕ್ಕಂಟಿದ ಒಂದು ಮಹಾ ಪಿಡುಗು' ಎನುತ್ತಿದ್ದರು. ಈ ನಿಟ್ಟಿನಲ್ಲಿ ಅವರು ಅನೇಕ ಕಡೆ ಇದರಿಂದ ವಿರೋಧವನ್ನು ಎದುರಿಸಬೇಕಾಯಿತು.

**ಕಾರ್ಮಿಕ ಶಿಕ್ಷಣ:** ಸೊಲ್ಲಾಪುರವು ಒಂದರ್ಥದಲ್ಲಿ 'ಕಾರ್ಮಿಕ ಕೇಂದ್ರ' ವೆನಿಸಿತ್ತು. ಈ ಕಾರ್ಮಿಕರಲ್ಲಿ ಕನ್ನಡಿಗರು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಔದ್ಯೋಗಿಕ ಕೇಂದ್ರ ಸಂಸ್ಥೆಗಳಲ್ಲಿ ಈ ಕಾರ್ಮಿಕರ ಸಂಖ್ಯೆಯು ದೊಡ್ಡದಾಗಿತ್ತು ಅವರನ್ನು ಸುಶಿಕ್ಷಿತರನ್ನಾಗಿ ಮಾಡುವುದು ಸಂಸ್ಥೆಯ ಮುಖ್ಯ ಉದ್ದೇಶ. ಅದಕ್ಕಾಗಿ ಒಂದೊಂದು ಕೇಂದ್ರ ಮಂಡಳಿಯನ್ನು ರಚಿಸಲಾಗಿತ್ತು. ಸೊಲ್ಲಾಪುರದ ಕೇಂದ್ರ

ಮಂಡಳಿಗೆ ಜಯದೇವಿಯವರು ನಾಮಕರಣಗೊಂಡ ಸದಸ್ಯರಾಗಿದ್ದರು. ಇಲ್ಲಿರುವ ಕನ್ನಡದ ಕಾರ್ಮಿಕರಿಗಾಗಿ ಹೆಚ್ಚು ಕನ್ನಡದ ಕೇಂದ್ರಗಳನ್ನು ತೆರೆದು ಶಿಕ್ಷಣವೊದಗಿಸಬೇಕೆಂಬುದು ಜಯದೇವಿಯವರ ಇಚ್ಛೆಯಾಗಿತ್ತು. ಆ ಕಾರಣಕ್ಕಾಗಿ ನಾನಾ ರೀತಿಯಲ್ಲಿ ಕಾರ್ಮಿಕರನ್ನು ಪ್ರೋತ್ಸಾಹಿಸುವ ದಾರಿ ಹುಡುಕಿದರು. ಅವುಗಳಲ್ಲಿ ಬಹುಮಾನ ಕೊಡುವುದು, ಪ್ರಶಸ್ತಿ ನೀಡುವುದು ಮೊದಲಾದವುಗಳು ಹೆಚ್ಚು ಜನರನ್ನು ಸಾಕ್ಷರರಾಗಿಸಲು ಆಕರ್ಷಿಸಿದುವು. ಇದು ಎಷ್ಟು ಬೇಗ ಜನಪ್ರಿಯವಾಯಿತೆಂದರೆ ಕೇವಲ ೨ ವರ್ಷಗಳಲ್ಲಿ ೨೫ ವರ್ಗಗಳನ್ನು ತೆರೆಯಲು ಕಾರ್ಮಿಕ ಸೇವಾ ಸಂಘವು ಕೇಳಿಕೊಂಡಿತ್ತು. ಈ ಮಾತನ್ನು ಕಾರ್ಮಿಕ ಸಂಘದ ವಾರ್ಷಿಕೋತ್ಸವದ ಅಧ್ಯಕ್ಷತೆ ವಹಿಸಿದಾಗ ಜಯದೇವಿಯವರು ಹೇಳಿದ್ದು (ಸೊಲ್ಲಾಪುರ ಸಮಾಚಾರ ಪತ್ರಿಕಾವರದಿ ೪-೮-೧೯೪೬) ಆ ಸಮಯದಲ್ಲಿ ಪ್ರೌಢಶಿಕ್ಷಣ ಅಧಿಕಾರಿಯಾಗಿ ಬಂದಿದ್ದ 'ಸದಾನಂದ ನಾಯಕ' ಎಂಬ ಸಮರ್ಥ ಅಧಿಕಾರಿಯು ಈ ಜಯದೇವಿಯವರ ಈ ಕಾರ್ಯಕ್ಕೆ ಬೆಂಬಲವಾಗಿ ನಿಂತರು. ಅವರೀರ್ವರ ಪ್ರಯತ್ನದಿಂದ ೧೨೫ ಶಿಕ್ಷಣ ಕೇಂದ್ರಗಳು ತೆರೆಯಲ್ಪಟ್ಟವು. ಈ ಸುದ್ದಿ ಕೇಳಿ, ಮರಾಠಿ ಅಧಿಕಾರಿಗಳು ಆಶ್ಚರ್ಯಪಟ್ಟು, ಕೂಡಲೆ ಆ ಅಧಿಕಾರಿಯನ್ನು ತಂತಿ ಸಂದೇಶದ ಮೂಲಕ ವರ್ಗಾವಣೆ ಮಾಡಿದರು. ಆ ಸಮಯದಲ್ಲಿ ಕನ್ನಡದ ೪೫ ಜನರು ಮುಂಬೈ ಶಾಸನ ಸಭೆಯ ಶಾಸಕರಾಗಿದ್ದರು. ಅವರೆಲ್ಲರಿಗೂ ಜಯದೇವಿಯವರು ಪತ್ರದ ಮುಖಾಂತರ ದೂರುನೀಡಿದರು. ಆದರೂ ಅವರ್‍ಯಾರು ವಿಧಾನಸಭೆಯಲ್ಲಿ ಈ ಕ್ರಮವನ್ನು ಎತ್ತದಿರುವುದು ಕಂಡು ಜಯದೇವಿಯವರು ಬಹಳ ನೊಂದುಕೊಂಡರು.

ಕಾರ್ಮಿಕರಲ್ಲದವರಿಗೂ ಕನ್ನಡದಲ್ಲಿ ಪ್ರೌಢಶಿಕ್ಷಣ ದೊರೆಯಬೇಕೆಂಬುದು ಜಯದೇವಿಯವರ ಆಶೆಯಾಗಿತ್ತು. ಹೀಗಾಗಿ ಕನ್ನಡ ಕೋಟೆಯವತಿಯಿಂದ ಕಲಿಕಾ ಕೇಂದ್ರಗಳನ್ನು ಆರಂಭಿಸಿದರು. ವ್ಯಾಪಾರಸ್ಥರಿಗೆ ಅನುಕೂಲವಾಗುವಂತೆ ಹಾಗೂ ಅವರಿಗೆ ಓದಲು ಆಸಕ್ತಿ ಮೂಡಿಸುವಂತೆ ಪುಸ್ತಕಗಳನ್ನು ತಮ್ಮ ಸ್ವಂತ ಖರ್ಚಿನಿಂದ ತರಿಸಿಕೊಡುತ್ತಿದ್ದರು. ಅಷ್ಟೇ ಅಲ್ಲದೆ ಕನ್ನಡ ಕಲಿಯುವ ಮಕ್ಕಳಿಗೆ ಸ್ಕಾಲರ್‌ಶಿಫ್‌ಗಳನ್ನು ಸ್ವತಃ ಕೊಡುತ್ತಿದ್ದರೆಂದು ೩೦-೧೦-೧೯೫೬ ರ ಸಂಯುಕ್ತ ಕರ್ನಾಟಕ ಪತ್ರಿಕೆ ವರದಿಮಾಡಿದೆ. ಹೀಗೆ ಶಿಕ್ಷಣ ಪ್ರಸಾರಕ್ಕಾಗಿ ಇವರು ಹಗಲಿರುಳು ದುಡಿದರೆಂಬುದು ಗಮನಾರ್ಹಸಂಗತಿ.

## ಮಹಿಳಾ ಕ್ಷೇತ್ರದಲ್ಲಿ ಜಯದೇವಿಯವರ ಸಾಧನೆ

ಈ ಕ್ಷೇತ್ರದಲ್ಲಿ 'ಜಯದೇವಿ' ಯವರ ಸಾಧನೆ ಅನುಪಮವಾದುದು. ಮಹಿಳಾ ಶಿಕ್ಷಣ, ಮಹಿಳೆಯರ ಅಭಿವೃದ್ಧಿ, ಮಹಿಳೆಗೆ ಬೇಕಾಗಿರುವ ಸಾಮಾಜಿಕ ನ್ಯಾಯ, ಪುರುಷ-ಸ್ತ್ರೀಯರಲ್ಲಿರಬೇಕಾದ ಸಮಾನತೆ, ಸ್ತ್ರೀ ಗೌರವ ಮೊದಲಾದ ಸ್ತ್ರೀಪರ ಚಿಂತನೆಗಳನ್ನು ಕುರಿತು ಜಯದೇವಿಯವರು ಮತ್ತೆ ಮತ್ತೆ ಮಾತಾಡಿದ್ದಾರೆ.

ಸಂದರ್ಭವೊದಗಿದಾಗ ಪ್ರತಿಭಟನೆಗೂ ಇಳಿದಿದ್ದಾರೆ. ಅವರ ಸ್ತ್ರೀಪರ ಕಾಳಜಿಯು ಅನನ್ಯವಾದುದು. ಈ ಹಿನ್ನೆಲೆಯಲ್ಲಿ ಅವರ ಸಾಧನೆ ಏನು? ಎಂಬುದನ್ನಿಲ್ಲಿ ಅವಲೋಕಿಸಬಹುದು.

ನಮ್ಮ ಸಂಸ್ಕೃತಿಯಲ್ಲಿ ಸ್ತ್ರೀಗೆ ಪೂಜನೀಯ ಸ್ಥಾನವಿದೆ. ತಾಯಿ ದೇವರೆಂದು ತಿಳಿಯುವುದು ನಮ್ಮೆಲ್ಲರ ಆದ್ಯ ಕರ್ತವ್ಯ. ಆದರೂ ಇಲ್ಲಿ ಪುರುಷ ಪ್ರಾಧಾನ್ಯತೆಯೇ ಮೇಲಾಗಿರುವುದನ್ನು ಅಲ್ಲಗಳೆಯಲಾಗುವುದಿಲ್ಲ. ಮನುವಿನ ಗಾಢ ಪ್ರಭಾವದಲ್ಲಿ ಸಿಲುಕಿರುವ ನಮ್ಮ ಬದುಕಿನ ಪರಂಪರೆಯಲ್ಲಿ ಸ್ತ್ರೀಗೆ ಪುರುಷನ ಆಶ್ರಯ, ಆರೈಕೆಗಳೇ ಬೇಕಾಗುತ್ತವೆ. ಹೀಗಾಗಿ ಹೆಣ್ಣಿಗೆ ಪುರುಷನಾದವನು ಬಾಲ್ಯದಲ್ಲಿ ತಂದೆಯಾಗಿ, ಯೌವ್ವನಾವಸ್ಥೆಯಲ್ಲಿ ಪತಿಯಾಗಿ, ವೃದ್ಧಾವಸ್ಥೆಯಲ್ಲಿ ಪುತ್ರನಾಗಿ ಕಾರ್ಯನಿರ್ವಹಿಸಬೇಕು. ಆದರೆ ಬಾಲ್ಯದಲ್ಲಿ ತಂದೆಯಿಲ್ಲದವರು, ಹಣವಿಲ್ಲದೆ ಮದುವೆಯಾಗದೆ ಉಳಿದ ಹೆಣ್ಣುಮಕ್ಕಳು ಮದುವೆಯಾದರೂ ಮಕ್ಕಳಾಗದ ಮಹಿಳೆಯರ ಜೀವನ ಸಮಸ್ಯೆಗೆ ಪರಿಹಾರಗಳೇನು? ಅಂತ ಹೆಣ್ಣುಮಕ್ಕಳ ಬದುಕು ಹೇಗೆ? ಹೆಣ್ಣಿನ ಜೀವನಕ್ಕೊಂದು ಸಂರಕ್ಷಣೆ ನೀಡುವುದು ಸಮಾಜದ ಹೊಣೆಯಲ್ಲವೇ? ಕೊನೆಗೆ ವೃದ್ಧೆಯಾದ ಮಹಿಳೆಗಾದರೂ ರಕ್ಷಣೆ ಕೊಡುವ ಹೊಣೆ ಸಮಾಜಕ್ಕಿರಬೇಕೆಂಬುದು ಜಯದೇವಿಯವರ ಚಿಂತನೆ, ದಿನಾಂಕ ೨೮-೧೨-೩೮ ರ 'ಜನವಾಣಿ' ಹಾಗೂ ೨೭-೧-೯೩೯ರ 'ಸೊಲ್ಲಾಪುರ ಸಮಾಚಾರ' ಪತ್ರಿಕೆಗಳು ವರದಿ ಮಾಡಿರುವಂತೆ ಜಯದೇವಿಯವರು ಹುಬ್ಬಳ್ಳಿಯ ಅಕ್ಕನ ಬಳಗವನ್ನು ಉದ್ಘಾಟನೆ ಮಾಡಿ ಮಾತನಾಡುತ್ತ 'ಅಸಹಾಯಕ ಅನಾಥ ವಿಧವೆಯರ ಬದುಕಿಗೊಂದು ನೆಲೆಯನ್ನೊದಗಿಸಲು ಯಾವ ವ್ಯವಸ್ಥೆಯನ್ನು ಮಾಡಲಿದ್ದೀರಿ' ಎಂದು ಅಲ್ಲಿಯ ಮುಖಂಡರನ್ನು ಕೇಳಿದ್ದರಂತೆ. ಇದು ಅವರ ಕಳ ಕಳಿಯ ಮಾತಾಗಿತ್ತೆಂಬುದನ್ನು ಅರಿಯಬಹುದು.

ಲಚ್ಚಾಣದ ಸರ್ವಧರ್ಮ ಸಮ್ಮೇಳನದ ಮಹಿಳಾ ಪರಿಷತ್ತಿನ ವೇದಿಕೆಯಿಂದ ಅವರು ಮಾಡಿದ ಭಾಷಣ ಸ್ತ್ರೀಪರ ಕಾಳಜಿಗೆ ಕನ್ನಡಿ ಹಿಡಿಯುತ್ತದೆ. "ಮಹಿಳೆಯರಲ್ಲಿ ಸಾಮಾಜಿಕ ನ್ಯಾಯವನ್ನು ತರಲು ನಾವು ಶಕ್ತಿ ಮೀರಿ ಕಾರ್ಯ ಮಾಡಬೇಕಿದೆ. ಸ್ವಾತಂತ್ರ್ಯ ದೊರೆತ ಮೇಲೆ ಪುರುಷರಿಗಿಂತ ಮಹಿಳೆಯರ ಹೊಣೆಗಾರಿಕೆ ಹೆಚ್ಚಾಗಿದೆ. 'ಹೆಣ್ಣನ್ನು ದಾಸಿ, ಅಬಲೆ ಅನುಯಾಯಿ'ಯೆಂದು ಹಿಂದಿನಿಂದಲೂ ಸಮಾಜವು ಅವಳನ್ನು ಕಡೆಗಣಿಸುತ್ತ ಬಂದಿದೆ. 'ಶರಣರು ಹೆಣ್ಣನ್ನು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ'ಯೆಂದರು. ಉಳಿದವರು ಹಾಗೇಕೆ ತಿಳಿಯಲಿಲ್ಲ? ಅಕ್ಕಮಹಾದೇವಿಯಂಥ ಆಧ್ಯಾತ್ಮ ಜಗತ್ತಿನ ಅಪೂರ್ವ ಜ್ಯೋತಿ ಬೆಳಗಲು ಶರಣರ ಪ್ರೇರಣೆ ಕಾರಣ. ಅಂಥ ಪ್ರೇರಕ ವಾತಾವರಣ ಇಂದಿನ ಮಹಿಳೆಯರಿಗೆ ಸಿಗಬೇಕು ಇದಕ್ಕೆ ಪುರುಷರ ಪ್ರೋತ್ಸಾಹ ಅವಶ್ಯವಾಗಿಬೇಕು ಎಂದು ಅವರು ತಮ್ಮ ಭಾಷಣದುದ್ದಕ್ಕೂ ಸ್ತ್ರೀಯರ ಸ್ಥಿತಿಗತಿಗಳನ್ನು ಕುರಿತು ಅವಲೋಕಿಸಿದರು.

ಸ್ತ್ರೀ-ಪುರುಷರನ್ನು ಸಮಾನವಾಗಿ ಕಾಣಬಯಸುವ ಜಯದೇವಿಯವರು ಯಾವುದೇ ಸಂದರ್ಭವಿರಲಿ, ಅಥವಾ ಯಾವುದೇ ಸಮಸ್ಯೆಯಿರಲಿ ಅದನ್ನು ಕೂಲಂಕುಷವಾಗಿ ಶೋಧಿಸಿ, ಅದಕ್ಕೆ ಪರಿಹಾರ ಕಾಣುತ್ತಿದ್ದರು '೧೯೭೫ನೆಯ ವರ್ಷವನ್ನು ಜಾಗತಿಕ ಮಹಿಳಾ ವರ್ಷ'ವೆಂದು ಸಾರಿದ ಸಂದರ್ಭದಲ್ಲಿ 'ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ'ದವರು ಈ ದಿನಾಚರಣೆಯನ್ನು ಆಚರಿಸುವ ನಿಮಿತ್ತ ಜಯದೇವಿಯವನ್ನು ಕಾರ್ಯಕ್ರಮದ ಅತಿಥಿಯಾಗಿ ಆಮಂತ್ರಿಸಿದ್ದರು. ಆ ಸಂದರ್ಭದಲ್ಲಿ ಅವರು ಮಾತನಾಡುತ್ತ 'ಪುರುಷ ದಿನಾಚರಣೆಯನ್ನು ಏಕೆ ಆಚರಿಸಬಾರದು? ಎಂದು ಕೇಳಿದರು. ಆಗ ಈ ಹೇಳಿಕೆ ಪತ್ರಿಕೆಯವರಿಗೆ ಚರ್ಚಾಸ್ಪದ ವಿಷಯವಾಗಿ ಸಂಯುಕ್ತ ಕರ್ನಾಟಕ ೧೩-೧೯೭೫ರಲ್ಲಿ ಸಂಪಾದಕೀಯವೊಂದು ಪ್ರಕಟವಾಯಿತು. ಅದರ ವರದಿ ಹೀಗಿದೆ.

'ಹುತಾತ್ಮದಿನದೊಂದಿಗೆ ಆರಂಭವಾಗುವ ದಿನಾಚರಣೆ ಮಾಲಿಕೆ ಶಿಕ್ಷಕರ ದಿನ, ಮಕ್ಕಳ ದಿನ, ಧ್ವಜದಿನದೊಂದಿಗೆ ಮುಕ್ತಾಯಗೊಳ್ಳುವದು. ಇದರಲ್ಲಿ ಮಹಿಳಾ ದಿನವೊಂದು ಸೇರಿಕೊಂಡಿದ್ದು, ಪುರುಷ ದಿನಾಚರಣೆಯನ್ನು ಮಾಡಬೇಕೆಂಬ ಶ್ರೀಮತಿ ಜಯದೇವಿ ತಾಯಿಯವರ ಸೂಚನೆ ಪುರುಷರನ್ನು ಉತ್ಸಾಹಗೊಳಿಸಿರಲು ಸಾಕು. ದಬ್ಬಾಳಿಕೆಗೆ ಸಿಕ್ಕು ದುರ್ಬಲವಾದ ವರ್ಗಗಳ ಸ್ಥಿತಿ-ಗತಿಗಳನ್ನು ಲೋಕದ ಎದುರು ಮಂಡಿಸಿ ಅವರ ಉದ್ಧಾರಕ್ಕೆ ಯತ್ನಿಸುವುದೇ ದಿನಾಚರಣೆಗಳ ಮೂಲ ಉದ್ದೇಶ. ಸರ್ವಶಕ್ತರೆಂಬ ಮಬ್ಬಿಗೆ ಬಿದ್ದು, ತಮ್ಮ ಸ್ಥಿತಿಗಳನ್ನೇ ತಿಳಿಯದ ಪುರುಷರಿಗೆ ಅವರ ದಿನಾಚರಣೆಯ ಕಲ್ಪನೆ ಮೂಡಿಸಿ ಕಣ್ಣು ತೆರೆಸಿದ್ದಾರೆ. ಅವರಿಗೆ ಪುರುಷಕೋಟಿ ಋಣಿಯಾಗಿರಬೇಕು.'

ಸಾಮಾನ್ಯವಾಗಿ ಚೈತ್ರಮಾಸದಿಂದ ಫಾಲ್ಗುಣದವರೆಗಿನ ಎಲ್ಲ ಹಬ್ಬಗಳೂ ಮಹಿಳಾ ದಿನಾಚರಣೆಗಳೇ. ಅಂಥ ಯಾವುದಾದರೊಂದು ಹಬ್ಬವು ಪುರುಷರಿಗೆ ಮೀಸಲಾಗಿಲ್ಲ. ಇನ್ನು ಸರಕಾರ ಹಾಗೂ ಸಾರ್ವಜನಿಕರು ಸಹಕರಿಸುವುದಾದರೆ ಗಂಡಸರದೇ ಪ್ರಾಧಾನ್ಯವಿರುವ ಕಾಮದಹನದ ದಿನದಂದು ಪುರುಷ ದಿನಾಚರಣೆ ನಡೆಸುವುದು ಸೂಕ್ತವಾದೀತು. ಇಂಥ ಸಂಧರ್ಭಗಳಲ್ಲಿ ನಿಷ್ಠೆಯಿಂದ ಸೇವೆ ಸಲ್ಲಿಸಿದ ಗಂಡಂದಿರಿಗೆ ಸ್ಥಳೀಯ ಮಹಿಳಾ ಮಂಡಳಗಳ ಸಿಫಾರಸ್ಸುಗಳ ಮೇರೆಗೆ 'ಸತ್ನಿ ಸೇವಕ'. 'ಗೃಹಸೇವಾದುರಂದರ' ಅಥವಾ 'ಪುರುಷೋತ್ತಮ' ಎಂಬ ಪ್ರಶಸ್ತಿಗಳನ್ನಿತ್ತು ಗೌರವಿಸಬಹುದು. ಪುರುಷರ ಕಲ್ಯಾಣ ನಿಧಿ ಸಂಗ್ರಹಿಸಿ 'ಅಮ್ಮಾವ್ರ ಗಂಡಂದಿರಿಗೆ' ಪರಿಹಾರ ನೀಡಬಹುದು ಆಗ ಸರ್ವೋತ್ತಮರಿಗೆ ಎಷ್ಟು ಸಂತೋಷವಾದೀತು। ಎಂದ ಈ ಹೇಳಿಕೆಯನ್ನು ಗಮನಿಸಿದರೆ ಸಂಪಾದಕರು ಇಲ್ಲಿ ಹೇಳಿದ್ದೇನೆಂಬುದು ಸ್ಪಷ್ಟವಾಗುತ್ತದೆ. ಮಹಿಳೆಯ ಉನ್ನತಿಯನ್ನು ಸಹಿಸಿದ ಅವಳ ಪ್ರಗತಿಗೆ ಸಹಕರಿಸಿದ ಪುರುಷ ಪ್ರಧಾನ್ಯತೆ ವ್ಯಕ್ತವಾಗಿರುವುದನ್ನು ಇಲ್ಲಿ ಅರಿಯಬಹುದು.

ಜಯದೇವಿಯವರು ಹೇಗೆ ಅಸ್ಪೃಶ್ಯರೆಂದು ಕರೆಯುವುದು ಜಾತಿಯನ್ನುಎತ್ತಿ ಹೇಳಿದಂತೆ ಆಗುವುದೋ ಹಾಗೆ' ಮಹಿಳಾ ದಿನಾಚರಣೆಯನ್ನುವುದು ಅವರ ಅವನತಿಯನ್ನು ಅಣಕಿಸಿದಂತೆ ಎಂದು ತಿಳಿದು, ಅವರು ಹಾಗೆ ಕರೆಯುವುದನ್ನು ವಿರೋಧಿಸಿದ್ದರು. ಅಂದರೆ ಜಯದೇವಿಯವರ ದೃಷ್ಟಿಯಲ್ಲಿ ಸ್ತ್ರೀ-ಪುರುಷರಿಬ್ಬರೂ ಸರಿ ಸಮಾನರು. ಅವರು ಕುಟುಂಬದ ಪಾಲಕರು ಚಾಲಕರು, ಮಾಲಿಕರು ಆಗಿದ್ದಾರೆ. ಜೀವನವನ್ನು ಸರಿ ಸಮವಾಗಿ ಹಂಚಿಕೊಂಡು ಬಾಳಬೇಕೆಂಬುದು ಅವರ ಇಚ್ಛೆಯಾಗಿತ್ತು, ಮಹಿಳಾ ದಿನಾಚರಣೆಯೆಂಬ ಸ್ತ್ರೀಯರಿಗೆ ದೊರೆತ ಹೆಚ್ಚಿನ ಹಕ್ಕು ಎಂಬ ಭಾವನೆ ಮೂಡದಿರಲಿ ಪುರುಷರಿಗೂ ಒಂದು ದಿನಾಚರಣೆಯನ್ನು ಒದಗಿಸಿ ಸ್ತ್ರೀ-ಪುರುಷರಿಬ್ಬರೂ ಸಮಾನ ಹಕ್ಕು ಬಾಧ್ಯತೆ ಹೊಂದಲಿ ಎಂಬ ಆಸೆಯನ್ನು ಅವರು ವ್ಯಕ್ತಗೊಳಿಸಿದ್ದರು. ಆದರ್ಶ ಮಹಿಳೆಯರ ಚರಿತ್ರೆಗೆ ಹೆಚ್ಚು ಪ್ರಚಾರ ಕೊಡಬಯಸಿದ ಅವರು ಸ್ತ್ರೀಯರು ಸಮಾನತೆಯನ್ನು ಕೇಳಿ ಪಡೆಯುವುದಲ್ಲ: ಶಿವಶರಣೆಯರಂತೆ ಸಾಧಿಸಿ ತೋರಿಸಬೇಕು ಎಂಬುದನ್ನು ಅಲ್ಲಿ ಒತ್ತಿ ಹೇಳಿದರು. ಆದರೆ ಈ ವಿಷಯ ತುಂಬಾ ಚರ್ಚೆಗೆ ಅವಕಾಶ ಒದಗಿಸಿತೆಂಬುದನ್ನು ಇಲ್ಲಿ ಗಮನಿಸಬಹುದು.

ಸ್ತ್ರೀಯರ ಬಗೆಗೆ ಅಬಲೆಯರ ಬಗೆಗೆ ಜಯದೇವಿಯವರು ಭಾಷಣಗಳಲ್ಲಿ ಮಾತ್ರ ಪ್ರಸ್ತಾಪಿಸುತ್ತಾರೆಂದಲ್ಲ, ಅವರು ಸ್ವತಃ ಸೊಲ್ಲಾಪುರದಲ್ಲಿ ವೃದ್ಧರಿಗಾಗಿ ಒಂದು ವೃದ್ಧಾಶ್ರಮವನ್ನು ಸ್ಥಾಪಿಸಿದ್ದರು. ಅಲ್ಲಿ ವೃದ್ಧೆಯರ ಊಟ ಉಪಚಾರಗಳೊಂದಿಗೆ, ಪೂಜೆ, ಭಜನೆ ಹಾಗೂ ಅವರವರಿಗೆ ಶಕ್ಯವಾದ ಕಾರ್ಯನಿರ್ವಹಿಸಲು ಆಸ್ಪದ ಮಾಡಿಕೊಟ್ಟಿದ್ದರು. ಅವರು ಸಮಯವನ್ನು ಸದುಪಯೋಗಪಡಿಸಿಕೊಳ್ಳಲು ಕೀರ್ತನೆ, ಭಜನೆ ಮಾಡಿಸುವುದು ವಚನಗಳ ಸ್ಪರ್ಧೆಯನ್ನೇರ್ಪಡಿಸುವುದು ಮೊದಲಾದ ಯೋಜನೆಗಳನ್ನು ಜಯದೇವಿಯವರು ತಯಾರಿಸಿಕೊಟ್ಟಿದ್ದರು.

ಸ್ತ್ರೀಯರನ್ನು ಸದಾ ಚೇತನದ ಚಿಲುಮೆಯಾಗಿ ಕಾಣಬಯಸುವ ಜಯದೇವಿಯರು ಮಹಿಳೆ ಜಾಗತಿಕ ಕ್ಷೇತ್ರದಲ್ಲಿ ಗಣನೆಗೆ ಬರುವಂಥ ಕಾರ್ಯಗಳನ್ನು ಮಾಡಬೇಕೆಂದು ಹಂಬಲಿಸುತ್ತಿದ್ದರು. ದಿನಾಂಕ: ೧೨-೧-೧೯೭೬ ರಂದು ತರಳುಬಾಳು ಹುಣ್ಣಿಮೆ ಮಹೋತ್ಸವದ ಅಂಗವಾಗಿ ಏರ್ಪಡಿಸಿದ್ದ ಮಹಿಳಾ ಸಮ್ಮೇಳನದಲ್ಲಿ ಅವರು ಮಾಡಿದ ಭಾಷಣದ ವರದಿ ಹೀಗಿದೆ. "ವಿಶ್ವಶಾಂತಿಗಾಗಿ ಸ್ತ್ರೀಯರು ಇಲ್ಲಿಯವರೆಗೆ ಏನೂ ಮಾಡಲಿಲ್ಲ. ಇನ್ನಾದರೂ ಆದರ್ಶ ಪ್ರೇರಿತರಾಗಿ ಅಹಿಂಸೆಯ ಹಾದಿಯಲ್ಲಿ ಮುನ್ನುಗ್ಗುವ ಶಕ್ತಿ ಪಡೆಯಲಿ ಪುರುಷರಿಗಿಂತ ಮಹಿಳೆಯರು ಅಧಿಕ ಗುಣ ಸಂಪನ್ನರೆಂಬುದನ್ನು ತೋರಿಸಬೇಕು. ಬಸವಾದಿ ಶರಣ-ಶರಣೆಯರ ಜೀವನಾದರ್ಶದ ಪ್ರೇರಣೆಯಿಂದ ಮಹಿಳೆಯರಿಗೆ ಶಕ್ತಿ ದೊರೆಯಲೆಂದು ಆಶಿಸುವೆನು. ಮಾನವ ಜೀವನದ ಶಿಖರದ ಮೇಲೆ ಅಹಿಂಸಾಮಯ ಪವಿತ್ರ ಪತಾಕೆಯನ್ನು ಹಾರಾಡಿಸುವ ನಿಜವಾದ ಶ್ರೇಯಸ್ಸನ್ನು ಸ್ತ್ರೀಯು ಕೈವಶಮಾಡಿಕೊಳ್ಳಲೆಂದು" ಅವರು ಹೇಳುತ್ತಿದ್ದರು.

ಮಹಿಳೆಯರು ಯಾವಾಗಲೂ ಕಾರ್ಯ ತತ್ಪರರಾಗಬೇಕೆಂಬುದು ಜಯದೇವಿಯವರ ಮಹದಾಸೆ. ಜೀವನದ ಪ್ರಗತಿಗೆ ಆಲಸ್ಯವು ಹೆಮ್ಮಾರಿ. ಆ ಆಲಸ್ಯತನವನ್ನು ತೊರೆದು ಎಲ್ಲರು ಕಾರ್ಯತೃಪ್ತರರಾಗಬೇಕು. ಅಶಿಸ್ತು ದುರಭಿಮಾನ, ರಾಷ್ಟ್ರ ಪ್ರೇಮವಿಲ್ಲದಿರುವಿಕೆ, ಹಿರಿಯರಿಗೆ ಅಗೌರವ ತೋರುವುದು ಇಂದಿನ ಯುವ ಪೀಳಿಗೆಯಲ್ಲಿ ಕಾಣುವ ಅವಲಕ್ಷಣಗಳು. ಇದಕ್ಕೆ ಮಹಿಳೆಯರು ಹೊರತಾಗಿ ಉಳಿಯಬೇಕೆಂದು ಜಯದೇವಿಯರ ಹೇಳಿಕೆ. ಸಮಯವನ್ನು ಸರಿಯಾಗಿಪಾಲಿಸಿಕೊಂಡು ಗುರಿಸಾಧನೆಯ ಕಡೆಗೆ ಗಮನವಿಡಬೇಕು. ವಚನ ವಾಙ್ಮಯವನ್ನು ಓದಬೇಕು. ಜಾನಪದವನ್ನು ತಿಳಿಯುವ ಹವ್ಯಾಸವಿಟ್ಟುಕೊಂಡಿರ ಬೇಕು. ಇದರಿಂದ ಮಹಿಳೆಯರ ಜೀವನ ಸಾರ್ಥಕವಾಗುತ್ತದೆಯೆಂದು ಅವರು ಒತ್ತಿ ಹೇಳುತ್ತಿದ್ದರು.

ಹೆಣ್ಣಿನ ಸಾವು ನೋವು, ಕೊರಗು, ಮರುಗನ್ನು ಕಂಡುಂಡ ಜಯದೇವಿ ಯವರು ಅದನ್ನು ತೊಲಗಿಸಲು ಶರಣರ ಆದರ್ಶ ಕ್ರಮವನ್ನು ಆರಿಸಿಕೊಂಡು ಪ್ರಚಾರ ಮಾಡತೊಡಗಿದರು. ವಿಜಯಪುರದಲ್ಲಿ ದಿನಾಂಕ: ೧೦-೧೨-೧೯೫೪ ರಂದು ಮಹಿಳಾ ಪರಿಷತ್ತಿನ ಉದ್ಘಾಟನೆ ಮಾಡುತ್ತ ಜಯದೇವಿಯವರು ಮಾತನಾಡಿದ್ದು ಹೀಗಿದೆ.

"ಶತಶತಮಾನಗಳಿಂದ ಮಹಿಳೆ ಯಾವುದೇ ಅಧಿಕಾರವಿಲ್ಲದೆ ಸಾಮಾನ್ಯ ವಾಗಿ ಎಲ್ಲ ಕ್ಷೇತ್ರಗಳಲ್ಲಿ ಶೂದ್ರಳಂತೆ ಬದುಕಿದ್ದಾಳೆ. ಸನಾತನ ಧರ್ಮದ ಮರ್ಮವನ್ನರಿಯದೆ ಕುಗ್ಗುತ್ತಾ, ಮುಗ್ಗುತ್ತಾ, ಸಾವಿರ ನೋವುಗಳನ್ನುಂಡು ಸಹಿಸಿ ಬದುಕಿದ್ದಾಳೆ. ಅವಳಿಗೆ ತನ್ನ ನೋವುಗಳನ್ನು ಹೇಳಿಕೊಳ್ಳಲು ಬಾಯಿಬರಲಿಲ್ಲ ಕೇಳುವವರಿಗೆ ಕಿವಿಯೂ ಇರಲಿಲ್ಲ. ಕಣ್ಣಿದ್ದು ಕುರುಡರಾದ ಜನರಿಗೆ ಹೆಣ್ಣಿನ ಸಾವು ನೋವು ಕಾಣಲಿಲ್ಲ. ಅವಳು ತಿಂದ ಬೇನೆ, ನೊಂದ ನೋವು ಯಾರಿಗೂ ಕಂಡಿಲ್ಲ. ಇಂಥ ನೋವಿನ ಕರುಳಿನ ಕಲೆ ಕೇಳಲು ಬಂದವರು ಶರಣರು" ಎಂದು ಹೇಳುತ್ತ ಶರಣರ ಕಾರ್ಯಕ್ಷೇತ್ರದ ಕೇಂದ್ರ ವ್ಯಕ್ತಿ ಬಸವಣ್ಣ. ಆತನು ಸ್ತ್ರೀಯರ ಶೂದ್ರತ್ವ ತೊಲಗಿಸಿದನು. ಪುರುಷರ ಹೆಗಲಿಗೆ ಹೆಗಲು ಕೊಟ್ಟು ನೆಡೆಯಬಲ್ಲ ಮಹಿಳೆಯರ ವ್ಯಕ್ತಿತ್ವವನ್ನು ಬಹಿರಂಗಗೊಳಿಸಿದರು ಬಸವಣ್ಣ. ಇಂದಿನ ಜನತೆ ಆತನನ್ನು ಆದರ್ಶವಾಗಿಟ್ಟುಕೊಂಡು ಸಾಗಬೇಕೆಂದರು.

"ಹೆಣ್ಣಿನ ಕಳವಳ ಕೇಳಿ ತಾ ಕರಗ್ಯಾನ
ಅಣ್ಣಾ ಮಾಡ್ಯಾನ ಪಾವನ ಹೆಣ್ಣಿನ
ಪುಣ್ಯ ಕಟಕೊಂಡ ಬಸವಣ್ಣ"

ಎಂದು ಹೇಳುತ್ತ ಜಯದೇವಿಯವರು ಮಹಿಳೆಯರು ಪುರುಷರಂತೆ ಲೌಕಿಕ ಅಲೌಕಿಕಗಳೆರಡನ್ನು ಸಾಧಿಸುವ ಛಲವುಳ್ಳವರಾಗಬೇಕು ಇದಕ್ಕೆ ಶರಣರೇ

ನಿಜದರ್ಶಕರು ಅವರು ಇದನ್ನು ಸಾಧಿಸಿ ತೋರಿಸಿದ್ದಾರೆ. ಆ ಶರಣರಲ್ಲಿ ಸ್ತ್ರೀಯರು, ದಲಿತರೂ ಇದ್ದರು, ಸ್ತ್ರೀಯರನ್ನು, ದಲಿತರನ್ನು, ಶಿಕ್ಷಕರನ್ನು, ಒಕ್ಕಲಿಗರನ್ನು ಹಾಗೂ ಸಣ್ಣಮಕ್ಕಳನ್ನು ಕಡೆಗಣಿಸಿದ ಯಾವ ರಾಜ್ಯವಾಗಲಿ, ಧರ್ಮವಾಗಲಿ, ಬಾಳಿಲ್ಲ ಅದು ಬಾಳಲಾರದು ಎಂದಿರುವ ಅವರ ಇಂಥ ಅನೇಕ ಮಾತುಗಳಲ್ಲಿ ಮಹಿಳೆಯ ಔನತ್ಯವಷ್ಟೇ ಅಲ್ಲ; ಮಾನವ ಕಲ್ಯಾಣದ ಮಹತ್ವವೂ ಅದರಲ್ಲಡಗಿರುವುದನ್ನು ಗುರುತಿಸಬಹುದು.

**ಅಸ್ಪೃಶ್ಯತೆ ನಿವಾರಣೆ:** ಬಸವ ಮತ್ತು ಗಾಂಧೀಜಿಯವರ ತತ್ವಗಳನ್ನು ಒಪ್ಪಿಕೊಂಡಿದ್ದ ಜಯದೇವಿಯವರು ಇವರ ತತ್ವಕ್ಕೆ ವಿರುದ್ಧವಾದ ಅಸ್ಪೃಶ್ಯತಾ ಮನೋಭಾವವನ್ನು ಯಾವಾಗಲೂ ಖಂಡಿಸುತ್ತಿದ್ದರು. "ಹುಟ್ಟಿದ ಜಾತಿಯನ್ನು ಬಿಟ್ಟು ಸ್ವಂತ ಸಾಧನೆಯಿಂದ ಮುಂದೆ ಬಂದು ಸಮಾಜದಲ್ಲಿ ಅಗ್ರಗಣ್ಯರೆನಿಸಿದ ಶರಣರನ್ನು ಕುರಿತು ಜನತೆಗೆ ವಿವರಿಸುತ್ತ ಅಂತಹ ಅವಕಾಶವನ್ನು ಎಲ್ಲರೂ ಬದುಕಿನಲ್ಲಿ ತಂದುಕೊಳ್ಳಬೇಕು" ಎನ್ನುತ್ತಿದ್ದರು. "ಅಸ್ಪೃಶ್ಯತೆಯು ಸಮಾಜಕ್ಕಂಟಿದ ದೊಡ್ಡ ಪಿಡುಗು, ಅದೊಂದು ಮಹಾ ಪಾಪ. ಅಸ್ಪೃಶ್ಯನು ನಮಗಾಗಿ ಎಷ್ಟು ಕಷ್ಟ ಪಟ್ಟಿದ್ದಾನೆ. ತನ್ನ ಕೈಗಳನ್ನು ಹೊಲಸುಮಾಡಿಕೊಂಡು ನಮ್ಮ ಬದುಕನ್ನು ಸುಖವಾಗಿರಿಸಿದ್ದಾನೆ. ನಾವು ಅಂಥವನ ಸುಖವನ್ನು ಹತ್ತಿಕ್ಕಬಾರದು. ಅಸ್ಪೃಶ್ಯರಲ್ಲಿ ಏನಾದರೂ ದೋಷ, ದೌರ್ಬಲ್ಯಗಳಿದ್ದರೆ ಅದಕ್ಕೆ ನಾವೇ ಕಾರಣರು, ನಾವು ಹರಿಜನರಾಗುವುದು ಸಾಧ್ಯವಿದೆ. ಅದು ಅಸ್ಪೃಶ್ಯರಿಗೆ ನಾವು ಗೈದಿರುವ ಅನ್ಯಾಯಕ್ಕೆ ಪ್ರಾಯಶ್ಚಿತಪಟ್ಟಾಗ ಮಾತ್ರ ನಾವು ನಿಜವಾದ ಹರಿಜನರಾಗಬಲ್ಲೆವು. ಈ ದೆಸೆಯಲಿ ನಾವು ಶರಣರ ಸಾಧನೆಗಳನ್ನು ಅರಿಯಬೇಕೆಂದು ತಿಳಿಸಿದರು.

೧೯೭೭ರ ವೀರಶೈವ ಮಹಾಸಭೆ, ಮಹಿಳಾ ಪರಿಷತ್ತಿನಲ್ಲಿ ಮಾಡಿದ ಭಾಷಣದಲ್ಲಿ ಜಯದೇವಿಯವರು ಮಾತನಾಡುತ್ತ ಸಮಾಜದಲ್ಲಿ ಸಮಾನತೆ ತಾನಾಗಿಯೇ ಬರಲು ಮಹಿಳೆಯರು ಹೆಚ್ಚು ಶ್ರಮಿಸಬೇಕಿದೆ. "ವೀರಶೈವ ಮಹಿಳೆ ಯರು ಹರಿಜನೋದ್ಧಾರ ಕಾರ್ಯವನ್ನು ಹೆಚ್ಚಾಗಿ ಕೈಕೊಂಡು, ಊರ್ಜಿತಗೊಳಿಸಬೇಕೆಂದು ಹೇಳುತ್ತ, ನಾವು ಮಾತುಗಳ ಸಭೆ ಮಾಡದೆ ಕೃತಿಯಲ್ಲಿ ತರುವ ಚಿಂತನೆ ಮಾಡಬೇಕಾಗಿದೆ. ಎಂದು ಭಾಷಣ ಮಾಡಿದರು. ಹೇಗೆ ಶರಣರು ಮಾನವರಲ್ಲಿ ಬೆಳೆದಿದ್ದ ಅಸಮಾತೆಯನ್ನು ಇಷ್ಟಲಿಂಗ ಪೂಜೆಯಿಂದ ಪರಿಹರಿಸಲು ನಿರ್ಧರಿಸಿದರೋ? ಅದರಂತೆ ನಾವು ವರ್ಗಭೇಧ, ವರ್ಣಭೇಧಗಳನ್ನು ಇಲ್ಲವಾಗಿಸಲು ಒಬ್ಬದೇವನಲ್ಲಿ ನಂಬಿಕೆಯಿಡುವಂತೆ ಕೋರಬೇಕು ಎಂದೂ ಅವರು ಹೇಳುತ್ತಿದ್ದರು ತನ್ನ ತಾಯಿ ಸಂಗವ್ವ ಮಡಕಿಯವರೊಂದಿಗೆ ಸೊಲ್ಲಾಪುರದ ಸರಸ್ವತಿ ಸದನ, ಶ್ರಾವಿಕಾಶ್ರಮಗಳಿಗೆ ಹೋಗಿ, ಅಲ್ಲಿ ನಡೆಯುತ್ತಿದ್ದ ಕಾರ್ಮಿಕ ಕಲ್ಯಾಣ ಸಮ್ಮೇಳನಗಳಲ್ಲಿ ಜಯದೇವಿಯವರು 'ಸ್ತ್ರೀಯರ ಆದ್ಯ ಕರ್ತವ್ಯ'

'ಸ್ತ್ರೀಯರ ನಿರ್ಮಲತೆ' ಹಾಗೂ 'ಸ್ತ್ರೀಯ ನಿರ್ಭಯತೆ'ಗಳನ್ನು ಕುರಿತು ಮಾತನಾಡಿರುವುದನ್ನು ಅಂದಿನ ' ಹಿಂದೂ ಸಮಾಚಾರ ಪತ್ರಿಕೆ ವರದಿ ಮಾಡಿದೆ.

'ಮಹಿಳಾ ಜ್ಞಾನ ಮಂದಿರವಲ್ಲದೆ- ಸೊಲ್ಲಾಪುರ, ಬಾರ್ಸಿಗಳಲ್ಲಿದ್ದ ಹರಿಜನ ಸಂಘ, ರಿಮ್ಯಾಂಡ್ ಹೋಮ, ಕಾರ್ಮಿಕ ಕಲ್ಯಾಣ ಕೇಂದ್ರ, ಗಾಂಧೀವಸ್ತ್ರಾಲಯ ಗಳೊಂದಿಗೆ ಜಯದೇವಿಯವರು ಅನೇಕ ಪತ್ರ ವ್ಯವಹಾರ ಮಾಡಿದ್ದಾರೆ. ಅವುಗಳ ಆಡಳಿತ ಪರಿಯನ್ನು ಗಮನಿಸುತ್ತಿದ್ದರು. ಒಮ್ಮೊಮ್ಮೆ ಅವುಗಳಿಗೆ ಬೆಟ್ಟಿನೀಡಿ ಸೂಕ್ತ ಮಾರ್ಗದರ್ಶನವನ್ನು ಮಾಡುತ್ತಿದ್ದರು. ಅವಶ್ಯವಿದ್ದಾಗ ಧನ ಸಹಾಯವನ್ನು ಮಾಡಿದ್ದಾರೆ.

ಸ್ವಾತಂತ್ರ್ಯ ಪೂರ್ವದಲ್ಲಿ ಕೇರಿಯ ಜನರ ಸ್ವಾವಲಂಬನೆಗಾಗಿ ಸಾಕ್ಷರತೆಗಾಗಿ, ಕೈಗಾರಿಕೆಗಳನ್ನು ನಡೆಸಲು ಕಲಿಕೆಗಾಗಿ ತುಂಬಾ ಶ್ರಮಪಡುತ್ತಿದ್ದರು. ನಂತರದಲ್ಲಿ ಸ್ವಾತಂತ್ರ್ಯೋತ್ಸವ, ಮಹಾಪುರುಷರ ದಿನಾಚರಣೆ, ಮೊದಲಾದ ಕಾರ್ಯಕ್ರಮ ಗಳನ್ನು ತೆಗೆದುಕೊಂಡು ನಡೆಸಿಕೊಡತೊಡಗಿದರು. ಈ ಎಲ್ಲ ಸಂದರ್ಭಗಳಿಗೆ ಕಾರಣೀಭೂತರೆಂದರೆ ಒಬ್ಬರು ಜಯದೇವಿಯವರು, ಇನ್ನೊಬ್ಬರು ಬಾಬೂಜಿ ಯವರು. ಜಯದೇವಿಯವರು ಯಾವುದೇ ಊರಿಗೆ ಕಾರ್ಯಕ್ರಮಕ್ಕಾಗಿ ಹೋದಾಗ ಆ ಊರಿನ ಹರಿಜನ ಕೇರಿಗೆ ಹೋಗುವುದನ್ನು ಅವರು ಮರೆಯುತ್ತಿರಲಿಲ್ಲ ಎಂಬುದು ಗಮನಾರ್ಹ ಅಂಶವಾಗಿದೆ. ದಲಿತ ಸಂಘದ ಯಾವುದೇ ಕಾರ್ಯಕ್ರಮವನ್ನು ಜಯದೇವಿಯವರು. ಎಂದೂ ನಿರಾಕರಿಸುತ್ತಿರಲಿಲ್ಲ. ಅಸ್ಪೃಶ್ಯತೆಯು ಸಮಾಜದಿಂದ ತೊಲಗಬೇಕೆಂದು ಅವರು ಸದಾ ಹೋರಾಟಮಾಡಿದರು. ಅಕ್ಕಲ ಕೋಟೆಯ ದಲಿತ ಕೇರಿಯ ನಡುವೆ ಬಸವನ ಗುಡಿಯೊಂದಿತ್ತು. ಅದು ತುಂಬಾ ಜೀರ್ಣಾವಸ್ಥೆಯಲ್ಲಿತ್ತು. ಆ ಕೇರಿಯ ಜನರು ಯಾವುದೇ ಸಾಮಾಜಿಕ ಕಾರ್ಯಗಳಿಗೆ ಸೇರಿಕೊಳ್ಳುವ ಸ್ಥಾನ ಅದಾಗಿತ್ತು. ಅಲ್ಲಿ ಭಜನೆ, ಕೀರ್ತನೆ ಮೊದಲಾದ ಕಾರ್ಯಕ್ರಮಗಳೂ ನಡೆಯುತ್ತಿದ್ದವು. ಒಮ್ಮೆ ಜಯದೇವಿಯವರ ಭಾಷಣ ಅಲ್ಲಿಯೇ ಇತ್ತು ಆ ಕೇರಿಯ ಜನ ಆ ಗುಡಿಯ ನವೀಕರಣಕ್ಕೆ ಪ್ರಯತ್ನಿಸುತ್ತಿರುವ ವಿಷಯ ತಿಳಿದು ತಾವೇ ಮುಂದಾಗಿ ದಿನಾಂಕ ೨೦-೦೯-೧೯೫೦ ರಂದು ಆ ಗುಡಿಗಾಗಿ ೫೦೦ ರೂ ದೇಣಿಗೆ ಕೊಟ್ಟ ವರದಿ 'ಸುದರ್ಶನ' ಪತ್ರಿಕೆಯಲ್ಲಿ ಬಂದಿದೆ. ಜಯದೇವಿಯವರು ಎಂದೂ ಹಣ ಕೊಟ್ಟು ಹೊಗಳಿಸಿಕೊಂಡವರಲ್ಲ, ಹೊಗಳುಭಟ್ಟಂಗಿಗಳಿಗೆ ಅವರೆಂದೂ ಹಣವನ್ನು ಕೊಡುತ್ತಿರಲಿಲ್ಲ

'ಅಸ್ಪೃಶ್ಯತಾ' ನಿವಾರಣೆಗಾಗಿಯೇ ಜಯದೇವಿಯವರು 'ಶರಣಸಮಾಜ' ವೆಂಬ ಸಂಘ ಸ್ಥಾಪಿಸಿ, ಸೊಲ್ಲಾಪುರದ ಶಾಖೆಯನ್ನು 'ಜಯನಿಕೇತನ'ದಲ್ಲಿ ನಡೆಸಲು ತೀರ್ಮಾನಿಸಿದ್ದರು. ಆ ಸಂಗದ ಕಾರ್ಯಕ್ರಮವೊಂದಕ್ಕೆ ಬಾಬು

ಜಗಜೀವನರಾಮರನ್ನು ಕರೆಸಿದ್ದರು. ಈ ಸಂಘದ ಮುಖಾಂತರ ಬಸವಣ್ಣನವರು ಕಟ್ಟ ಬಯಸಿದ್ದ ಜಾತ್ಯಾತೀತ ಸಮಾಜ ನಿರ್ಮಾಣ ಮಾಡುವುದು ಅವರ ಉದ್ದೇಶವಾಗಿತ್ತು. ಹೀಗಾಗಿ ಇಲ್ಲಿ ಬಸವ ತತ್ವ ಪ್ರಚಾರ, ಅಂತರ್ ಜಾತಿ ವಿವಾಹ ಏರ್ಪಡಿಸುವುದನ್ನು ಗುರಿಯಾಗಿಸಿಕೊಂಡಿದ್ದರು. ಈ ಸಂಘದಲ್ಲಿ ಹರಿಜನ-ಗಿರಿಜನ ,ಹರಳಯ್ಯಸಮಾಜ, ಮಡಿವಳ ಸಮಾಜ, ಗೌಳಿ ಸಮಾಜ ಹಾಗೂ ಇತರ ಹಿಂದುಳಿದ ವರ್ಗದವರೆಲ್ಲರೂ ಸೇರುತ್ತಿದ್ದರು. ಬಸವ ತತ್ವದ ಮೂಲಕ ಅವರಲ್ಲಿ ಜಾಗೃತಿಯನ್ನುಂಟು ಮಾಡಲಾಗುತ್ತಿತ್ತು. ಬಸವಣ್ಣನವರು ಯಾವುದೇ ಒಂದು ಜನಾಂಗದ ಸೊತ್ತಲ್ಲ. ಅವರು ಇಡೀ ಮಾನವ ಕುಲದ ಗುರು 'ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸಿದ' ಆ ಶರಣನಂತೆ ಎಲ್ಲರೂ ವಿಶ್ವ ಕುಟುಂಬತ್ವವನ್ನು ನಡೆ ನುಡಿಯಲ್ಲಿ ತೋರಬೇಕು. ಆವಾಗ ಮಾತ್ರ ಮಾನವ ಕುಲ ಉದ್ಧಾರವಾಗುವುದರಲ್ಲಿ ಸಂದೇಹವಿಲ್ಲವೆಂದು ಸಾರುತ್ತಿದ್ದರು. ಪ್ರತಿ ವರ್ಷ ಆ ಸಂಘದ ಕಾರ್ಯಕ್ರಮಕ್ಕೆ ಅಂತರ್ ಜಾತಿ ವಿವಾಹಿತರನ್ನು ಕರೆಸಿ ಪರಿಚಯಮಾಡಿಕೊಟ್ಟು ಜನರನ್ನು ಪ್ರೋತ್ಸಾಹಿಸುತ್ತಿದ್ದುದು ಇಲ್ಲಿಯ ವೈಶಿಷ್ಟ್ಯವಾಗಿತ್ತು.

ಹೀಗೆ ಜಯದೇವಿತಾಯಿಯವರು ವೈಚಾರಿಕವಾಗಿ ಮತ್ತು ಅಷ್ಟೇ ಪ್ರಾಮಾಣಿಕವಾಗಿ ಹಲವು ಪ್ರಯೋಗಗಳ ಮೂಲಕ ಸಮಾಜದಲ್ಲಿ ನೆಲೆ ನಿಂತಿದ್ದ 'ಅಸ್ಪೃಶ್ಯತೆ'ಯನ್ನು ಹೊಡೆದೋಡಿಸಲು ಪ್ರಯತ್ನಿಸುವುದು ಅವರ ಮಹತ್ವದ ಸಾಧನೆಗಳಲ್ಲಿ ಒಂದೆನ್ನಬಹುದು.

## ಕುಟುಂಬ ಯೋಜನೆಗೆ ಬೆಂಬಲ

ಜನಸಂಖ್ಯಾ ಏರಿಕೆಯಿಂದ ದೇಶವು ಅವನತಿಯ ಕಡೆಗೆ ಹೋಗುವುದನ್ನು ಕಂಡ ಜಯದೇವಿಯವರು ಅದನ್ನು ನಿಯಂತ್ರಣದಲ್ಲಿಡಬೇಕೆಂದು ಸಲಹೆ ಮಾಡಿದರು. ಜನಸಂಖ್ಯಾ ಸ್ಫೋಟವು ಅಭಿವೃದ್ಧಿಶೀಲ ದೇಶಗಳ ಪ್ರಗತಿಗೆ ಆತಂಕ ತರುವ ಮಹಾ ಮಾರಿ. ಭಾರತ ದೇಶದ ಪ್ರಗತಿಗೆ ಅದು ಮಾರಕವಾದುದು. ಸುಧಾರಣವಾದಿಗಳು ಸಾಹಿತಿಗಳು, ಹಾಗೂ ದೇಶ ಪ್ರೇಮಿಗಳಾಗಿದ್ದ ಜಯದೇವಿಯವರು ಅದನ್ನು ನಿಯಂತ್ರಿಸಲು ಸಂದೇಶ ನೀಡುತ್ತಿದ್ದರು. ಸರಕಾರಿ ಯೋಜನೆಗಳನ್ನು ಅಷ್ಟೊಂದು ಗಂಭೀರವಾಗಿ ಪರಿಗಣಿಸದ ಸಾಹಿತಿಗಳಲ್ಲಿ ಅಪರೂಪವೆನಿಸುವ ಇವರು, ದೇಶದ ಪ್ರಗತಿಯನ್ನು ಪರಿಗಣಿಸಿ ಕುಟುಂಬ ಯೋಜನೆಯ ಬಗ್ಗೆಯೂ ಬರೆದಿರುವರು. ಈ ಬರವಣಿಗೆಯಲ್ಲಿ ಜಯದೇವಿಯ ದೇಶಪ್ರೇಮ ಹಾಗೂ ಸಾಮಾಜಿಕ ಕಳಕಳಿ ಎದ್ದು ಕಾಣುತ್ತದೆ. ಸರಕಾರವು ಕುಟುಂಬ ಯೋಜನೆಯನ್ನು ಜಾರಿಗೆ ತಂದಾಗ ಕ್ರಿಶ್ಚಿಯನ್ ಪಾದ್ರಿಗಳು, ಮುಸ್ಲಿಂ ಮೌಲ್ವಿಗಳು ಒಪ್ಪಲಿಲ್ಲ. ಈ ವಿಷಯದಲ್ಲಿ ಬಹು ಜನರಿಗೆ ದೇಶದ ಪ್ರಗತಿಗಿಂತ ಧರ್ಮ ದೊಡ್ಡದಾಗಿ ಕಂಡಿತು. ಆದರೆ ಜಯದೇವಿಯವರಿಗೆ ದೇಶಭಕ್ತಿ ಈಶ ಭಕ್ತಿಯಾಯಿತು.

ಮಹಿಳೆ ಪ್ರೌಢಾವಸ್ಥೆ ದಾಟುವ ತನಕ ಮಕ್ಕಳನ್ನು ಹೆತ್ತರೆ, ಅವಳ ಆಯುಷ್ಯ ಹೆರಿಗೆ, ಮಕ್ಕಳ ಪಾಲನೆಗೆ ಮಾತ್ರ ಸೀಮಿತವಾಗುತ್ತದೆ ಎಂದು ಎಚ್ಚರಿಸಿದ್ದರು. ಸ್ತ್ರೀಯರ ಮಾನಸಿಕ, ದೈಹಿಕ ಹಾಗೂ ಸಮಾಜದ ಆರೋಗ್ಯವನ್ನು ಕಾಪಾಡಲು ಒಂದೆರಡೇ ಮಕ್ಕಳು ಸಾಕೆಂಬುದು ಅವರ ಅಭಿಪ್ರಾಯವಾಗಿತ್ತು.

ನಿಸರ್ಗ ನಮ್ಮ ಮೇಲೆ ಕ್ರಮ ತೆಗೆದುಕೊಳ್ಳುವ ಮೊದಲು 'ಬುದ್ಧಿಜೀವಿ' ಎನಿಸಿರುವ ಮನುಷ್ಯ ಎಚ್ಚರಗೊಂಡು, ನಿಸರ್ಗದಲ್ಲಿ ಸಮತೋಲನ ಕಾಯ್ದು ಕೊಳ್ಳಬೇಕು. ತಮ್ಮ ಮನೆಗೊಬ್ಬ ಮಗನಿಲ್ಲದಿದ್ದರೆ ವಂಶ ನಿಲ್ಲುವುದೆಂದು ಚಿಂತಿಸುವ ಶ್ರೀಮಂತರು ದೇಶದ ಸಂಸ್ಕೃತಿಯನ್ನು ಮುನ್ನಡೆಸುವುದು ಹೇಗೆಂದು ಯಾಕೆ ಚಿಂತಿಸುವುದಿಲ್ಲವೆಂದು ಅವರು ಪ್ರಶ್ನಿಸಿದ್ದಾರೆ. ನಮ್ಮ ದೇಶದಲ್ಲಿ ಒಂದೆಡೆ ದೀಪ ಹಚ್ಚುವ ಮಗನಿಲ್ಲವೆಂದು ಕೆಲವರು ಕನವರಿಸಿದರೆ, ಇನ್ನೊಂದೆಡೆಯಲ್ಲಿ ಮನೆತುಂಬ ಮಕ್ಕಳಿದ್ದಾರೆಂದೂ ಚಿಂತಿಸುತ್ತಾರೆ. ಬಹಳ ಜನ ಮಕ್ಕಳಿರುವವರ ಸ್ಥಿತಿ ಚಿಂತಾಜನಕವಾಗಿರುವ ಸಂಗತಿಯನ್ನು ಬಿಚ್ಚಿಡುವ ಕವಿ ಹೃದಯವು ಆ ಸಂದರ್ಭದಲ್ಲಾಗುವ ಸಾಲ, ಅದರಿಂದುಂಟಾಗುವ ಭೀಕರ ಪರಿಣಾಮ, ಅಸಹಾಯಕ ಸ್ಥಿತಿ ನೋಡಿದರೆ ಮನಕರಗುತ್ತದೆ. ತಂದೆ ತಾಯಿಗಳಿಗಿರುವ ಶಿಕ್ಷಣದ ಕೊರತೆಯೇ ಇದಕ್ಕೆ ಕಾರಣವೆನ್ನುವ ಲಿಗಾಡೆಯವರು, ಅವರು ತಮ್ಮ ಅಜ್ಞಾನವನ್ನು ದೂರಮಾಡಿಕೊಂಡು ಮಿತ ಸಂಖ್ಯೆಯ ಮಕ್ಕಳೊಂದಿಗೆ ಹಿತವಾಗಿ ಬಾಳಬೇಕು ಎಂದೂ ಜನರನ್ನು ಎಚ್ಚರಿಸುತ್ತಿದ್ದರು.

ಲೇಖಕರು ಸಂಸ್ಕೃತಿಯ ಹರಿಕಾರರು ದೇಶದ ಸ್ಥಿತಿ–ಗತಿಗಳೊಂದಿಗೆ ಸಾಹಿತಿಯ ಮನಸ್ಸು ಸದಾ ಸ್ಪಂದನೆಕ್ಕೊಳಪಡುತ್ತದೆ. ದೇಶದ ಉನ್ನತಿಯನ್ನು ಹಾಗೂ ಮಾನವ ಕಲ್ಯಾಣವನ್ನು ಕುರಿತು ಚಿಂತಿಸುವ ಸಾಹಿತಿಯು ಆ ಉನ್ನತಿಗೆ ಅಡ್ಡಬರುವ ಕಂಟಕಗಳನ್ನು ನಿವಾರಿಸಲು ಕಲೆಯನ್ನು ಅಭಿವ್ಯಕ್ತಿ ಮಾಧ್ಯಮವನ್ನಾಗಿ ಆರಿಸಿಕೊಳ್ಳುತ್ತಾನೆ. ಇಂಥ ಸಾಹಿತ್ಯಿಕ ಪ್ರಯತ್ನವು 'ಜಯದೇವಿ ಲಿಗಾಡೆ' ಯವರ ಲೆಖನದಲ್ಲಿಯೂ ಮೂಡಿ ನಿಂತಿರುವುದನ್ನು ಅರಿಯಬಹುದು. ಈ ಕುಟುಂಬ–ಯೋಜನೆಯನ್ನು ಅವರು ಹಿತ–ಮಿತವೆಂಬ ತಲೆ ಬರಹದಡಿಯಲ್ಲಿ ಚರ್ಚಿಸಿರು ವುದು ಗಮನಾರ್ಹ ಸಂಗತಿ.

## ನಿರಾಶ್ರಿತರಿಗೆ ಆಶ್ರಯ ನೀಡಿದ್ದು:

ಸುವ್ಯವಸ್ಥಿತ ಸಮಾಜ ನಿರ್ಮಾಣಕ್ಕೆ ಹಗಲಿರುಳು ಸ್ಪಂದಿಸುತ್ತಿದ್ದ ಜಯದೇವಿ ಯವರು ತನ್ನ ಸಮೀಪದ ಆಗು–ಹೋಗುಗಳನ್ನು ತುಂಬಾ ಮಾನವೀಯ ನೆಲೆಗಳಿಂದ ಕಾಣುತ್ತಿದ್ದರು. ಸ್ವಾತಂತ್ರ್ಯ ಪಡೆದ ಭಾರತವು ಕೆಲವು ನೆಲೆಗಳಲ್ಲಿ ಕಠಿಣ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಅವುಗಳಲ್ಲಿ ಸಂಸ್ಥಾನದ ವಿಲನೀಕರಣವು ಒಂದು. ಸ್ವತಂತ್ರ ಭಾರತದಲ್ಲಿ ಸೇರಿಕೊಳ್ಳಲು ಇಚ್ಚಿಸದ ಹೈದ್ರಾಬಾದ ನಿಜಾಮರು,

ಈ ಭಾಗದ ಜನತೆಯನ್ನು ಎಂದರು ಹಾಕಿಕೊಳ್ಳ ಬೇಕಾಯಿತು. ಅವರು ತಮ್ಮದೆ ಆದ 'ಪಾಕಿಸ್ತಾನ'ದಂತಹ ಸ್ವತಂತ್ರ ರಾಜ್ಯವನ್ನು ಮಾಡಿಕೊಳ್ಳಬೇಕೆಂದು ನಿರ್ಧರಿಸಿ, ಭಾರತದ ಆಡಳಿತವನ್ನು ತಾವು ಒಪ್ಪುವುದಿಲ್ಲವೆಂದು ಘೋಷಿಸಿದರು. ಆ ನಿಮಿತ್ತವಾಗಿ ಇಲ್ಲಿಯ ಹಿಂದೂಗಳು ಸ್ವಾತಂತ್ರ್ಯಕ್ಕಾಗಿ ಬೀದಿಗೆ ಇಳಿಯಬೇಕಾಯಿತು ಇದನ್ನು ತಡೆಗಟ್ಟಲು ನಿಜಾಮ ಸೈನ್ಯವು ಹಿಂದೂಗಳ ಮೇಲೆ ದೌರ್ಜನ್ಯವೆಸಗತೊಡಗಿದರು. ಆಗ ನಿಜಾಮನ ಒಂದು ಪಡೆ ಕಾಶೀಮರಜ್ವಿಯ ನೇತೃತ್ವದಲ್ಲಿ, ಹೈದ್ರಾಬಾದ್ ಕರ್ನಾಟಕದ ಹಿಂದೂ ಜನತೆಯ ಮೇಲೆ ಅನೇಕ ರೀತಿಯ ಅನ್ಯಾಯ, ಹಿಂಸೆ ಮಾಡತೊಡಗಿತು. ಈ ಘಟನೆಗೆ ಹೆದರಿದ ಅನೇಕ ಹಿಂದೂ ಜನತೆ ಪ್ರಾಣ-ಮಾನ ರಕ್ಷಣೆಗೋಸ್ಕರ ಉಟ್ಟ ಬಟ್ಟೆಯ ಮೇಲೆ ಊರುಗಳನ್ನು ಬಿಟ್ಟು ಬೇರೆ ಬೇರೆ ಪ್ರದೇಶಗಳಿಗೆ ವಲಸೆ ಹೋಗಬೇಕಾಯಿತು. ಅಂಥ ಒಂದು ದೊಡ್ಡಗುಂಪು ಸೊಲ್ಲಾಪುರದ ಕಡೆಗೆ ಧಾವಿಸಿ ಬಂದಿತು.

ಆ ನಿಜಾಮನ ನಾಡಿನಿಂದ ಬಂದ ದೇಶ ಬಾಂಧವರನ್ನು ರಕ್ಷಿಸುವ ಹೊಣೆ ಹೊತ್ತ ಸೊಲ್ಲಾಪುರದ ಜನತೆ ಅವರಿಗೆ ಆಶ್ರಯ ನೀಡಿದರು. ಪಟ್ಟಣದ ಪ್ರಮುಖರು, ಸಂಘ ಸಂಸ್ಥೆಯವರು ಈ ಕಾರ್ಯಮಾಡಿದರು. ಅದರಲ್ಲಿ ಹೆಚ್ಚಿನವರು' ಜಯದೇವಿಯವರ ನೇತೃತ್ವದ ಮಹಿಳೆಯರೇ ಇದ್ದರು ಎಂಬುದನಿಲ್ಲಿ ಗಮನಿಸ ಬಹುದಾಗಿದೆ. ಈಗಾಗಲೇ ಸಮಾಜ ಸೇವೆಯಲ್ಲಿ ಹೆಸರುವಾಸಿಯಾಗಿದ್ದ- ವೀರಶೈವ ಮಹಿಳಾ ಜ್ಞಾನಮಂದಿರ 'ಶ್ರಾವಿಕಾಶ್ರಮ' ಮತ್ತು 'ಸರಸ್ವತಿ ಸದನಗಳ' ಕಾರ್ಯಕರ್ತರು ಸೇರಿಕೊಂಡು ನಿರಾಶ್ರಿತರಿಗೆ ಮೊದಲು ಶಿಬಿರಗಳನ್ನು ಒದಗಿಸಿ ದರು. ವಂತಿಕೆ ಎತ್ತಿದರು. ಅವರಿಗಾಗಿ ಬಟ್ಟೆ, ಬರೆ, ದವಸ ಧಾನ್ಯ ಸಂಗ್ರಹಿಸಿದರು. ಉದ್ಯಮಪತಿಗಳನ್ನು ಕಂಡು ಅವರಿಂದ ಸೀರೆ, ದೋತರ, ರಗ್ ಮೊದಲಾದ ಸಾಮಗ್ರಿಗಳನ್ನು ಸಂಗ್ರಹಿಸಿ ತಂದು ನಿಗದಿತ ಶಿಬಿರಗಳಿಗೆ ಸರಿಯಾಗಿ ಹಂಚುತ್ತಿದ್ದರು. ಈ ಎಲ್ಲ ಕಾರ್ಯಗಳಲ್ಲಿ 'ಜಯದೇವಿ'ಯವರಿಗೆ ಶ್ರೀಮತಿ ಘಾಟಗೆ, ಸುಮತಿಬಾಯಿ ಯವರು ಸಹಾಯಕರಾಗಿ ಕಾರ್ಯನಿರ್ವಹಿಸಿದ್ದನ್ನು ಇಲ್ಲಿ ಮರೆಯಲಾಗದು.

ಜಯದೇವಿಯವರು ಸಭೆ ಕರೆದು ಭಾಷಣ ಮಾಡುವುದರಲ್ಲಿ ತುಂಬಾ ಪ್ರಸಿದ್ಧಿ ಪಡೆದಿದ್ದರು. ಅವರು ತಮ್ಮ ಜಯನಿಕೇತನ, ಕಂಡೋಜಿಮಠ ಮೊದಲಾದ ಕಡೆಗೆ ಜನರು ಸೇರುವ ಸ್ಥಳಗಳನ್ನು ಆರಿಸಿಕೊಂಡು ಕೂಡಿದ ಸಭಿಕರೆದುರಿಗೆ ನಿರಾಶ್ರಿತರ ಅಸಹಾಯಕ ಪರಿಸ್ಥಿತಿಯನ್ನು ಅವರ ಮನ ಮುಟ್ಟುವಂತೆ ಹೇಳುತ್ತಿದ್ದರು. ಆಗ ಅಲ್ಲಿ ಸೇರಿದ ಜನರು ತಮ್ಮಿಂದಾದ ಸಹಾಯವನ್ನು ನೀಡುತ್ತಿದ್ದರು. ಹೀಗೆಯೇ ಒಮ್ಮೆ ಕೋನಾಪುರೆಯವರ ಅಡ್ಡೆಯಲ್ಲಿ ಸೇರಿದ್ದ ಜನರನ್ನುದ್ದೇಶಿಸಿ ಮಾತನಾಡಿದರು ನಿರಾಶ್ರಿತರ ಮಕ್ಕಳ ಹಾಲಿನ ಖರ್ಚಿಗೆಂದು ಎಪ್ಪತ್ನಾಲ್ಕು ರೂಪಾಯಿಗಳು ಆ ಕೂಡಲೇ ದೊರಕಿದವು ವಾಡೆಯಲ್ಲಿರುವವರು ಸೀರೆ, ಬ್ಲೌಸು

ಧೋತರ-ಶರ್ಟುಗಳನ್ನು ಕೊಟ್ಟಿರಂತೆ. ಜಯದೇವಿಯವರು ೧೦-೦೫-೪೮ ರಿಂದ ೧೧-೦೬-೪೮ರ ಅವಧಿಯಲ್ಲಿ ಸುಮಾರು ೧.೦೫೮೧೩ ರೂಪಾಯಿಗಳನ್ನು ಕೂಡಿಸಿ ಹಂಚಿದ್ದಾಗಿ ಸಂದರ್ಶನ ಪತ್ರಿಕೆ ವರದಿ ಮಾಡಿದೆ. ಕೂಡಿಸಿದ ಹಣ, ಹಾಗೂ ಸಾಮಗ್ರಿಗಳನ್ನು ಜಯದೇವಿಯವರು ಸ್ವತಃ ನಿರಾಶ್ರಿತರ ಶಿಬಿರಗಳಿಗೆ ತೆರಳಿ, ಅವುಗಳನ್ನು ಕೊಟ್ಟು, ಅವರ ಕೊರತೆಗಳನ್ನು ಕೇಳಿಬರುತ್ತಿದ್ದರು.

ತಾವು ಕೂಡಿಸಿದ ಸಾಮಗ್ರಿ, ಹಣ ಹಾಗೂ ವಸ್ತುಗಳನ್ನು ಯಾರು ಯಾರಿಗೆ ಹಂಚಬೇಕೆಂದು ಸ್ವತಃ ತಾವೇ ಶಿಬಿರಗಳಿಂದ ತಿಳಿದುಕೊಂಡು ಬಂದು ಅವರ ಹೆಸರುಗಳನ್ನು ಪಟ್ಟಿಮಾಡಿ ತಂದು ಅವರವರಿಗೆ ಅವುಳನ್ನು ತಲುಪಿಸಲು ಕಾರ್ಯಕರ್ತರನ್ನು ಕಳಿಸುತ್ತಿದ್ದರು. ಉಲ್ಲನ್ ತರಿಸಿಕೊಟ್ಟು ಶಾಲಾ ಶಿಕ್ಷಕರಿಂದ ಸ್ವೆಟರ್ ಹೆಣಿಸಿ ನಿರಾಶ್ರಿತರಿಗೆ ಹಂಚಿದ ಉದಾಹರಣೆಗಳು ಸಿಗುತ್ತವೆ. ಒಮ್ಮೆ ಲಕ್ಷ್ಮಿ ಮತ್ತು ವಿಷ್ಣು ಗಿರಿಣಿಯ ವ್ಯವಸ್ಥಾಪಕರಾಗಿದ್ದ ರುಕ್‌ಸನ್‌ನನ್ನು ಜಯದೇವಿಯವರು ತಮ್ಮ ತಂದೆಯೊಡನೆ ಕಂಡು ಸು. ೧೦೦೦ ರೂ. ಬೆಲೆಬಾಳುವ ಸೀರೆ, ರಗ್ಗುಗಳನ್ನು ಪಡೆದು ತಂದು ನಿರಾಶ್ರಿತರಿಗೆ ಹಂಚಿದರು.

ನಿರಾಶ್ರಿತರಿಗೆ ಕೇವಲ ಭೌತಿಕ ಅವಶ್ಯಕತೆಗಳನ್ನಷ್ಟೇ ಅಲ್ಲದೆ ಸಮಯೋಚಿತವಾಗಿ ಬೌದ್ಧಿಕ ಬೆಳವಣಿಗೆಯ ಮಾತುಗಳನ್ನು ಹೇಳುತ್ತಿದ್ದರು ಆರೆಂಟು ತಿಂಗಳುಗಳ ಕಾಲ ನಿರಾಶ್ರಿತರ ಸೇವೆಯಲ್ಲಿ ನಿರಂತರವಾಗಿ ಸೇವೆ ಸಲ್ಲಿಸಿದ ಜಯದೇವಿಯವರನ್ನು ಕುರಿತು ಅಂದಿನ ಕನ್ನಡ ಮರಾಠಿ ಪತ್ರಿಕೆಗಳು ಹಾಡಿ ಹೊಗಳಿದ್ದವು ೨೮-೮-೧೯೪೮ ರ ವಿಶಾಲ ಕರ್ನಾಟಕ ಪತ್ರಿಕೆಯಲ್ಲಿ ಹಾಗೂ ೪-೧೦-೪೮ ರ ಸಂದರ್ಶನ ವರದಿಯಲ್ಲಿ ನಾವಿದನ್ನು ಕಾಣಬಹುದಾಗಿದೆ.

ಈ ಸಂದರ್ಭದಲ್ಲಿ ಜಯದೇವಿಯವರು ತಮ್ಮ ಸೇವೆಯನ್ನು ಇಷ್ಟಕ್ಕೆ ಸೀಮಿತಗೊಳಿಸಿಕೊಳ್ಳದೇ ಸಾಮಾಜಿಕ ಕ್ಷೇತ್ರದ ಆಗು ಹೋಗುಗಳಿಗೂ ವಿಸ್ತರಿಸಿದ್ದರು ರಜಾಕಾರರ ದೌರ್ಜನ್ಯಕ್ಕೆ ತುತ್ತಾಗಿ ಶಾಲೆಗಳನ್ನು ಬಿಟ್ಟು ಬಂದಂತಹ ನೂರಾರು ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂದು ಮಾಧ್ಯಮಿಕ ಶಾಲೆಯನ್ನು ಆರಂಭಿಸಿದ್ದರು. ಈ ಸಂಧರ್ಭದಲ್ಲಿ ರಜಾಕಾರರ ರಾಕ್ಷಸೀಯ ಕೃತ್ಯಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತ ನಡೆದಾಗ ಮತ್ತಷ್ಟು ಹಿಂದೂ ಜನತೆ ಈ ಭಾಗ ಬಿಟ್ಟು, ತೊಟ್ಟ ಬಟ್ಟೆಯ ಮೇಲೆ ಸೊಲ್ಲಾಪುರದ ನಿರಾಶ್ರಿತರ ಶಿಬಿರ ಸೇರತೊಡಗಿದರು. ಆಗ ವಾಸಿಸಲು ಶಿಬಿರಗಳಲ್ಲಿ ಕೊರತೆ ಆರಂಭವಾಯಿತು. ಇದನ್ನು ಕಂಡ ಜಯದೇವಿಯವರು ಬಂದವರಿಗೆ ಊರ ಸಮೀಪದಲ್ಲಿರುವ ತಮ್ಮ ೪೦ ಎಕರೆ ಆದಿಲಿಂಗನ ಹೊಲದಲ್ಲಿ ಶಿಬಿರಗಳನ್ನು ಹಾಕಿಕೊಳ್ಳಲು ಬಿಟ್ಟುಕೊಟ್ಟರು. ನಿರಾಶ್ರಿತರಿಗಾಗಿ ಆ ಹೊಲವನ್ನು ಸುಮಾರು ಆರು ತಿಂಗಳ ಕಾಲ ಬೀಳು ಕೆಡವಿದ್ದರು.

ದಿನಾಂಕ ೧೮-೦೯-೧೯೪೮ರಂದು ಹೈದರಾಬಾದ್ ಕರ್ನಾಟಕ ಸ್ವತಂತ್ರವಾದಾಗ ನಿರಾಶ್ರಿತರು ತಮ್ಮ ಊರುಗಳಿಗೆ ಮರಳಲು ಆಸೆಪಟ್ಟರು ದಿನಾಂಕ

೩೦-೯-೪೮ರಂದು ಅವರು ಊರಿಗೆ ಹೋಗಬೇಕಾಗಿತ್ತು. ಇದಕ್ಕಾಗಿ ಮೊದಲೆ ಒಂದು ದಿನ ಅವರೆಲ್ಲ ಸೇರಿಕೊಂಡು ಅಲ್ಲಿಂದ ಅಗಲಿಹೋಗುವ ಬಗ್ಗೆ ಕಳವಳ ವ್ಯಕ್ತಪಡಿಸಿದ್ದರು ಈ ಹಿನ್ನೆಲೆಯಲ್ಲಿ ಬೋರ್ಡಿಂಗ್ ವ್ಯವಸ್ಥೆಯನ್ನು ನಿಲ್ಲಿಸುವ ಕಾರ್ಯಕ್ರಮವನ್ನು ಹಾಗೂ ಆ ಎಲ್ಲರಿಗೂ ಬೀಳ್ಕೊಡುವ ಸಮಾರಂಭವನ್ನು ಕಂತೋತಿ ಮಠದಲ್ಲಿ ನೆರವೇರಿಸಲಾಗಿತ್ತು. ಆ ಪ್ರಸಂಗದಲ್ಲಿ ಸಹಕರಿಸಿದ ಎಲ್ಲ ಕಾರ್ಯಕರ್ತರಿಗೂ, ಉದಾರದೇಣಿಗೆ ಇತ್ತವರಿಗೂ ವಿಶೇಷವಾಗಿ ಉಪಕರಿಸಿದ ಬಸಿರಿಗಿಡದ ವೀರಪ್ಪನಂಥವರನ್ನು ಮುಕ್ತಕಂಠದಿಂದ ಜಯದೇವಿಯವರು ಅಲ್ಲಿ ಸ್ಮರಿಸಿ ಕೃತಜ್ಞತೆ ಸಲ್ಲಿಸಿದ್ದರು. ಈ ರೀತಿ ತಾವು ಮುಂದಾಗಿ ಮಾಡಿದ ಸಮಾಜ ಕಾರ್ಯಗಳಲ್ಲಿ ಬೆಂಬಲಿಸಿದ ವ್ಯಕ್ತಿಗಳನ್ನು ಸ್ಮರಿಸದೆ ಇರುತ್ತಿರಲಿಲ್ಲ. ಜಯದೇವಿ ಯವರು ಇಂಥ ಮಾತುಗಳಿಂದ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಪ್ರೇರಣೆ ಪಡೆದು ಉತ್ತೇಜಿರಾದ ಅನೇಕರು ಸಮಾಜ ಸೇವೆಗೆ ಮುಂದೆ ಬರುತ್ತಿದ್ದುದನ್ನು ಇಲ್ಲಿ ಕಾಣಬಹುದಾಗಿದೆ.

## ನೇತ್ರದಾನ ಶಿಬಿರಕ್ಕೆ ಸಲ್ಲಿಸಿದ ಸೇವೆ

'ಜಯದೇವಿ ತಾಯಿ ಲಿಗಾಡೆ'ಯವರ ಸಾಮಾಜಿಕ ಸೇವೆ ಹಲವು ತೆರನಾಗಿದೆ. ಮಾನವೀಯ ಅಂತಃ ಕರುಣೆಯುಳ್ಳ ಅವರು ಎಲ್ಲ ತರದ ಸಾಮಾಜಿಕ ಸೇವೆಗಳಿಗೆ ಕಂಕಣಬದ್ಧರಾಗಿದ್ದರು. ಬಡವರ ಬಂಧು, ನೇತ್ರತಜ್ಞ, ದಾನಿಯೆಂದು ಹೆಸರು ವಾಸಿಯಾಗಿದ್ದ ಡಾ. ಮೋದಿಯವರು ಅನೇಕ ಕಡೆ ನೇತ್ರ ಶಿಬಿರಗಳನ್ನು ನಡೆಸಿದ್ದರು. ೧೯೫೭ರಲ್ಲಿ ೨ನೆಯ ಸಲ ಸೊಲ್ಲಾಪುರದಲ್ಲಿ ಶಿಬಿರವನ್ನು ಹಮ್ಮಿ ಕೊಂಡಿದ್ದರು. ಆ ಸಮಯದಲ್ಲಿ ಸಮಾಜಸೇವೆಗೆ ಬದ್ಧರಾಗಿದ್ದ ಜಯದೇವಿ ಯವರು ಸ್ಥಳೀಯ ಸಂಸ್ಥೆಗಳ ಪರವಾಗಿ ಮೋದಿಯವರಿಗೆ ಸಹಕರಿಸಲು ಮುಂದಾದರು.

ಸ್ಥಳೀಯರಲ್ಲದೆ ಹೈದ್ರಾಬಾದ್, ವಿಜಾಪುರ, ಗುಲ್ಬರ್ಗಾಗಳಿಂದ ಬಂದಿದ್ದ ರೋಗಿಗಳನ್ನು ಸ್ವತಃ ಜಯದೇವಿಯವರು ನಿಂತು ಸ್ವಾಗತಿಸುತ್ತಿದ್ದರು. ನೇತ್ರ ಶಿಬಿರದಲ್ಲಿ ಮುಂಜಾನೆ ಹಾಗೂ ಸಂಜೆಯ ಹೊತ್ತಿನಲ್ಲಿ ತಪ್ಪದೇ ಹಾಜರಿದ್ದುಕೊಂಡು ಶಿಬಿರಾರ್ಥಿಗಳಿಗೆ ಬೇಕಾದ ಸಹಾಯವನ್ನು ಮಾಡುತ್ತಿದ್ದರು. ಅಲ್ಲಿ ಬಂದವರು ಕಡು ಬಡವರೆಂದು ತಿಳಿದರೆ ಅಂಥವರಿಗೆ ಬೇಕಾದ ಇತರ ಸಹಾಯವನ್ನು ನೀಡುತ್ತಿದ್ರು, ಈ ೨ನೆಯ ಶಿಬಿರದ ವ್ಯವಸ್ಥೆಗಾಗಿ ಕಾರ್ಯಕಾರಿ ಮಂಡಳಿ ರೂಪಿತವಾದಾಗ ಜಯದೇವಿಯವರು ಅಧ್ಯಕ್ಷತೆ ವಹಿಸಬೇಕಾಯಿತು. ಶಿಬಿರಾರ್ಥಿಗಳಿಗೆ ಊಟ, ನೀರಿನ ವ್ಯವಸ್ಥೆಯನ್ನು ಇವರು ಉಚಿತವಾಗಿ ಒದಗಿಸಿದ್ದರು.

ಜಯದೇವಿಯವರು ಕರ್ತೃತ್ವ ಶಕ್ತಿಯಿಂದ ಹೆಚ್ಚು ವ್ಯಾಪಕವಾಗಿ ಜರುಗಿದ ಈ ನೇತ್ರದಾನ ಶಿಬಿರದಲ್ಲಿ ೪೦೫ ಶಸ್ತ್ರ ಚಿಕಿತ್ಸೆ ೩೦೦೦ ಕಾ.ಚ.ಬಿಂದು, ಮೇಕಲೆ ಬಿಂದು,

ಹೊತೆಗೆಯುವುದು, ಔಷದೋಪಚಾರಗಳು ನಡೆದವು. ಈ ಶಿಬಿರವು ಜಯದೇವಿಯರ ಸೇವಾ ದುರಂಧರತೆಯನ್ನು ಸಾಬೀತುಪಡಿಸಿತು ಎನ್ನುವುದರಲ್ಲಿ ಎರಡು ಮಾತಿಲ್ಲ.

ಈ ರೀತಿಯಲ್ಲಿ ಸ್ತ್ರೀ ಶಿಕ್ಷಣ ಮೊದಲುಗೊಂಡು ಸಾರ್ವಜನಿಕರಂಗದಲ್ಲಿಯ ವಿವಿಧ ಕ್ಷೇತ್ರಗಳಲ್ಲಿ ತಮ್ಮ ಸಹಾಯ, ಸಹಕಾರ, ಚಿಂತನ–ಮಂಥನಗಳಿಂದ ನಿಸ್ವಾರ್ಥವಾಗಿ ಸೇವೆ ಗೈದಿರುವ ಜಯದೇವಿಯವರ ಕಾರ್ಯವೈಖರಿ ಅನುಪಮವಾದುದು. ಅವರು ಸ್ತ್ರೀಯರ ನ್ಯಾಯಕ್ಕಾಗಿ, ಸ್ತ್ರೀ ಗೌರವ ರಕ್ಷಣೆಗಾಗಿ, ಸ್ತ್ರೀ ಸಮಾನತೆಗಾಗಿ ಕೈಗೊಂಡ ಯೋಜನೆಗಳು, ಮಹಿಳಾ ಪರಿಷತ್ತುಗಳಲ್ಲಿ ಮಾಡಿದ ಭಾಷಣಗಳು, ಅವರ ಸ್ತ್ರೀಪರ ಕಾಳಜಿ, ಹಾಗೂ ಜನಪರ ಚಿಂತನೆಗಳನ್ನೊಳಗೊಂಡ ಮಹಾನ್ ಸಾಧನೆ ಎನ್ನಬಹುದು.

## ಸಾಹಿತ್ಯಿಕ ಕ್ಷೇತ್ರದಲ್ಲಿ ಸಾಧನೆ

ಸೊಲ್ಲಾಪುರದಲ್ಲಿ ಹುಟ್ಟಿ ಬೆಳೆದ ಜಯದೇವಿಯವರು ತನ್ನ ತಾಯ್ನಾಡಿಯ ಮೇಲಿನ ಅಭಿಮಾನದಿಂದ ಸ್ವಪ್ರಯತ್ನಗಳಿಂದ ಕನ್ನಡವನ್ನು ಕಲಿತು ವಚನ ಸಾಹಿತ್ಯವನ್ನು ವಿಶೇಷವಾಗಿ ಅಧ್ಯಯನ ಮಾಡಿ, ತಾನು ಚಿಕ್ಕವಳಿದ್ದಾಗ ಒಡಮೂಡಿಸಿಕೊಂಡ ಜನಪದ ಸಾಹಿತ್ಯ ಸತ್ವವನ್ನು ತೆಗೆದುಕೊಂಡು ಕನ್ನಡ ಸಾಹಿತ್ಯದಲ್ಲಿ ಶ್ರೇಷ್ಠ ಕವಿಯತ್ರಿಯರಲ್ಲಿ ಒಬ್ಬರಾಗಿ ಮೆರೆದುಹೋದರು 'ಗಡಿಭಾಗ'ವೆಂದರು ಕಡಿಮೆಯಿಲ್ಲ ಕನ್ನಡಕೆ. 'ಉಡಿಯ ತುಂಬುವೆ ಪದಗಳ' ಎಂದು ಹಾಡುತ್ತ ಕನ್ನಡ ಸಾಹಿತ್ಯಕ್ಕೆ ಗಣನೀಯವಾದ ಕೊಡುಗೆ ನೀಡಿದರು. ವಿಶಾಲವಾದ ಜೀವನಾನುಭವ ಸಾಮಾಜಿಕ ಕಳ ಕಳಿ, ಕನ್ನಡಾಭಿಮಾನ, ಶರಣ ಜೀವನ ಜಯದೇವಿಯವರ ಕಾವ್ಯಾಭಿವ್ಯಕ್ತಿಯ ಪ್ರೇರಣೆಗಳಾಗಿದ್ದು, ಅವಳ ಕವಿ ಹೃದಯವು ಸಾಮಾಜಿಕ ತಳಮಳದ ಪರಿಸರ ದೊಂದಿಗೆ ಆ ಧೋರಣೆಗಳನ್ನು ಅನುಭವಕ್ಕೆ ಅಳವಡಿಸಿಕೊಂಡು ಅಭಿವ್ಯಕ್ತ ಗೊಳಿಸಿದೆ. ಜಯದೇವಿಯವರ ಕೃತಿಗಳ ವಸ್ತು ವೀರಶೈವ ಸಾಹಿತ್ಯಕ್ಕೆ ಮೀಸಲು ಎನಿಸಿದರೂ ಅದು ಕೇವಲ ಧರ್ಮ ಹಾಗೂ ತತ್ವಗಳ ಪ್ರಚಾರಕ್ಕಾಗಿಯೇ ನಿರ್ಮಿತಗೊಂಡಿಲ್ಲ. ಆ ಸಾಹಿತ್ಯದಲ್ಲಿ ಜಯದೇವಿಯವರ ತಾತ್ವಿಕ ನೆಲೆಗಳು, ವೀರಶೈವ ಸಿದ್ಧಾಂತ, ಸಾಹಿತ್ಯದ ನೆಲೆ ಹಾಗೂ ಕನ್ನಡಿಗರ ಜನಜೀವನದ ವೈವಿಧ್ಯ ವಿಶೇಷವಾಗಿ ಜನಪದ ಸಂಸ್ಕೃತಿ ಹಾಸು ಹೊಕ್ಕಾಗಿ ಹರಿದಿದೆ.

ಜಯದೇವಿಯವರು ಕನ್ನಡ ಹಾಗೂ ಮರಾಠಿ ಭಾಷೆಗಳೆರಡರಲ್ಲೂ ಕೃತಿಗಳನ್ನು ರಚಿಸಿದ್ದಾರೆ. ಅವರ ಕನ್ನಡ ಕೃತಿಗಳು ಹೀಗಿವೆ.

೧. ಜಯಗೀತ (೧೯೩೨)

೨. ತಾಯಿಯ ಪದಗಳು (೧೯೩೯)

೩. ಶ್ರೀ ಸಿದ್ಧರಾಮ ಪುರಾಣ (೧೯೬೫)

೪. ತಾರಕ ತಂಬೂರಿ (೧೯೬೮)

೫. ಬಂದೇವು ಕಲ್ಯಾಣಕೆ (೧೯೮೨)

೬. ಸಾವಿರದ ಪದಗಳು (೧೯೮೬)

೭. ಅರುವಿನಾಗರದಲ್ಲಿ (ಸಂ)

ಅವರು ರಚಿಸಿರುವ ಮರಾಠಿ ಕೃತಿಗಳೆಂದರೆ.

೧. ಸಿದ್ಧವಾಣಿ

೨. ಬಸವದರ್ಶನ

೩. ಸಮೃದ್ಧ ಕರ್ನಾಟಕಾಂಚಿ ರೂಪ ರೇಷೆ

೪. ಮಹಾಯೋಗಿನಿ

೫. ಸಿದ್ಧರಾಮಾಂಚಿ ತ್ರಿವಿಧಿ

೬. ಬಸವ ವಚನಾಮೃತ

೭. ಶೂನ್ಯ ಸಂಪಾದನೆ

ಈ ಮರಾಠಿ ಕೃತಿಗಳಲ್ಲಿ 'ಕರ್ನಾಟಕಾಂಚಿ ರೂಪ ರೇಷಾ' ಕೃತಿಯನ್ನು ಬಿಟ್ಟು ಉಳಿದವುಗಳೆಲ್ಲ ಕನ್ನಡದ ಅನುವಾದ ಕೃತಿಗಳಾದರೂ ಅವುಗಳಲ್ಲಿ ಕೆಲಮಟ್ಟಿಗೆ ಜಯದೇವಿಯವರ ಸ್ವಂತಿಕೆ ಇರುವುದದನ್ನು ಅರಿಯಬಹುದು. ಕನ್ನಡ ಹಾಗೂ ಮರಾಠಿ ಎರಡೂ ಭಾಷೆಗಳಲ್ಲಿ ಸೊಗಸಾಗಿ ಬರೆಯಬಲ್ಲ ಸಾಹಿತಿ ಎನಿಸಿದ್ದಾರೆ. ಅವರ ಅಪ್ರಕಟಿತ ಕೃತಿಗಳ ಸಂಖ್ಯೆಯೂ ದೊಡ್ಡದಿದ್ದು, ಅದನ್ನು ಅನುಬಂಧದಲ್ಲಿ ನೋಡಬಹುದು.

ಜಯದೇವಿಯವರ ಜಯಗೀತ ತಾಯಿಯಪದಗಳು, ತಾರಕ ತಂಬೂರಿ, ಬಂದೇವು ಕಲ್ಯಾಣಕ ಹಾಗೂ ಸಾವಿರದ ಪದಗಳು ಕೃತಿಯಲ್ಲಿ ಸಮಕಾಲೀನ ಪರಿಸರ . ಆದರ್ಶ ವ್ಯಕ್ತಿಗಳ ಜೀವನ ಸಂದೇಶ ಕೌಟುಂಬಿಕ ಜೀವನ ಮತ್ತು ನೀತಿ ಬೋಧನೆಯೊಂದಿಗೆ ಆಧ್ಯಾತ್ಮಿಕ ಅನುಭವ ಮತ್ತು ಅವರ ಸಾಧನೆಯ ಹೆಜ್ಜೆಗಳನ್ನು ಗುರುತಿಸಬಹುದಾಗಿದೆ. 'ಜಯಗೀತವು' ಜಯದೇವಿಯವರ 'ಆತ್ಮಗೀತ'ದಂತಿದ್ದು ಅವರ ನಲವತ್ತು ವರ್ಷಗಳ ಜೀವನಾನುಭವವನ್ನು ತಿಳಿಸಲು ಪ್ರಯತ್ನಿಸಿದೆ. ಅಕ್ಕಮಹಾದೇವಿಯ ನಿಲುವು ಜಯದೇವಿಯರಿಗೆ ಆದರ್ಶವಾಗಿದ್ದು, ಲೋಕನಿಂದೆ, ಸ್ತುತಿಗಳ .ಬಗ್ಗೆ ಅವಜ್ಞೆ ಕಳೆದುಕೊಂಡು, ದಾನ ನೀಡುವ ತ್ಯಾಗ ಗೈಯುವ, ಪುಣ್ಯಗಳಿಸುವ ಬಯಕೆಯೊಂದಿಗೆ ಬಾಳುವ ಬಯಕೆಯನ್ನು ಇದು ಸೂಚಿಸುತ್ತದೆ.

ಆಧ್ಯಾತ್ಮ ಸಾಧನೆಯಕಡೆಗೆ ತುಡಿಯುವ ಜಯದೇವಿಯವರ ಮನಸ್ಸು ಆ ನೆಲೆಯಲ್ಲಿಯೇ ಚಿಂತನಗೈಯುತ್ತದೆ. ಆ ಅನುಭಾವದ ಅನೇಕ ಕವನಗಳು ಇಲ್ಲಿವೆ. ಕಿಡಿಯಿಂದ ಕಾಡು ಸುಡುವಂತೆ, ಕಡುತಾಪವೆಂಬ ಕಿಡಿಒಡಲ ಸುಡದಂತೆ

ಪ್ರಯತ್ನಿಸಬೇಕು. ಆತ್ಮಕ್ಕೆ ಮೋಸಮಾಡದೆ ಭ್ರಾಂತಿ ಬಿಟ್ಟು ಮನವೆಂಬ ಮಂಗವು ಚಂಚಲವಾಗಿ ಜಿಗಿದಾಡದಂತೆ ತಡೆಹಿಡಿಯುವ ಪರಿಯನ್ನು ಶರಣರಂತೆ ಪ್ರತಿಯೊಬ್ಬರು ಅನುಸರಿಸಿ ನಡೆಯಬೇಕು. ಮನುಷ್ಯನಲ್ಲಿ ಬೇರು ಬಿಟ್ಟು ನಿಲ್ಲುವ ಅಣವ, ಕಾರ್ಮಿಕ ಹಾಗೂ ಮಾಯಮಲಗಳನ್ನು ಮೀರುವ ರೀತಿ ಅರಿತುಕೊಂಡು, ಭವರೋಗಕ್ಕೆ ಪ್ರತಿಯೊಬ್ಬರು ತಮಗೆ ತಾವೇ ಔಷಧಿಯನ್ನು ಕಂಡುಕೊಳ್ಳಬೇಕೆಂದು ತಿಳಿಸುವುದು, ಹಲವು ಕವನಗಳ ವಸ್ತು. ಶರಣರ ಶಿವತತ್ವಗಳ ತಿಳಿ ಬೆಳಗಿನಲ್ಲಿ ತಿಳಿಬಾಳು ನಡೆಸಲು ಹವಣಿಸುವ ಕವಿಯತ್ರಿಯ ಆಶಾಭಾವನೆಯು ಇಲ್ಲಿಯ ಅನೇಕ ಕವನಗಳಲ್ಲಿ ಒಡಮೂಡಿ ನಿಂತಿದೆ.

'ಇಳೆಯಲ್ಲಿ ಇಳಿತಂದು ರವಿತೇಜ ಬೆಳಗಿದಂತೆ ಮಹಾಬೆಳಗಿನ ಬೆಳಗು ಅಂಗೈಯ ಲಿಂಗವಾಗಿ ಬಂದಾಗ' ಮನವು ಘನವಾಗಿ ಆತನ ನೋಟದ ಕಾಂತಿ ಕವಿಯತ್ರಿಗೆ ಸಹಜವಾಗಿ ಶಾಂತಿ ಸಮಾಧಾನ ತರುತ್ತದೆ. ಆಗ ಅವರು 'ಮನವೆಂಬ ನಿರ್ಮಲ ಜಲ, ವಿನಯದುಡುಗೊರೆ, ಚಿದ್ಭಸಿತ, ಹೃದ್ಗ್ರಂಥ, ಸಾಧನೆಯ ಅಕ್ಷತೆ, ತ್ರಿಗುಣಗಳ ಪತ್ತುರಿ, ಕರಣಂಗಳೆಂಬ ಕುಸುಮ, ತಾಪತ್ರಯಗಳ ಹುಡಿಮಾಡಿದ ದೂಪ, ಆರು ಸುತ್ತಿನ ಬತ್ತಿ, ವಿಮಲ ಕರ್ಪುರದಾರತಿ, ಸುಮನ, ಸತ್ ಶೀಲಗಳನ್ನು ಒಗ್ಗೂಡಿಸಿ ತಂದು ಅಂಗೈಯಲ್ಲಿರುವ ದೇವನಿಗೆ ಅರ್ಪಿಸಿ ಸಂತೋಷಪಟ್ಟಿದ್ದಾರೆ. ಇಲ್ಲಿ ಇಂಥ ಲಿಂಗ ಸಹಚರ್ಯೆಯಲ್ಲಿ ಚರಾಚರಗಳನ್ನೊಲ್ಲದೆ, ಇಹಪರಗಳನ್ನೊಲ್ಲದೆ, ಭಾವ – ನಿರ್ಭಾವವ ಮೀರಿ, ಅಂಗ–ಮನ, ಭಾವ–ಪ್ರಾಣದ ಸಂಗಮವನ್ನೇ ಆ ಲಿಂಗದಲ್ಲಿ ಕಂಡಿದ್ದಾರೆ. ಆಗ ಮಾತು ಮೌನವಾಗಿ, ಒಳಹೊರಗೆಲ್ಲ ಆನಂದದ ಬೆಳಕು ಆವರಿಸಿ ನಿಂತಿರುವುದು ಎದ್ದು ಕಾಣುತ್ತದೆ.'

**'ಜಯಗೀತ'** ೪೦ ಕವನಗಳ ಸಂಕಲನ. ಅವರ ಭಕ್ತಿ, ಅಂತರಂಗದ ಹೋರಾಟ, ಅತೃಪ್ತಿಯನ್ನು ಹೆಚ್ಚಾಗಿ ಅಭಿವ್ಯಕ್ತಿಸುತ್ತವೆ. ಸಾಮಾಜಿಕ ಪ್ರಜ್ಞೆ ಹಾಗೂ ಸಾಂಸ್ಕೃತಿಕ ಬದುಕನ್ನು ಅಲ್ಲಲ್ಲಿ ಕಾಣಬಹುದಾದ ಈ ಕವನಗಳಲ್ಲಿ ರಾಜಕೀಯ ಪ್ರಜ್ಞೆಯೂ ಅಲ್ಲಲ್ಲಿ ಮಿಂಚಿ ಮಾಯವಾಗುತ್ತಿದೆ. ಈ ಕೃತಿಯನ್ನು ಜಯದೇವಿಯವರು ರಚಿಸುವ ಹೊತ್ತಿಗೆ ಅವರಿಗೆ ಸಿದ್ಧರಾಮನಲ್ಲಿ ಅಪಾರವಾದ ಭಕ್ತಿ ಬೆಳೆದು ಬಂದಿತ್ತು ಸಿದ್ದನ ಒಲುಮೆಗಾಗಿ ಅವನ ದರ್ಶನಕ್ಕಾಗಿ ಕಳವಳ ಪಟ್ಟಿದ್ದು, ಕಾತರಿಸಿದ್ದು, ಸ್ವಲ್ಪಲ್ಲ ಕುಳಿತರೆ ನಿಂತರೆ, ಉಂಡರೆ, ಉಟ್ಟರೆ, ಮಲಗಿದರೆ ಸಿದ್ಧರಾಮನದೇ ಹಂಬಲ 'ನಿನ್ನ ಮಂಗಳ ಮಹಿಮೆ! ನಿನ್ನ ಕರುಣೆಯ ಕಾಸಾರ, ಕವಲೊಡೆದು ಹರಿಯುತ್ತಿದೆ ಎನ್ನ ಮೇಲೆ" ಎಂಬ ನಂಬುಗೆ ವಿಶ್ವಾಸ ಅವರದು ಆದರೂ ಸಿದ್ಧರಾಮನ ದರ್ಶನಕ್ಕೆ ಅವರು ಕಾತರಿಸಿ ನಿಂತಿರುದನ್ನು –

ಸಿರಿವಂತರ ಕುವರಿ ಸಿರಿವಂತರ ಸತಿಯಾಗಿ
ಸಿರಿತನದ ಶೃಂಗಾರವೆಲ್ಲವನು ಭೋಗಿಸಿದೆ

ಸಿರಿತನ ದೊರೆಯತನ ಹಿರಿಯತನ ಎನ್ನನಾವರಿಸಿದೆ
ಶ್ರೀ ಲೋಲನ ದರ್ಶನವು ಒಮ್ಮೆ ಇಲ್ಲ

ಎಂಬಲ್ಲಿ ಹೇಳಿಕೊಳ್ಳುತ್ತಾರೆ ಆದರೂ ಜೀವನದ ತತ್ವಾರ್ಥಕ್ಕೆ ಅವರು ಬದ್ಧರಾಗಿ ನಡೆಯುವುದನ್ನು ಮರೆಯಲಾಗದು.

ಇರುವ ಹೊಣೆಗಳ ಮರೆತು
ಬರುವ ಭವಣೆಗಳ ಎಣಿಸಿ
ದಣಿಯದಿರು ಮನವೇ
ನೋವಿಗಿಂತಲು ನೆನೆಹು ತಾ ಭೀಕರ

ಬದುಕಿನ ಮತಿತಾರ್ಥವನ್ನು ಕಟ್ಟಿಕೊಡುವುದು ಈ ಸಾಲುಗಳು. ಬರುವುದನ್ನು ನೆನೆದು ದುಃಖ ಪಡುವುದೋ ಸಂತೋಷಪಡುವುದೋ, ಮಾನವನ ಸ್ವಭಾವ. ಹಿಂದಿನದನ್ನು ನೆನೆದು ಅಳುವವರು ಕೆಲವರಿದ್ದರೆ, ಸಂತೋಷಗೊಳ್ಳುವವರು ಹಲವರು. ಆದರೆ ಇವರೆಲ್ಲ ಈಗ ಬದುಕಲು ಬಾರದವರು ಈ ಕ್ಷಣದಲ್ಲಿ ಬದುಕಲು ಕಲಿಯದೇ ಬಹಳ ಜನ ಕೆಟ್ಟಿದ್ದಾರೆ. ಇಲ್ಲಿ 'ಜಯದೇವಿ'ಯವರು ಈ ಬದುಕಿನ ತತ್ವವನ್ನು ಅರ್ಥಪೂರ್ಣವಾಗಿ ಕಾವ್ಯಮಯವಾಗಿ ಹೇಳಿದ್ದನ್ನು ಅರಿಯಬಹುದು.

ಇಂದಿನ ಸಂದರ್ಭದಲ್ಲಿರುವ ಹೊಣೆ ಮರೆತರೆ ಸರ್ವನಾಶ, ಬವಣೆಗಳ ನೆನೆಯುತ್ತಿದ್ದರೆ ಕಾಲಹರಣ, ನೋವಿಗಿಂತ ನೆನಪು, ತಾ ಭೀಕರ ಎನ್ನುವಲ್ಲಿ ಕಟು ಸತ್ಯವಿದೆ. ನೋವು ಈಗ ಈ ನಿಮಿಷ ಅನುಭವಿಸಬಹುದು, ಆದರೆ ಬರುವ ನೋವನ್ನು ನೆನೆಯುವುದು ಭೀಕರ. ಜೀವನವನ್ನು ಸರಿಯಾಗಿ ತಿಳಿದಿರುವ ಜಯದೇವಿ ತಾಯಿಯವರಿಂದ ಇಂಥ ಭಾವಗಳು ಮೂಡಲು ಸಾಧ್ಯವೆಂಬುದನ್ನು ತಿಳಿಯಬಹುದು, ಯಾಕೆಂದರೆ ಜಯದೇವಿಯವರು ಕಾವ್ಯವನ್ನು ಜೀವನದಿಂದ ದೂರ ಇರಿಸಿಲ್ಲ. ಅವರ ಜೀವನದ ಬಹುಭಾಗ ಕಾವ್ಯವಾಗಿ ಬಂದಿರುವುದನ್ನು ಕಾಣುತ್ತೇವೆ. ಜಯಗೀತದ ಅನೇಕ ಕವನಗಳು ವೈವಿಧ್ಯಮಯವಾಗಿದ್ದು ಜಯದೇವಿತಾಯಿಯವರ ಬದುಕಿನ ಅನುಭವವನ್ನು ದಾಖಲಿಸಿವೆ.

ಟಿ. ಸಿದ್ದಲಿಂಗಯ್ಯನವರು ಹೇಳಿರುವಂತೆ 'ಜಯಗೀತೆ'ಯು ಮುಮುಕ್ಷುವಿನ ಅನುಭಾವಗಳ ಪ್ರತಿಬಿಂಬವೆಂದು ನನಗೆ ಅನಿಸುತ್ತಿದೆ. ನಲವತ್ತು ಕವನಗಳಿವೆ ಪ್ರತಿಯೊಂದರಲ್ಲಿ ಜೀವನು ಆತ್ಮಪ್ರಕಾಶ ಹೊಂದಲು ಮಾಡುತ್ತಿರುವ ಸಾಧನಾ ಕ್ರಮವನ್ನು ವ್ಯಕ್ತಪಡಿಸುತ್ತದೆ. ಜೀವನ ಯಾತ್ರೆಯ ಮಾರ್ಗದಲ್ಲಿ ಉದ್ಭವಿಸುವ ಎಡರು ತೊಡರುಗಳಿಗೆ ಧ್ಯಾನ, ಭಕ್ತಿಜೀವನಗಳು ಪರಿಹಾರವೆಂಬುದನ್ನು ನಂಬಿ, ಸಾತ್ವಿಕ ಮತ್ತು ಸರಳ ಸ್ವಭಾವದಿಂದ ಸಾಧನೆಯನ್ನು ಮುಂದುವರೆಸುವಂತೆ

ಭಾಸವಾಗುತ್ತದೆ ಇದರಿಂದ ಆತ್ಮಮಾರ್ಗದಲ್ಲಿರುವ ಜೀವರುಗಳಿಗೆ ಆನಂದವಾಗುವುದಲ್ಲದೆ ಓದುಗರಿಗೂ ಸಹ ನವಚೈತನ್ಯ ಉಂಟಾಗುತ್ತದೆ ಎಂದಿರುವುದು ಸತ್ಯವಾದ ಮಾತು ಎನ್ನಬಹುದು.

'ಜಯಗಿತೆ'ಯ 'ಸೊಲ್ಲೇ ನನ್ನ ಕಾವ್ಯದ ಉಸಿರು ಮತ್ತು ನಾಂದಿ' ಎಂದಿರುವ ಜಯದೇವಿ ತಾಯಿಯವರು ಇಲ್ಲಿ "ನಾಲ್ವತು ವರುಷಗಳು" ಎಂಬ ಕೊನೆಯ ಕವನದಲ್ಲಿ

ವಯಸ್ಸಿಗೂ ಹೊಸತನ
ಎಷ್ಟೆಷ್ಟು ಹೊಸೆಯುವ ಹೊಸದಿನಗಳು
ಮನೆ ಮಾರು ಮೋಹ ಎನಗಿನಿತು
ಇಲ್ಲವು, ಕೀರ್ತಿ ಕನಕ ಸ್ವತ್ತೆಲ್ಲ ಸಾಕು
ಜೀವ ಕರ್ಮ ಕೇಡಿನ ತೊಡಕಿಲ್ಲ
ಉಳಿದಿಲ್ಲ ಈ ಮಾಯೆಗೆ ಒಳಗಾದೆನೆಂಬುದೆಲ್ಲ

ಎಂದು ಹೇಳಿರುವುದೇ ಅವರ 'ಜಯಗೀತ'ದ ಸೊಲ್ಲು. ಇದೊಂದು ಉತ್ತಮ ಕವನವೆನಿಸಿದೆ. ಒಟ್ಟಿನಲ್ಲಿ ಹೇಳಬಹುದಾದರೆ 'ಜಯಗೀತ'ವು ಭಾವಗೀತಗಳ ಸಂಕಲನವಾಗಿದ್ದು, ಆಗಾಗ ಕವಿಯತ್ರಿಯ ಭಾವನೆಗೆ ತಲುಪಿ, ಅವರ ಹೃದಯ ಮನೆ ಮೀಟಿ ಹೊರಬಂದಿರುವ ಇಂಚರದ ಗೀತೆಗಳಿವು. ತಾಯಿಯವರ ಸರಳ ಸುಮಧುರ ನವ್ಯಗೀತೆಗಳಂತಿರುವ ಇವು ತಮ್ಮ ಆಧ್ಯಾತ್ಮದ ಅನುಭಾವದಿಂದ ಸ್ಪರ್ಷಿತಗೊಂಡು ಜನಮನವನ್ನು ರಂಜಿಸುತ್ತಿವೆ, ಎನ್ನಬಹುದು.

**ತಾಯಿಯ ಪದಗಳು** – ೧೯೫೯ರಲ್ಲಿ ಈ ಕೃತಿ ಪ್ರಕಟಗೊಂಡಿತು, ಜಯದೇವಿಯವರು ಈ ಕೃತಿಯ ರಚನೆಗಾಗಲೇ ತ್ರಿಪದಿಯನ್ನು ಮೈಗೂಡಿಸಿಕೊಂಡಿದ್ದರು. ತಾಯಿಯ ಪದಗಳಲ್ಲಿ ಸಾವಿರ ತ್ರಿಪದಿಗಳಿವೆ ಇವು ಸಾವಿರದ ಪದಗಳು

'ಸಾವಿರ ನುಡಿಯ ಸರಳಗೊಳಿಸಿದೆನವ್ವಾ
ಸಾವೆಷ್ಟು ಅದಕ್ಕೆ ಬದುಕೆಷ್ಟು! ನಾನರಿಯೆ
ಸಾವು ಬದುಕಿನ ದೊರೆಗೆ ಧರಿಸೇನ'

ಎಂಬ ಪದ್ಯದಿಂದ ಆರಂಭಗೊಳ್ಳುವ ಇಲ್ಲಿಯ ಪದಗಳು ಸಾವು ಬದುಕಿನ ದೊರೆಗೆ ಧರಿಸಿದಂತವುಗಳು. ಹೀಗಾಗಿ ಇವುಗಳಿಗೆ ಸಾವು ಇರದ ಪದಗಳೆಂಬ ಹೆಸರು ಬಂದಿದೆ ಈ ತಾಯಿಯ ಸಾವಿರದ ಪದಗಳಲ್ಲಿ ವೈವಿಧ್ಯತೆ ತುಂಬಿ ತುಳುಕುತ್ತಿದೆ ಧರ್ಮ, ನೀತಿ, ದೇಶ, ದೇಶಭಕ್ತಿ, ಹೋರಾಟ, ಸ್ವಾತಂತ್ರ್ಯ, ಚರಿತ್ರೆ, ರಾಜಕಾರಣ, ಮುಂತಾದ ಹಲವು ಹತ್ತು ವಿಷಯಗಳು ಇಲ್ಲಿ ಅಡಕವಾಗಿವೆ. ಅಲ್ಲದೆ ಅರವತ್ತು ಮೂರು ಪುರಾತನರ ಚರಿತ್ರೆಗಳು ಈ ಪದ್ಯಗಳಲ್ಲಿವೆ. ತ್ರಿಪದಿಯ ಬಂಧ, ಲಯ,

ಗತ್ತುಗಳಲ್ಲಿ ಮೂಡಿ ನಿಂತಿರುವ ಇಲ್ಲಿಯ ಎಲ್ಲ ವಿಷಯಗಳು ಕಾವ್ಯಮಯವಾಗಿ ಬಂದಿದ್ದು, ಗಮನಾರ್ಹವಾಗುತ್ತವೆ.

ಜಯದೇವಿ ತಾಯಿಯವರು ಈ ಸಾವಿರ ಕಮಲಗಳನ್ನು ಶಿವಯೋಗಿ ಸಿದ್ಧರಾಮನಿಗೆ ಅನನ್ಯ ಭಕ್ತಿಯಿಂದ ಮುಡಿಸಿರುವರು

ಸಾವಿರ ದಳ ಕಮಲ ಶಿವಯೋಗಿ ಸಿದ್ಧಗ
ಭಾವಜೀವಿ ನಾ ಮುಡಿಸುವೆ
ಭಾವಜೀವಿ ನಾ ಮುಡಿಸುವೆ! ನೆನೆಯುವೆ
ಹೂವಿಗೆ ಪರಿಮಳವಿತ್ತ ಶರಣರಿಗೆ

ಎನ್ನುವ ಈ ತ್ರಿಪದಿಯಲ್ಲಿ ಅವರು ಮುಡಿಸುವ ಈ ಪುಷ್ಪಗಳಿಗೆ ಶಿವಶರಣರು ಪರಿಮಳವಿತ್ತಿರುವುದನ್ನು ಹೇಳಿರುವುದರೊಂದಿಗೆ ತನ್ನ ಕಾವ್ಯಶಕ್ತಿಯ ಹಿಂದಿನ ಚೇತನವನ್ನು ಸ್ಮರಿಸುತ್ತಿದ್ದಾಳೆ. ತಮ್ಮನ್ನು ಶಿವಶರಣರ ಪದತಲದಲ್ಲಿ ಲೀನವಾಗಿಸಿ ಕೊಂಡಿರುವ 'ತಾಯಿ' ಯವರು ಸಮರ್ಪಣ ಭಾವದವರು. ಶಿವನಲ್ಲಿ ಶಿವಯೋಗದ ಸಮರತಿಯನ್ನು ಪಡೆದ ಶಿವಶರಣರ ಸನ್ನಿಧಾನದಲ್ಲಿರುವುದೇ ಜಯದೇವಿ ತಾಯಿಯವರ ಹಿರಿಯಾಸೆ, ಅದರಲ್ಲೂ ಬಸವಣ್ಣನನ್ನು ಕುರಿತು,

ಬಾರಯ್ಯ ಬಸವಣ್ಣ ತೋರಯ್ಯ ನಿನ್ನ ದಾರಿ
ಬೀರಯ್ಯ ನಿನ್ನ ಶಿವತತ್ವ
ಬೀರಯ್ಯ ನಿನ್ನ ಶಿವತತ್ವ ಲೋಕದಿ
ಸಾರಯ್ಯ ನಿನ್ನ ಸಮಭಾವ'

ಎಂದು ಆ ವಿಶ್ವಗುರುವನ್ನು ಮೊರೆಹೊಕ್ಕು ಜಗತ್ತಿಗೆ ಮತ್ತೊಮ್ಮೆ ಬೆಳಕು ಚೆಲ್ಲಲು ಭಿನ್ನವಿಸುತ್ತಾರೆ ಹಾಗೆಯೇ ಅಕ್ಕಮಹಾದೇವಿ, ನೀಲವ್ವ, ಗಂಗವ್ವ, ದಾನಮ್ಮ, ಲಕ್ಕಮ್ಮ, ಮೀರಾಬಾಯಿ, ಜನಾಬಾಯಿ, ಸೊಲ್ಲಾಪುರದ ಶರಣೆ ರುದ್ರಮ್ಮನವರನ್ನೊಳಗೊಂಡು ಶಿವನಿಗೆ ಬೇಕಾದ ಎಲ್ಲ ಘನ ಮಹಿಮೆಯ ಮಹಿಳೆಯರನ್ನು ಅವರ ಕಾಯಕಗಳನ್ನು ಕೊಂಡಾಡಿ ತಮಗೆ ದಾರಿ ತೋರಲು ಕೇಳಿಕೊಳ್ಳುವುದನ್ನಿಲ್ಲಿ ಕಾಣುತ್ತವೇವೆ.

ಜೀವನದಲ್ಲಿ ಘನ ಆದರ್ಶಗಳನ್ನು ಇಟ್ಟುಕೊಂಡು ಜನತೆಗೂ ಅದೇ ಆದರ್ಶಗಳನ್ನೀಯುತ್ತಿರುವ ತಾಯಿಯವರು, ಕಲ್ಯಾಣದಲ್ಲಿ ಕ್ರಾಂತಿಯನ್ನೆಸಗಿ, ಕಾಯಕ ವೈಭವದಿಂದ, ದಯೆಯಿಂದ, ಅಹಿಂಸೆಯಿಂದ, ಜಾಗೃತಿ ಮೂಡಿಸಿದ ಅಲ್ಲಮಪ್ರಭು, ಅಂಬಿಗರ ಚೌಡಯ್ಯ ಮೊದಲಾದ ಎಲ್ಲ ಕಾಯಕದ ಶರಣರಿಗೂ ವಂದಿಸಿ, ಜಗತ್ತಿನಲ್ಲಿ ಸದ್ಭಾವ, ಸದ್ಧರ್ಮ, ಸದಾಚರಣೆಗಳು ಬೆಳೆಯುವಂತೆ ಅವರ ಸುಪ್ತ ಚೈತನ್ಯ ಸದಾ ದಾರಿದೀಪವಾಗಲೆಂದು ಬೇಡಿಕೊಳ್ಳುತ್ತಿದ್ದಾರೆ. ಅದರಲ್ಲಿ ಇತ್ತೀಚಿನ ಅಥಣಿಯ ಮುರುಘೇಂದ್ರ ಶಿವಶರಣರು, ಶಿಶುನಾಳ ಶರೀಫ ಮೊದಲಾದವರೂ ಸೇರಿದ್ದಾರೆ.

ಬದುಕಿನಲ್ಲಿ ಅಪಾರ ನಿರ್ಲಿಪ್ತತೆ ಹೊಂದಿದ್ದ ತಾಯಿಯವರ ಈ ಸಂಕಲನವು 'ಬಿಂಕಿನ ಮಾತಲ್ಲ ಕೊಂಕಿನ ನುಡಿಯಲ್ಲ, ಕಿಂಕರರ ಕೂಗು' ಆಗಿದೆ. ಶ್ರೀ ಬಾಳೇಶ ಲಕ್ಷೆಟ್ಟಿ ಅವರು "'ತಾಯಿಯ ಪದಗಳು' ಎಂಬ ಕವನ ಸಂಗ್ರಹವು ತುಂಬು ಜೀವನಾನುಭವಗಳಿಂದ ಪರಿಪಕ್ವಗೊಂಡ ಒಳ್ಳೆ ಕೃತಿ. ಮಹಿಳೆಯ ಜಾನಪದ ಶೈಲಿಯನ್ನು ಬಳಸಿಕೊಂಡು ಉತ್ತಮ ಗೀತೆಗಳನ್ನು ಬರೆಯಬೇಕೆಂಬುದಕ್ಕೆ ಉತ್ತಮ ಸಾಕ್ಷಿ. ಇಲ್ಲಿ ಜೀವನಾನುಭವಗಳ ಜೊತೆಗೂಡಿ ಅನುಭಾವವು ಹಾಸುಹೊಕ್ಕಾಗಿ ಬಂದಿವೆ" ಎನ್ನುತ್ತಾರೆ. ಒಟ್ಟಿನಲ್ಲಿ ಹೇಳುವುದಾದರೆ ಶ್ರೀಮತಿ ಕಮಲಾ ಹಂಪನಾ ಅಭಿಪ್ರಾಯ ಪಡುವಂತೆ "ಕನ್ನಡದಲ್ಲಿ ತಾಯಿಯ ಪದಗಳು ಮತ್ತೊಂದು ಮಂಕುತಿಮ್ಮನ ಕಗ್ಗ" ಎನ್ನುವುದು ಯೋಗ್ಯವಾದ ಮಾತೆನ್ನಬಹುದು.

**ತಾರಕ ತಂಬೂರಿ** – ೧೯೬೮ ರಲ್ಲಿ ಪ್ರಕಟವಾಗಿರುವ "ತಾರಕ ತಂಬೂರಿ" ೩೯ ಅನುಭಾವ ಗೀತೆಗಳ ಸಂಕಲನ. ಈ ಹಿಂದೆ ಹನ್ನೆರಡನೆಯ ಶತಮಾನದಲ್ಲಿ ಶರಣರ ವಚನಗಳೊಂದಿಗೆ ಹಾಡುಗಳನ್ನು ರಚಿಸಿದ್ದರು. ರಾಗ ತಾಳಗಳೊಂದಿಗೆ ಪ್ರಕಟಗೊಂಡಿರುವ ಈ ಕೃತಿಯು ಭಾವಪೂರ್ಣವಾಗಿದೆ.

ಕುಂಬಳ ಬಳ್ಳಿಯ ತುಂಬೆಲ್ಲ ಕುಂಬಳ
ತುಂಬುಚ್ಚಿ ಕಡಿಯಾಕ ಆಗಿಲ್ಲ । ಕುಂಬಳ
ತಂಬೂರಿಯಾಗಿ ನುಡಿದೀತ.

ಎಂಬುದು ಈ ಕೃತಿಯಲ್ಲಿ ತಾಯಿಯವರೇ ಹೇಳಿದ ಪದ್ಯವಿದು. ಡಾ॥ ಡಿ.ಎಸ್. ಕರ್ಕಿಯವರು "ತಾರಕ ತಂಬೂರಿ ತಾಯಿ ನುಡಿದ ಅನುಭವ ಪದಗಳ ಸಂಕಲನ ಅವರ ಕವನಗಳಲ್ಲಿ ನಿರ್ಭರ ಭಕ್ತಿ ವ್ಯಕ್ತವಾಗಿದ್ದರೆ ಇನ್ನೂ ಕೆಲವುಕಡೆಗಳಲ್ಲಿ ಅನುಭವ ಅನುಭಾವಕ್ಕೆ ತಿರುಗಿ ಸ್ವರಗೈದಿದೆ ಇವೆರಡೂ ಗುಣಗಳು ಶೃತಿಗೂಡಿದ ಪದಗಳು ತಾರಕ ತಂಬೂರಿಯಲ್ಲುಂಟು" ಎಂದಿದ್ದಾರೆ.

ಸಹಜವಾಗಿ ತಾಯಿಯವರು ಆಗಾಗ ಹಾಡಿರುವ ಇವು ಅಂತಃಕರಣದಲ್ಲಿ ಸಿದ್ಧರಾಮನ ಕರುಣೆ ತುಂಬಿ ತುಳುಕಿದಾಗ ಹೊಮ್ಮಿ ಬಂದ ಭಾವಗೀತೆಗಳು. ಹೃದಯ ತಂಬೂರಿಯನ್ನು ಮೀಟಿದಾಗ ಮೂಡಿದ ನಾದ ತರಂಗಗಳಿಗೆ ಸಹಜತೆಯೇ ಜೀವನಾಡಿ. ಅವುಗಳ ಅಂತರಂಗದಲ್ಲಿ ಜಯ ಸಿದ್ಧರಾಮನ ಅಪರಿಮಿತ ಮಮತೆ ವಾತ್ಸಲ್ಯದ ಭಾವನೆಗಳಿವೆ. ಓದುಗರನ್ನು ಅವು ಸಹಜಯೋಗದ ಸಾಧನೆಯ ನಿಲುವಿನತ್ತ ಕರೆದೊಯ್ಯುತ್ತವೆ ಎನ್ನಲಾಗುತ್ತದೆ.

'ತಾರಕ ತಂಬೂರಿ'ಯನ್ನು ನುಡಿಸುವ ಉದ್ದೇಶ 'ಇರುವಿನ ಅಂಬುಧಿ ದಾಟಿಸುವ ತಾರಕನ' ನೆನೆಸುವುದು. ಸಿದ್ಧರಾಮನ ನಾಮಸ್ಮರಣೆಯೂ ಹೌದು; ಹಾಗೂ ತಾರಕ ತಂಬೂರಿಯೂ ಹೌದು. 'ತಾರಕ ತಂಬುರಿಯ ನಾನದಕೆ ನುಡಿಸುವೆ ತಾರಕ ತಂಬೂರಿಯೆ ಗುರುವಿನ ಅಗಣಿತ ಮಹಿಮೆಯ ಸಾರುವೆ, ತಾರ

ತಂಬೂರಿಯೆ॥' ಎನ್ನುವಲ್ಲಿ ಹೃದಯ ಸ್ಪರ್ಷಿಯಾದ ನಿರೂಪಣೆಯಿದೆ. ಇದರೊಂದಿಗೆ ಇಲ್ಲಿ ಬದುಕಿನ ಗೋಳು, ತಳಮಳಗಳು, ಜೀವನವನ್ನು ಶುದ್ಧಗೊಳಿಸುವ, ಸಿದ್ಧಿಸುವ, ಸಾಧನೆಗಳು, ಬಾಳಿನ ಕರುಣೆಯ ರಕ್ಷೆ, ಪ್ರಾಣಕ್ಕೆ ಸಿದ್ಧನ ದೀಕ್ಷೆ ಇವೆಲ್ಲವುಗಳನ್ನು ಕಾಣಬಹುದು.

ಈ ತಾರಕ ತಂಬೂರಿಯಿಂದ ಕರ್ನಾಟಕದ ಅನುಭವ ಪದಗಳ ದಿವ್ಯ ಪರಂಪರೆಯನ್ನು ಜಯದೇವಿಯರು ಸಚೇತನಗೊಳಿಸಿದ್ದಾರೆಂದು ಹೇಳಬಹುದು. ತಾವು ರಚಿಸಿರುವ ಪದ್ಯಗಳನ್ನು ತುಂಬಾ ಸುಶ್ರಾವ್ಯವಾಗಿ ಹಾಡುವ ಕಲೆಯನ್ನು ಕರಗತಗೊಳಿಸಿಕೊಂಡಿರುವ ತಾಯಿಯವರು 'ಭಕ್ತಕವಿ'ಯಾಗಿ ಸಿದ್ದರಾಮನ ಸೊನ್ನಲೆಗೆಯ ನೆಲ ಜಲವನ್ನು ಪಾವನಗೊಳಿಸಿದ್ದಾರೆ ಎನ್ನಬಹುದು.

**ಸಿದ್ದರಾಮ** – ಐ.ಬಿ.ಎಚ್. ಪ್ರಕಾಶನದವರು ಪ್ರಕಟಿಸಿರುವ 'ಸಿದ್ದರಾಮ' ಎಂಬುದು ಚಿಕ್ಕ ಹೊತ್ತಿಗೆ ತಿಳಿಯಾದ ಭಾಷೆ, ಮೋಹಕ ಶೈಲಿ, ಲೀಲಾಜಾಲವಾಗಿ ಓದಿಸಿಕೊಂಡು ಹೋಗಬಲ್ಲ ಕೃತಿಯಿದು. 'ಸಿದ್ದರಾಮ' ನ ಕುರಿತಾದ ಈ ಕೃತಿಯು ಅಂದವಾಗಿ ಪ್ರಕಟಗೊಂಡಿದೆ. ೬೨ ಪುಟದ ಈ ಪುಸ್ತಕದಲ್ಲಿ ಸಿದ್ದರಾಮನ ಚರಿತೆಯನ್ನು ಮಕ್ಕಳಿಗೆ ತಿಳಿಯುವಂತೆ ಚಿತ್ರಿಸಿದ್ದಾರೆ. ಸರಳ ಶೈಲಿಯ ಗದ್ಯದಲ್ಲಿ ಮೂಡಿರುವ 'ಸಿದ್ದರಾಮ'ನ ಕೃತಿಯಿಂದ ಮಕ್ಕಳ ಮನಸ್ಸನ್ನು ಚೆನ್ನಾಗಿ ಅರಿತಿರುವ ಮಹಿಳೆ ಉತ್ತಮ ಸಾಹಿತ್ಯ ಸೃಷ್ಟಿಸಬಲ್ಲಳು ಎಂಬುದನ್ನು ನಿರೂಪಿಸಿದಂತಿದೆ.

ಸಹಜತೆ, ಸರಳತೆ, ಸುಲಭತೆ, ಮಾರ್ಮಿಕತೆ ತಾಯಿಯವರು ಇಲ್ಲಿ ಅನುಸರಿಸಿದ ಪದ್ಧತಿ. ಜೀವನದ ಪಥದಲ್ಲಿ ಸದಾ ಸರಳ ಮಾರ್ಗ ಅನುಸರಿಸುವ ತಾಯಿಯವರು ಸಾಹಿತ್ಯ ಮಾರ್ಗದಲ್ಲಿಯೂ ಅದನ್ನೇ ಇರಿಸಿಕೊಂಡಿದ್ದಾರೆ, ಸಿದ್ದರಾಮೇಶ್ವರ ಪುರಾಣದುದ್ದಕ್ಕೂ ಬೆಳೆದು ಬಂದ ಮುಖ್ಯ ಘಟನೆಗಳನ್ನು ಆರಿಸಿ ಕೊಂಡು, ಅವುಗಳಿಗೊಂದು ಹೊಸ ರೂಪಕೊಟ್ಟು ಸಿದ್ದರಾಮನ ಜೀವನವನ್ನು ಐತಿಹಾಸಿಕ ದೃಷ್ಟಿಯಿಂದ ಇಲ್ಲಿ ಕಾಣಿಸಿರುವುದು ಈ ಕೃತಿಯ ವೈಶಿಷ್ಟ್ಯವೆನ್ನಬಹುದು. ಪುರಾಣ ಪ್ರಿಯ, ವಿಷಯಗಳಾದ ಕೈಲಾಸ ವರ್ಣನೆ, ಸುಗ್ಗಲದೇವಿ, ಮುದ್ದುಗೌಡರ ಭೂಲೋಕ ಜನನ, ಅಂಧಕಾಸುರ ರಕ್ಕಸ ವಧೆ, ರೇವಣ ಸಿದ್ದರ ಸಾಧನೆ ಸಿದ್ಧಿ, ಅನೇಕ ಗಂದರ್ವರ ಶಾಪವಿಮೋಚನೆ, ಕಲ್ಯಾಣದಲ್ಲಿ ಜರುಗಿದ ವಾದ–ವಿವಾದದಂತಹ ಪ್ರಸಂಗಗಳನ್ನು ಕೈ ಬಿಟ್ಟು ವಿಚಾರ ಪ್ರಿಯವಾದ ಸಿದ್ದರಾಮನ ಐತಿಹಾಸಿಕತೆಗೆ ಒತ್ತು ಕೊಟ್ಟು ರಚಿಸಿರುವುದು ಇದರ ಸಹಜತೆಗೆ ಸಾಕ್ಷಿಯಾಗಿದೆ.

**ಸಾವಿರದ ಪದಗಳು:** ೧೯೮೬ರಲ್ಲಿ ಸಂಕಲನಗೊಂಡ ಕೃತಿ ತ್ರಿಪದಿಗಳಲ್ಲಿ ಹುಟ್ಟು ಪಡೆದ ಜಾನಪದ ದಾಟಿಯ ಕವನ ಸಂಕಲನ ಇದಾಗಿದ್ದು, ದೈವ, ಶಿವಶರಣ–ಶರಣೆಯರು ಹಾಗೂ ಸಂಕೀರ್ಣ ಪದ್ಯಗಳೆಂದು ಇಲ್ಲಿಯ ಸಾವಿರ ಪದಗಳನ್ನು ವಿಭಜಿಸಿ ಅಧ್ಯಯನ ಮಾಡಿಕೊಳ್ಳಬಹುದು.

ದೈವೀ ಭಾವಕ್ಕೆ ಸಂಬಂಧಿಸಿದ ಪದಗಳಲ್ಲಿ ಅದಿಲಿಂಗ, ಗಣಪತಿ, ತಿರುಪತಿ, ಚಾಮುಂಡೇಶ್ವರಿ, ಭುವನೇಶ್ವರಿ, ಶ್ರೀಶೈಲ, ಮಾಣಿಕಗಿರಿ ಮೊದಲಾದ ಪುಣ್ಯಕ್ಷೇತ್ರಗಳಿಂದ ಪಡೆದ ದರ್ಶನಾನುಭವವು ತ್ರಿಪದಿಯಾಗಿ ಮೂಡಿ ನಿಂತಿದೆ ಶರಣರನ್ನು ಕುರಿತ ರಚನೆಗಳಲ್ಲಿ ಬಸವಣ್ಣ, ಶರಣಬಸವೇಶ್ವರ, ವೀರೇಶ್ವರ ಶರಣರು ಮಾದಾರ ಚೆನ್ನಯ್ಯ, ಗೊಗ್ಗಯ್ಯ, ಕಿನ್ನರಿ ಬೊಮ್ಮಯ್ಯ, ಷಡಕ್ಷರಿಕವಿ, ಮಹಾಂತ ಶಿವಯೋಗಿಗಳು, ಅರಭಾವಿ ಅಜ್ಜ ಮೊದಲಾದ ಶರಣರ ವ್ಯಕ್ತಿತ್ವ ಸಾಧನೆಗಳನ್ನು ವಿವರಿಸಲಾಗಿದೆ. ಶರಣೆಯರಲ್ಲಿ ಅಕ್ಕಮಹಾದೇವಿ, ರುದ್ರಾಂಬಿಕೆ, ದಾನಮ್ಮ ಕೆಮ್ಮವ್ವೆ, ನೀಲಮ್ಮ, ಮುಕ್ತಾಯಕ್ಕ, ಸತ್ಯಕ್ಕ, ಅಕ್ಕ ನಾಗಮ್ಮ ಮುಂತಾದವರ ಕುರಿತ ಅನುಭವ ಹೊರ ಹೊಮ್ಮಿವೆ. ಇಲ್ಲಿಯ ಇನ್ನೊಂದು ಭಾಗದಲ್ಲಿ ಹಂತಿಯ ಪದಗಳ ಸಂಗ್ರಹವೂ ಇದೆ. ಅನೇಕ ವಿಭಿನ್ನ ವಿಷಯಗಳನ್ನು ಕುರಿತು ತ್ರಿಪದಿಗಳಿವೆ. ಭಾರತಾಂಬೆಯ ಕೂಗು, ಗಾಂಧೀಜಿ , ಅಖಂಡ ಭಾರತ, ರಾಷ್ಟ್ರ ಪ್ರೇಮ, ಭಾವೈಕ್ಯತೆ. ಮುಂತಾದ ವಿಷಯಗಳು ತ್ರಿಪದಿಗಳಾಗಿ ಪರಿವರ್ತನೆಗೊಂಡಿರುವುದು 'ಸಾವಿರ ಪದಗಳು' ಕೃತಿಯ ವೈಶಿಷ್ಯವೆನ್ನಬಹುದು.

ತಾಯಿಯವರ ಮಾತೃಪ್ರೇಮ ಅನುಪಮವಾದುದು, ತಾಯಿ ಸಂಗವ್ವನವರ ಬದುಕಿನ ಕೊನೆಯ ದಿನಗಳು, ಅವರು ಜೀವನುದುದ್ದಕ್ಕೂ ಸಾಧಿಸಿದ ಮಹಾ ಸಾಧನೆ, ಈ ಕವನಗಳಲ್ಲಿವೆ. ಬರಗಾಲ, ಶಿವಮೊಗ ಅರಳಿದೆ, ಗಾಂಧೀಜಿ, ಇತ್ಯಾದಿ ವಿಷಯಗಳು ತಾಯಿಯವರ ಮನಸೆಳೆದಿದೆ

ಕನ್ನಡ ತಾಯಿ ನುಡಿ । ಮನ್ನಿಸಿ ಮಾತನಾಡು
ಅನ್ಯಕ್ಕೆ ಮರುಳಾಗದಿರು । ಮರುಳೇ ನೀ
ಕನ್ನಡಿಗನೆಂಬುದು ಮರಿಬೇಡ

ಎಂದು ಕೊನೆಯಲ್ಲಿ ತಾಯಿಯವರು ಕನ್ನಡಿಗರಿಗೆ ಮಹತ್ವದ ಉಪದೇಶ ನೀಡಿದ್ದಾರೆ. ಹೀಗೆ ಈ ಸಂಕೀರ್ಣದ ಪದಗಳಲ್ಲಿ ೧೯೭೦ರಿಂದ ಪ್ರಾರಂಭವಾದ ವಿಭಿನ್ನ ವಿಷಯಗಳ ತ್ರಿಪದಿಗಳಿದ್ದು 'ಸಾವಿರ ಪದಗಳು' ಕೊಡದಲ್ಲಿ ತುಂಬಿಕೊಂಡು ಅನುಭಾವ ಪೂರ್ಣ ಕವನಗಳೆನಿಸಿವೆ.

## ಅರುವಿನಾಗರದಲ್ಲಿ

೧೯೯೦ರಲ್ಲಿ ಪ್ರಕಟವಾದ ಈ ಕೃತಿಯಲ್ಲಿ ತಾಯಿಯವರ ೧೪೪೭ ತ್ರಿಪದಿ ಸಂಗ್ರಹದ ೧೦ ಶರಣರ ಗೀತಗುಚ್ಛಗಳಿವೆ. ಜಯದೇವಿ ತಾಯಿಯವರ ಅನನ್ಯ ಭಕ್ತಿಯ ಫಲವಾಗಿ ಬೆಳಕಿಗೆ ಬಂದಿರುವ ಇದು ಅವರು ಲಿಂಗೈಕ್ಯರಾದ ನಂತಗ ಪ್ರಕಟವಾಗಿದೆ. ಹಿರಿಯ ಸಾಹಿತಿ ಡಾ॥ ಸಾ.ಶಿ. ಮರುಳಯ್ಯನವರು ಸುಂದರವಾಗಿ ಸಂಪಾದಿಸಿರುವ ಇದು ತುಂಬಾ ಮಹತ್ವಪೂರ್ಣ ಕೃತಿಯೆನಿಸಿದೆ.

ತ್ರಿಪದಿ ಕನ್ನಡಿಗರ ಪರಂಪರಾನುಗತವಾಗಿ ಬಂದ ಆಸ್ತಿ. ಈ ತ್ರಿಪದಿಯ ಸಾಮರ್ಥ್ಯವನ್ನು ಇನ್ನೊಮ್ಮೆ ಈ ಶತಮಾನದಲ್ಲಿ ಕಾಣಿಸಿದವರು ಜಯದೇವಿ ತಾಯಿ ಲಿಗಾಡೆಯವರು. ಕನ್ನಡ ಹೆಣ್ಣಿಗೆ ಚಿರಪರಿಚಿತವಾದ ಈ ತ್ರಿಪದಿ ಮಟ್ಟು ತಾಯಿಯವರಿಗೆ ಸಿದ್ಧಿಸಿ ಮಹಾಕಾವ್ಯವಾಗಿ, ಬಿಡಿ ಪದ್ಯಗಳಾಗಿ, ಸುದೀರ್ಘ ಕಾವ್ಯದ ಮಟ್ಟಾಗಿ ಸೃಷ್ಟಿಗೊಂಡಿದೆ. ಮೂಲತಃ ಅನುಭಾವಿಗಳಾದ ತಾಯಿಯವರು ಸಿದ್ಧರಾಮನ ದಿವ್ಯದರ್ಶನ ಪಡೆದವರು, ತಮ್ಮ ಅನುಭಾವ ಪ್ರಪಂಚದಲ್ಲಿಯ ಭಕ್ತಿ-ಭಗವಂತನ ಅವಿನಾಭಾವ ಸಂಬಂಧವನ್ನು ಕುರಿತು ಹಾಡಿಕೊಂಡವರು. ಅಂಥ ದಿವ್ಯಜ್ಞಾನದ ಆಕರ ತಾಯಿಯವರ ಅರುವಿನಾಗರ.

ಇದು ವೀರಶೈವ ಧರ್ಮದ ತಾತ್ವಿಕ ಅಂಶಗಳನ್ನೊಳಗೊಂಡ ಕೃತಿ. ಅದರಲ್ಲಿ ತಾತ್ವಿಕ ಸಿದ್ಧಾಂತ ಮತ್ತು ಆಚರಣೆಯ ಮಾರ್ಗದರ್ಶನಗಳೆರಡರ ಸುಂದರ ಸಮನ್ವಯವಿದೆ. ಕವಯಿತ್ರಿಯ ಆಧ್ಯಾತ್ಮಿಕ ವಿಕಾಸದ ತಳಹದಿಯನ್ನು ವ್ಯಕ್ತಪಡಿಸುವ ಷಟ್‌ಸ್ಥಲ ವೀರಶೈವ ಸಾರಸರ್ವಸ್ವವನ್ನು ಒಳಗೊಂಡಿದೆ. ಭಕ್ತಿ-ಜ್ಞಾನ-ಕ್ರಿಯೆಗಳ ಸಂಗಮವಿದು. 'ಅರುವಿನಾಗರ'ವು ಮುಖ್ಯವಾಗಿ ಷಟ್‌ಸ್ಥಲ ಭಕ್ತಿಯ ಬೆಳವಣಿಗೆ ಸೂಚಿಸುವ ತ್ರಿಪದಿಗಳ ಸಂಕಲನ. ಜಯದೇವಿ ತಾಯಿಯವರ ನಿಷ್ಠಾಪೂರ್ಣ ಮನಸ್ಸು, ಕೈಗೊಂಡ ಉಜ್ವಲ ಸಾಧನೆ ಈ ಸ್ಥಲಕ್ಕೆ ಜೀವಂತಿಕೆಯನ್ನು ತಂದು ಕೊಟ್ಟಿದೆ.

ದೇವನ ನೆನೆದಾಗ ಯಾವುದು ಉಳಿಯದೆ
ಭಾವ ಬಯಲಾಗಿ ಕೂಡಿತ್ತು ಅವಿರಳ
ದಿವ್ಯ ಚಿಲ್ಲಿಂಗ ಕಂಡೀತು.

ಎಂಬಂತಹ ತ್ರಿಪದಿಗಳಲ್ಲಿ ತಾಯಿಯವರು ಭಕ್ತಿಯ ವಿಕಾಸ ಸ್ಥಿತಿಯ ಮೇಲ್ ಸ್ಥರವನ್ನು ಇಲ್ಲಿ ಸೂಚಿಸುತ್ತಾರೆ, 'ಅರುಹಿ ನಾಗರ' ಷಟ್‌ಲಿಂಗಗಳ ಉಪಾಸನೆಯನ್ನ ವಲಂಬಿಸಿ ಬೆಳೆಯುವ ಹಂತಗಳಾದ ಶ್ರದ್ಧೆ, ನಿಷ್ಠೆ, ಅವಧಾನ, ಅನುಭಾವ, ಆನಂದ, ಸಮರಸದ ತಾತ್ವಿಕತೆಯನ್ನು ವಿವರಿಸುತ್ತದೆ. 'ಸಮರಸ'ವೆಂಬುದು ಲಿಂಗಾಂಗ ಸಾಮರಸ್ಯ ಬಯಲು ಬಯಲನೆ ಕೂಡಿದಂತೆ. ಇದನ್ನೇ ತಾಯಿಯವರು ದಿವ್ಯದರ್ಶನವೆಂದು ಕರೆಯುತ್ತಾರೆ. ಇದರ ಸಂಕೀರ್ಣ ಭಾಗದಲ್ಲಿ ೨೭೫ ತ್ರಿಪದಿಗಳಿದ್ದು ವಿವಿಧ ವಿಷಯಗಳಿಗೆ ಸಂಬಂಧಿಸಿವೆ.

ಶರಣ ಗೀತಗುಚ್ಚದಲ್ಲಿ 'ಜಯ ಸಿದ್ಧರಾಮ' 'ಕಲ್ಯಾಣ ಬಸವ ಬಾರೋ' 'ನನ್ನಮ್ಮ ನಾಗಮ್ಮ' 'ಕಲ್ಯಾಣದಣ್ಣಗಳು' 'ತಂದೆ ನೀನೆಲ್ಲಿ ಹೋದೆ' ಮುಂತಾದ ೧೧೦ ಕವನ ಸಂಕಲನಗಳ ಸಂಗ್ರಹವಿದೆ. ಮುಮುಕ್ಷುಗಳ ಮುಕ್ತಿ ಸಂಪಾದನೆಗೆ ಒದಾರಿದೀಪವಾಗಿದೆ ಈ ಕೃತಿ ಎನ್ನುತ್ತಾರೆ ಡಾ. ಚನ್ನಾಂಬಿಕ ಪಾವಟೆಯವರು.

ಬಂದೇವು ಕಲ್ಯಾಣಕ – ೧೯೭೨ರಲ್ಲಿ ಪ್ರಕಟವಾಗಿರುವ ಈ ಕೃತಿಯು ಜಯದೇವಿಯವರು ಸೊನ್ನಲಿಗೆ ಬಿಟ್ಟು ಬಂದು ಕಲ್ಯಾಣದಲ್ಲಿರಲು ಆರಂಭಿಸಿದಾಗ ರಚಿಸಿರುವ 'ಅನುಭಾವ ಪದಗಳ' ಸಂಗ್ರಹವಿದು. ಭಕ್ತಿ ನೀತಿಗಳ ಸುಂದರ ಮಿಲನವಾಗಿರುವ ಈ ಕೃತಿಯಲ್ಲಿ ರಸಾತ್ಮಕವಾದ ಒಂದು ಶೈಲಿಯನ್ನು ಕಾಣಬಹುದು. ಜಯದೇವಿ ತಾಯಿಯವರು ನುಡಿದಂತೆ ನಡೆದಿದ್ದಾರೆ. ಕರ್ನಾಟಕಕ್ಕೆ ಸೇರದ ಸೊಲ್ಲಾಪುರದಲ್ಲಿ ನಾನಿರಲಾರೆನೆಂದು ನಿರ್ಧರಿಸಿ ಬಸವಕಲ್ಯಾಣಕ್ಕೆ ಬಂದು ಅಲ್ಲಿಯ ಅನುಭವ ಮಂಟಪದ ಸಮೀಪದಲ್ಲಿ 'ಭಕ್ತಿ ಭವನ'ವನ್ನು ನಿರ್ಮಿಸಿಕೊಂಡು ಉಳಿದರು. ಅಗ ಈ ಕವನ ಸಂಕಲನವನ್ನು ಹೊರತಂದರು. ಈ ಮೂಲಕ ತಮ್ಮ ಅಚ್ಚಗನ್ನಡತನವನ್ನು ಅವಿಚ್ಛಿನ್ನವಾಗಿ ತಮ್ಮ ಅಂತರಂಗದ ಅನುಭವದ ನುಡಿಗಳ ಮೂಲಕ ಅಭಿವ್ಯಕ್ತಪಡಿಸಿದರು. ಇಲ್ಲಿಯ ಪದಗಳೆಲ್ಲವು ಸಹಜವಾಗಿ ಮೂಡಿಬಂದಿವೆ. ಅವುಗಳ ಶೈಲಿ ಸರಳವಾಗಿದ್ದು, ಅದು ಸರಳಗನ್ನಡ ಶೈಲಿ ಅದರಲ್ಲಿಯೂ ವಚನಕಾರರ ಕನ್ನಡ ಅದು ಜನಗನ್ನಡವಲ್ಲವೇ? ವಚನಕಾರರು ತಮ್ಮ ಅನುಭವದ ಅನಿಸಿಕೆಗಳನ್ನು ಹಾಡಿದ ದಾರಿಯಲ್ಲಿಯೇ ತಾಯಿಯವರೂ ಇಲ್ಲಿ ಹೆಜ್ಜೆ ಇರಿಸಿದ್ದನ್ನು ಗುರುತಿಸಬಹುದು. ಅಂದು ಸಮಾಜದ ಜನತೆಯ ಉದ್ಧಾರಕ್ಕಾಗಿ ಅವತರಿಸಿದ ಬಸವಣ್ಣ, ಅಲ್ಲಮಪ್ರಭು, ಸಿದ್ಧರಾಮ, ಮಹದೇವಿಯಕ್ಕ, ಕಲ್ಯಾಣನಾಡು ತಾಯಿಯವರಿಗೆ ಆದರ್ಶದ ತವನಿಧಿ. ಆ ಎಲ್ಲರ ಪ್ರಭಾವ ಇವರ ಮೇಲೆ ದಟ್ಟವಾಗಿದೆ. ಆದ್ದರಿಂದಲೇ ತಾಯಿಯವರ ಅನೇಕ ಕವಿತೆಗಳಲ್ಲಿ ಈ ಬಗೆಯ ಭಾವನೆಗಳು ಒಡಮೂಡಿ ನಿಂತಿರುವುದಷ್ಟೇ ಅಲ್ಲದೆ, ಅವರ ಆಡುನುಡಿಗಳಲ್ಲಿಯೂ ಆದ್ಯಾತ್ಮದ ಸಾರ ತುಂಬಿ ತುಳುಕಿರುವುದನ್ನು ಕಾಣಬಹುದಾಗಿದೆ. ಅವರ 'ಅರಿವಿನಾಗರದಲ್ಲಿ' ಎಂಬ ಕೃತಿಯು ತಾಯಿಯವರು ಲಿಂಗೈಕ್ಯರಾದ (೨೫೦೭–೧೯೮೬) ಮೇಲೆ ಪ್ರಕಟವಾಯಿತು.

ಒಟ್ಟಿನಲ್ಲಿ ಜಯದೇವಿ ತಾಯಿಯವರ ಹಾಡುಗಬ್ಬವನ್ನು ಗಮನಿಸಿ ಹೇಳಬಹುದಾದ ಮಾತೆಂದರೆ, ಇವು ಕನ್ನಡ ಸಾಹಿತ್ಯಕ್ಕೆ ನೀಡಿದ ವಿಶಿಷ್ಟ ಕೊಡುಗೆಗಳಾಗಿವೆ. ತತ್ವ, ಆದ್ಯಾತ್ಮ, ಅನುಭವ, ಅನುಭಾವ, ಜೀವನ ವಿಧಾನಗಳಿಂದ ಕೂಡಿದ ಇವು ಕನ್ನಡ ಸಾಹಿತ್ಯದ ಅಂತಃ ಸತ್ವವನ್ನು ಶ್ರೀಮಂತಗೊಳಿಸಿವೆ. ಜನ ಬದುಕಬೇಕೆಂಬ ಗುರಿಯುಳ್ಳ ಈ ಹಾಡುಗಬ್ಬಗಳಲ್ಲಿ – ೧) ವಾಸ್ತವ ಬದುಕಿನ ಚಿತ್ರಣ, ೨) ಆದರ್ಶ ವ್ಯಕ್ತಿತ್ವದ ನಿರೂಪಣ ೩) ನೀತಿ ಬೋಧೆ ಮತ್ತು ಕೌಟುಂಬಿಕ ಜೀವನ' ಪ್ರಧಾನವಾಗಿ ಅಭಿವ್ಯಕ್ತಗೊಂಡಿದ್ದು ಅವುಗಳನ್ನಿಲ್ಲಿ ಗಮನಿಸಬಹುದಾಗಿದೆ. ಈ ಎಲ್ಲ ಸಂದರ್ಭಗಳಲ್ಲಿ ತಾಯಿಯವರ ಅನುಭವ ಮತ್ತು ಸಾಧನೆಯು ಚಿತ್ರಿತಗೊಂಡಿರುತ್ತದೆ.

## ವಾಸ್ತವ ಬದುಕಿನ ಚಿತ್ರಣ

ಶರಣರ ತತ್ವಗಳನ್ನು ಮನಸಾರೆ ಒಪ್ಪಿಕೊಂಡು ಜೀವನದಲ್ಲಿ ಅಳವಡಿಸಿಕೊಂಡು ಸದಾ ನಡೆ ನುಡಿಯನ್ನು ಒಂದಾಗಿಸಿಕೊಂಡು ಬಾಳಲು ಪ್ರಯತ್ನಿಸಿದವರು ಜಯದೇವಿಯವರು. ಹೀಗಾಗಿ ಆಧ್ಯಾತ್ಮದಲ್ಲಿ ಅವರ ಒಲವು, ಭಕ್ತಿಯಲ್ಲಿ ಅವರ ನಿಲುವು ಪ್ರಧಾನವಾಗಿದ್ದರೂ, ಸಮಕಾಲೀನ ಪರಿಸ್ಥಿತಿಗಳಿಂದ ಅವರು ದೂರ ಸರಿಯಲಿಲ್ಲ. ಹೆಚ್ಚು ಕಡಿಮೆ ಬಾಳಿನ ಎಲ್ಲ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುವ ಅವರು ಸ್ವಾತಂತ್ರ್ಯ ಪೂರ್ವದಲ್ಲಿ ಹಾಗೂ ನಂತರದಲ್ಲಿ ದೇಶದ ಅನೇಕ ಸಮಸ್ಯೆಗಳ ಸಂಗಡ ಬೆರೆತಿದ್ದಾರೆ. ಅದಕ್ಕೆ ಸ್ಪಂದಿಸಿದ್ದಾರೆ. ಹಲವು ಸಮಸ್ಯೆಗಳ ಪರಿಹಾರಕ್ಕಾಗಿ ಅವರು ಹಗಲು – ರಾತ್ರಿ ದುಡಿದಿದ್ದಾರೆ. ಇಂಥ ಸಂದರ್ಭಗಳಲ್ಲಿ ಪಡೆದ ಅನುಭವವನ್ನು ಕಾವ್ಯವಾಗಿಸಿದ್ದೂ ಇಲ್ಲಿದೆ. ಯುದ್ಧಗಳಲ್ಲಿ ನಡೆಯುವ ನರಮೇಧ, ಮತಿ ಬಿಟ್ಟು ಮತ ಹಿಡಿಯುವ ಪೀಠಾಧಿಪತಿಗಳು, ವಿನಾಶಕಾರಿಯಾಗಿ ಬೆಳೆದ ವಿಜ್ಞಾನ, ಸಮಾಜ ಸೇವೆಯಲ್ಲಿನ ಸೋಲು, ದೊರೆತನ, ಸಿರಿತನ, ಬಡತನ, ಸಹಕಾರ, ಭಾವನೆಗಳೆಲ್ಲ ಇಲ್ಲಿ ಮಾನವೀಯ ನೆಲೆಯಲ್ಲಿ ಚರ್ಚಿತವಾಗಿವೆ.

ರೈತನ ಸ್ಥಿತಿಯು ಇಂದು ನಮ್ಮ ದೇಶದಲ್ಲಿ ಎಷ್ಟು ಕೆಳಗತಿಯಲ್ಲಿದೆ ಎಂಬುದನ್ನು ಅವರು ತುಂಬಾ ನೋವಿನಿಂದ ಹೇಳುತ್ತಾರೆ. 'ಜೀವನಾಧಾರವಾದ ಅನ್ನ, ಆಹಾರಧಾನ್ಯ ಬೆಳೆದು ಕೊಡುವ ರೈತನೇ ನಿರ್ಗತಿಕ! ರೈತ ಮತ್ತು ಸರಕಾರದ ಮಧ್ಯದ ದಲಾಲಿಗಳೇ ಇಲ್ಲಿ ಶ್ರೀಮಂತರು ಎಂದು ಹೇಳುತ್ತ ಆ ದಲಾಲಿಗಳು ಸುಲಿಗೆಗಳ್ಳರು ಎನ್ನುತ್ತಾರೆ. ಸಕಾಲಕ್ಕೆ ಮಳೆಯಾಗದೆ, ಬೆಳೆಬರದೆ ಹೋದರೆ ಇಲ್ಲಿ ದುಡಿಯುವವನೇ ಉಪವಾಸಿ. ಆದರೆ ಕೈಕೆಸರಿಲ್ಲದೆ ಬಾಯಿಯಲ್ಲಿ ಮೊಸರಿಟ್ಟುಕೊಂಡು ತಿರುಗುವ ದಲ್ಲಾಳಿಗಳು ಕಾಯಕ ತತ್ವವರಿಯದ ಸ್ವಾರ್ಥಿಗಳು ಎಂದು ಕವಿಯತ್ರಿಯು ಸಿಡಿದೇಳುತ್ತಾರೆ.

ಸಾಹಿತ್ಯವು ಸಮಾಜವನ್ನು ದರ್ಪಣದಂತೆ ಪ್ರತಿಬಿಂಬಿಸುವುದೆಂಬುದು ಸಾಮಾನ್ಯ ಗ್ರಹಿಕೆ. ಆದರೆ ಜಯದೇವಿಯವರು ' ಸಾಹಿತ್ಯವು ಕೇವಲ ಒಂದು ದರ್ಪಣವಾಗಿರಬಾರದು' ಎನ್ನುತ್ತಾರೆ. ಯಾಕೆಂದರೆ ದರ್ಪಣದೆದುರು ಪ್ರತಿಮೆಯಿದ್ದಾಗ ಮಾತ್ರ ಪ್ರತಿಬಿಂಬಿಸುತ್ತದೆ. ಸಾಹಿತ್ಯವು ಹಾಗಲ್ಲ, ಅದು ಸಮಾಜದ ಗತಿ ಬಿಂಬ, ಮತ ಬಿಂಬವೂ ಆಗಬೇಕೆನ್ನುತ್ತಾರೆ. ಸಾಹಿತ್ಯದಿಂದ ಸದಭಿರುಚಿ, ಸಮಾಧಾನ, ಸಾತ್ವಿಕ ಆನಂದವನ್ನು ಹೆಚ್ಚಿಸಿ ಮನಸ್ಸಿಗೆ ಸಂಸ್ಕಾರ ತರುತ್ತದೆ. ಸಾಹಿತ್ಯವು ಕವಿ ಮತ್ತು ಸಹೃದಯರನ್ನು ಬೆಸೆಯುವ ಸೇತುವೆಯಾಗಿದ್ದು, ಈ ಸಂಬಂಧ ತಪ್ಪಿದರೆ ಮಾನವೀಯ ಮೌಲ್ಯಗಳಿಗೆ ಅಪಾರ ಹಾನಿಯಾಗುತ್ತದೆ ಯೆಂಬುದು ಜಯದೇವಿಯವರ ಒಟ್ಟು ಅಭಿಪ್ರಾಯವಾಗಿದೆ.

## ಆದರ್ಶ ವ್ಯಕ್ತಿತ್ವದ ನಿರೂಪಣೆ

ಭಕ್ತಿ, ಆಧ್ಯಾತ್ಮ, ಸಾಮಾಜಿಕ ಕ್ಷೇತ್ರಗಳಲ್ಲಿ ತನ್ನದೇ ಆದ ವ್ಯಕ್ತಿತ್ವವನ್ನು ತೋರಿದ ಜಯದೇವಿಯವರು, ಮಾನವೀಯತೆಯುಳ್ಳ ಕವಿ ಹೃದಯಿ ಹಾಗೂ ಸಹೃದಯಿ ಎರಡೂ ಆಗಿದ್ದಾರೆ. ಮಾನವೀಯ ನೆಲೆಯಲ್ಲಿ ನಿಂತು ಚಿಂತನ ಮಾಡಿದ ಹಾಗೂ ತಮ್ಮದೇ ಆದ ರೀತಿಯಲ್ಲಿ ಸಮಾಜಕ್ಕೆ ಸೇವೆ ಸಲ್ಲಿಸಿದ ದೇಶಭಕ್ತರು, ಮಹಾ ಪುರುಷರು ಹಾಗೂ ಶರಣರನ್ನು ಕಾಲ ಗಡಿ, ದೇಶಗಳನ್ನು ಮೀರಿ ಸ್ಮರಿಸಿರುವುದನ್ನು ಕಾಣುತ್ತೇವೆ. ಅಂಥ ಪುಣ್ಯವ್ಯಕ್ತಿಗಳ ಚರಿತ್ರೆ, ಸಂದೇಶಗಳು ಎಂದೆಂದೂ ಮಾನವ ಬದುಕಿಗೆ ದಾರಿದೀಪಗಳಾಗಿರುವುದರಿಂದ ಆ ಆದರ್ಶ ವ್ಯಕ್ತಿಗಳನ್ನು ಜಯದೇವಿ ಯವರು ತಮ್ಮ ನುಡಿಗಬ್ಬದಲ್ಲಿ ಹಿಡಿದಿಟ್ಟಿದ್ದಾರೆ.

ಕಿತ್ತೂರು ಚನ್ನಮ್ಮ, ಬೆಳವಡಿಮಲ್ಲಮ್ಮ, ಕೆಳದಿ ಚನ್ನಮ್ಮ,  ಚಾಂದಬೀಬಿ, ಝಾಂಸಿ ರಾಣಿ ಲಕ್ಷ್ಮೀಬಾಯಿ, ಒನಕೆಯ ಓಬವ್ವ,  ದಾನ ಚಿಂತಾಮಣಿ ಅತ್ತಿಮಬ್ಬೆ ಹದಿಬದೆಯ ಧರ್ಮತಿಳಿಸಿದ ಸಂಚಿ ಹೊನ್ನಮ್ಮ, ಸಿದ್ಧರಾಮ ಶಿವಯೋಗಿಯ ಚಾರಿತ್ರ್ಯ ಬರೆದ ರಾಘವಾಂಕ ಮುಂತಾದವರೆಲ್ಲರು ಜಯದೇವಿ ಕವಿಗೆ ಆದರಣೀಯ ವ್ಯಕ್ತಿಗಳು. ಭಾರತದಲ್ಲಿದ್ದ ರಶಿಯಾದ ಮಹಿಳೆ ನಾದಿಯಸ್ಥಾ ವಯಸ್ಸಾದ ಕಾರಣ,  ಇಲ್ಲಿ ಅವಳಿಗೆ ತನ್ನವರೆಂಬವರು ಯಾರು ಇಲ್ಲದ ಕಾರಣ ತನ್ನ ತಾಯ್ನಾಡಿಗೆ ಮರಳಲು ಹಂಬಲವುಳ್ಳವಳಾಗಿ ಕವಿಯತ್ರಿಯ ಗಮನ ಸೆಳೆದಿದ್ದಾಳೆ. ಆದರ್ಶ ಸತಿ ಸಮಾಜಸೇವಕಿಯೆಂದು ಬಿರುದು ಪಡೆದ ಸಂಗವ್ವ ಮಡಕಿಯವರೂ ಜಯದೇವಿಯರ ನೆನಪಿನಲ್ಲುಳಿದಿದ್ದಾರೆ. ತಾಯಿಯನ್ನು ಭಕ್ತಿ, ನಿಷ್ಠೆ, ಗೌರವಾದರಗಳಿಂದ ಕಂಡ ಶಿವಾಜಿ, ಅರೆ ಬಟ್ಟೆತೊಟ್ಟು ಅರೆ ಹೊಟ್ಟೆ ಉಂಡು ದೀನ ದಲಿತರ ರಕ್ಷಣೆಗೆ ಕಂಕಣ ಬದ್ಧರಾಗಿದ್ದ ಗಾಂದೀಜಿ, ಸ್ವಾತಂತ್ರ್ಯ ಸೇನಾನಿ ವಲ್ಲಭಬಾಯಿ ಪಟೇಲ, ರಾಜಾಜಿ, ರಾಜೇಂದ್ರ ಬಾಬು, ರಾಷ್ಟ್ರ ನಾಯಕರ ಸ್ಥಾನದಲ್ಲಿ ಗುರುತಿಸಲ್ಪಟ್ಟ, ಸಿರಸಂಗಿ ಲಿಂಗರಾಜರು, ವಾರದ ಮಲ್ಲಪ್ಪನವರು, ಆದರ್ಶ ಪ್ರಾಯರು ಇಲ್ಲಿ.

ಧರ್ಮ ಹಾಗೂ ಆಧ್ಯಾತ್ಮಿಕ ನೆಲೆಯಲ್ಲಿ ಜನತೆಯ ಒಳಿತಿಗಾಗಿ ಹಗಳಿರುಳು ಶ್ರಮಿಸಿದ ಬಸವಾದಿ ಶರಣರನ್ನು 'ಸಿದ್ಧನ ಕಂಡಾಗ ಬುದ್ಧನ ನೆನೆದೇನ – ಸಿದ್ದ ಬಸವ ಬುದ್ಧ,  ಬ್ಯಾರೇನ' ಎಂದಿದ್ದಾರೆ. ನಿಜಗುಣ ಶಿವಯೋಗಿಗಳ ಪುರಾತನರ ತ್ರಿವಿಧಿಗಳ ಮಾದರಿಯಲ್ಲಿ ಜಯದೇವಿಯವರು ೬೩ ಪುರಾತನರ ತ್ರಿವಿಧಿಗಳನ್ನು ರಚಿಸಿದ್ದಾರೆ. ಷಟ್‌ಸ್ಥಲ ಸಿದ್ಧಾಂತವನ್ನು ಸಾರಿದ, ಜಾತೀಯತೆಯನ್ನು ಮರೆಸಿದ, ಆಚಾರ ಅನುಭಾವದುಣಿಸನ್ನುಣಿಸಿದ ಶರಣರು ನುಡಿಯಲ್ಲಿ ಶಿವಸಿರಿ ತುಂಬಿರುವುದನ್ನು ನೋಡಿ ಕವಿಯಿತ್ರಿ ಅದು 'ಮೈಮನಕೆ ಆಭರಣ'ವೆಂದು ವರ್ಣಿಸಿದ್ದಾರೆ. ತ್ರಿಪದಿಗಳಲ್ಲಿ ಶಿವಶರಣರನ್ನು ಒಂದೊಂದು ಗುಣ ವಿಶೇಷದಿಂದ

ಕಂಡಿರುವುದು ಗಮನಾರ್ಹವಾಗುತ್ತದೆ. ಜಯದೇವಿಯವರ ಲಿಂಗನಿಷ್ಠೆ ಮೆಚ್ಚಿ ಆಶೀರ್ವದಿಸಿದ 'ವೀರೇಶ' ಶರಣರನ್ನು ಇಲ್ಲಿ ನೆನೆಸಿಕೊಂಡಿದ್ದು ಗಮನಾರ್ಹ ಸಂಗತಿ.

## ಕೌಟುಂಬಿಕ ನೀತಿಬೋಧೆ ಮತ್ತು ಜೀವನ

ಜಯದೇವಿಯವರು ಆಧ್ಯಾತ್ಮಿಕ ಜೀವನದ ಅನುಸಂಧಾನಿಯಾಗಿದ್ದರೂ ಕೌಟುಂಬಿಕ ಪರಿಸರವನ್ನು ಸದಾ ಉಳಿಸಿಕೊಂಡರು. ಅವರು ತಮ್ಮ ಬಂಧು ಬಾಂಧವರೊಂದಿಗೆ, ರಕ್ತ ಸಂಬಂಧಿಗಳೊಂದಿಗೆ ಸಹಜವಾಗಿ ಮಮಕಾರವಿರಿಸಿ ಕೊಂಡಿದ್ದರು. ಅವರ ತಾತಾ, ತಂದೆ, ತಾಯಿಯವರು ಶರಣರಂತೆ ಬಾಳಿ ಹೋದವರು. ಅವರೆಲ್ಲರ ದಟ್ಟವಾದ ಪ್ರಭಾವ ಇವರ ಮೇಲಾಗಿದ್ದುದನ್ನು ಅರಿಯಬಹುದಾಗಿದೆ. ಕವಿಯತ್ರಿಯು ಹುಟ್ಟಿ ಬೆಳೆದ ಮನೆ ಹಾಗೂ ಗಂಡನೊಂದಿಗೆ ಬಾಳಿದ ಮನೆಗಳೆರಡು ಶ್ರೀಮಂತ ಮನೆತನಗಳು. ಸಮೀಪದ ಬಂಧುಗಳು ಸಂಪತ್ತಿಗಾಗಿ ಆಶ್ರಯಿಸಿ, ಜಯದೇವಿಯವರನ್ನು ಕಾಡಿಸಿದ, ಪೀಡಿಸಿದ ಕಟು ಅನುಭವವು ಅವರಿಗುಂಟಾಗಿದೆ. ಹಾಗೆಯೇ ಪಡೆದ ಮಕ್ಕಳು ಅವರ ಪ್ರೀತಿ, ಹರಕೆಗಳನ್ನು ಬೇಡಿದ ಆನಂದಾನುಭವವೂ ಅವರಿಗೆ ಮತ್ತೊಂದು ಕಡೆ ಸಿಕ್ಕಿದೆ. ಈ ಹಿನ್ನೆಲೆಯಲ್ಲಿ ಅವರು ತಮ್ಮ ಮಕ್ಕಳಿಗೆ ಸುಸಂಸ್ಕೃತ ಬದುಕನ್ನು ಕಟ್ಟಿಕೊಂಡು ಹೋಗಲು ಪ್ರೇರಕ ಶಕ್ತಿಯಾಗಿ ನಿಂತಿದ್ದಾರೆ. ಮಕ್ಕಳ ಮದುವೆ, ಮೊಮ್ಮಕ್ಕಳ ಜನನದ ಸಂಧರ್ಭಗಳಲ್ಲಿ ದಿಕ್ಕೆಲ್ಲ ತುಂಬಿ ನಿಂತಾಂಗ' ಸಂತೋಷಪಟ್ಟಿದ್ದಾರೆ.

ಮೊಮ್ಮಕ್ಕಳ ಬಾಲ ಲೀಲೆ ಅವರ ಮನದಲ್ಲಿ ಸಂತೋಷದ ಚಿಲುಮೆ ಚಿಮ್ಮಿಸಿದೆ. ಮೊದಲಿನ ಮೊಮ್ಮಗ ಹುಟ್ಟಿದಾಗ ಅದಕ್ಕೆ ಹೆಸರಿಡಲು ಕವಿಯತ್ರಿಗೆ ಹುಡುಕಾಟ ಆರಂಭಗೊಂಡಿದೆ. ' ಹುವನ್ನಲೆ ಹಕ್ಕಿಯೆನ್ನಲೇ ಎಂದೂ ಸಂದಿಗ್ಧತೆ ಪಡುವಾಗ 'ದೇವರ ಬಳ್ಳಿ' ಎಂದು ನಿಸರ್ಗ ಹೇಳಿದಂತೆನಿಸಿದೆ. ತಾನು ಚಿಕ್ಕ ವಯಸ್ಸಿನಲ್ಲಿ ತಾಯಿಯಾಗಿದ್ದಾಗ, ಐದು ಜನ ಅತ್ತೆಯರ ಮಧ್ಯದಲ್ಲಿ ಅವಳು ಮಕ್ಕಳ ಆಟ ಪಾಠಗಳಿಂದ ಸಂತೋಷಗೊಳ್ಳುವ ಅವಕಾಶ ಸಿಕ್ಕಿರಲಿಲ್ಲ, ಈಗ ಮೊಮ್ಮಕ್ಕಳ ಆಟ ಪಾಠವನ್ನು ಹೊಸ ಹುಮ್ಮಸಿನಿಂದ ಅನುಭವಿಸಿದ್ದನ್ನು ತಿಳಿಯಪಡಿಸುತ್ತಾಳೆ. ದೊಡ್ಡ ಬಳಗದ ಮನೆಯಲ್ಲಿ ಮಕ್ಕಳು ತುಂಬಿದ್ದರೂ ಕವಿಯಿತ್ರಿಗೆ ಪಡೆದ ಮಕ್ಕಳ ಮೇಲೆ ಅತೀವ ಮಮತೆಯಿದೆ. ಅದೇ ಅವಳಿಗೆ 'ತಾಯಿ'ಯೆಂಬ ಸಾರ್ಥಕತೆಯನ್ನು ತಂದಿರುವುದು.

ಅವರು ತಾಯಿ ಪದಗಳು, ಜಯಗೀತಗಳಲ್ಲಿ ಸ್ತ್ರೀಯರ ಉನ್ನತಿಗಾಗಿ, ಉದ್ಧಾರಕ್ಕಾಗಿ, ನೀತಿ ಬೋಧನೆಯನ್ನು ಮಾಡಿದುಂಟು. ಈ ಸಂದರ್ಭದಲ್ಲಿ ಜಯದೇವಿಯವರಿಗೆ 'ಹದಿಬದೆಯ ಧರ್ಮ' ತಿಳಿಸಿದ ಸಂಚಿಯ ಹೊನ್ನಮ್ಮ, ಸ್ತ್ರೀ

ಕುಲೋದ್ಧಾರಕಳಾದ ಅಕ್ಕಮಹಾದೇವಿ, ಮತ್ತು 'ವರನಂದಿ ಕಲ್ಯಾಣ' ಕರ್ತೃ ಅರಸಿ ಚಲುವಾಂಬೆ ಮೊದಲಾದವರು ನೆನಪಾಗುತ್ತಾರೆ ಹಾಗೂ ಈ ಮಹಿಳೆಯರ ಜೀವನ ಕ್ರಮವನ್ನು ಒಡಮೂಡಿಸುವುದರೊಂದಿಗೆ ಹೆಣ್ಣುಮಕ್ಕಳಿಗೆ ನೀತಿ ಬೋಧನೆಯನ್ನು ಮಾಡುತ್ತಾಳೆ.

ಸೊಸೆಯಾಗಿ ಬರುವಾಕಿ ಹಸಗೂಸಿನಂತಿರು
ಬಿಸಿ ಮಾಡಿ ನೀಡು ಅಡಗಿಯ
ಬಿಸಿ ಮಾಡಿ ನೀಡು ಅಡಗಿಯ ಅತ್ತೆಮಾವ
ಲೇಸನ್ನುವ್ಹಂಗ ನಡಕೋಳ (ತಾ.ಪ. ಪದ್ಯ ೪೯೨)

ಜಯದೇವಿಯವರು ಸಂಪ್ರದಾಯದ ಛಾಯೆಯಲ್ಲಿ ಬೆಳೆದುಕೊಂಡು ಬಂದ ಕಾರಣ ಅತ್ತೆಯ ಮನೆಯಲ್ಲಿ ಸೊಸೆ ಹೇಗೆ ನಡೆಯಬೇಕೆಂದು ಸ್ವಾನುಭವದಿಂದ ಇಲ್ಲಿ ಹೇಳುತ್ತಾರೆ. ಸತ್ಯಶರಣರ ಮನೆಯ ಸೊಸೆಯಂತೆ, ನಿತ್ಯಮನೆಗೆಲಸ ಮಾಡಿ, ಕಾಯಕವೇ ಕೈಲಾಸವಾಗಬೇಕು. ಸೊಸೆಯಾದವಳು 'ಅತ್ತೆವ್ವ ನೀ ಮತ್ತಿನ್ನು ಹೇಳಿ ಕಲಿಸವ್ವ' ಎಂದು ಕೇಳಿ ಮೃದುವಾಗಿ ಮಾತನಾಡುತ್ತ, ಅತ್ತೆಯನ್ನು ಒಲಿಸಿಕೊಂಡು ಪತಿದೇವನು ಹಾಯಾಗಿ ಇರುವಂತೆ ನೋಡಿಕೊಳ್ಳ ಬೇಕು. ಸಣ್ಣ ಸಣ್ಣ ಮಾತುಗಳನ್ನು ಮನಸ್ಸಿಗೆ ಹಚ್ಚಿಕೊಳ್ಳದೆ ನಗುನಗುತ ಇರಬೇಕು. ಸಿಟ್ಟಲಿ ನುಡಿದರೆ ಅವರ ಮನ 'ಸುಡು ಸುಡು ಸುಟ್ಟೀತು' ಅದು ಮರಳಿ ಚಟ್ಟಂತ ನಿನ್ನ ಮನಕ ಹತ್ತೀತು, ಎಂದು ಎಚ್ಚರಿಸುತ್ತಾರೆ. ಕೆಟ್ಟದ್ದು ನುಡಿದು ಥಟ್ಟನೆ ಬೈಯ್ದು ಕೊಟ್ಟ ವಚನವ ಮರೆಯದೆ ಈ ಲೋಕದಲ್ಲಿ ತಾನು ಸುಟಗೊಂಡು ಇತರರ ಮನ ಜಯಿಸಬೇಕು. ಮನಸು ನಿನ್ನದೆಂದು ಅನ್ಯವ ಬಯಸಬೇಡ, ಅದು ತನ್ನ ಗುಣವ ಬಿಡದು, ದೃಢದಿಂದ ಶಿವನ ಧ್ಯಾನ ಮಾಡು 'ತುಪ್ಪ, ಸಕ್ಕರೆ, ಉಪ್ಪು, ಖಾರ ಉಣಿಸಿ ಒಪ್ಪುಳ್ಳ ಮಾತು ಕಲಿಸಿದರೆ ನಾಲಿಗೆ ಹಾಲಿನ ಹೆಪ್ಪುಗೆಡಿಸಿತ್ತು. ಎಂದೂ ನೀತಿ ಬೋಧೆ ಮಾಡುತ್ತಾರೆ.

ಈ ಎಲ್ಲ ಪದಗಳಲ್ಲಿ ಜಯದೇವಿಯವರ ಜೀವನಾನುಭವ ಹಾಸು ಹೊಕ್ಕಾಗಿರುವುದನ್ನು ಕಾಣಬಹುದು. ಅವರಿಗೆ ತಾನು ಸೊಸೆಯಾಗಿ ನಡೆದದ್ದು ಗೊತ್ತು, ಅತ್ತೆಯಾಗಿ ಇದ್ದದ್ದೂ ಗೊತ್ತು. ಭಾರತೀಯ ಕೌಟುಂಬಿಕ ಪದ್ಧತಿಯಲ್ಲಿ ಹೆಣ್ಣು ನೂರಾರು ಆಸೆ, ಕನಸುಗಳನ್ನು ಹೊತ್ತು,ಹೊಸ ಮದುವಳಿಗಳಾಗಿ ಬಂದಾಗ, ಅವಳು ತನ್ನ ಸುಖಕ್ಕಿಂತ ಮನೆಯ ಜನರೆಲ್ಲರ ಹಿತವನ್ನು ಕಾಯ್ದುಕೊಂಡು ಹೋಗಬೇಕೆಂಬ ನೀತಿಯನ್ನು ಇಲ್ಲಿ ಹೇಳಲಾಗಿದೆ. ಹೆಣ್ಣು ತ್ಯಾಗದ ಜೀವನಕ್ಕೆ ಸಿದ್ಧಳಾಗಿ ಸಹನೆಯ ಮೂರ್ತಿಯಾಗಿ ಎಲ್ಲವನ್ನು ಸಹಿಸಿಕೊಂಡು, ಮನೆಯವರ ಮನ ನೋಯದಂತೆ ನಡೆದುಕೊಳ್ಳುವುದು ಅನಿವಾರ್ಯವೆಂಬುದು ಇಲ್ಲಿಯ ಹೇಳಿಕೆ. ಈ ಸಂಪ್ರದಾಯವನ್ನು ಮೆಚ್ಚಿಕೊಂಡಿರುವ ಕವಿಯಿತ್ರಿ ನಮ್ಮ ಸಂಸ್ಕೃತಿಯಲ್ಲಿ

ಹಿಂದಿನಿಂದ ಬಂದಿರುವುದನ್ನು ಸ್ಮರಣೆಗೆ ತಂದುಕೊಂಡು ಅವುಗಳನ್ನು ಎತ್ತಿ ಹಿಡಿದಿರುವುದನ್ನು ಕಾಣಬಹುದಾಗಿದೆ.

'ತನ್ನಂತೆ ಪರರ ಬಗೆವೊಡೆ ಕೈಲಾಸ ಬಿನ್ನಣವೊಕ್ಕು' ಎಂದು ಸರ್ವಜ್ಞ ನುಡಿದಿರುವಂತೆ, ಅನ್ಯರ ಮನೆಗೆ ಸೊಸೆಯಾಗಿ ಬಂದ ಹೆಣ್ಣುಮಕ್ಕಳು ತಮ್ಮ ಸುಖಕ್ಕಾಗಿ ಅನ್ಯರನ್ನು ಪೀಡಿಸದೆ, ತನ್ನಂತೆ ಅವರು ಎಂದು ತಿಳಿದು ನಡೆಯ ಬೇಕೆನ್ನುತ್ತಾರೆ. ಇತರರ ಮನೆಗೆ ಸೊಸೆಯಾಗಿ ಹೋಗಲಿರುವ ಮಗಳಿಗೆ ಕವಿಯಿತ್ರಿ– 'ಪ್ರೀತಿಯಿಂದ ಪ್ರೀತಿಯನ್ನು ಬೆಳೆಸುವ ಒಬ್ಬರ ಸತಿಯಾಗಿ, ಸೊಸೆಯಾಗಿ, ಹೊಸಮನೆಯ ಕದ ತೆರೆದು, ನಡೆವವರಿಗೆ ಗುಣವತಿಯಾಗು, ಹೊಲಮನೆಗಳಲಿ ದುಡಿಯವ ಬಡವರ ಹೊಟ್ಟೆ ಬೆನ್ನು ನೋಡಿ, ಅವರ ಜೊತೆಗೂಡಿ ನಡೆಯಲು ಹೇಳುತ್ತಾರೆ. ಆದರೆ ಇಂದಿನ ಪರಿಸರದ ಹಿನ್ನೆಲೆಯಲ್ಲಿ ಇದೆಲ್ಲ ಮಾತುಗಳು ತುಂಬಾ ಚರ್ಚೆಯನ್ನು ಬಯಸುತ್ತಿವೆ. ಆದರೂ ಅಕ್ಕನ ನಿವೃತ್ತಿಮಾರ್ಗ, ಭಕ್ತಿಯ ಸಮರ್ಪಣೆ, ಶೃಂಗಾರಮ್ಮ, ಹೆಳವನಕಟ್ಟೆ ಗಿರಿಯಮ್ಮರ ಭಕ್ತಿ, ಭಾವುಕತನದ ಅರ್ಚನೆ, ಹೊನ್ನಮ್ಮ, ಚೆಲುವಾಂಬೆಯರ ಜೀವನ ದರ್ಶನ ಇತ್ಯಾದಿಗಳನ್ನು ಹೀರಿ, ಬೆಳೆದಿರುವ ಜಯದೇವಿಯವರು ಈ ದೃಷ್ಟಿಯಲ್ಲಿ ಕನ್ನಡ ಸಾಹಿತ್ಯದಲ್ಲಿ ಅಜರಾಮರವಾಗಿ ಉಳಿದಿದ್ದಾರೆ. ಅವರ ಬದುಕಿನ ಅನುಭವ ಸಂಪತ್ತು ಹಾಗೂ ಜೀವನ ದೃಷ್ಟಿಯೇ ಅವರ ಈ ಕಾವ್ಯಗಳಲ್ಲಿ ಮಾರ್ದನಿಗೊಂಡಿದೆ ಎನ್ನಬಹುದು.

## ಸಿದ್ಧರಾಮ ಪುರಾಣ (ಮಹಾಕಾವ್ಯ)

ಜಯದೇವಿಯವರು 'ಸಿದ್ಧರಾಮೇಶ್ವರ ಪುರಾಣ'ವನ್ನು ತಮ್ಮ ನಲವತ್ತೈದನೆಯ ವಯಸ್ಸಿನಲ್ಲಿ ಬರೆದು ಮುಗಿಸಿದರು. ಮೂರು ವರ್ಷಗಳಲ್ಲಿ ಇದನ್ನು ಬರೆಯುವಾಗ ಅನೇಕ ಅಡ್ಡಿ ಆತಂಕಗಳು ಬಂದವು . ಈ ಕಾವ್ಯವನ್ನು ಪೂರ್ಣಮಾಡಿಯೇನೇ? ಎಂಬ ಶಂಕೆ ಅವರನ್ನು ಕಾಡಿಸಿತಂತೆ, ಯಾವ ರೀತಿಯಾಗಿ ಮಲ್ಲಿಕಾರ್ಜುನನು ಸಿದ್ಧರಾಮನನ್ನು ಪರೀಕ್ಷಿಸಿದನೋ ಹಾಗೆ ಸಿದ್ಧರಾಮ ಮಾಡಿದ ಎಂಬುದು ಆಮೇಲೆ ಅರಿವಾಯಿತು ಎನ್ನುತ್ತಾರೆ. ಆ ಪುರಾಣವನ್ನು ಬರೆಯುವಾಗ ಇದ್ದಕ್ಕಿದಂತೆ ಖಾಯಿಲೆ ಬಿದ್ದು ಬಿಟ್ಟರು. ಆದರೆ ಛಲ ಮಾತ್ರ ಬಿಡಲಿಲ್ಲ. ಆದರೂ ಬರೆಯುವ ಮನಸ್ಸು ಮಾಡಿದರು. ಆಗ ಶ್ರೀಮಂತ ರಾಗಿದ್ದ ತಾಯಿಯವರು ಆ ಸಂಧರ್ಭದಲ್ಲಿ ಮೈ ತುಂಬಾ ಬಂಗಾರದಾಭರಣ ಹಾಕಿಕೊಳ್ಳುತ್ತಿದ್ದರು. ಆಗ ಅವರಿಗೆ ಇದ್ದಕ್ಕಿದ್ದಂತೆಯೇ ಹೊಳೆಯಿತು. "ಈ ಬಂಗಾರ ಹೊತ್ತು ಭಂಗ ಪಡುವುದನ್ನು ನೋಡಿ ಸಿದ್ಧರಾಮನು ಕೋಪಗೊಂಡಿರ ಬಹುದೇನೋ" ಎಂದು ಕೂಡಲೇ 'ಈ ಐಸಿರಿಯ ಮಾಯೆಯನ್ನು ತೊರೆಯುವೆ' ಎಂದು ಅವುಗಳನ್ನೆಲ್ಲಾ ತೆಗೆದು ರುದ್ರಾಕ್ಷಿ ಬಳೆ, ಸರಗಳನ್ನು ಹಾಕಿಕೊಂಡು ಬರೆಯಲಾರಂಭಿಸಿದರಂತೆ.

ಒಮ್ಮೆ ಕವಿ ದ.ರಾ. ಬೇಂದ್ರೆಯವರು – 'ತಾಯಿಯವರೇ ಕೊರಳಿಗೇನೋ ರುದ್ರಾಕ್ಷಿ ಸರವನ್ನು ಹಾಕಿಕೊಂಡಿರುವುದು ಸರಿ. ಕೈಗೇಕೆ ರುದ್ರಾಕ್ಷಿ ಬಳೆಗಳು? ಎಂದು ಪ್ರಶ್ನೆ ಮಾಡಿದರಂತೆ ಅದಕ್ಕೆ ಜಯದೇವಿಯವರು "ಯಾವುದೇ ಮಾಯೆ ಮೆಟ್ಟಲು ಗುರು ಸಾಕ್ಷಿಯಾಗಿ ಕಂಕಣಬದ್ಧಳಾಗಬೇಕೆಂಬುದೇ ಇವುಗಳ ಗುರಿ. ಕಾವ್ಯ ಬರೆಯಲು ವಜ್ರದ ಬಳೆಗಳು ರುದ್ರಾಕ್ಷಿಮಯವಾಯ್ತು" ಎಂದು ಉತ್ತರ ಕೊಟ್ಟರಂತೆ.

ತಾಯಿಯವರಿಗೆ 'ಸಿದ್ಧರಾಮೇಶ್ವರ ಪುರಾಣ' ಬರೆಯಲು ಸ್ಫೂರ್ತಿ, ಹಿಂದಿನ ಕವಿಗಳು, ಕವಯಿತ್ರಿಯರು ರಚಿಸಿದ ಕಾವ್ಯಗಳು, ವಚನಗಳು, ರಾಘವಾಂಕನ 'ಸಿದ್ಧರಾಮ ಚರಿತೆ! ಪ್ರಭುಲಿಂಗಲೀಲೆ, ಶೂನ್ಯ ಸಂಪಾದನೆ, ಸಿದ್ಧರಾಮೇಶ್ವರ ಸಂಪೂರ್ಣ ಸಾಹಿತ್ಯ ರೇವಣ ಸಿದ್ದೇಶ್ವರ ಚರಿತ್ರೆ, ಲಿಂಗಲೀಲಾವಿಲಾಸ, ಸರ್ವ ಪುರಾತನರ ವಚನಗಳು ಕಾಲ ಜ್ಞಾನ, ವಚನಗಳು, ಬಸವಣ್ಣ, ಅಕ್ಕಮಹಾದೇವಿ, ಚನ್ನ ಬಸವಣ್ಣ, ನೀಲಾಂಬಿಕೆಯರ ವಚನಗಳು, ಸು.೫೦೦ಕ್ಕೂ ಹೆಚ್ಚು ಐತಿಹಾಸಿಕ ಕತೆ, ಕಾದಂಬರಿ ಹಾಗೂ ಉಳಿದ ಸಾಹಿತ್ಯ ಈ ಕೃತಿಗೆ ಸ್ಫೂರ್ತಿದಾಯಕವಾಗಿವೆ.

ಸಿದ್ಧರಾಮನ ಪುರಾಣ ಬರೆಯಲು ಕಾರಣ ಕೇಳಿದಾಗ ಅವರು ಹೇಳಿದ್ದೇನೆಂದರೆ, ಈ ೮೦ ವರ್ಷಗಳಲ್ಲಿ ಹೆಣ್ಣಿನ ಬಗ್ಗೆ ಅತೀವ ವಾತ್ಸಲ್ಯವನ್ನು ತುಂಬಿ ಮಾತನಾಡಿರುವವನು ಮತ್ತು ಹೆಣ್ಣಿಗೆ ಸಮಾಜದಲ್ಲಿ ಸ್ಥಾನ ಮಾನವನ್ನು ಕೊಟ್ಟವನೆಂದರೆ ಸಿದ್ಧರಾಮ ಶರಣ. ಆದುದರಿಂದಲೇ ಆತನ ಜೀವನವನ್ನು ನನ್ನದೇ ಆದ ಶೈಲಿಯಲ್ಲಿ ಬರೆದಿರುವೆ. ಅನೇಕ ಪಂಡಿತರಿದ್ದಾಗ್ಯು ನನ್ನಿಂದಲೇ ಇದು ಬರೆಸಿಕೊಳ್ಳಬೇಕೆಂದಿತ್ತು ಎಂದು ತೋರುತ್ತದೆ ಎಂದರು. ಈ ಪುರಾಣವನ್ನು ಬರೆಯುವಾಗಲೇ ಪತಿ ವಿಯೋಗವಾಯಿತು. ತಡವಾಗಿಯಾದರು ಸಿದ್ಧರಾಮನೇ ಈ ಮಹಾಕಾವ್ಯವನ್ನು ಬರೆಸಿದನು ಎನ್ನುತ್ತಾರೆ. ಇದು ಅನೇಕ ಕಾರಣಗಳಿಂದ ಈ ಶತಮಾನದ್ದೊಂದು ಗಮನಾರ್ಹ ಕೃತಿಯಾಗಿದೆ.

ಶ್ರೀ ಸಿದ್ಧರಾಮ ಪುರಾಣ ಒಂದು ಮಹಾಕಾವ್ಯವೆಂದು ಪ್ರಸಿದ್ಧವಾಗಿದೆ. ಇದರಲ್ಲಿ ೪೧೫೬ ತ್ರಿಪದಿಗಳಿವೆ. ಪ್ರಾರಂಭದಲ್ಲಿ ೨೭ ಮಂಗಳಪದಗಳು ಮತ್ತು ಮುಕ್ತಾಯದಲ್ಲಿ ೨೯ ಜಯಮಂಗಳ ಪದಗಳು, ಉಳಿದ ೪೧೦೦ ಪದಗಳು ೪೧ ಸಂಧಿಗಳಲ್ಲಿ ವಿಂಗಡಿಸಲ್ಪಟ್ಟಿವೆ. ಪ್ರತಿ ಒಂದು ಸಂಧಿಯಲ್ಲಿ ೯೯ ಪದಗಳು ಇವೆ.

ಆಚಾರ ಉಚ್ಚಾರ ಎಚ್ಚರ ಎಂಬುವ
ಅಚ್ಚ ನಿಚ್ಚಾದ ತ್ರಿದಳದ ಪತ್ತುರಿ
ಮುಚ್ಚಿ ತಂದೀದ ಮುಡಿಯಿರಿ

ಎಂಬ ತ್ರಿಪದಿಯು ಕಾವ್ಯದ ಪ್ರಥಮ ಪುಟದಲ್ಲಿಯೇ ಕಾಣಸಿಗುತ್ತದೆ. ಇಡಿ ಕಾವ್ಯದ ವ್ಯಾಖ್ಯಾನ್ನದಂತಿರುವ ಇದು ಪ್ರತ್ಯೇಕ ಪುಟವೊಂದನ್ನು ಆವರಿಸಿ

ನಿಂತಿರುವುದು ವಿಶೇಷವೆನ್ನಬಹುದು. 'ಆಚಾರ, ಉಚ್ಚಾರ, ಎಚ್ಚರ, ಅಚ್ಚು, ನಿಚ್ಚ ಪದಗಳು ಆನಂದದ ಹೊಂಗಿರಣಗಳನ್ನು ಸ್ಫುರಿಸಿ ಸಚ್ಚಿದಾನಂದ ಸ್ವರೂಪನಾದ ಕಥಾನಾಯಕ ಸಿದ್ಧರಾಮನ ಭವ್ಯ ವ್ಯಕ್ತಿತ್ವವನ್ನು ತೋರುತ್ತದೆ. ಅದರಲ್ಲೂ 'ಮುಚ್ಚಿ ತಂದಿದ ಮುಡಿಯಿರಿ' ಎಂಬ ಬೀದರ ಭಾಷಾ ಸೊಗಡು ಮೀಸಲು ಭಾವವನ್ನು ಸ್ಫುಟಗೊಳಿಸಿ ಸಿದ್ಧರಾಮನ ದೈವಿಕ ಸ್ವರೂಪವನ್ನು ಮನದಲ್ಲಿ ಮೂಡಿಸುತ್ತದೆ.

ತ್ರಿದಳದ ಪತ್ತುರಿ ಎಂಬುದು ಮೂರು ಪದಗಳನ್ನು ಪತ್ತುರಿಯ ಮೂರು ಎಲೆಗಳನ್ನು, ಸಂಕೇತವಾಗಿಸಿಕೊಂಡು ಕನ್ನಡದ ಮೂಲ ಛಂದಸ್ಸು ತ್ರಿಪದಿಯು ಗೋಚರಿಸುತ್ತದೆ. ಈ ತ್ರಿಪದಿಯನ್ನು ಓದಿದಷ್ಟು ಸಲ ತನ್ನ ಅರ್ಥವ್ಯಾಪ್ತಿಯನ್ನು, ತನ್ನ ಭವ್ಯತೆಯ ಪರಿಧಿಯನ್ನು ವಿಸ್ತರಿಸುತ್ತ ಹೋಗುತ್ತದೆ. ಇದನ್ನು ಕುರಿತು ಆಲೋಚಿಸಿದಷ್ಟು ಇದು ಆನಂದನ್ನು ನೀಡುತ್ತದೆ.

ಕನ್ನಡದ ಮೂಲ ಛಂದಸ್ಸೆನಿಸಿರುವ ತ್ರಿಪದಿಯು ಜಾನಪದದ ಜೀವ ಜೀವಾಳವಾಗಿ, ಕನ್ನಡ ಕಾವ್ಯದ ಗಂಗೋತ್ರಿಯೆಂದು ಗುರುತಿಸಲ್ಪಟ್ಟಿದೆ. ಆದರೆ ಇದರ ಕಥೆಯು ಅನೇಕ ಏಳು ಬೀಳುಗಳಲ್ಲಿ ಸಾಗಿದೆ. ಕೆಲಕಾಲ ಕಣ್ಮರೆಯಾಗಿ, ಕೆಲವೊಮ್ಮೆ ಶಾಸನಗಳಲ್ಲಿ ಕುಳಿತು, ಕೆಲವೊಮ್ಮೆ ಪರದೇಶಿಯಾಗಿ, ಅನಾಮಧೇಯರ ತಂಗುಡಿ ಮನೆ ಮನಗಳಲ್ಲಿ ಬಾಳಿ, ಗುಡಿಸಲುಗಳಲ್ಲಿ ಜೀವಂತವಾಗಿದ್ದುಕೊಂಡು ಉಳಿದು ಬಂದಿದೆ. ೧೨ನೆಯ ಶತಮಾನದಲ್ಲಿ ಒಂದಿಷ್ಟು ಚೈತನ್ಯ ಪಡೆದುಕೊಂಡು, ಮತ್ತೆ ಕೆಲಕಾಲ ಅಜ್ಞಾತವಾಸದಲ್ಲಿದ್ದು, ಸರ್ವಜ್ಞನಿಂದ ಗೌರವಾನ್ವಿತ ಸ್ಥಾನ ಪಡೆಯಿತು. ೧೬ರಿಂದ ೨೦ನೆಯ ಶತಮಾನದವರೆಗೆ ಮತ್ತೆ ಅನಾಥವಾಗಿ ಅನಾದರಕ್ಕೆ ಕಾರಣವಾಗಿ ಇದು ಕೇವಲ ಹೆಣ್ಣು ಮಕ್ಕಳ ಹಾಡು ಎಂದು ಶಿಷ್ಟರ ಉದಾಸೀನಕ್ಕೆ ಕಾರಣವಾಗಿದ್ದು ಈ ತ್ರಿಪದಿಯು ಜಯದೇವಿ ಲಿಗಾಡೆಯವರ ಈ ಕಾವ್ಯದ ಕಥಾನಾಯಕನ ಭವ್ಯ ಜೀವನದೊಂದಿಗೆ ಸಮವಾಗಿ ಬೆಳೆದು ಬಂದಿರುವುದು ಒಂದು ವೈಶಿಷ್ಟ್ಯವೆನ್ನಬಹುದು.

ತ್ರಿಪದಿಯು ಮಹಾಕಾವ್ಯದ ಮಾಧ್ಯಮಕ್ಕೆ ಉತ್ತಮವಾಹಕವಾಗಿರಲಾರದು, ಭವ್ಯವಾದ ಸಿದ್ಧಾಂತಗಳ, ತತ್ವದರ್ಶನಗಳ ಮಂಡನೆಗೆ ಈ ಛಂದಸ್ಸು ಸರಿದೂಗಲಾರದು. ಕವಿಯ ಸರ್ವತೋಮುಖವಾದ ಜೀವನದ ಅಭಿವ್ಯಕ್ತಿಯನ್ನು ಬಿಂಬಿಸಿ ಮಹೋನ್ನತ ವ್ಯಕ್ತಿತ್ವದ ಚಿತ್ರಣವನ್ನು ನೀಡಲಾರದು ಎಂಬ ಭಾವನೆಯೇ ಜಿಡ್ಡುಗಟ್ಟಿ ಕೊಂಡಿದ್ದ ಸಂದರ್ಭದಲ್ಲಿ ಜಯದೇವಿ ತಾಯಿಯವರು ಈ ಕನ್ನಡದ ಛಂದಸ್ಸನ್ನು ತಮ್ಮ ಅಂಗೈಯೊಳಗಿನ ಲಿಂಗ ಮೂರ್ತಿಯ ಮುಡಿಗೇರಿಸುವ ಪತ್ತುರಿಯಾಗಿ, ಆ ಪತ್ತುರಿಯ ಬಾಹ್ಯರೂಪವನ್ನು ಕಾವ್ಯವಾಗಿಸಿ ತೋರಿಸಿರುವುದು ಅನನ್ಯವೆನ್ನಬಹುದು. ಈ ಮೂಲಕ ತ್ರಿಪದಿಯು ಇಲ್ಲಿ ತನ್ನ ಎತ್ತರ ಬಿತ್ತರಗಳನ್ನು ಪಸರಿಸಿ, ತನ್ನ ಮಹತಿಯ ಪರಿಧಿಯನ್ನು ವಿಸ್ತರಿಸಿಕೊಂಡಿತು.

ಈವರೆಗೆ ಬಿಡಿ ಬಿಡಿಯಾದ ಭಾವಗಳಿಗೆ ವಾಹಕವಾಗಿದ್ದ ತ್ರಿಪದಿಯು ಒಂದು ಮಹಾಕೃತಿಗೆ ಛಂದಸ್ಸಾಗಿ ಪರಿಣಮಿಸಿರಲಿಲ್ಲ. ಸಮಸ್ತ ಕಾವ್ಯವನ್ನಾಗಲಿ, ದರ್ಶನ, ಸಿದ್ಧಾಂತ, ಅನುಭಾವಗಳನ್ನು ಚಾರಿತ್ರಿಕವಾಗಿ ಅಭಿವ್ಯಕ್ತಗೊಳಿಸಿರಲಿಲ್ಲ. ಆದರೆ ತ್ರಿಪದಿಗೂ ಮಹಾಕಾವ್ಯದ ಭಾರ ಹೊರುವ ಸಾಮರ್ಥ್ಯವಿದೆ ಎಂಬುದನ್ನು ಜಯದೇವಿಯವರು 'ಶ್ರೀ ಸಿದ್ಧರಾಮೇಶ್ವರ ಪುರಾಣ' ಕೃತಿಯ ಮೂಲಕ ತೋರಿಸಿಕೊಟ್ಟರು. ಇಲ್ಲಿ ಈ ಕಾವ್ಯದ ಕಥಾನಾಯಕನೊಂದಿಗೆ ತ್ರಿಪದಿಯೂ ಮರು ಹುಟ್ಟು ಪಡೆಯಿತು ಎನ್ನಬಹುದು.

ಪರಂಪರಾನುಗತವಾಗಿ ಬಂದ ಈ ತ್ರಿಪದಿಯ ಮುಖಾಂತರ ಈ ಕಾವ್ಯವು ಹೇಗೆ ಬೆಳೆದು ಬಂದಿತು ಎಂಬುದನ್ನು ಕವಿಯಿತ್ರಿ–

ಭಾವದ ಬಳ್ಳಿಗೆ ದೇವನ ಹೂಗಳು
ಶಿವ ಸಿದ್ಧರಾಮನ ಪುರಾಣ ಕಾಯಾಗಿ
ಭಾವ ಬಯಲೊಳು ಫಲಿಸಿದೆ

ಎಂದು ಹೇಳುತ್ತಾರೆ. ಈ ಕಾವ್ಯವನ್ನು ಬರೆದದ್ದು ಏಕೆ? ಎಂಬುದನ್ನು ಕುರಿತು–

ಶರಣರ ಕರುಣೆಯ ಕಾಸಾರ ಕವಲೊಡೆದು
ಹರಿದು ಹಾಯಿತ್ತು ಎನ ಮೇಲೆ! ಸಿದ್ಧನ
ವರವು ಆಗಿತ್ತು ಬರಿವುದಕೆ'

ಎಂದು ತಿಳಿಸುತ್ತಾರೆ. ತಾನೇ ತಾನಾಗಿ ಬಂದು ನಿಂತು ನೆಲೆಗೊಂಡಿರುವ ಈ ರೂಪದ ಅಭಿವ್ಯಕ್ತಿಗೆ ನಾನು ನಿಮಿತ್ತಳು ಎಂದು ವಿನಮ್ರವಾಗಿ ನುಡಿಯುತ್ತಾರೆ. ಕವಿಯತ್ರಿ, ಜಯದೇವಿಯವರು ರಚಿಸಿದ ಕೃತಿಗಳಲ್ಲಿ ಶ್ರೀ ಸಿದ್ಧರಾಮ ಪುರಾಣವು ದೊಡ್ಡ ಕೃತಿ. ಶಿವ ಸಿದ್ಧರಾಮ ಇದರ ಕಥಾನಾಯಕ. ಕನ್ನಡದಲ್ಲಿ ಕುವೆಂಪುರವರ 'ಶ್ರೀ ರಾಮಾಯಣ ದರ್ಶನಂ'ದ ನಂತರ ಗಮನಾರ್ಹ ಕೃತಿ ಈ ಕೃತಿಯ ವೈಶಿಷ್ಟ್ಯತೆ ಜಯದೇವಿಯವರ ರಚನಾ ಶೈಲಿಯೂ ಬಹುಮಟ್ಟಿಗೆ ಕಾರಣವೆನಿಸಿದೆ. ತುಂಡು ತುಂಡು ಅನುಭವಗಳನ್ನು ತುಣುಕಿನಲ್ಲಿ ಹಿಡಿದಿಡುವ ಜನಪದರ ಶೃಂಗಾರ, ಭಕ್ತಿ, ವೀರ, ಕರುಣಾರಸ, ಪ್ರಧಾನವಾಗಿದ್ದ ಇಂಥ ತ್ರಿಪದಿಗಳು ಕೆಲವೊಮ್ಮೆ ಖಂಡ ರೂಪದಲ್ಲಿ, ಕೆಲವೊಮ್ಮೆ ಅಖಂಡ ರೂಪದಲ್ಲಿ ಮಾತ್ರ ಈ ಹಿಂದೆ ಬಳಕೆಯಲ್ಲಿ ಬಂದಿದ್ದವು. ಹೀಗೆ ಶ್ರೀ ಸಿದ್ಧರಾಮ ಪುರಾಣದಂತೆ ಮಹಾಕಾವ್ಯದ ವಿಸ್ತಾರಕ್ಕೆ ತ್ರಿಪದಿ ಒಳಗಾಗಿರಲಿಲ್ಲ. ಜಯದೇವಿಯವರು ಈ ಮೂಲಕ ಅದನ್ನು ಭಕ್ತಿ ಶಾಂತಿರಸದ ಅಭಿವ್ಯಕ್ತಿಗೂ ಸಮರ್ಪಕ ವಾಹಕವಾಗಿ ಬಳಸಿಕೊಂಡಿರುವುದನ್ನು ಇಲ್ಲಿ ಕಾಣಬಹುದು.

ಕನ್ನಡದಲ್ಲಿ ಶರಣರ ಚರಿತ್ರೆ ಹಾಗು ಸಾಹಿತ್ಯವು ಕಂಠಸ್ಥರೂಪದಿಂದ ಗ್ರಂಥ ಸ್ವರೂಪಕ್ಕೆ ಬಂದಿದೆ ಅವರ ಜೀವನ ಸಾಧನೆಯು ಐತಿಹಾಸಿಕ ಸತ್ಯವೆಂದು ಅವರ

ಕಾಲಾನಂತರದಲ್ಲಿ ದೊರಕಿದ ಶಾಸನಗಳಿಂದ ತಿಳಿದು ಬರುತ್ತದೆ. ಅವುಗಳಲ್ಲಿ ಸಿದ್ಧರಾಮನ ಬಗೆಗೆ ೧೨ನೇ ಶತಮಾನದ ಕೊನೆಯ ಭಾಗದಿಂದ ಹಿಡಿದು ಇಲ್ಲಿಯವರೆಗೆ ದೊರಕಿರುವ ಶಾಸನ, ಸಾಹಿತ್ಯ, ಕೃತಿಗಳಲ್ಲಿ ಮೂಡಿರುವ ಚರಿತ್ರೆಯ ವಿಕಾಸದ ಸಮಗ್ರತೆಯು ಈ ಪುರಾಣದಲ್ಲಿ ಸೇರಿದೆ ಎನ್ನಬಹುದು. ಈ ಪುರಾಣ ರಚನೆಗೆ ಹಲವು ಕೃತಿಗಳು ಆಕರವಾಗಿದ್ದರು ಸಹ ರಾಘವಾಂಕನ 'ಸಿದ್ಧರಾಮ ಚರಿತೆ'ಯ ಬಹು ಪಾಲು ಕಥೆ ಇದರಲ್ಲಿ ಒಡ ಮೂಡಿದೆ. ಸಿದ್ಧರಾಮನು ಕಲ್ಯಾಣದಲ್ಲಿ 'ಲಿಂಗದೀಕ್ಷೆ' ಪಡೆದ ಪ್ರಸಂಗದಿಂದ ಹಿಡಿದು ಮುಂದಿನ ಘಟನೆಗಳನ್ನು ಬೇರೆ ಬೇರೆ ಕೃತಿಗಳಿಂದ ಎತ್ತಿಕೊಂಡು, ಪುರಾಣದ ಚೌಕಟ್ಟಿಗೆ ಹೊಂದಿಸಿಕೊಂಡು, ಕೆಲವು ವಿಷಯಗಳನ್ನು ಕೈಬಿಟ್ಟು ಹಿಂದಿನಿಂದಲೂ ಪ್ರಚಲಿತವಿರುವ ವಸ್ತು, ಘಟನೆ, ಸಂದರ್ಭಗಳನ್ನು ತಮಗನುಕೂಲವಾದಂತೆ ಮಾರ್ಪಡಿಸಿಕೊಂಡಿದ್ದಾರೆ.

ಕಾವ್ಯದ ಪ್ರಾರಂಭದಲ್ಲಿ ಸಿದ್ಧರಾಮನ ಸ್ತುತಿ ಶರಣ-ಶರಣೆಯರಲ್ಲಿ ಕರುಣೆಪಡೆದು, ಗಾಂಧೀಜಿಯವರನ್ನು ಸ್ಮರಿಸಿ ಜಯದೇವಿಯವರು ತ್ರಿಪದಿಯಲ್ಲಿ ಹಾಡಲು ಪ್ರಾರಂಭಿಸುತ್ತಾರೆ. ಇಲ್ಲಿ ಸಿದ್ಧರಾಮನ ತಂದೆ ತಾಯಿಗಳಾಗುವವರು ಶಾಪಗ್ರಸ್ಥ ಗಂಧರ್ವ ದಂಪತಿಗಳು ಅದರ ನಿವಾರಣೆಗಾಗಿ ಭೂಲೋಕಕ್ಕೆ ಹುಟ್ಟಲು ಬರಬೇಕಾಯಿತು ಇಲ್ಲಿಯ ಕಥಾ ನಾಯಕ 'ಸಿದ್ಧನು-ಶಿವನೇ ಆಗಿದ್ದಾನೆ.' 'ನಿಮ್ಮುದರದಿ ಶಿವಯೋಗಿ ನಾನಾಗಿ ಭವ ಪರಿಹರಿಸುವೆ'ನೆಂದು ಗಂಧರ್ವರಿಗೆ ಆಶ್ವಾಸನೆ ಕೊಡುತ್ತಾನೆ ಇಲ್ಲಿ ಶಿವ.

ರಾಘವಾಂಕ ಕವಿಯು ಸಿದ್ಧರಾಮನ ತಂದೆ-ತಾಯಿ ಮುದ್ದುಗೌಡ, ಸುಗ್ಗಲವ್ವೆಯರೆಂದು ಹೇಳಿ ಅವರು 'ಅತಿಗಳಗಳನೆ ನವ ವನಾಂತರದ ಕೊಳನೊಳಗೆ ಮರಿದುಂಬಿಯುಂ, ಸಣ್ಣ ನನೆಯುಂ ಬೆಳೆವವೊಲ್ ಬೆಳೆದರೆಂದು ಹೇಳಿ ಕಥೆಯನ್ನು ಓಡಿಸುತ್ತಾನೆ. ಆದರೆ ಇಲ್ಲಿ ಕವಯಿತ್ರಿ ಸಿದ್ಧರಾಮನ ಹುಟ್ಟಿನ ಹಿನ್ನೆಲೆಯನ್ನು ಸವಿಸ್ತಾರವಾಗಿ ಹೇಳ ಹೊರಟಿದ್ದಾರೆ. ಕಥಾನಾಯಕನ ಜನನದ ಪೂರ್ವಸಿದ್ಧತೆಯನ್ನು ಕುರಿತು ಜಯದೇವಿಯವರು ಬರಡು ಭೂಮಿಯು ಬೆಳೆದು, ಸಮೃದ್ಧಿಯ ಸಂಕೇತಗಳೇ ತುಂಬಿ ತುಳುಕಾಡಿದಾಗ ಅಪರೂಪಕ್ಕೆ ಮುದ್ದು ಮುದ್ದಾಗಿ ಹುಟ್ಟಿದ ಮಗು ಮುದ್ದುಗೌಡ, ಸುಗ್ಗಿಯಕಾಲದ ಸಂಭ್ರಮದಲ್ಲಿ ಹುಟ್ಟಿದ ಹೆಣ್ಣು ಮಗು ಸುಗ್ಗಲವ್ವೆ ಇವರು ಸಮ ಜೋಡಿಯೆಂದು ಹಿರಿಯರು ಮದುವೆ ಮಾಡಿದರು. ಸುಗ್ಗಲವ್ವೆ- ಮುದ್ದುಗೌಡರು ಪರೋಪಕಾರಿಗಳು, ತ್ಯಾಗಿಗಳು, ಇಬ್ಬರ ಹರೆಯ ಉರುಳಿ, ನರೆಯಾಗಿ ತಲೆತುಂಬಿ ಮುಪ್ಪಿನವರಾದಾಗಲೂ ಮಕ್ಕಳಾಗಲಿಲ್ಲವೆಂದು ಕಥೆಯನ್ನು ವಿಸ್ತರಿಸಿದ್ದಾರೆ.

ರಾಘವಾಂಕನು ಕೆಲವೇ ಮಾತುಗಳಲ್ಲಿ ಹುಟ್ಟಲಿರುವ ಮಹಾಪುರುಷನು 'ಜಡನು, ಕೇಳನು, ಅಳನು, ನುಡಿಯನುಣ್ಣನು ಉಸಿರಿಕ್ಕನು .......... ಧೃತಿಗೆಡದಿರು' "ಸಿದ್ಧರಾಮಾ ಎಂದು ಕರೆ"ಯೆಂದು ತಾಯಿಗೆ ಮಗುವಿನ ಬಗೆಗೆ

ಗಾಬರಿಯಾಗದಂತೆ ಹೇಳಿ ರೇವಣಸಿದ್ಧ ಗುರುಗಳು ಹಿಂದಿರುಗಿದರೆಂದು ಹೇಳಿದ್ದಾನೆ. ಅಲೌಕಿಕ ಪುರುಷನಾದ 'ಸಿದ್ಧರಾಮ' ಹುಟ್ಟುವ ಮೊದಲು 'ಮದನನಿಗೆ ಚಿಂತೆ, ಮಾಯೆಗೆ ದುಗುಡ – ಅಜ್ಞಾನಕೆ ತಲ್ಲಣವಾಗಿ ಕರ್ಮಯೋಗಿ ಯಾಗುವ ಸುಳಿವನ್ನು ಇಲ್ಲಿ ನೀಡುತ್ತಾನೆ ಕೆಲವೇ ಶಬ್ದಗಳಲ್ಲಿ ರಾಘವಾಂಕನು ಮಹಾ ಪುರುಷನ ಬರವನ್ನು ಸಮರ್ಥವಾಗಿ ಸೂಚಿಸುತ್ತಾನೆ. ಸಿದ್ಧರಾಮ ಪುರಾಣದಲ್ಲಿ 'ಜಯದೇವಿ ತಾಯಿ'ಯವರು ಸಿದ್ಧರಾಮನ ಜನನವನ್ನು ಇನ್ನೂ ಹೆಚ್ಚು ಆಕರ್ಷಣೀಯಗೊಳಿಸಿದುದನ್ನು ಕಾಣಬಹುದು. ತಿಂಗಳ ಚಂದ್ರನು ಮುಗಿಲಿಂದ ಹೊರಬರುವಂತೆ ಜಗವೆಲ್ಲ ಮಲಗಿದಾಗ ಯೋಗಿ ಎಚ್ಚತ್ತಿರುವಂತೆ, ತಾಯ್ತನ ಬೆಂದು ಹೊರಬಂದ – ಹುಟ್ಟಿದ ಶಿಶುವನ್ನು ಗಿರಿಜೆ ಬಂದು ತನ್ನ ಕರತೊಟ್ಟಿಲಲ್ಲಿಟ್ಟು ತೂಗಿ ಹರಸಿ 'ಸಿದ್ಧರಾಮಾ'ಯೆಂದು ಹೆಸರಿಟ್ಟು ಹಾಡಿ ಮರಳಿದ್ದಾಳೆ. ಆಗ ಸುಗ್ಗಲವ್ವೆಯ ಬದುಕಿನ ಸಂಜೆ ಮುಂಜಾವಾಗಿ ಕಂಡಿದೆ. ಎಂದು ಹೇಳಿರುವುದು ಮನಮೋಹಕವಾಗಿದೆ. ಮಾತೃಹೃದಯದ ರಸಾನುಭವವು ಈ ಕೃತಿಯಲ್ಲಿ ಎಲ್ಲೆಲ್ಲೋ ಚೆಲುವಾಗಿ ಪರಿಣಮಿಸಿದ್ದು, ಸಿದ್ಧರಾಮೇಶ್ವರನ ಚರಿತ್ರೆಗೆ ಕವಿಯತ್ರಿಯ ಚರಿತ್ರೆಯೇ ಉತ್ತಮ ಪೀಠಿಕೆಯಾಗಿದೆ ಎನ್ನಬಹುದು.

ಹಿಂದೆ ಅನಾಮಧೇಯವಾಗಿ ತನ್ನ ಸುಖ, ದುಃಖ, ಭಕ್ತಿಗಳನ್ನು ಜಾನಪದ ತ್ರಿಪದಿಯಲ್ಲಿ ತೋಡಿಕೊಂಡ ಮಹಿಳಾ ಹೃದಯ ಇಂದು ಪ್ರಜ್ಞಾ ಪೂರ್ವಕವಾಗಿ ಅದೇ ಹಾಡನ್ನು ಮಹಾಕಾವ್ಯವಾಗಿ ಹಾಡಿದೆ. ಈ ಮಹಾ ಕಾವ್ಯದ ಕಥಾನಾಯಕನು ಶೂದ್ರ ವಂಶದವನು. ಈ ಹಿಂದೆ ಈ ರೀತಿ ಮಹಾ ಕಾವ್ಯವನ್ನು ಯಾರೂ ರಚಿಸಿರಲಿಲ್ಲ. ಹೀಗಾಗಿ ಈ ಸಿದ್ಧರಾಮ ಪುರಾಣದ ಹೊಲಬು, ಗೆಲುವು ಬೇರೆಯೇ ಆಗುತ್ತದೆ. ಯಾಕೆಂದರೆ ಜಯದೇವಿ ತಾಯಿಯವರ ಕಥಾನಾಯಕ ಒಂದು ಸಣ್ಣ ಹಳ್ಳಿ ಸೊನ್ನಲಗಿಯ ಸಣ್ಣ ಒಕ್ಕಲಿಗರ ಕುಟುಂಬದಲ್ಲಿ ಹುಟ್ಟಿದವನು. ತನ್ನ ಮಗ ಎಂಟು ವರ್ಷದವನಿದ್ದಾಗಲೇ ದನ ಕಾಯಲು ಹೋದಂತವನು. ಒಬ್ಬ ಬಡ ಮುದಿಗೌಡ ಹಾಗೂ ಸುಗ್ಗಲವ್ವೆಯರ ಮಗನ ಪುಣ್ಯ ಚರಿತೆಯಿಂದಾಗಿ ಹೊರಹೊಮ್ಮಿದೆ ಈ ಪುರಾಣ.

ಸಿದ್ಧರಾಮನು ಅಲೌಕಿಕ ಪುರುಷನೆಂದು ರಾಘವಾಂಕನು ಹೆಜ್ಜೆ ಹೆಜ್ಜೆಗೆ ಹೇಳುತ್ತಾನೆ. ಅವನು ತಾಯಿಯಿಂದ ಬುತ್ತಿ ತಂದು ಮಲ್ಲಯ್ಯನನ್ನು ಹುಡುಕಿ ಸಿಗದೆ ಶ್ರೀ ಶೈಲಕ್ಕೆ ಹೋದಾಗ ಸುಗ್ಗಲವ್ವೆ ಕಾಡು ಮೇಡು ಅಲೆಯುತ್ತಾ ಮಗನನ್ನು ಪುರ ಜನರೊಂದಿಗೆ ಹುಡುಕಾಡುತ್ತಾಳೆ. ಆ ಸಂಧರ್ಭದಲ್ಲಿ ಶಿವನೇ ವೇಷ್ಯಾಂತರ ದಿಂದ ಬಂದು ಅವಳನ್ನು ಸಂತೈಸಿ ಸಿದ್ಧರಾಮನು ಮರಳಿ ಬರುತ್ತಾನೆಂದು ಹೇಳಿ ಅವಳನ್ನು ಮನೆಗೆ ಕಳಿಸುತ್ತಾನೆ. ಇಲ್ಲಿ ತಾಯಿಯ ದುಃಖದ ತೀವ್ರತೆಯಿದೆ ಆದರೆ ಜಯದೇವಿ ಯವರು ಈ ಪ್ರಸಂಗವನ್ನು ಇಂದಿನ ತನ್ನ ಶ್ರೀಮಂತ ಪರಿಸರದ ಹಿನ್ನೆಲೆಯಲ್ಲಿ ಚಿತ್ರಿಸಿರುವುದು, ಹೆಚ್ಚು ಆತ್ಮೀಯವಾಗುತ್ತದೆ.

ಮಗು ದಾರಿ ತಪ್ಪಿದನೇನೋ ಎಂದು ನೋಡಿಬರಲು ಮುದ್ದುಗೌಡರು ಹೋದಾಗ, ಮಾತು ಕಲಿತ ಮಗನ ಜೊತೆ ಮಾತಾಡುವಲ್ಲಿ ದಾರಿ ತಪ್ಪಿರಬೇಕೆಂದು, ಅಕ್ಕಪಕ್ಕದವರ ಜೊತೆಗೆ ಚಿಂತಿಸುತ್ತ, ದುಃಖ ಪಡುತ್ತ ಸುಗ್ಗಲವ್ವೆ ಮನೆಯಲ್ಲಿಯೇ ಕುಳಿತಿರುತ್ತಾಳೆ. ಸುಡುಗಾಡು ಸಿದ್ದರು, ಮಾಂತ್ರಿಕರು, ಮಕ್ಕಳನ್ನು ಕದ್ದು ಮಾರುವವರು ಮಗುವನ್ನು ಒಯ್ದಿರಬೇಕೆಂದು ತರ್ಕಿಸುತ್ತಾಳೆ. ಅಲ್ಲಿ ಕುಳಿತವರು ತಲೆಗೊಬ್ಬರು ಒಂದೊಂದು ರೀತಿ ಸಲಹೆ ಮಾಡುತ್ತಾರೆ. ಶಾಸ್ತ್ರ ಕೇಳುವುದು, ಹರಕೆ ಹೊರುವುದು, ಜಾತ್ರೆ ಮಾಡಿಸುವ ಹರಕೆ ಹೊತ್ತು ಊರ ಜನರೆಲ್ಲ ಸೇರಿ ವೀಳ್ಯವೆತ್ತಿ ಹುಡುಕಲು ಹೊರಡುವುದು, ಇವು ಕವಿಯಿತ್ರಿಯ ಪರಿಸರದ ಪ್ರಭಾವದಿಂದ ಮೂಡಿ ನಿಂತಿರುವ ಚಿತ್ರಗಳು ಓಣಿಯ ಜನರೆಲ್ಲ ಈ ಸಂಧರ್ಭದಲ್ಲಿ 'ಶಿವನನ್ನು' ಬಯ್ಯುತ್ತಿದ್ದರೂ ಸುಗ್ಗಲವ್ವೆ – ಮುದ್ದುಗೌಡರು ತಿಲಮಾತ್ರವೂ ಬೈಯುವುದಿಲ್ಲ ಕವಿಯಿತ್ರಿಯು ಈ ಮೂಲಕ ಕಥಾನಾಯಕನ ತಂದೆ ತಾಯಿಯರ ಘನತೆಯನ್ನು ವ್ಯಕ್ತಪಡಿಸಿರುವುದನ್ನು ಮನಗಾಣಬಹುದು. ಸುಗ್ಗಲವ್ವೆ 'ಬೇಡದಲೆಕೊಟ್ಟು ಓಡಿಸಿ ಒಯ್ದು, ಕಾಡಿನೊಳು ಜೋಡು ಅವಗ್ಯಾರು ನಿನ್ಹೊರತು ಒಡೆಯ ರೇವಣಸಿದ್ದ ಕಾಪಾಡು' ಎಂದು ಬೇಡುತ್ತಾಳೆ.

ಸಿದ್ದರಾಮನು ಎಂಟು ವರ್ಷಕ್ಕೆ ಶ್ರೀ ಶೈಲಕ್ಕೆ ಹೋಗಿ ಮಲ್ಲಿಕಾರ್ಜುನನ್ನು ಕಂಡು, ಅವನ ಆಣತಿಯಂತೆ ಮರಳಿ ಸೊನ್ನಲಿಗೆಗೆ ಬರುತ್ತಾನೆ. ಲೋಕೋತ್ತರ ಕಾರ್ಯಗಳಲ್ಲಿ ತೊಡಗುತ್ತಾನೆ. ಜನರ ಭವಣೆ ಬರಗಾಲಗಳನ್ನು ದೂರಮಾಡುವ, ದನಕರುಗಳಿಗೆ ನೀರು ದೊರಕಿಸುವಂಥ ಯೋಜನೆಗಳನ್ನು ತಯಾರಿಸುತ್ತಾನೆ. ಆ ಹಿನ್ನೆಲೆಯಲ್ಲಿ ಅಲ್ಲಿ ಒಂದು ಕೆರೆ ಹಾಗೂ ಬಾವಿಗಳನ್ನು ಕಟ್ಟಲು ಮುಂದಾಗುತ್ತಾನೆ. ತನ್ನ ನೂರೆಂಟು ಜನ ಶಿಷ್ಯರನ್ನು (ಗುಡ್ಡರನ್ನು) ಕೂಡಿಸಿ, ಶ್ರಮದಾನ ಮಾಡಿಸುತ್ತಾನೆ. ಆ ಶಿಷ್ಯರ ಮೂಲಕ ಸಹಕಾರ ತತ್ವದ ಮಹತ್ವವನ್ನು ತೋರಿಸಿ ವಿಶಾಲವಾದ ಕೆರೆಯನ್ನು ಕಟ್ಟುತ್ತಾನೆ. 'ರಾಣಿ ಚಾಮಲದೇವಿಯು ಕೊಡಮಾಡಲು ಬಂದ ಭೂಮಿದಾನ, ವಸ್ತ್ರದಾನ ಹಾಗೂ ಎಲ್ಲ ಸಂಪತ್ತನ್ನು ಜಂಗಮ ದಾಸೋಹಕ್ಕೆ ಧಾರೆಯೆರೆಯುತ್ತಾನೆ. ಸಿದ್ದರಾಮನ ಲಿಂಗ (ಆದಿಲಿಂಗ) ಪೂಜೆಯು ವಿಶಿಷ್ಟವಾಗಿತ್ತು. ಅಲ್ಲಿ ಆತನು ಆ ಶಿವನನ್ನು ತನಗಾಗಿ ಪೂಜಿಸುತ್ತಿರಲಿಲ್ಲ. ಅದು ಪಾಮರರ ರಕ್ಷಣೆಗಾಗಿಯೇ ಎಂಬುದನ್ನು ವಿವರಿಸಲಾಗಿದೆ.

ನಕ್ಷತ್ರ ಎಂಬುವ ಅಕ್ಷತೆಯನು ಧರಿಸಿ
ದಕ್ಷತೆಯಿಂದ ಚರಣಕ್ಕೆ ಎರಗುತ – ಸಿದ್ದೇಶ
ರಕ್ಷಿಸು ಎಂದನು ಪಾಮರರ

ಪಾಮರರನ್ನು ಅಭಿವೃದ್ಧಿಪಡಿಸುವ, ಅವರ ಉತ್ಕರ್ಷ ಬಯಸುವ ಗುಣ ಈ ನಾಯಕನದು, ರಾಘವಾಂಕನ ಮಲ್ಲಯ್ಯನು ಸಿದ್ದರಾಮನಿಗೆ 'ಲಿಂಗದ ಮೇಲೆ

ಲಿಂಗಸ್ಥಾಪಿಸು, ಎಂದಿದ್ದರೆ, ಜಯದೇವಿಯವರು-೬೮ ಲಿಂಗ ಸ್ಥಾಪನೆ, ಕೆರೆಬಾವಿ, ಅರವಟ್ಟಿಗೆ ಕಟ್ಟಿಸಿ ಸೊನ್ನಲಿಗೆಯಲ್ಲಿ ನವಸಿರಿಗಿರಿಯನ್ನು ಸ್ಥಾಪಿಸುವಂತೆ ಹೇಳಿಸಿದ್ದಾರೆ. ಪ್ರಭು ಲಿಂಗಲೀಲೆ, ಶೂನ್ಯ ಸಂಪಾದನೆಗಳಲ್ಲಿ ಬರುವಂತೆ "ಅಲ್ಲಮನು ಸಿದ್ದರಾಮನೊಡನೆ ಕಲ್ಯಾಣಕ್ಕೆ ಹೋಗಿ ಬಸವಾದಿ ಶರಣರನ್ನು ತೋರಿಸಿದ ವಿಷಯವನ್ನು ತಾಯಿಯವರೂ ಹೇಳಿದ್ದಾರೆ. ಆದರೆ ಇದಕ್ಕೆ ಪೂರ್ವಭಾವಿಯಾದ ಅಲ್ಲಮ-ಸಿದ್ದರಾಮರ ಮಧ್ಯದಲ್ಲಿ ನಡೆದ ಸಂಭಾಷಣೆಯು ರಾಘವಾಂಕನಷ್ಟು ನಾಟಕೀಯತೆ ಹಾಗೂ ಸರಸತೆಯು ಪುರಾಣದಲ್ಲಿ ಮೂಡಿಬಂದಿಲ್ಲ. ಅಂಗಾಲಗಣ್ಣು-ಉರಿಗಣ್ಣುಗಳ ತಾಕಲಾಟದ ನಂತರ ಮೂರು ಸಂಧಿಗಳಲ್ಲಿ ನಡೆದ ಈ ಈರ್ವರ ತಾತ್ವಿಕ ದರ್ಶನದ ಚರ್ಚೆಯು ಸುದೀರ್ಘವಾಗಿದ್ದು, ತತ್ವ-ಭಾವಗಳು ಚರ್ವಿತ-ಚರ್ವಣಗಳಾಗಿ ನೀರಸವೆನಿಸುತ್ತವೆ. ನಂತರ ಬಸವನ ಮಹಿಮೆ ಕೇಳಿ ಸಿದ್ದರಾಮನು ಅಲ್ಲಮನೊಂದಿಗೆ ಕಲ್ಯಾಣಕ್ಕೆ ಬರುತ್ತಾನೆ. ಈ ಮೊದಲೇ ಸಿದ್ದರಾಮನು ಅಲ್ಲಮನಿಂದ ಇಷ್ಟಲಿಂಗದ ಅರ್ಥ ಮಹಾಲಿಂಗ ಸ್ವರೂಪ ವರ್ಣನೆಯನ್ನು ಕೇಳಿ ತಿಳಿದುಕೊಂಡಿರುತ್ತಾನೆ ಇಲ್ಲಿ.

ಕಲ್ಯಾಣದಲ್ಲಿ ಸಿದ್ಧರಾಮನ ಬರುವಿಕೆಯನ್ನು ಚನ್ನಬಸವಣ್ಣನನು ತ್ರಿಕಾಲ ಜ್ಞಾನದಿಂದ ಬಸವಣ್ಣನಿಗೆ ತಿಳಿಸಿದ್ದು, ಅಲ್ಲಮ - ಸಿದ್ದರಾಮರು ಕಲ್ಯಾಣದ ಬಾಗಿಲಿಗೆ ಬಂದಾಗ ಅಲ್ಲಿದ್ದ ಶಾಸನದಿಂದ ಹಿಡಿದು ಪಟ್ಟಣದವರೆಗೆ ಬಣ್ಣಿಸಿದ್ದು, ಹಡಪದ ಅಪ್ಪಣ್ಣನು ಬಸವನ ಮಹಾಮನೆಗೆ ಸ್ವಾಗತಿಸಿದಾಗ ಅಲ್ಲಮಪ್ರಭು ನಿರಾಕರಿಸಿದ್ದು, ಬಸವ-ಚನ್ನಬಸವಣ್ಣನವರು ಅಸಂಖ್ಯ ಶರಣರ ಕೂಡಿಸಿಕೊಂಡು, ಅಲ್ಲಮ-ಸಿದ್ಧರಾಮನನ್ನು ಕರೆಯಲು ಹೊರಟದ್ದು, ಬಸವನು ಅಲ್ಲಮನ ಪಾದಗಳಿಗೆರಗಿ ಅಹಂಕಾರ ನಿರಸನ ಮಾಡಿಕೊಂಡದ್ದು, ಅಲ್ಲಮನು ಸದಾಚಾರ - ಭೃತ್ಯಾಚಾರಗಳನ್ನು ಬೋಧಿಸಿದ್ದು, ಚನ್ನಬಸವನು ಅಲ್ಲಮನಿಗೆ ನಮಿಸಿ ದಯೆ ತೋರಲು ಕೇಳಿಕೊಂಡದ್ದು, ಎಲ್ಲರ ವಿನಂತಿಯ ಮೇರೆಗೆ ಅಲ್ಲಮನು ಬಸವನ ಅರಮನೆಗೆ ನಡೆ ತಂದದ್ದು, ಆಗ ಪ್ರಸಾದದ ಕುಳಿಯಲ್ಲಿದ್ದ ಮರುಳು ಶಂಕರ ದೇವನನ್ನು ಅಲ್ಲಮನು ಪರಿಚಯಿಸಿದ್ದು, ಅದ ಕಂಡು ಬಸವನು ಪಶ್ಚಾತಾಪದಿಂದ ಆತ್ಮ ನಿರೀಕ್ಷಣೆಮಾಡಿಕೊಂಡದ್ದು, ಇವೆಲ್ಲ ವಿಷಯಗಳು ಪುರಾಣದ ಐದು ಸಂಧಿಗಳಲ್ಲಿ ವ್ಯಕ್ತವಾಗಿವೆ. ಈ ವಿವರವು ಸಿದ್ದರಾಮನ ಲಿಂಗದೀಕ್ಷೆಗೆ ವೇದಿಕೆಯಾಗಿ ನಿರ್ಮಾಣವಾಗಿದ್ದು, ಇಲ್ಲಿ ಸಿದ್ದರಾಮನಿಗೆ ಸಮರ್ಥಗುರು ಚನ್ನಬಸವಣ್ಣನೆಂಬುದನ್ನು ತೋರಿಸಲು ಸಿದ್ದತೆ ಮಾಡಿಕೊಂಡಿರುವಂತಿದೆ. ಇಲ್ಲಿ ಕಥಾನಾಯಕನಿಗಿಂತ ಬಸವಾದಿ ಶರಣರ ಹೊಗಳಿಕೆಯು ದೀರ್ಘವಾಗಿ ಬಂದು ರಸಬಾಧೆ ಉಂಟಾಗಿದೆ. ಇದಕ್ಕೆ ಕಾರಣ ಕವಯಿತ್ರಿ ಅನುಸರಿಸಿರುವ ಶೂನ್ಯ ಸಂಪಾದನೆಗಳ ಕಥಾವಸ್ತುವೆನ್ನಬಹುದು.

ಸಿದ್ದರಾಮನಿಗೆ ಅಲ್ಲಮನು ಚನ್ನ ಬಸವಣ್ಣನಿಂದ ಲಿಂಗದೀಕ್ಷೆ ಕೊಡಿಸುತ್ತಾರೆ. ಇಲ್ಲಿ ಶಿಷ್ಯ ಗುರುವನ್ನು, ಗುರು ಶಿಷ್ಯನನ್ನು ಸ್ತುತಿಸುತ್ತಾರೆ. ಮುಂದೆ ಶಿವಯೋಗದ

ನಿಲುವಿನಲ್ಲಿ ನಿಂತ ಸಿದ್ಧರಾಮನು ಬಸವಾದಿ ಶರಣರನ್ನು ಸ್ತುತಿಸುತ್ತಾನೆ. ಶರಣೆಯರು, ಸಿದ್ಧರಾಮನನ್ನು ಸ್ತುತಿಸಿ ಅನುಭವ ಮಂಟಪದಲ್ಲಿ ಪಾದ ಪೂಜೆಗೆ ತಯಾರು ಮಾಡುವ ಪ್ರಸಂಗವನ್ನು ಇಲ್ಲಿ ಕವಯಿತ್ರಿ ಹಮ್ಮಿಕೊಂಡಿದ್ದಾರೆ. ಕಥಾನಾಯಕನ ಘನತೆ-ಗೌರವಧನಗಳನ್ನು ಹೆಚ್ಚಿಸಲು ಈ ಸನ್ನಿವೇಶವನ್ನು ಕವಯಿತ್ರಿ ಸೃಷ್ಟಿಸಿದ್ದಾರೆ ಎನ್ನಿಸಿದರೂ ಆ ಸ್ಥಾನಕ್ಕೆ ಸಿದ್ಧರಾಮನು ಯೋಗ್ಯನೂ ಆಗಿದ್ದಾನೆಂಬುದನ್ನು ಅರಿಯಬಹುದು.

ಶಿವತತ್ವ ಬೀರಲು ಶಿವನಾಣತಿಯಂತೆ ಭುವಿಗೆ ಬಂದ ಸಿದ್ಧರಾಮನು ಕಲ್ಯಾಣದಿಂದ ಮತ್ತೆ ಸೊನ್ನಲಗಿಗೆ ಹಿಂದಿರುಗಬೇಕಾಯಿತು. ಅಲ್ಲಿ ಆತನು ಲೋಕ ಕಲ್ಯಾಣದಲ್ಲಿ ತೊಡಗಿದ ಚಿತ್ರ ರಾಘವಾಂಕ ಜಯದೇವಿ ತಾಯಿಯವರಲ್ಲಿ ಒಂದೇ ರೀತಿಯಲ್ಲಿದೆ. ಕಲ್ಯಾಣ ಕ್ರಾಂತಿಯಾಗುವ ಮುನ್ನ ಅಲ್ಲಮ, ಅಕ್ಕಮಹಾದೇವಿಯರು ನಿಸ್ಸೀಮದಾಚೆಗೆ ಸರಿದಿದ್ದರು. ಜಾತಿ ಸಂಕರದ ನೆಪದಲ್ಲಿ 'ಎಳೆಹೂಟೆಯ ಶಿಕ್ಷೆ' ನಡೆದಾಗ ಕಲ್ಯಾಣದಲ್ಲಿ ಕ್ರಾಂತಿಯಾಯಿತು. ಆಗ ಶರಣರೆಲ್ಲ ಹರಿದು ಹಂಚಿ ಹೋದರು 'ಏನಿದ್ದ ಕಲ್ಯಾಣ ಏನಾಯ್ತು' ಎಂದು ಮನುಕುಲ ಮರಗುವಂತಾಯ್ತು. ಆಗ ಸಿದ್ಧರಾಮ ಏನು ಮಾಡಿದನು? ಸುಮ್ಮನಿದ್ದನೇ? ರಾಘವಾಂಕ ಕವಿ ಈ ವಿಷಯವನ್ನು ಎತ್ತಿಕೊಂಡಿಲ್ಲ. ಕರ್ಣದೇವನ ಸನ್ನಿವೇಶದಲ್ಲಿ ಸಮಾಧಿಗೆ ಹೋದನೆಂದು ಹೇಳಿ ಮುಗಿಸಿದ್ದಾನೆ. ಆದರೆ ಜಯದೇವಿಯವರು ಈ ಸನ್ನಿವೇಶವನ್ನು ಮುಂದುವರೆಸುತ್ತ - ಸಿದ್ಧರಾಮನಿಗೆ ಕಲ್ಯಾಣದ ಸ್ಥಿತಿ ಕಂಡು ದುಃಖವಾಯಿತು. ಅವನ ಮೇಲೆ ಅನುಭವ ಮಂಟಪದ ಹೊಣೆಯಿತ್ತು. ಆದರೂ ಈ ಶಿವಯೋಗಿ ಆದ ಸಿದ್ಧರಾಮನ 'ಯೋಗದ ಜ್ವಾಲೆ ಮೊಗದಿರುವಿ ನಿಂತಿದೆ' ಎಂದು ವಿವರಿಸಿದ್ದಾರೆ.

ಈಗಾಗಲೇ ಶರಣ ಮಾರ್ಗದಲ್ಲಿ ದಾಪುಗಾಲು ಹಾಕಿದ್ದ ಸಿದ್ಧರಾಮನಿಗೆ ಯೋಗ ನಿಜಯೋಗವಾಗಿದೆ. ಅಣಿಮಾದಿ ಸಿದ್ಧಿಗಳನ್ನು ದೂರಗೊಳಿಸಿ ಅಲ್ಲಮ-ಚನ್ನಬಸವಣ್ಣನವರು ಸಿದ್ಧರಾಮನನ್ನು ಪ್ರಾಣಲಿಂಗಿಯನ್ನಾಗಿ ಮಾರ್ಪಡಿಸಿದ್ದಾರೆ. ಈಗ ಶಿವಯೋಗಿ ಸಿದ್ಧರಾಮ ಉರಿಗಣ್ಣು ಬಿಡಲಾರ, ಅಗಣಿತ ಮಹಿಮರಾದ ಶರಣರು ಯಾವುದಕ್ಕೂ ಅಂಜಲಾರರೆಂದು ಸಿದ್ಧರಾಮ ಬಲ್ಲನು. ಚನ್ನಬಸವನು ವಹಿಸಿದ ಮಣಿಹವನ್ನು ನಡೆಸಲು ಶಾಶ್ವತ ಕಲ್ಯಾಣ ನಿರ್ಮಿಸಿ ಸಿದ್ಧರಾಮನು ವಿಶ್ವ ಮಾನವನಾಗಿ ಬಾಳಿದನೆಂದು ಜಯದೇವಿಯರು ನಿರೂಪಿಸಿದ್ದಾರೆ.

ರಾಘವಾಂಕನಿಗಿಂತ ತುಸು ಭಿನ್ನವಾಗಿರುವ ಸಿದ್ಧರಾಮನ ಸಮಾಧಿ ಸ್ಥಿತಿಯನ್ನು ಕವಯಿತ್ರಿ ಹೀಗೆ ಹೇಳುತ್ತಾಳೆ. 'ಕುಲವನು ಕೇಳದಲೆ, ಛಲವನು ಬಿಡದಲೆ, ಬಲವಾದ ಭಕ್ತಿಯ ಸಾಮ್ರಾಜ್ಯ ಕಟ್ಟಿ ನಿಲುವಿನ ನೆಲೆ ಒಂದು ಮಾಡಿದ 'ಸಿದ್ಧರಾಮನೆದುರು ಕೇದಾರ ಗುರುಗಳನ್ನು ನಿಲ್ಲಿಸಿ' ಮಹಾ ಬೆಳಗಿನಲ್ಲಿ ಬೆಳಗುವ

ಇಚ್ಚೆ ಪ್ರಕಟಿಸಿದಾಗ ಗುರುಗಳು 'ಶಿವಯೋಗ ಭೋಧಿಸುತ ಇಹದಿ ಇರಬೇಕೆಂದು ಕೇಳಿಕೊಂಡರಂತೆ. ಹಾಗೆ ಸಿದ್ಧರಾಮನು ಒಪ್ಪಿ ಇಂದಿಗೂ ಸೊನ್ನಲಗಿಯು ಸಮೃದ್ಧವಾಗಿರುವಂತೆ ಹರಸುತ್ತ ಧ್ಯಾನ ಸಮಾಧಿಯಲ್ಲಿದ್ದಾನೆಂದು ಕವಯಿತ್ರಿಯು ನಂಬಿರುವುದನ್ನಿಲ್ಲಿ ಕಾಣಬಹುದು.

ನಿನ್ನ ಹುಟ್ಟಿನ ಊರು। ಸೊನ್ನಲಾಪುರದೊಳು
ಎನ್ನನು ಪುಟ್ಟಿಸಿ ಬರೆಸಿದಿ ಸಿದ್ಧರಾಮ
ಕನ್ನೆಯ ಮೇಲಿನ ಮಮತೆಯಲಿ

ಎಂಬ ಭಾವದಲ್ಲಿ ನಿರೂಪಿತವಾಗಿರುವ ಈ ಪುರಾಣದ ಕಥಾವಸ್ತು ಕೇವಲ ಒಂದು ಜಾತಿ, ಮತ ಅಥವಾ ಪಂಥ, ದೇಶ, ಕೋಶ, ಭೌಗೋಳಿಕ ರೇಖೆಗಳಿಂದ ಸೇರಿದ್ದಲ್ಲ. ನಿಸ್ಸಹಾಯಕ ಜನಶಕ್ತಿಯನ್ನು ಎಚ್ಚರಿಸಿ, ಅವರಲ್ಲಿದ್ದ ಭಯ ಭೀತಿಗಳನ್ನು ಓಡಿಸಿ, ಅವರೆಲ್ಲರೂ ಮಾತನಾಡುವಂಥ ಶಕ್ತಿ ಹೊರಹೊಮ್ಮಿಸಿದ ಜನಾಂಗದ ಮೂರ್ತಿಮಂಥ ಇತಿಹಾಸವಿದು. ಈ ನಿಸ್ಸಹಾಯಕ ಜನಗಳ ದಿಟ್ಟತನ, ವೀರಶ್ರೀ, ನಿಷ್ಠೆ, ಸ್ವಾಭಿಮಾನಗಳು ಈ ಕೃತಿಯ ಪ್ರಧಾನ ಗುಣಗಳಾಗಿವೆ.

ಮಾನವ ಕುಲಕ್ಕೆ ಚಿರ ಶಾಶ್ವತ ಆಸ್ತಿಯಾಗಿ ಉಳಿಯಬಲ್ಲ ಇಂದಿನ ನಿತ್ಯ ನೂತನವಾದ ಮೌಲ್ಯಗಳು ಕಾಯಕ- ದಾಸೋಹ-ಅನುಭಾವಗಳನ್ನು ಆತ್ಮಾನು ಸಂಧಾನದಿಂದ ಅಳವಡಿಸಿಕೊಂಡು ನಡೆದಂತೆ ನುಡಿದು, ಮಹಾಮಣಿಹವನ್ನು ಪೂರೈಸಿದ, ನೂರಾರು ಶರಣ-ಶರಣೆಯರ ಅನುಭಾವದ ಅಡಿಗೆಯನ್ನು ಪ್ರಸಾದರೂಪವಾಗಿ ಜನಮನದ ಮನೆಗೆ ತಲುಪಿಸುವ ಹಿರಿದಾಸೆಯನ್ನು ಹೊಂದಿದೆ ಶ್ರೀ ಸಿದ್ಧರಾಮೇಶ್ವರ ಪುರಾಣ ಎನ್ನುತ್ತಾರೆ. ಡಾ. ಶಂಕರಣ್ಣಮೂಗಿಯವರು.

ತನು ಕೊರೆದು ನೋಡಿದಿ। ಮನ ಮುರಿದು ನೋಡಿದಿ
ಧನ ಬರಿದು ಮಾಡಿ ನೋಡಿದಿ. ಸಿದ್ಧರಾಮ
ಕನಿಕರದಿ ಬಂದು ನೆಲಸಿದಿ।

ಎಂದು ತಾಯಿಯವರು ಹೇಳಿರುವ ಈ ಪದ್ಯದಲ್ಲಿ ಈ ಕಾವ್ಯ ರಚನೆಯ ಸಂದರ್ಭದಲ್ಲಿ ಜಯದೇವಿಯವರು ನೂರಾರು ತೊಂದರೆಗಳನ್ನು ಎದುರಿಸಿ ದಾಟಿ ಬಂದಿರುವ ಸೂಚನೆಯಿದೆ. ಅವರ ಇನ್ನೊಂದು ಮಾತು ಹೀಗಿದೆ.' ನೂರು ರೀತಿಯ ಪರೀಕ್ಷೆ ಎಲ್ಲಕ್ಕೂ ಸಿದ್ಧಳಾಗಿ ನಿಂತೆ. ರೋಗದಿಂದ ದೇಹ ತತ್ತರಿಸಿತು. ದಿನವೂ ಆಸ್ಪತ್ರೆಯಲ್ಲಿ ಸೂಜಿ ಮದ್ದು. ನನ್ನಯ್ಯ ನಿನಗಾಗಿ ಮೀಸಲಿರಿಸಿದ್ದ ಕಾಯಕಕ್ಕಿರುವ ಈ ಕೈಗೆ ಏಸೊಂದು ಸೂಜಿ :-

ಮೀಸಲಿದ್ದ ಕೈಗೆ ಏಸೊಂದು ಸೂಜಿಯು
ಸೋಸಿ ನೋಡುವಿ ತನುವನು - ಸಿದ್ಧರಾಮ
ನಸುನಗುತ ನಿನ್ನ ನೆನೆಯುವೆ

ರೋಗದಿಂದ ತತ್ತರಿಸಿ ಹೋಗಿದ್ದರೂ ಕವಿಯಿತ್ರಿ ಸಿದ್ದನ ಕಾರ್ಯವನ್ನು ನಿಲ್ಲಿಸಲಿಲ್ಲ. ಆ ನರಳಿಕೆಯ ಬಸಿರಿನಿಂದಲೇ ಮೊಗೆದು ಬಂದವು ಸಿದ್ದರಾಮನ ಕುರಿತ ಪದಗಳು. ಸಿದ್ದರಾಮನು ಬಂದು ತನ್ನಲ್ಲಿ ನೆಲೆಸಿದ ಮೇಲೆಯೇ ಮೂಡಿ ಬಂದ ಕಾವ್ಯವೆಂದು ಅವರು ಹೇಳುತ್ತಾರೆ.

ಕಾವ್ಯದ ಕಥಾನಾಯಕನನ್ನು ಉದಾತ್ತೀಕರಿಸಿ ಅವನ ಮಹೋನ್ನತ ಜೀವನದ ಬಹುಮುಖಿ ಪದರುಗಳನ್ನು ಕಾವ್ಯದಲ್ಲಿ ಅಳವಡಿಸಿ, ಕಥಾವಸ್ತು, ವರ್ಣನೆ, ಭಾಷಾಶೈಲಿ, ಛಂಧಸ್ಸು, ಅಲಂಕಾರ, ಪ್ರತಿಮೆ ರೂಪಕ, ಇತ್ಯಾದಿ ಸಾಹಿತ್ಯದ ಮೌಲ್ಯಗಳನ್ನು ಒಳಗೊಂಡ ಕಾವ್ಯಗಳನ್ನು ಜನರಿಗೆ ನೀಡಿದ ಕವಿಗಳನ್ನು ನಾವು ಕಂಡಿದ್ದೇವೆ. ಆದರೆ ಇಲ್ಲಿ ಕಥಾನಾಯಕನ ಬದುಕಿನೊಂದಿಗೆ ಅವನ ಶಿವಯೋಗ ಮಾರ್ಗ ಸಾಧಿಸಿದ ಸಿದ್ಧಿ, ಈ ಕಾವ್ಯದ ಹರಹುವಿನಲ್ಲಿರುವುದು ವಿಶೇಷವೆನ್ನಬಹುದು. ಕಲ್ಯಾಣದ ಶಿವಶರಣರ ಕ್ರಾಂತಿಯ ಸರ್ವತೋಮುಖಿ ಸಂದೊಡನೆ ಬೆಳೆದು ಬಂದಿರುವ ರೀತಿ, ಕಥಾನಾಯಕನು ತಲುಪಿರುವ ಚರಮಗುರಿ, ಸಿದ್ಧಿ–ಪ್ರಸಿದ್ಧಿಗಳೊಡನೆ ಕವಿಯತ್ರಿಯ ಬದುಕೂ ಕೂಡ ಜತೆ ಜತೆಯಾಗಿ ಸಮರಸಗೊಂಡಿರುವುದು ಇಲ್ಲಿ ಗಮನಾರ್ಹ ಸಂಗತಿಯಾಗಿದೆ. ಯೋಗಮಾರ್ಗದ ಸಹಜಯೋಗದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಜೀವನದ ಎಲ್ಲ ತೊಡಕುಗಳನ್ನು ಮರ್ದಿಸಿ ಅವುಗಳನ್ನು ಹೇಗೆ ತೊಡುಗೆಗಳನ್ನಾಗಿ ರೂಪಿಸಿಕೊಂಡು ತಮ್ಮ ಬದುಕಿಗೆ ಅಲಂಕರಿಸಿಕೊಂಡಿದ್ದಾರೆಂಬುದೇ ಇಲ್ಲಿ ಅಚ್ಚರಿ ತರುವ ಸಂಗತಿಯಾಗಿದೆ. ಮಹಾ ಕಾವ್ಯ ರಚನೆಯೊಂದೇ ಅಲ್ಲ, ಅದನ್ನು ರಚಿಸಲು ಹೋಗಿ 'ಜಯದೇವಿಯವರು' ಮಹಾತಾಯಿಯಾಗಿ ತಮ್ಮನ್ನು ತಾವು ರಚಿಸಿ ಕೊಂಡಿದ್ದಾರೆ. ಇದು ಮಹಾ ಕವಿಗಳ ಬದುಕಿನಲ್ಲಿ ಒಂದು ಅಪೂರ್ವ ಘಟನೆ ಎನಿಸುತ್ತದೆ.

ಸಿದ್ದರಾಮನ ಬಾಳಿನ ಚಿತ್ರಣಕ್ಕೆ ತಾಯಿಯವರಿಂದ ತ್ರಿಪದಿಯೂ ಸಹ ತಂಬಾ ಸಮರ್ಪಕವಾಗಿ ಬಳಕೆಯಾಗಿದೆ ತ್ರಿಪದಿ ಛಂಧಸ್ಸು ಎಂತೆಂಥ ಅರ್ಥ ಭಾರ ಹೊರಲು ಸಾಮರ್ಥ ಪಡೆದಿದೆ ಎಂಬುದನ್ನು ಈ ಮಹಾಕಾವ್ಯದಲ್ಲಿ ಮೂಡಿ ಬಂದಿರುವ ಹಲವಾರು ತ್ರಿಪದಿ ಪದ್ಯಗಳನ್ನು ಗುರುತಿಸಿ ವಿವೇಚಿಸಬಹುದಾಗಿದೆ.

ಪಾರಂಪಾರಿಕವಾಗಿ ಬಂದ ದೇಶೀಯ ತ್ರಿಪದಿ ಛಂಧಸ್ಸು ಮತ್ತೆ ಪಂಡಿತರ ಕಟ್ಟಳೆಗೆ ಒಳಗಾಗಿ ಬ್ರಹ್ಮ ಗಣ, ವಿಷ್ಣುಗಣಗಳನ್ನೊಳಗೊಂಡಿತ್ತು. ಇವುಗಳನ್ನೆಲ್ಲವನ್ನು ತಾಯುಯವರು ಅಳವಡಿಸಿಕೊಂಡಿದ್ದಾರೆ. ಆದರೂ ಅವುಗಳನ್ನು ಮಾರ್ಪಡಿಸಿ ಕೊಂಡು, ಮೂಲ ದೇಶಿಯ ಜಾನಪದ ಸೊಗಸನ್ನು ಉಳಿಸಿಕೊಂಡು ಅದರ ಗೇಯ, ಗತಿ, ಗತ್ತು, ತಾಳ, ಲಯಗಳನ್ನು ದುಡಿಸಿಕೊಂಡಿದ್ದಾರೆ, ಈ ಕಾರಣಕ್ಕಾಗೆ ಬಿ.ಎಸ್, ಸ್ವಾಮಿಯವರು ಶ್ರೀ ಸಿದ್ದರಾಮೇಶ್ವರ ಪುರಾಣದ ಛಂಧಸ್ಸಿಗೆ ಕನ್ನಡ ಸಾಹಿತ್ಯದಲ್ಲಿ 'ಜಯದೇವಿ ಛಂಧಸ್ಸು' ಎಂದೇ ಇದನ್ನು ಗುರುತಿಸಬೇಕು ಎನ್ನುತ್ತಾರೆ.

ಜಯದೇವಿ ತಾಯಿಯವರು ಕನ್ನಡ ಮತ್ತು ಮರಾಠಿಯಲ್ಲಿ ಒಟ್ಟು ೧೨೦೦೦ ತ್ರಿಪದಿಗಳನ್ನು ಬರೆದಿದ್ದಾರೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅಂದಿನಿಂದ ಇಂದಿನವರೆಗೂ ಬೇರೆ ಬೇರೆ ಕವಿಗಳು ರಚಿಸಿದ ಹಾಗು ನಮಗೆ ದೊರೆತ ಎಲ್ಲ ತ್ರಿಪದಿಗಳ ಸಂಖ್ಯೆ ದೊಡ್ಡದಾಗುತ್ತದೆಂದು ಶ್ರೀ ಎಂ.ಆರ್. ನರಸಿಂಹರವರು ತಿಳಿಸಿದ್ದಾರೆ. ಇದು ಅಲ್ಲದೆ ಮರಾಠಿ ಭಾಷೆಗೆ ತ್ರಿಪದಿ ಛಂಧಸ್ಸು ಹೊಸದು ತಾಯಿಯವರು ಮರಾಠಿಯಲ್ಲಿ ನಾಲ್ಕು ಸಾವಿರಕ್ಕಿಂತಲೂ ಹೆಚ್ಚು ತ್ರಿಪದಿಗಳನ್ನು ರಚಿಸಿದ್ದಾರೆ. ಪಂಡಿತರಿಂದ ನಿರ್ಲಕ್ಷಿಸಲ್ಪಟ್ಟ ಜಾನಪದ ಛಂಧಸ್ಸನ್ನು ಕೈಗೆತ್ತಿಕೊಂಡು ಅದಕ್ಕೆ ಮಹಾಕಾವ್ಯದ ವಾಹಕತ್ವದ ಚಿರಂತನ ಪಟ್ಟಗಟ್ಟಿದ್ದು ಜಯದೇವಿಯವರ ಹೆಗ್ಗಳಿಕೆ. ಇದನ್ನು ಗುರುತಿಸಿರುವ ವಿ.ಕೃ. ಗೋಕಾಕ್‌ರವರು 'ಮಹಾಕಾವ್ಯ'ದ ಆ ಹಿರಿಯ ಬದುಕಿಗೆ ಮಾತು ಕೃತಿಯಲ್ಲಿ ಚಿತ್ರಿತವಾದ ಕವಯತ್ರಿಯ ಬದುಕು ಒಂದು ಭಾವಗೀತವಾಗಿದೆ' ಎಂದು ಹೇಳುತ್ತ, ಕನ್ನಡ ಸಾಹಿತ್ಯದಲ್ಲಿ ಅವರು ಮಾಡಿರುವ ಸಾಧನೆಯನ್ನು ಕೊಂಡಾಡಿದ್ದಾರೆ.

ಒಟ್ಟಿನಲ್ಲಿ ಹೇಳುವುದಾರೆ ಈ ಕಾವ್ಯವು ಕನ್ನಡ ಸಾಹಿತ್ಯಕ್ಕೆ ಶ್ರೇಷ್ಠ ಕೊಡುಗೆಯಾಗಿದೆ. ಇಲ್ಲಿ ಬರುವ ಸಮಕಾಲೀನ ಸಾಮಾಜಿಕ ಪ್ರಜ್ಞೆ, ಯುಗಧರ್ಮದ ಆವಿಷ್ಕರಣ, ಮೇಲಾಗಿ ಶಿವಯೋಗಿ ಸಾಧನೆ, ಅನುಭಾವದ ಹಾಸು ಬೀಸುಗಳು, ಬೆಚ್ಚ ಬರಿಯ ಭಾವೋನ್ಮಾದದ ನಿಬ್ಬೆರಗುಗಳು ಮಹಾಶಿವಯೋಗಿ ಸಿದ್ಧರಾಮನ ದಿವ್ಯಯೋಗಾನುಸಂಧಾನದಲ್ಲಿ ಕವಿಯತ್ರಿ ಹೊಂದಿದ್ದ ಸಮರಸತೆ, ತನ್ಮಯತೆ, ಭಕ್ತಿನಿಷ್ಠೆ, ಜನಪರತೆಗಳು ಕಾವ್ಯದೊಡನೆ ಒಂದಾಗಿ ಬೆಳೆದು ನಿಂತು, ಕನ್ನಡ ಮಹಾಕಾವ್ಯ ಪರಂಪರೆಗೆ ಅಮೂಲ್ಯ ಕಾಣಿಕೆ ನೀಡಿವೆ. ಇಲ್ಲೆಲ್ಲಾ ಭಾವಕ್ಕೆ ಭಾಷೆ ಮಣಿದಿದೆ. ತರ್ಕಾತೀತವಾದ ಭಕ್ತಿ ಹೊನಲಾಗಿ ಹರಿದಿದ್ದು, ಅದಕ್ಕೆ ಪದಗಳ ನಾದ ಮಾಧುರ್ಯ ಹಿಮ್ಮೇಳವಾಗಿದೆ, ನಿರಂಜನರು ಹೇಳಿದಂತೆ ಈ ಶತಮಾನದ ಕನ್ನಡ ಕಾವ್ಯ ಹಿಡಿದಿರುವ ದಾರಿಗಿಂತ ಇದು ತೀರ ಭಿನ್ನ ಆದರೆ ಇದು ಪ್ರಾಚೀನ ಕನ್ನಡ ಸಾಹಿತ್ಯ ಕಡಿದ ಹೆದ್ದಾರಿಗಳಲ್ಲೊಂದು. ಈ ಮಾರ್ಗಕ್ರಮಣ ಜಯದೇವಿ ಯವರ ಅಪೂರ್ವ ಸಾಧನೆಯಾಗಿದೆ.

**ಭಾಗವಹಿಸಿದ ಚಳುವಳಿಗಳು, ಸಂಘಟನೆಗಳು ಮತ್ತು ಹೋರಾಟಗಳು**

ಜಯದೇವಿ ತಾಯಿಯವರು ನಿಷ್ಕಪಟ, ನಿಸ್ವಾರ್ಥಿ ಹಾಗೂ ಅಧಿಕಾರದ ವ್ಯಾಮೋಹವಿಲ್ಲದ ಮಹಿಳೆಯಾಗಿದ್ದರು. ಕನ್ನಡ ಸಾಹಿತ್ಯದಲ್ಲಿ ಚಿರನೂತನ, ಸಚೇತನ ಶಕ್ತಿಯಾಗಿ ಕನ್ನಡ ಸಾಹಿತ್ಯಕ್ಕೊಂದು ವಿಶಿಷ್ಟ ಪರಂಪರೆಯನ್ನು ತಮ್ಮ ಕೃತಿಯಿಂದ, ವೈಯಕ್ತಿಕ ಪ್ರತಿಭೆಯಿಂದ, ಅನವರತ ನಿಷ್ಠೆಯಿಂದ ಕನ್ನಡಕ್ಕಾಗಿ ಹೋರಾಡುವುದರಿಂದ ತಂದುಕೊಟ್ಟವರು, ಯಾವುದೇ ರಾಜಕೀಯ ಪಕ್ಷಕ್ಕೆ ಸೇರದೆ, ವೈಯಕ್ತಿಕ ಹಿತಾಸಕ್ತಿಗಳಿಗೆ ಮಣಿಯದೆ ಕನ್ನಡ ನಾಡು ನುಡಿ ಕಟ್ಟುವಲ್ಲಿ ಅವರು ಮಾಡಿದ ಕಾರ್ಯಗಳು, ಕೈಗೊಂಡ ಹೋರಾಟಗಳು ಅವಿಸ್ಮರಣೀಯ

ವಾಗಿವೆ. ಜಯದೇವಿಯವರ ಸರಳತೆ, ಸೋದರಿಕೆಯ ಭಾವ, ಉದಾರಗುಣ, ಕನ್ನಡ ನಿಷ್ಠೆ ಎಂತವರನ್ನು ಆಕರ್ಷಿಸುತ್ತಿದ್ದವು. ಅವರ ನಿಶ್ಚಲ ನಿಷ್ಠೆ ಹಾಗೂ ವೀರಗನ್ನಡತ್ವ ಭಾವಕ್ಕೆ ಎಂಥವರೂ ತಲೆಭಾಗಬೇಕಾಗಿತ್ತು. ಕನ್ನಡ ನಾಡಿನ ಗಡಿಭಾಗದಲ್ಲಿದ್ದುಕೊಂಡು ಇಡೀ ಕರ್ನಾಟಕವನ್ನು ಜಾಗೃತಗೊಳಿಸುವ ಮಹಾನ್' ಚೇತನ ಶಕ್ತಿ ಎನಿಸಿದ್ದರು.

ಕನ್ನಡ ಜಾಗೃತಿಗಾಗಿ, ಕನ್ನಡತನದ ಪ್ರಸಾರ- ಪ್ರಚಾರಕ್ಕಾಗಿ ಸಾಮಾಜಿಕ ನ್ಯಾಯ ಹಾಗೂ ಅಭಿವೃದ್ಧಿ ಪರತೆಗಾಗಿ ಅವರು ಹಗಲಿರುಳು ಹೋರಾಡಿದರು. ಜಯದೇವಿ ತಾಯಿಯವರ ಉತ್ಸಾಹ, ಕರ್ತೃತ್ವಶಕ್ತಿ ಆದರಣೀಯ ಮತ್ತು ಅನುಕರಣೀಯವಾದುದು. ತಮ್ಮ ಸಾಹಿತ್ಯಿಕ ಚಳುವಳಿಯ ಜೊತೆ ಜೊತೆಗೆ ನಾಡ ಸಂಘಟನೆಗೆ, ನುಡಿಯ ಪ್ರವರ್ಧಮಾನಕ್ಕೆ, ಗಡಿಭಾಗದಲ್ಲಿ ಕನ್ನಡ ಜೀವಂತವಾಗಿ ಉಳಿಯುವುದಕ್ಕೆ ಮತ್ತು ಮಹಾರಾಷ್ಟ್ರದಲ್ಲಿ ಕನ್ನಡ ಮಾನ್ಯವಾಗುವುದಕ್ಕೆ ಅವರು ಕೈ ಗೊಂಡ ಹಲವಾರು ಹೋರಾಟದ ಸಂದರ್ಭಗಳು ಚಿರಸ್ಮರಣೀಯವಾದವು. ಈ ಹಿನ್ನೆಲೆಯಲ್ಲಿ ಗಡಿನಾಡಿನಲ್ಲಿ ಕನ್ನಡದ ಗುಡುಗು ಹಾಕಿದ ಮೊದಲಿಗರಲ್ಲಿ ಇವರೂ ಒಬ್ಬರೆನಿಸಿದರು. ಸೊಲ್ಲಾಪುರದ ಕನ್ನಡ ಕೋಟೆಯ ಕಟ್ಟಾಕಾವಲಿಗರಾದ ಇವರು ಕನ್ನಡಕ್ಕಾಗಿ ಬದ್ಧ ಕಂಕಣರಾದ ಮೊದಲ ಮಹಿಳಾ ಹೋರಾಟಗಾರ್ತಿಯೂ ಎನಿಸಿದ್ದಾರೆ.

ಹರಿದು ಹಂಚಿಹೋಗಿದ್ದ ವಿಶಾಲವಾದ ಕನ್ನಡ ನಾಡನ್ನು ಒಂದುಗೂಡಿಸಿ, ಕನ್ನಡ ಭುವನೇಶ್ವರಿಯನ್ನು ಪ್ರತಿಷ್ಠಾಪಿಸುವ ಕನಸು ಕಂಡ ಕನ್ನಡ ಕವಿಗಳು ಮತ್ತು ಸಾಹಿತಿಗಳು, ಅನೇಕರು. ಈ ದಿಶೆಯಲ್ಲಿ ಅದಕ್ಕೆ ಬೇಕಾದ ಪ್ರಚಾರ ಪ್ರಚೋದನೆ ಗಳನ್ನು ನೀಡಿದ ಶ್ರೇಯಸ್ಸು ಅವರದು. ಅವರಲ್ಲಿ ಜಯದೇವಿಯವರ ಪಾತ್ರ ತುಂಬಾ ಮಹತ್ವದ್ದು. ಭಾರತದ ಸ್ವಾತಂತ್ರ್ಯಾನಂತರ ರಾಜ್ಯ ಘಟನೆಯು ಮೂರ್ತ ಸ್ವರೂಪಕ್ಕೆ ಬಂದಾಗ, ಭಾಷಾವಾರು ಪ್ರಾಂತರಚನೆಗೆ ಹೆಚ್ಚಿನ ಬಲ ಬಂತು. ಆ ಮೂಲಕ ಭಾರತದ ೧೪ ಭಾಷೆಗಳಲ್ಲಿ ಕನ್ನಡವೂ ಒಂದಾಯ್ತು.

ಕಳೆದ ಸಾವಿರ ವರ್ಷಗಳಿಂದ ಕರ್ನಾಟಕವು ರಾಜಕೀಯ ಆಘಾತಗಳಿಗೆ ಸಿಕ್ಕು ಬಿದ್ದು, ಇಪ್ಪತ್ತೆಂಟು ಆಡಳಿತಗಳಲ್ಲಿ ಒಂದಕ್ಕೊಂದು ಮುಖ ಕಲೆಯದಂತೆ ಹರಿದು ಹಂಚಿ ಹೋದಂತಹ ದುರ್ದೆಸೆಗೆ ಈಡಾಗಿತ್ತು.

ಸರದಾರ ವಲ್ಲಭಬಾಯಿ ಪಟೇಲರ ದಿಟ್ಟತನ ಹಾಗೂ ಮುಂಧೋರಣೆಗಳ ಫಲವಾಗಿ ಸಂಸ್ಥಾನಗಳು ವಿಲೀನಗೊಂಡವು ಆ ತರುವಾಯ ಕರ್ನಾಟಕವು ಐದು ಆಡಳಿತಗಳಿಗೆ ಒಳಪಡಬೇಕಾಯಿತು ಅವುಗಳೆಂದರೆ.

೧. ಮೈಸೂರು

೨. ಮದ್ರಾಸ್

೩. ಮುಂಬಯಿ

೪. ಕೊಡಗು

೫. ಹೈದ್ರಾಬಾದ್

ಆರನೆಯದಾಗಿದ್ದ 'ಗೋವಾ' ಪೋರ್ಚುಗೀಸರ ಅಧೀನಕ್ಕೆ ಸಿಕ್ಕುಬಿದ್ದು, ತನ್ನ ಅಚ್ಚಗನ್ನಡತನದ ಅಸ್ತಿತ್ವವನ್ನೇ ಕಳೆದುಕೊಂಡಿತ್ತು. ಈ ಮೇಲಿನ ಆಡಳಿತಗಳಲ್ಲಿ ಹಂಚಿಹೋಗಿದ್ದ ಕನ್ನಡ ನಾಡನ್ನು ಒಂದು ಆಡಳಿತ ಸೂತ್ರದಲ್ಲಿ ತರುವಲ್ಲಿ ಹಲವರು ಹೋರಾಟ ನಡೆಸಿದರು. ಅವರಲ್ಲಿ ಜಯದೇವಿ ತಾಯಿ ಲಿಗಾಡೆಯವರೂ ಪ್ರಮುಖರು.

## ಹೋರಾಟದ ಹಿನ್ನೆಲೆ

೧೯೫೧-೫೬ರಲ್ಲಿ ಅಖಂಡ ಕರ್ನಾಟಕ ಗುರಿ ಹೋರಾಟಕ್ಕೆ ತಣ್ಣೀರೆರೆಯುವ ಅನೇಕ ಘಟನೆಗಳು ನಡೆದವು. ಈ ವೇಳೆಗೆ ಸಾಹಿತಿಗಳ ಕೈಯಲ್ಲಿದ್ದ ಸೂತ್ರಗಳು ರಾಜಕಾರಣಿಗಳ ಕೈಸೇರಿದವು. ಇದರಿಂದ ಉದಾತ್ತ ದ್ಯೇಯವುಳ್ಳ ಸಾಹಿತಿಗಳು ಏನುಮಾಡಲು ಬಾರದೆ ಒಂದು ನಿಷ್ಕ್ರಿಯತೆಗೆ ಒಳಗಾದರು. ಇದರಿಂದ ಜಯದೇವಿ ತಾಯಿ ಮೊದಲಾದ ಪ್ರಮುಖ ಕನ್ನಡ ಸಾಹಿತಿಗಳು, ಕನ್ನಡ ಸಂಘಟನೆಗಳು ಅಖಂಡ ಕರ್ನಾಟಕ ನಿರ್ಮಾಣಕ್ಕಾಗಿ ಪ್ರಬಲವಾಗಿ ಹಠ ಹಿಡಿದವು ದೆಹಲಿಯ ಒತ್ತಾಯಕ್ಕೆ ಸಿಕ್ಕಿಬಿದ್ದ ಕರ್ನಾಟಕದ ಹಲವು ರಾಜಕಾರಣಿಗಳು ನಾಡು ಕಟ್ಟುವ ತಮ್ಮ ಭಾಷೆಯನ್ನು ಬದಲಾಯಿಸುತ್ತ ನಡೆದರು. ಉಳಿದ ಕೆಲವರು ತಮ್ಮ ಪಕ್ಷದ ಶಿಸ್ತಿನ ನೆಪದಲ್ಲಿ ಹೋರಾಟದ ಸ್ವರೂಪವನ್ನು ಮೊಟಕುಗೊಳಿಸತೊಡಗಿ ದರು. ಇದರಿಂದ ಭಾಷಾಭಿಮಾನಿಗಳಲ್ಲಿ ತೀವ್ರ ಅಸಂತೋಷ ಬೆಳೆಯ ಲಾರಂಭಿಸಿತು. ಒಳನಾಡಿಗರಂತೆ ಗಡಿನಾಡಿಗರೂ ತಮ್ಮ ಭವಿಷ್ಯದ ಬಗ್ಗೆ ತುಂಬಾ ಚಿಂತಿತರಾದರು.

ಸ್ವಾತಂತ್ರ್ಯ ಪೂರ್ವದಲ್ಲಿ ಭಾಷಾವಾರು ಪ್ರಾಂತ ರಚನೆಯ ಬಗ್ಗೆ ಅಭಿ ವಚನ ಎತ್ತಿದ್ದ ಕಾಂಗ್ರೆಸ್ ನಂತರದಲ್ಲಿ ಅದನ್ನು ಪೂರೈಸದೆ ಕಾಲ ಹರಣಕ್ಕಿಳಿಯಿತು. ಅದರ ಮೀನ ಮೇಷತನ ಕಂಡ ಜನತೆಯ ಸಹನೆ ಎಲ್ಲೆ ಮೀರ ತೊಡಗಿತು. ಇಂಥ ಸಂಧಿಗ್ದ ಪರಿಸ್ಥಿತಿಯಲ್ಲಿ ನಾಡನ್ನು ಒಂದುಗೂಡಿಸುವ, ಅದಕ್ಕೆ ಅಖಿಲ ಕನ್ನಡಿಗರ ಭಾವೈಕ್ಯತೆ ಸಾಧಿಸುವ ಗಡಿಭಾಗದವರೂ ಚಿಂತಿತರಾದರು. ಅದೇ ಸಂದರ್ಭದಲ್ಲಿ ಕನ್ನಡ ನಾಡು ಎರಡಾಗಬೇಕೆಂಬ ಒತ್ತಾಸೆ ಮೈಸೂರಿಗರಲ್ಲಿ ಮೂಡತೊಡಗಿತ್ತು. ಈ ಎಲ್ಲ ಸಂದರ್ಭಗಳು ಅಖಂಡ ಕರ್ನಾಟಕವನ್ನು ಕಟ್ಟುವ ಈ ಹೋರಾಟವನ್ನು ಮುಂದುವರಿಸುವ ಕೆಚ್ಚೆದೆಯ ಒಂದು ಶಕ್ತಿಗಾಗಿ ಜನ ಎದುರು ನೋಡತೊಡಗಿ ದರು. ಆ ಸಂದರ್ಭದಲ್ಲಿ ದನಿ ಎತ್ತಿ ಗುಡಿಗಿದರು ಜಯದೇವಿ ತಾಯಿಯವರು. ಆ ಸಂದರ್ಭವೊದಗಿದ್ದು ಬೇಲೂರಿನ ಕರ್ನಾಟಕ ಸಾಹಿತ್ಯ ಸಮ್ಮೇಳನದಲ್ಲಿ ಎಂಬುದನ್ನು ಗಮನಿಸಬಹುದು.

## ಹೋರಾಟದ ಮುನ್ಸೂಚನೆ

೧೯೫೨ರಲ್ಲಿ ಹಾಸನ ಜಿಲ್ಲೆಯ ಬೇಲೂರಿನಲ್ಲಿ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನ ಜರುಗಿತು. ಕರ್ನಾಟಕ ಎರಡೆಂಬ ವಾದ ಸುರುಮಾಡಿದ್ದ ಹಳೆಯ ಮೈಸೂರಿನ ಮಧ್ಯಭಾಗ ಈ ಬೇಲೂರು. ಈ ಸಮ್ಮೇಳನದಲ್ಲಿ ಕರ್ನಾಟಕ ಏಕೀಕರಣ ರಚನೆ ಬೇಡಿಕೆಯ ಗೊತ್ತುವಳಿ ಸ್ವೀಕೃತವಾಗಬೇಕಿತ್ತು. ಹೀಗಾಗಿ ಅಲ್ಲೊಂದು ಮಹತ್ವದ ಪ್ರಸಂಗವಿತ್ತು. ಈ ಮಹತ್ಸಾಧನೆ ಬಿಸಿಗೊಂಡ ವಾತಾವರಣದಲ್ಲಿ ಸಮ್ಮೇಳನಕ್ಕೆಂದು ನೆರೆದ ಅಸಂಖ್ಯ ಜನಸ್ತೋಮದ ಎದುರುನಾಡು ಎರಡೆಂಬುದನ್ನು ದೂರಗೊಳಿಸಿ ಒಂದರತ್ತ ಒಲಿಸಿ, ಅಖಂಡ ಕರ್ನಾಟಕ ರಚನೆಯ ಬೇಡಿಕೆಯ ಗೊತ್ತುವಳಿಯನ್ನು ಮಂಡಿಸುವುದು ಹಾಗೂ ಅದು ಸರ್ವಾನುಮತದಿಂದ ಸ್ವೀಕೃತವಾಗುವಂತೆ ಜನಮನ ಒಲಿಸುವುದು ಸರಳವಾದ ಮಾತಾಗಿರಲಿಲ್ಲ. ಅಲ್ಲಿ ಅಖಿಲ ಕನ್ನಡಿಗರ ನರ ನಾಡಿಗಳಲ್ಲಿ ಸುಪ್ತವಾಗಿ ಹುದುಗಿದ್ದ ಭುವನೇಶ್ವರಿಯನ್ನು ಎಬ್ಬಿಸಿ ಅವರ ಮನದಲ್ಲಿ ಮೂಡಿಸಬೇಕಾಗಿತ್ತು. ಅಂತಹ ಒಂದು ಮಹತ್ವದ ಸನ್ನಿವೇಶದಲ್ಲಿ ಈ ಗೊತ್ತುವಳಿಯನ್ನು ಎತ್ತಿ ಹಿಡಿದು ಮಂಡಿಸಲು ನಿಂತವರು ಗಡಿನಾಡ ವೀರ ಕನ್ನಡತಿ.

ಜಯದೇವಿಯವರು ಮಂಡಿಸಿದ ಆ ಗೊತ್ತುವಳಿಗೆ ಅಲ್ಲಿ ಕಂಡು ಬಂದ ವಿರೋಧ – ಅದನ್ನು ಬೆಂಬಲಿಸಿ ಅವರು ಮಾಡಿದ ಭಾಷಣಗಳ ವೈಖರಿ ಇಡೀ ಸಭೆಯನ್ನು ಮೂಕ ವಿಸ್ಮಿತರನ್ನಾಗಿಸಿತು. ಆ ಗೊತ್ತುವಳಿ ಕುರಿತು ಆಸಂದರ್ಭದಲ್ಲಿ ನಿರ್ಮಾಣವಾಗಿದ್ದ ಉದ್ವಿಘ್ನ ಪರಿಸ್ಥಿತಿಯನ್ನು ಗಮನಿಸಿದರೆ ಅಖಂಡ ಕರ್ನಾಟಕದ ನಿರ್ಮಾಣಕ್ಕೆ ಅಲ್ಲಿಗೇನೇ ಮಂಗಲವಾಯಿತು ಎನ್ನುವಂತಿತ್ತು. ಅಂತಹವರು ಕನ್ನಡದ ಅತ್ಯುಗ್ರ ಅಭಿಮಾನಿಯಾಗಿದ್ದ ತಾಯಿಯವರು 'ಗಂಡಸಾದರೆ ಬಲಿ ಕೊಡುವಿಯಾ' ಎಂಬ ಕನ್ನಡ ಕವಿಗಳೊಬ್ಬರ ಸವಾಲಿಗೆ ಉತ್ತರ ರೂಪದಲ್ಲಿ ಕನ್ನಡ ನಾಡನ್ನು ಒಂದುಗೂಡಿಸಲು 'ಗಂಡುಸಾದರೆ ಬಲಿ ತೆಗೆದುಕೊಳ್ಳುವಿರಾ? ನಾವು ಈ ಹೋರಾಟದಿಂದ ಎಂದಿಗೂ ಹಿಂದೆಗೆಯಲಾರೆವು' ಎಂದು ಗರ್ಜಿಸಿ ಮಾತ ನಾಡಿದರು.

ಅದೇ ವೇಳೆಯಲ್ಲಿ ಕುರುಕ್ಷೇತ್ರ ಪ್ರಸಂಗವಾದ "ನೀವೆಲ್ಲರೆರ್ದೆಮುಟ್ಟಿ ಮನ ಮುಟ್ಟಿ ಕಾದಿರ್ದೊಡೆ ಎನಗಾಗುತ್ತಿರ್ದುದೇ ಈ ಪರಾಭವಂ" ಎಂಬ ದುರ್ಯೋಧನನ ಮಾತನ್ನು ನೆನಸಿ, ಬೇಲೂರಿನ ಚನ್ನಕೇಶವನ ಸಾಕ್ಷಿಯಿಟ್ಟು "ನಾನಾವ ಅಧಿಕಾರಕ್ಕೆ ಆತುರಗೊಂಡು ಕರ್ನಾಟಕದ ಏಕೀಕರಣ ಬೇಡುತ್ತಿಲ್ಲ. ಅಗಲಿದ ಕನ್ನಡ ಕುಲ, ನೆಲ, ಜಲ, ಜನ ಒಂದಾಗಬೇಕೆಂಬುದು ನನ್ನ ಬಯಕೆ" ಎಂದು ಕಳಕಳಿಯಿಂದ ಕಣ್ಣೀರು ಸುರಿಸಿ, ಪರಿಷತ್ತಿನ ಪ್ರತಿನಿಧಿಗಳೆಲ್ಲರ ಮನ ಒಲಿಯುವಂತೆ ಆ ವೀರ ಕನ್ನಡತಿ ಆಡಿರುವ ಮಾತುಗಳು ಕರ್ನಾಟಕ ಏಕೀಕರಣದ

ಇತಿಹಾಸದಲ್ಲಿ ಅಚ್ಚಳಿಯದೆ ಉಳಿದಿರುವಂತಹವು. ಆ ಸಂಧರ್ಭವನ್ನು ಕಣ್ಣಾರೆ ಕಂಡು, ಕಿವಿಯಾರೆ ಕೇಳಿ ಆಗ ವರದಿ ಮಾಡಿರುವ 'ನವಯುಗ' ದಿನ ಪತ್ರಿಕೆಯ ಸಂಪಾದಕರು ಬರೆದ ರೀತಿಯನ್ನೇ ಇಲ್ಲಿ ಉದ್ಧರಿಸಬಹುದಾಗಿದೆ.

## ಕನ್ನಡತಿಯ ಕಣ್ಣೀರು

ಉದಯವಾಗಲಿ ನಮ್ಮ ಚಲುವ ಕನ್ನಡನಾಡು ಎಂದು ಬರಿದೆ ಹಾಡು ವಿರೇಕೆ?..... ಅಧಿಕರದ ಲಾಲಸೆ ಬಿಟ್ಟು ಕರ್ನಾಟಕಕ್ಕಾಗಿ ಹೋರಾಡುವಿರಾ?..... ನಡುನಾಡಿನಲ್ಲಿರುವ ಕನ್ನಡಿಗರು ನೀವು, ಗಡಿನಾಡಿನಲ್ಲಿರುವ ಕನ್ನಡತಿ ನಾನು, ನಮ್ಮ ಕಷ್ಟ. ನಾವು ತಲೆಕೊಟ್ಟಿರುವ ತುಳಿತ, ನಿಮಗೆಂತು ಗೊತ್ತಾದೀತು?....... ಅಣ್ಣಂದಿರೇ ಸೊಲ್ಲಾಪುರದ ಗೊಡವೆ ಏಕೆ ಎಂದೆನ್ನುವಿರಾ? ಇಂದು ಸೊಲ್ಲಾಪುರಕ್ಕೆ ಒದಗಿದ ಗತಿ ನಾಳೆ ಬೇಲೂರಿಗೆ ಬರಬಹುದು – ಏಕೀಕರಣ ನಮಗೆಲ್ಲ ಬೇಕಾಗಿದ್ದರೆ ಮಾಡಬೇಕಾಗಿದ್ದರೆ ಮಾಡಬೇಕಾದ ಕಾರ್ಯ ಬೇಕಾದಷ್ಟಿದೆ ––– ನಾನಂತೂ ಇದಕ್ಕಾಗಿ ನನ್ನ ಪ್ರಾಣ ಬಲಿಕೊಡಲು ಸಿದ್ಧಳಿರುವೆ ––– ಎಂದು ಬೇಲೂರಿನ ಕನ್ನಡ ಸಂಸ್ಕೃತಿಯ ದಿವ್ಯ ದೇಗುಲದಲ್ಲಿ, ಕನ್ನಡ ನಾಡಿನ ಹಿರಿ–ಕಿರಿಯ ಸಾಹಿತಿಗಳ ಮಧ್ಯದಲ್ಲಿ ನಿಂತು ಗಳಗಳನೆ ಅಳುತ್ತ ಸುರಿವ ಕಣ್ಣೀರನ್ನು ಸೆರಗಿನಿಂದ ಒರೆಸಿಕೊಳ್ಳುತ್ತ ಕನ್ನಡತಿಯೊಬ್ಬಳು ಕೊರಗಿನ ಮೊರೆಯನ್ನು, ಇಡೀ ಕನ್ನಡಿಗರ ಮುಂದೆ ತೋಡಿಕೊಂಡಳು. ಆಗ ಕೇಳುತ್ತಿರುವವರ ಕಣ್ಣು ತೇವವಾದವು. ಅಭಿಮಾನಿಗಳ ಎದೆ ತುಂಬಿ ಹೋಯಿತು. ಕನ್ನಡ ಸೋದರಿಯೊಬ್ಬಳ ಕನ್ನಡತನ ವನ್ನು ಅಲ್ಲಿ ಎಲ್ಲರೂ ಕಣ್ತುಂಬ ಕಂಡರು. ಸ್ವತಃ ಕನ್ನಡಮ್ಮನೇ ತನ್ನವರ ದೌರ್ಬಲ್ಯ ವನ್ನು ಕಂಡು ಕಣ್ಣೀರು ಮಿಡಿದಂತಹ ಸ್ಥಿತಿ ಅಲ್ಲಿತ್ತು. ಅದು ನಿಜವಾದ ಕಣ್ಣು ಕಿವಿಯಿದ್ದವರಿಗೆ ಮಾತ್ರ ಕಾಣಿಸಿತು ಹಾಗೂ ಕೇಳಿಸಿತು. ಜಯದೇವಿಯವರ ಕಣ್ಣಿನಿಂದ ಬೇಲೂರಿನಲ್ಲಿ ಚಿಮ್ಮಿದ ಆ ನೀರು, ಭೋಗ ಭಾಗ್ಯದಲ್ಲಿ ಮುಳುಗಿ ಹೋಗಿದ್ದ ರಾಜಾ ಗೋಪಿ ಚಂದನ ಭುಜದ ಮೇಲಿಂದ ವೈರಾಗ್ಯ ನಿಧಿಯಾದ ಅವನ ತಾಯಿ ಕರುಣಾದೇವಿಯ ಕಣ್ಣೀರಿನ ಬಿಸಿನೀರು ಬಿದ್ದಂತೆ ಈ ಕನ್ನಡಿಗರ ಮೈಮನದ ಮೇಲೆ ಬಿದ್ದಿತು.

ಹೀಗೆ ಕಣ್ಣೀರನ್ನು ಮಿಡಿಯುತ್ತಾ ತನ್ನ ಪ್ರಾಣವನ್ನು ಪಣಕ್ಕಿಡುತ್ತಾ, ಕರ್ನಾಟಕದ ಏಕೀಕರಣಕ್ಕಾಗಿ ಕನ್ನಡತಿಯರು ರೋಧಿಸುವ ಕಾಲ ಬರಬೇಕಾಗಿದ್ದಿ ತೇನು? ಇನ್ನೇನು ಬೇಕು ಕನ್ನಡಿಗರ ಕನ್ನಡತನವನ್ನು ಎಚ್ಚರಿಸಲು? ಎಂದು ಆ ನವಯುಗ ಪತ್ರಿಕೆಯ ವರದಿ ಮಾಡಿದ್ದು, ಜಯದೇವಿ ತಾಯಿಯವರ ವೀರ ಕನ್ನಡ ತನದ ಹೋರಾಟಕ್ಕೆ ವೇದಿಕೆಯನ್ನು ನಿರ್ಮಿಸಿದ ಪ್ರಸಂಗವನ್ನು ತೋರಿಸುತ್ತದೆ.

## ಅಖಂಡ ಕರ್ನಾಟಕ ಗೊತ್ತುವಳಿ ಸ್ವೀಕಾರ

ಎರಡು ಕರ್ನಾಟಕವಾಗಬೇಕೆಂಬ ತುಂಬಾ ಒತ್ತಡದ ಮಧ್ಯದಲ್ಲಿಯೇ ಅಖಂಡ ಕರ್ನಾಟಕದ ಗೊತ್ತುವಳಿ ಸರ್ವಾನುಮತದಿಂದ ಸ್ವೀಕೃತವಾದದ್ದು

ತಾಯಿಯವರ ತುಂಬು ಕಳಕಳಿ ಮತ್ತು ವೀರ ಕನ್ನಡತಕ್ಕೆ ನಿದರ್ಶನವಾಯಿತು. ಮೈಸೂರಿನವರು ಉತ್ತರ ಕನ್ನಡದವರಿಗೆ ತಾವೀರ್ವರೂ ಕನ್ನಡವಲ್ಲದೆ ಅನ್ಯಥಃ ಅಲ್ಲವೆಂಬುದರ ಸಂದೇಶವು ಅಲ್ಲಿ ಕನ್ನಡಿಗರಿಗೆ ದೊರೆಯಿತು. ಈ ಸಂದೇಶವನ್ನು ಹೊತ್ತ ತಾಯಿಯವರು ಬೇಲೂರು ಸಮ್ಮೇಳನವನ್ನು ಮುಗಿಯಿಸಿಕೊಂಡು ಸಮಗ್ರ ಹಳೆ ಮೈಸೂರಿನ ಭಾಗಗಳಿಗೆ ಭೇಟಿ ಕೊಟ್ಟು ಕನ್ನಡ ಜನಮನವನ್ನು ಒಲಿಸಿದರು. ಅಷ್ಟೇ ಅಲ್ಲ ಅವರು ಭೇಟಿ ಕೊಟ್ಟ ಹಾಸನ, ಮೈಸೂರು, ತಿಪಟೂರು, ಬೆಂಗಳೂರು, ಚಿಕ್ಕಮಗಳೂರು, ತುಮಕೂರು, ಕೊಡಗು, ದಾವಣಗೆರೆ, ಶಿವಮೊಗ್ಗ, ಮೊದಲಾದ ಊರುಗಳಲ್ಲಿ ಜನ ಕರ್ನಾಟಕದ ದೀಕ್ಷೆ ಪಡೆದರು ಆ ಶಕ್ತಿ ಇಂದಿಗೂ ಈ ಪ್ರದೇಶಗಳಲ್ಲಿ ಜೀವಂತವಾಗಿರುವುದನ್ನು ಕಾಣಬಹುದು.

## ಗಡಿ ಪ್ರದೇಶಗಳಲ್ಲಿ ಕನ್ನಡ ಜಾಗೃತಿ

ನಾಡಿನ ಗಡಿಗಳು ಭದ್ರವಾದರೆ ರಾಜ್ಯ ಭದ್ರವಾಗುತ್ತದೆ ಎಂಬುದು ತಾಯಿಯವರ ನಂಬಿಕೆ. ಹೀಗಾಗಿ ಕನ್ನಡ ಗಡಿಭಾಗಗಳತ್ತ ಅವರು ಹೆಚ್ಚಿನ ದೃಷ್ಟಿ ಹರಿಸಿದರು. ಮಹಾರಾಷ್ಟ್ರಕ್ಕೆ ಹೊಂದಿರುವ ಸೊಲ್ಲಾಪುರ, ಬೆಳಗಾವಿ, ಬೀದರ, ಸಾಂಗ್ಲಿ, ಕೊಲ್ಲಾಪುರ, ಉಸ್ಮಾನಾಬಾದ, ಅಕ್ಕಲಕೋಟೆ, ಭಾಗಗಳಲ್ಲಿ ಸಂಚಾರ ಮಾಡಿ ಕನ್ನಡ ಪತಾಕೆ ಹಿಡಿದುಕೊಂಡು ಜನ ಜಾಗೃತಿ ಮಾಡಿದರು. ಕಾರು ಹೋಗದ ಊರುಗಳಲ್ಲಿ ಎತ್ತಿನ ಗಾಡಿಗಳಲ್ಲಿ ಪ್ರವಾಸ ಕೈಗೊಂಡರು. "ಕನ್ನಡ ಕಲಿಯಿರಿ ಕನ್ನಡ ಶಾಲೆಗೆ ಕಳುಹಿಸಿರಿ" ಎಂಬ ಸಂದೇಶವನ್ನು ಆ ಭಾಗದಲ್ಲಿ ಬಿತ್ತರಿಸಿದರು. ತಾಯಿಯವರ ಈ ಜಾಗೃತಿಯಿಂದ ಎಚ್ಚೆತ್ತುಕೊಂಡ ಮರಾಠಿ ಕಾರ್ಯಕರ್ತರು ಹಲವು ಸಲ ಇದನ್ನು ಕೆಡಿಸಲು ಪ್ರಯತ್ನಿಸಿದರು ಆದರೆ ಜಯದೇವಿಯವರ ವ್ಯಕ್ತಿತ್ವ, ಆ ತೇಜಸ್ಸು, ಆ ಕನ್ನಡ ನಿಷ್ಠೆ, ಅಮೋಘವಾಣಿ ಮೇಲಾಗಿ ಅವರ ಕೆಚ್ಚದೆಯ ಕಾರ್ಯಕ್ಕೆ ವೈರಿಗಳೂ ಮಣಿಯಬೇಕಾಯಿತು. ಅವರು ಅಸ್ವಸ್ಥರಾದಾಗಲೂ ತಾವು ಕೈಗೊಂಡ ಕಾರ್ಯದಿಂದ ವಿಮುಖರಾಗಲಿಲ್ಲ. ನೀರಿನಂತೆ ಹಣ ಖರ್ಚು ಮಾಡುತ್ತ ತಮ್ಮ ಸಿಬ್ಬಂದಿ, ಸ್ತ್ರೀ ಪುರುಷ ಕಾರ್ಯ ಕರ್ತರನ್ನು ಜೊತೆಮಾಡಿಕೊಂಡು ಕನ್ನಡ ಕಟ್ಟುವ ಕಾರ್ಯವನ್ನು ಕೈಗೊಂಡರು. ಎಂತಹುದೇ ನಿಬಿಡ ಕಾರ್ಯಕ್ರಮಗಳಲ್ಲಿ ತೊಡಗಿದ್ದರೂ ಅವರ ನಿತ್ಯ ನಿಯಮ, ಲಿಂಗಪೂಜೆಗಳಿಗೆ ವ್ಯತ್ಯಾಸ ಬಾರದಂತೆ ಹೊಂದಿಕೊಂಡು ಹೋಗುವುದು ಅವರ ಗುಣ ಸ್ವಭಾವವಾಗಿತ್ತು. ಈ ಎಲ್ಲವನ್ನು ಜೊತೆಯಲ್ಲಿರಿಸಿಕೊಂಡು ಕನ್ನಡ ಗಡಿಭಾಗ ಗಳನ್ನು ಸದೃಢಪಡಿಸುವ ಕಾರ್ಯಗಳನ್ನು ಭಾಗಿಯಾಗಿ ಅಂಥ ಒಂದು ಗಡಿನಾಡ ಸೈನ್ಯವನ್ನು ನಿರ್ಮಿಸಿ ಕನ್ನಡ ಸೇವೆಗಾಗಿ ಸದಾ ಹೋರಾಟಕ್ಕೆ ಸಿದ್ಧವಾಗಿದ್ದುದು ಕನ್ನಡಿಗರ ಪುಣ್ಯವೆನ್ನಬೇಕು.

## ಆರಂಭಿಸದ ಕನ್ನಡ ಶಾಲೆಗಳು

೧೯೫೨–೫೩ರಲ್ಲಿ ಹೈದ್ರಾಬಾದ್ ರಾಜ್ಯದ ತಳೆವಾಡದಲ್ಲಿ ಸಕಲ ಕನ್ನಡಿಗರ ಸಭೆ ಸೇರಿತ್ತು ಆಗ ಮುಖ್ಯಮಂತ್ರಿಗಳಾಗಿದ್ದ ಶ್ರೀ. ಬಿ. ರಾಮಕೃಷ್ಣರಾವ್ ಅವರು ಈ ಸಭೆಯನ್ನು ಉದ್ಘಾಟಿಸಿದರು. ಅದರ ಅಧ್ಯಕ್ಷತೆಯನ್ನು ಶ್ರೀ. ಜಯದೇವಿ ತಾಯಿ ಲಿಗಾಡೆಯವರು ವಹಿಸಿದ್ದರು. ಅಂದು ಆ ಭಾಗಗಳಲ್ಲಿ ಪ್ರಚಲಿತವಿದ್ದ ಮರಾಠಿ ಶಾಲೆಗಳನ್ನೆಲ್ಲ ಬಂದ ಮಾಡಿ ಅಲ್ಲಿ ಕನ್ನಡ ಶಾಲೆಗಳನ್ನು ಪ್ರಾರಂಬಿಸಬೇಕೆಂದು ಹೈದರಾಬಾದ್ ಸರಕಾರವನ್ನು ಒತ್ತಾಯಪಡಿಸುವ ಒಂದು ಗೊತ್ತುವಳಿಯನ್ನು ಸ್ವೀಕರಿಸಲಾಯಿತು. ಆಗ ಆ ಮುಖ್ಯಮಂತ್ರಿಗಳು ಹೈದರಾಬಾದ್ ರಾಜ್ಯದಲ್ಲಿ ಕನ್ನಡ ಶಿಕ್ಷಕರು ದೊರೆಯುವುದಿಲ್ಲವೆಂಬ ಕಾರಣವನ್ನು ಮುಂದುಮಾಡಿದರು ಅಲ್ಲಿಂದ ಸೊಲ್ಲಾಪುರಕ್ಕೆ ಮರಳಿ ಬಂದ ತಾಯಿಯವರು ಒಳನಾಡಿನ ಭಾಗಗಳಿಂದ ಕನ್ನಡ ಶಿಕ್ಷಕರನ್ನು ಬರಮಾಡಿಕೊಂಡು ವಿಶೇಷವಾಗಿ ಬೀದರ ಜಿಲ್ಲೆಯ ಗ್ರಾಮೀಣ ಭಾಗ ಗಳಿಗೆ ಅವರನ್ನು ಕಳುಹಿಸಿಕೊಟ್ಟರು. ಇವರಲ್ಲಿ ಹಲವರು ಸರಕಾರ ಪ್ರಾರಂಭಿಸಿದ ಶಾಲೆಗಳಲ್ಲಿ ಸೇರಿದರೆ ಹಲವರು ವಾಲಂಟರಿ ಕನ್ನಡ ಶಾಲೆಗಳನ್ನು ಸೇರಿದರು. ಅದೇ ಸಮಯದಲ್ಲಿ ಸೊಲ್ಲಾಪುರ ಹಾಗೂ ಜತ್ತ ಭಾಗಗಳಲ್ಲಿ ಕನ್ನಡ ಶಾಲೆಗಳು ಆರಂಭಗೊಂಡವು. ಇಲ್ಲಿ ಅನೇಕ ಶಾಲೆಗಳಿಗೆ ಬಂದ ಶಿಕ್ಷಕರ ಬರು ಹೋಗುವ ಹಾಗೂ ಸರಕಾರ ಸಹಕರಿಸುವವರೆಗಿನ ಖರ್ಚು ವೆಚ್ಚಗಳನ್ನು ಜಯದೇವಿ ತಾಯಿಯವರೇ ವಹಿಸಿಕೊಂಡಿದ್ದರೆಂಬುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

## ಸೊಲ್ಲಾಪುರದ ಸೇರ್ಪಡೆಗೆ ಪ್ರತಿಭಟನೆ

ದಾವಣಗೆರೆಯಲ್ಲಿ ಕ್ರಿ.ಶ. ೧೯೪೬ರಲ್ಲಿ ನಡೆದ ಕರ್ನಾಟಕಸ್ಥರ ಮಹಾಸಭೆಯು ಕರ್ನಾಟಕ ಏಕೀಕರಣ ಚಳುವಳಿಯ ಮತ್ತು ಅನುಷ್ಠಾನಕ್ಕೆ ವಿಶೇಷ ಚಾಲನೆ ನೀಡಿತು ಆಡಳಿತ ಚುಕ್ಕಾಣಿ ಹಿಡಿದ ನಾಯಕರನ್ನು ಮತ್ತು ಬ್ರಿಟೀಷ್ ಸರಕಾರವನ್ನು ಭಾಷಾವಾರು ಪ್ರಾಂತ ರಚನೆಗೆ ಪ್ರೇರೇಪಿಸಲೇಬೇಕೆಂಬುದನ್ನು ಈ ಸಭೆಯಲ್ಲಿ ಎಲ್ಲರೂ ಮನಗಂಡರು. ಈ ಸಂದರ್ಭದಲ್ಲಿ ಕಾಂಗ್ರೆಸ್ಸಿಗರಿಗೆ ಭಾರತ ಸ್ವಾತಂತ್ರ್ಯದ ಕನಸಿನ ಸಂದರ್ಭದಲ್ಲಿ ಭಾಷಾವಾರು ಪ್ರಾಂತ ರಚನೆಯು ಸಂಕುಚಿತ ಮನೋಭಾವದ ಸಂಕೇತವೆನಿಸಿತ್ತು. ಇದು ರಾಷ್ಟ್ರೀಯ ಮನೋಭಾವನೆಗೆ ಅಡ್ಡಿ ಎಂದು ನಂಬಿದ್ದರು. ಆದರೆ ಕರ್ನಾಟಕ ಏಕೀಕರಣ ಹೋರಾಟಗಾರರಿಗೆ ಅದರಲ್ಲೂ ಗಡಿನಾಡಿನ ಹೋರಾಟಗಾರ್ತಿ ಜಯದೇವಿಯರಿಗೆ ಸ್ವಾತಂತ್ರ್ಯ ನಂತರ ಆಗಬಹುದಾದ ಪ್ರಗತಿಯ ಕುರಿತು ಸ್ಪಷ್ಟ ನಿಲುವುಗಳಿದ್ದವು. ಅದರಲ್ಲೂ ದೂರದೃಷ್ಟಿಯುಳ್ಳ ಜಯದೇವಿಯರು 'ಸೊಲ್ಲಾಪುರ' ಕರ್ನಾಟಕದ ನೆಲ ಅದು ಅಖಂಡ ಕರ್ನಾಟಕದಲ್ಲಿರಬೇಕೆಂದು ಒತ್ತಾಯಿಸುವುದರೊಂದಿಗೆ ಇನ್ನೂ ಅನೇಕ ಕನ್ನಡದ ನೆಲೆಗಳು ಮಹಾರಾಷ್ಟ್ರಕ್ಕೆ ಸೇರುವುದನ್ನು ತಪ್ಪಿಸಿದರೆನ್ನಬಹುದು ಈ ಹೋರಾಟದಲ್ಲಿ ಜಯದೇವಿಯವರ ಸೇವೆ ಸ್ಮರಣೀಯ.

## ಬೆಳಗಾವಿ ಉಳಿಸಲು ಪ್ರತಿಭಟನೆ

ಸೊಲ್ಲಾಪುರದಂತಹ ಅಚ್ಚಗನ್ನಡ ನಗರವನ್ನು; ಮಹಾರಾಷ್ಟ್ರ ಕಬಳಿಸಿದ ತರುವಾಯ ಮಹಾನಗರವಾದ ಬೆಳಗಾವಿಯನ್ನು ನುಂಗಲು ಹವಣಿಸುವ ಪ್ರಯತ್ನ ಸೊಲ್ಲಾಪುರದ ಕನ್ನಡಿಗರಿಗೆ ಎಂದೋ ತಿಳಿದಿತ್ತು. ಮಹಾರಾಷ್ಟ್ರದ ಮುಂದಾಳುಗಳಿಗೆ ಗಡಿತಂಟೆಯಿದೆ ಎಂಬುದನ್ನು ಮೈಸೂರು ಒಪ್ಪಿದರೆ, ಅದಕ್ಕೆ ಕೇಂದ್ರದ ಮನ್ನಣೆಯಿದ್ದರಷ್ಟೇ ಸಾಕೆಂಬಂತೆ ವರ್ತಿಸುತ್ತಿತ್ತು. ಮುಂದಿನ ಕಾರ್ಯವನ್ನು ಅವರು ಕೇಂದ್ರದಿಂದ ಮಾಡಿಸಿಕೊಳ್ಳಲು ಷಡ್ಯಂತ್ರ ರೂಪಿಸುತ್ತಿದ್ದರು ಮುಂಬೈಯಲ್ಲಿ ಅವಿಭಾಜ್ಯ ಕಾಂಗ್ರೆಸ್ ಅಧಿವೇಶನ ಸೇರಿದ್ದಾಗ ಆ ಪಕ್ಷದ ವರಿಷ್ಠರ ಗಮನ ಸೆಳೆಯುವಂತೆ ಮುಖ್ಯಮಂತ್ರಿ ನಾಯಕರ ಮನೆ ಮುಂದೆ ವೃದ್ಧ ದೇಶ ಭಕ್ತ ಶ್ರೀ ಬಾಪಟರನ್ನು ಸತ್ಯಾಗ್ರಹ ಮಾಡಲು ಒತ್ತಾಯಿಸಿ, ತಾವು ಹೂಡಿದ ಕಪಟ ನಾಟಕ ಯಶಸ್ವಿಯಾಗುವಂತೆ ನೋಡಿಕೊಂಡರು. ಮಹಾರಾಷ್ಟ್ರದ ಮುಂದಾಳುಗಳ ಇಂತಹ ವ್ಯೂಹಕ್ಕೆ ಕರ್ನಾಟಕ ಮುಂದಾಳುಗಳು ಬಲಿ ಬೀಳುವರೆಂದೇ ಬೆಂಗಳೂರಿನ ಕಾಂಗ್ರೆಸ್ಸ್ ಭವನದ ಎದುರು ಕಾಂಗ್ರೆಸ್ಸಿನ ಸಭೆ ಮಾಡಿದಾಗ ತಾಯಿಯವರ ನೇತೃತ್ವದಲ್ಲಿ ಪ್ರತಿಭಟನಾ ಮೆರವಣಿಗೆಯನ್ನು ನಡೆಸಲಾಗಿತ್ತು. ಇದು ಬೆಳಗಾವಿ ಕರ್ನಾಟದಲ್ಲಿ ಉಳಿಯಲೆಂದು ಸೊಲ್ಲಾಪುರ ಗಡಿನಾಡ ಕನ್ನಡದಲ್ಲಿ ಪ್ರತಿಭಟಿಸಿದ್ದರ ಇಂಗಿತವನ್ನು ಮೈಸೂರಿನ ಮುಂದಾಳುಗಳು ಅರಿಯದೇ ಹೋದುದು ದುರ್ದೈವದ ಸಂಗತಿ ಎನ್ನಬಹುದು.

ತಮ್ಮದಲ್ಲದ ಕನ್ನಡ ಭಾಗಗಳನ್ನು ಕಬಳಿಸುವುದರಲ್ಲಿ ಮಹಾರಾಷ್ಟ್ರದ ಮುಂದಾಳುಗಳು ತುಂಬಾ ದೂರ್ತರೆಂಬುದನ್ನು ಒಳನಾಡಿಗರಿಗಿಂತ ಗಡಿನಾಡಿಗರಿಗೆ ಚನ್ನಾಗಿ ಗೊತ್ತಿತ್ತು. ಹೀಗಾಗಿ ಗಡಿ ಪರಿಶೀಲನೆಗೆ ಸಮಿತಿ ನಿಯಮಿಸುವಲ್ಲಿ ಅವರು ಹೇಗೆ ತಂತ್ರ ರೂಪಿಸುತ್ತಾರೆಂಬುದನ್ನು ಕಂಡುಕೊಂಡ ತಾಯಿಯವರು ಗಡಿನಾಡ ಕನ್ನಡಿಗರ ಮೂಲಕ, ತಾರು, ತಂತಿಗಳ ಮೂಲಕ ಸಂಪರ್ಕ ಸಾಧಿಸಿ, ಕೇಂದ್ರದ ವರಿಷ್ಠರಿಗೆ ಮೈಸೂರು ಮುಂದಾಳುಗಳಿಗೆ, ಉಭಯ ರಾಜ್ಯಗಳ ಗಡಿ ಪರಿಶೀಲನಾ ಸಮಿತಿಯವರಿಗೆ ಒತ್ತಾಯ ಪಡಿಸುತ್ತಿದ್ದರು. ಸಾಧ್ಯವಾದರೆ ಗಡಿನಾಡ ಪರಿಶಿಲನಾ ಸಮಿತಿಯ ಅಧ್ಯಕ್ಷರು, ಕನಾಟಕ, ಮಹಾರಾಷ್ಟ್ರ ಹಾಗೂ ದಕ್ಷಿಣ ಭಾರತದ ನ್ಯಾಯಾಧಿಶರಾಗಬಾರದೆಂದು ಒತ್ತಾಯಿಸಿ, ಪತ್ರ ಬರೆಯಿತ್ತಿದ್ದರು. ಇದರಿಂದಲೇ ಮಹಾಜನರಂತಹ ನಿಷ್ಠಾವಂತ, ನಿಷ್ಪಕ್ಷಪಾತಿ, ಸತ್ಯ ಪ್ರೇಮ, ನ್ಯಾಯಾಧೀಶರು ದೊರಕಿದರು ಎನ್ನಬಹುದು, ಇಂಥ ಪ್ರಸಂಗಗಳಲ್ಲಿ ಜಯದೇವಿ ತಾಯಿಯವರು ಮಾಡಿದ ಹೋರಾಟಗಳು ಎಷ್ಟೇ ನಡೆದರೂ ಕೂಡ ಮೈಸೂರಿನ ಮುಂದಾಳುಗಳಿಗೆ ಎಳ್ಳಷ್ಟು ಇದರ ಬಿಸಿ ತಟ್ಟಲಿಲ್ಲ. ಅವರೆಂದೂ ಗಡಿನಾಡಿನ ಬಗ್ಗೆ ಕಾಳಜಿ ಮಾಡಲೇ ಇಲ್ಲ. ಮಹಾಜನ ಸಮಿತಿಯ ಪರಿಶೀಲನಾ ಸಂಧರ್ಭದಲ್ಲಿ ಮೈಸೂರು ಸರಕಾರ ಸೊಲ್ಲಾಪುರ ನಗರವನ್ನು ಬೇಡಿಲ್ಲವೆಂತಲೂ

ಮತ್ತು ಮಹಾರಾಷ್ಟ್ರದೊಳಗುಳಿದ ಅಕ್ಕಲಕೋಟೆ, ದಕ್ಷಿಣ ಸೊಲ್ಲಾಪುರ ಜತ್ತ ಮುಂತಾದ ಭಾಗಗಳನ್ನು ಸಮಿತಿಯು ಪರಿಶೀಲನೆಗೆ ಒಳಪಡಿಸದೆ ಕೇವಲ ಮೈಸೂರಿನಲ್ಲಿಯ ಮರಾಠಿ ಭಾಗಗಳಷ್ಟೇ ಸಮಿತಿಯ ರಕ್ಷಣೆ ಒಳಪಡಿಸಲಾಗಿದೆ ಎಂಬುದು ತಿಳಿದುಬಂತು. ಈ ಅಂಶ ಸೊಲ್ಲಾಪುರ ಜಯದೇವಿ ತಾಯಿಯವರಿಗೆ ಗೊತ್ತಾದ ಕೂಡಲೇ, ಅವರು ಇಪ್ಪತ್ತು ಜನರಿಂದೊಡಗೂಡಿದ ಶಿಷ್ಯ ಮಂಡಳ ದೊಂದಿಗೆ ಬೆಂಗಳೂರಿಗೆ ಧಾವಿಸಿ, ಅಲ್ಲಿ ಮೈಸೂರು ಮುಂದಾಳುಗಳು ಹಾಗೂ ಮಹಾಜನರನ್ನು ಬೆಟ್ಟಿಯಾಗಿ ವಿಚಾರಿಸಿದಾಗ ನಿಜವೆನಿಸಿತು. ಅದು ಹೀಗೇಕೆ? ಎಂದು ಪ್ರಶ್ನಿಸಿದಾಗ' ಸೊಲ್ಲಾಪುರದ ಬೇಡಿಕೆಯನ್ನು ಒತ್ತಾಯ ಪಡಿಸಿದಲ್ಲಿ ಬೆಳಗಾವಿ ವಿಷಯಕ್ಕೆ ಧಕ್ಕೆ ಬರುವುದೆಂಬ ಭೀತಿ ಅವರಲ್ಲಿ ಮನೆಮಾಡಿಕೊಂಡಿದ್ದು ತಿಳಿಯಿತು. ಆಗ ತಾಯಿಯವರು ಇದು ಶುದ್ಧ ತಪ್ಪು. ನಮ್ಮದೇ ಆದ ಅನೇಕ ಗಡಿತಾಣಗಳನ್ನು ಕಳೆದುಕೊಂಡಿರುವುದಕ್ಕೆ ಇಂತಹ ಅಂಜಿಕೆಗಳೇ ಕಾರಣವೆಂದು ತಿಳಿಸಿದರು.

ಆ ಸಂದರ್ಭದಲ್ಲಿ ಅವರು ನಿರ್ಭೀತಿಯಿಂದ ಮಹಾಜನ ಸಮಿತಿ ಸೊಲ್ಲಾಪುರನಗರ ಹಾಗು ಮಹಾರಾಷ್ಟ್ರದಲ್ಲಿನ ಕನ್ನಡ ಭಾಗಗಳಿಗೆ ಭೇಟಿ ಕೊಡಲು ನಿರಾಕರಿಸಿದರೆ ಆ ಸಮಿತಿ ಮುಂದೆ ಯಾರೂ ಸಾಕ್ಷಿ ನೀಡಬಾರದೆಂದು ಆದೇಶ ನೀಡಿದರು. ಅದೇ ರೀತಿ ಎರಡು ದಿವಸ ಯಾರೂ ಸಾಕ್ಷಿ ನೀಡಲು ಮುಂದಾಗಲಿಲ್ಲ. ಆವಾಗ ಮಹಾಜನರು ಮೇಲಿನ ಬೇಡಿಕೆಗೆ ಒಪ್ಪಿಕೊಂಡರು ಮತ್ತು ಅದೇ ರೀತಿ ಅವರು ಬೆಟ್ಟಿಕೊಟ್ಟು ವರದಿ ಸಲ್ಲಿಸಿದರೆಂಬುದು ಗಮನಾರ್ಹ ಸಂಗತಿ. ಆದರೆ ಈ ಸಮಿತಿಯು ಕರ್ನಾಟಕ ಭಾಗಗಳಲ್ಲಿ ಕಾಣದ ಅನೇಕ ಹೊಸ ಸಮಸ್ಯೆಗಳನ್ನು ಮಹಾರಾಷ್ಟ್ರದ ಗಡಿಭಾಗದಲ್ಲಿ ಎದುರಿಸಿತು. ಕನ್ನಡ ವಿರೋಧಿ ನೀತಿಯನ್ನು ಅನುಸರಿಸುತ್ತಿದ್ದ ಮಹಾರಾಷ್ಟ್ರ ಸರಕಾರದ ಪಕ್ಷಪಾತ ಧೋರಣೆಯು ಬಯಲಿಗೆ ಬಂತು. ಎಲ್ಲರಿಗೆ ಸಿಗಬೇಕಾದ ಸರ್ವಸವಲತ್ತು ಹಾಗೂ ಹಕ್ಕು ಬಾಧ್ಯತೆಗಳನ್ನು ವಿವರಿಸುತ್ತ ಅವು ಅಲ್ಲಿಯ ಕನ್ನಡಿಗರಿಗೆ ದೊರೆಯದೇ ಇರುವುದನ್ನು ದಾಖಲಿಸತೊಡಗಿತು. ಇದನ್ನು ತಡೆಗಟ್ಟಲು ಹಲವು ತೆರನಾದ ಪ್ರಯತ್ನ ನಡೆಸಿದ ಮರಾಠಿಗರ ಕುತಂತ್ರಕ್ಕೆ ಯಶ ಸಿಗಲಿಲ್ಲ. ವರದಿ ಸಿದ್ಧವಾಯಿತು. ಮಹಾರಾಷ್ಟ್ರ-ಕರ್ನಾಟಕ ಗಡಿವಿವಾದದಲ್ಲಿ ಮಹಾಜನ ಸಮಿತಿಯ ತೀರ್ಪು ಹಿಂದು-ಮುಂದಿಲ್ಲದಂತಹ ಒಂದು ಮಹತ್ವ ದಾಖಲೆಯಾಗಿದೆ. ಅದರ ಸಂಪೂರ್ಣ ಕಾರ್ಯಾಚರಣೆಯಾಗಬೇಕಾಗಿದೆಯಷ್ಟೇ.

ಈ ಎಲ್ಲ ಕಾರ್ಯಗಳಲ್ಲಿ ಪ್ರಾರಂಭದಿಂದಲೂ ಜಯದೇವಿ ತಾಯಿಯವರ ಆಸಕ್ತಿ ಹಾಗೂ ಸಕ್ರಿಯಾಶಕ್ತಿ ದಾರಿ ದೀಪವಾಗಿ ಕನ್ನಡಿಗರ ಕೈಹಿಡಿದು ನಡೆಸಿರುವುದನ್ನು ಎಂದೆಂದೂ ಮರೆಯಲಾಗದು. ಇಂತಹ ಸನ್ನಿವೇಶಗಳಲ್ಲಿ ಬಂದಿರುವ ಹಲವು ಎಡರು ತೊಡರುಗಳನ್ನು ಲಕ್ಷಿಸದೆ ಅಖಿಲ ಕನ್ನಡಿಗರ ಸರ್ವ

ಹಿತಾಸಕ್ತಿಗಾಗಿ, ಬದ್ಧ ಕಂಕಣರಾಗಿ ನಿಂತಿದ್ದ ಜಯದೇವಿ ತಾಯಿಯವರು ಅಭಿನಂದನೀಯರು. ಅವರ ನಡೆ ನುಡಿ ಆಚಾರ-ವಿಚಾರಗಳು, ಮುಂದಾಲೋಚನೆಗಳು, ಆಗಾಗ ಅತ್ಯಂತ ಧೈರ್ಯದಿಂದ ಅವರು ಮುನ್ನುಗ್ಗಿ ಮಾಡುತ್ತಿದ್ದ ಕಾರ್ಯಗಳು ಅವರ ಕೆಚ್ಚೆದೆತನವನ್ನು ಕನ್ನಡ ನಿಷ್ಠೆಯನ್ನು ಸದಾ ಚಿಮ್ಮಿಸುವ ಹೋರಾಟಗಳೆನ್ನಬಹುದು.

## ಸಂಘಟನೆಗಳು

ಹಿರಿಯ ಸಾಹಿತಿಗಳಿಂದ 'ಮಹಾಸಾಹಿತಿ' ಎಂದೆನಿಸಿಕೊಂಡಿರುವ ಜಯದೇವಿ ತಾಯಿ ಲಿಗಾಡೆಯವರು ದೇಶಾಭಿಮಾನಿಗಳು, ಬ್ರಿಟಿಷ್ ಸರಕಾರವು ಇವರಿಗೆ ಕೊಡಮಾಡಲು ಬಂದ **'ಕೈಸರ-ಇ-ಹಿಂದ್'** ಪದವಿಯನ್ನು ಧಿಕ್ಕಿಸಿದರು ನಿರ್ಭೀತ ಸಮಾಜ ಕಾರ್ಯಕರ್ತರು ವಾಗ್ಮಿಗಳು, ಕವಯಿತ್ರಿ, ದಾನಿ ಹಾಗೂ ಸರಳ ಹೃದಯವಂತೆಯಾದ ಇವರು, ಆಧ್ಯಾತ್ಮ ಜೀವಿಗಳು, ಕ್ರಿಯಾಶೀಲರು ಆಗಿದ್ದರು. ಹಳೆ-ಹೊಸ ವಿಚಾರಗಳ ಸುಂದರ ಸಮನ್ವಯ ಸಾಧಿಸಿದ ಈ ತಾಯಿ ಸಿರಿಗನ್ನಡದ ಸಿರಿಯಂತೆ ಇದ್ದು ಹೋಗಿದ್ದಾರೆ. ಅವರ ಸಾಮಾಜಿಕ, ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ವ್ಯಕ್ತಿತ್ವ ಬಹುಮುಖವಾದುದು. ಅದನ್ನು ಸಾರ್ವಜನಿಕವಾಗಿ ವಿನಿಯೋಗಿಸಿಕೊಳ್ಳಲು ಹಲವು ಸಂಘಟನೆಗಳ ಕಾರ್ಯಕರ್ತರಾಗಿ ಸೇವೆಸಲ್ಲಿಸಿರುವುದು ಗಮನಾರ್ಹ ಅಂಶ.

ಬಂದವರಿಗೆ ಬಾ ಅನ್ನು ಮನತುಂಬಿ ಮಾತಾಡು
ಬಂದ ಸಂಗತಿ ತಿಳಕೋಲೋ
ಬಂದ ಸಂಗತಿ ತಿಳಕೋಲೋ- ಅಣ್ಣಯ್ಯ
ಚಂದಲ್ಲೋ ಗಮ್ಮ ಗರುವಿಕಿ

ಎನ್ನುವ ತಾಯಿಯವರ ವಿನಯ ಅವರದೇ. ಸಿದ್ಧರಾಮನನ್ನು ಕಂಡ ಅವರದು ತುಂಬಿದ ಬದುಕು 'ಸಾಮರಸ್ಯ' ವೇ ಚರಮ ಗುರಿಯಾಗಿದ್ದರೂ ಅವರು ಬಹುಮುಖ ವ್ಯಕ್ತಿತ್ವವುಳ್ಳವರಾಗಿ ವೈವಿಧ್ಯಮಯ ಬದುಕನ್ನು ಕಂಡಿದ್ದರು. ಐದು ಮಕ್ಕಳ ತಾಯಿಯಾಗಿ ಸಂಸಾರದ ಭಾರ ಹೊತ್ತಿದ್ದರು. ಮಕ್ಕಳಿಗೆ ಸರಿಯಾದ ಶಿಕ್ಷಣ ಕೊಟ್ಟು ಅವರ ಪ್ರತಿಭೆ, ವ್ಯಕ್ತಿತ್ವ, ಸ್ಫುಟಗೊಂಡು ಅರಳಲು ಅನುಕೂಲವೊದಗಿಸಿದರು. ಹಾಗೆಯೇ ಸಾಮಾಜಿಕ ಬದುಕು ಸುಂದರವಾಗಿರಬೇಕೆಂದು ವಿಚಾರಿಸುತ್ತಿದ್ದರು. ಅದರಲ್ಲೂ ಹೆಣ್ಣು ಮಕ್ಕಳ ಪ್ರಗತಿಗಾಗಿ ಸದಾ ಹಂಬಲಿಸುತ್ತಿದ್ದ ಅವರು ಆ ನಿಟ್ಟಿನಲ್ಲಿ ಹಲವು ಸಂಘ ಸಂಸ್ಥೆಗಳನ್ನು ಹುಟ್ಟು ಹಾಕಿ ಅವುಗಳನ್ನು ಮುನ್ನಡೆಸಿದರು ಮತ್ತೆ ಹಲವು ಸಂಘ ಸಂಸ್ಥೆಗಳ ಪದಾಧಿಕಾರಿಗಳಾಗಿಯೂ ಕಾರ್ಯನಿರ್ವಹಿಸಿದರು.

ಹರಿಜನರ ಹೆಣ್ಣು ಮಕ್ಕಳ ಹಾಗೂ ಕನ್ನಡ ನಾಡು ನುಡಿಗಳ ಸೇವೆಯೇ ತನ್ನ ಧ್ಯೇಯವೆಂದು ಮುನ್ನಡೆದ ಅವರ ಮನೋಭಾವವು ಅವರ ಎಲ್ಲ ಕಾರ್ಯ

ಚಟುವಟಿಕೆಯ ರಂಗಗಳಲ್ಲಿ ಪ್ರತ್ಯಕ್ಷವಾಗಿದೆ, ಜಯದೇವಿಯು ಬಾಲಕಿಯಾಗಿದ್ದಾಗಲೇ ಸೊಲ್ಲಾಪುರದ ವಾರದ ಮಲ್ಲಪ್ಪನವರ ಮನೆಯಲ್ಲಿ 'ವೀರಶೈವ ಮಹಿಳಾ ಜ್ಞಾನ ಮಂದಿರ' ಸ್ಥಾಪಿತವಾಗಿತ್ತು. ಪ್ರಗತಿಪರ ವಿಚಾರ ಧಾರೆಯುಳ್ಳ ಹಾಗೂ ಮುಂದಾಳತ್ವದ ಮನೋಭಾವವುಳ್ಳ ವಾರದ ಮಲ್ಲಪ್ಪನವರು ಸಾಮಾಜಿಕ ಸೇವೆಯಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಆಗರ್ಭ ಶ್ರೀಮಂತರಾಗಿದ್ದ ಅವರ ಮನೆಯ ಹೆಣ್ಣು ಮಕ್ಕಳು ಸಹ ಪ್ರಗತಿಪರರಾಗಿ ಬೆಳೆಯಲು ಅವಕಾಶ ಒದಗಿಸಿದ್ದರು. ಈ ಹಿನ್ನೆಲೆಯಲ್ಲಿ ಅವರು 'ಮಹಿಳಾ ಜ್ಞಾನ ಮಂದಿರ' ವು ಆರಂಭದಲ್ಲಿ ಮಲ್ಲಪ್ಪನವರ ಪತ್ನಿಯವರಾದ ಬಸವ್ವ ಬಾಯಿ, ಗೌರವ್ವ ಬಾಯಿಯವರ ನೇತೃತ್ವದಲ್ಲಿ ಕಾರ್ಯಕ್ರಮ ರೂಪಿಸಿಕೊಳ್ಳುತ್ತಿತ್ತು.ಆ ಸಂಸ್ಥೆಗೆ ಜಯದೇವಿ ತಾಯಿ ಲಿಗಾಡೆಯವರ ತಾಯಿ ಸಂಗವ್ವ ಮಡಕಿಯವರು ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದರು. ಶಾಂತಸ್ವಭಾವದ, ಸೇವಾಮನೋಭಾವದ, ಧರ್ಮದಲ್ಲಿ ನಿಷ್ಠೆಯುಳ್ಳ, ತಾಯಿಯೊಂದಿಗೆ 'ಆ ಮಹಿಳಾ ಜ್ಞಾನಮಂದಿರ'ಕ್ಕೆ ಹೋಗುತ್ತಿದ್ದ ಜಯದೇವಿಯವರು ಅದರಿಂದ ಬಹಳ ಕಲಿತರು.

ರಾಜವೈಭವದ ನೆಲದ ಗುಣವನ್ನು ಹುಟ್ಟಿನಿಂದಲೇ ಮೈಗೂಡಿಸಿಕೊಂಡಿದ್ದ 'ಜಯದೇವಿ' ಯವರು ತಂದೆ-ತಾಯಿ-ಅಜ್ಜ-ಅಜ್ಜಿಯವರ ಸೇವಾಮನೋಭಾವನೆ, ಸಹನಶಿಲತೆ, ನಿರಾಡಂಬರತೆ, ಶರಣ ಜೀವನ ಹಾಗೂ ಜನಕಲ್ಯಾಣ ಮನೋಭಿಲಾಷೆಯನ್ನು ಹಾಗೂ ವಿಶೇಷವಾಗಿ ದಾಸೋಹ ಗುಣವನ್ನು ರೂಢಿಸಿಕೊಂಡರು. ಇದಕ್ಕೆ ಪ್ರಮುಖ ಪ್ರೇರಣೆ ಅವರ ಮನೆಯ ವಾತಾವರಣ ಹಾಗೂ ಆ 'ವೀರಶೈವ ಮಹಿಳಾ ಜ್ಞಾನ ಮಂದಿರ' ವೆಂದು ಹೇಳಬಹುದು 'ಮಹಿಳಾ ಜ್ಞಾನ ಮಂದಿರವು' ಬೆಳೆದಂತೆ ಸ್ವಂತ ಕಟ್ಟಡಕ್ಕೆ ಸ್ಥಳಾಂತರಿಸಿದರು. ೧೯೩೦ರ ಹೊತ್ತಿಗೆ ತಾಯಿಯವರು ಇದರ ಮೇಲ್ವಿಚಾರಕಾರಿದ್ದರು.

ಮನೆಯಲ್ಲಿ ಮಹಿಳಾ ಜ್ಞಾನ ಮಂದಿರದ ಚಟುವಟಿಕೆಗಳು ನಿರಂತರವಾಗಿ ನಡೆಯುತ್ತಿದ್ದವು. ಮೊದಲು ಹೆಣ್ಣು ಮಕ್ಕಳನ್ನು ಅರಿಷಿಣ ಕುಂಕುಮಕ್ಕಾಗಿ ಕರೆದು ಕೂಡಿಸಲು ಆರಂಭಿಸಿದರು. ನಂತರದಲ್ಲಿ ಸ್ತ್ರೀ ಸಮಸ್ಯೆಗಳ ಚರ್ಚೆ ಅವರಿಗೆ ರಾಜ್ಯ, ದೇಶದ ಮಾಹಿತಿಗಳು ತಿಳಿಯುವಂತೆ, ಪತ್ರಿಕೆಗಳನ್ನು ಓದಿ ಹೇಳುವುದು, ವಚನ ಗಾಯನ, ಪುರಾಣ ಹೇಳುವುದು, ಸ್ತ್ರೀಯರಿಂದ ಭಾಷಣ ಮಾಡಿಸುವುದು, ಹೆಣಿಕೆ, ಹೊಲಿಗೆ, ತರಬೇತಿಗಳನ್ನು ಕೊಡಿಸುವುದರೊಂದಿಗೆ ಅಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು ಈ ಮೂಲಕ ಜಯದೇವಿಯವರು ತಮ್ಮ ವ್ಯಕ್ತಿತ್ವವನ್ನು ಅರಳಿಸಿಕೊಂಡು ೧೯೩೭ ರಿಂದಲೇ ಸಾರ್ವಜನಿಕ ಕ್ಷೇತ್ರದಲ್ಲಿ ಹೆಸರು ಪಡೆದರು. ಸ್ವಾತಂತ್ರ್ಯ ಪೂರ್ವದಲ್ಲಿ ಆಂದೋಲನಗಳಲ್ಲಿಯೂ ಭಾಗವಹಿಸಿದರು. ಹುಕುಂ ಬಾಡಿಯ ಕಾಲದಲ್ಲಿಯೂ ಸ್ವಾತಂತ್ರ್ಯ ಸಮಾರಂಭಗಳನ್ನು ಸೊಲ್ಲಾಪುರದಲ್ಲಿ ವಿಜೃಂಭಣೆಯಿಂದ ಆಚರಿಸುವಲ್ಲಿ ಅವರು ಮುಂದಾಳತ್ವ ವಹಿಸಿದರು.

೧೭-೦೮-೧೯೪೪ರಲ್ಲಿ **"ರಾಷ್ಟ್ರೀಯ ಸೇವಾದಳ"**ದ ಪ್ರೌಢ ಶಿಕ್ಷಣ ಸ್ತ್ರೀ ಶಾಖೆಯನ್ನು ತಮ್ಮ ಜಯನಿಕೇತನದಲ್ಲಿ ಸ್ಥಾಪಿಸಲು ಜಯದೇವಿಯರ ಬೆಂಬಲವೇ ಕಾರಣ. ಈ ಸಂಸ್ಥೆಯ ಮೂಲಕ ೧೯೪೮ರಲ್ಲಿ ಹೈದರಾಬಾದ್ ನಿರಾಶ್ರಿತರಿಗೆ ಆಶ್ರಯ ಕೊಡುವಲ್ಲಿ ಜಯದೇವಿಯವರು ತುಂಬಾ ಮಹತ್ವದ ಪಾತ್ರವಹಿಸಿದರು. ಈ ಸಮಯದಲ್ಲಿ ಪ್ರೌಢಶಿಕ್ಷಣ ಸಮಿತಿಗೆ ಜಯದೇವಿಯವರು ನಿರೀಕ್ಷಕರೆಂದು ನಾಮಕರಣಗೊಂಡು ಅತ್ಯುತ್ತಮ ಕಾರ್ಯ ಕೈಗೊಂಡರು. ೧೯೪೮ರಲ್ಲಿಯೇ ಅವರು **ಹೈದರಾಬಾದ ಲಿಂಗಾಯತ ಪರಿಷತ್ತಿನ** ಹಿತ ಚಿಂತಕರೂ ಹಾಗೂ ಮಹಿಳಾ ಸಮಿತಿಯ ಕಾರ್ಯದರ್ಶಿಯಾಗಿಯೂ ಆಯ್ಕೆಯಾಗಿದ್ದರು ಆಗ ಶಿಕ್ಷಣದ ಅವಶ್ಯಕತೆಯ ಅರಿವು ಮೂಡಿಸಿದರು ಇದು ಮಹಿಳಾ ಜಾಗೃತಿಗೆ ನಾಂದಿ ಹಾಡಿತು.

ಗಡಿನಾಡ ನೆಲದ ಮೇಲೆ ಕನ್ನಡ ಉಳಿದು ಬೆಳೆಯಲೆಂದು **"ಕನ್ನಡ ಕೋಟೆ"** ಯನ್ನು ಜಯದೇವಿ ತಾಯಿಯವರು ಕಟ್ಟಿದರು ಆ ಮೂಲಕ ಕ್ರಾಂತಿಯ ಬೀಜ ಬಿತ್ತಿದರು --- ಭಕ್ತಿಯ ನೀರು ಎರೆದರು. ಈ 'ಕೋಟೆ'ಯ ಮೂಲಕ ಕನ್ನಡ ನಾಡಿನ ಏಕೀಕರಣಕ್ಕಾಗಿ ಹೋರಾಡಲು ತಾಯಿಯವರು ಜನತೆಯಲ್ಲಿ ನವಶಕ್ತಿ ನಿರ್ಮಿಸಿದರು. ಅವರ ದಿವ್ಯ ವ್ಯಕ್ತಿತ್ವ-ಹಳೆ ಹೊಸ ವಿಚಾರಗಳ ಸುಂದರ ಸಮನ್ವಯದ ಸಂಕೇತವಾಗಿತ್ತು ೧೯೫೦ರಲ್ಲಿ ಈ ಕನ್ನಡ ಕೋಟೆಯನ್ನು ತಾಯಿಯವರು 'ಸಾತಾರೆಯ' ಅಜಿಂಕ್ಯ ತಾರೆಯಂತೆ ಮರಾಠಿಗರ ಭಾಷಾ ಹಲ್ಲೆಗೆ ಅಣಿಯಾಗಿ ನಿಲ್ಲಲು ಸ್ಥಾಪಿಸಿದರು ಇದನ್ನು ತಮ್ಮ ಸ್ವಂತ ಹಣದಿಂದ ನಡೆಸಿ ಭಾಷೋತ್ತೇಜಕ ಪ್ರಯೋಗ ಶಾಲೆಯನ್ನಾಗಿ ಮಾಡಿದ್ದಾರೆ, ಇಲ್ಲಿ ಕನ್ನಡ ಸಾಹಿತ್ಯ ಗ್ರಂಥ, ಪತ್ರಿಕೆಗಳು ದೊರೆಯುವಂತೆ ಮಾಡಿದ್ದರು

ಅಸ್ಪೃಶ್ಯತೆಯನ್ನು ನಿವಾರಿಸಲು ಶರಣರಂತೆ ಅವರು ಕೊನೆಯವರೆಗೆ ಹೋರಾಡಿದ್ದಾರೆ. **'ಶರಣ ಸಮಾಜ'**ವೆಂಬ ಸಂಘ ಸ್ಥಾಪಿಸಿ ಸೊಲ್ಲಾಪುರದ ಶಾಖೆಯನ್ನು ತಮ್ಮ 'ಜಯನಿಕೇತನ'ದಲ್ಲಿ ನಡೆಸಲು ಪ್ರೋತ್ಸಾಹಿಸಿದರು. ಆ ಸಂಘದ ಚಟುವಟಿಕೆಗಳು ಹೈದರಾಬಾದ ಕರ್ನಾಟಕ ಭಾಗದಲ್ಲಿ ತುಂಬಾ ತ್ವರಿತವಾಗಿ ನಡೆದಿದ್ದವು.

ಕನ್ನಡದ ಕೂಗು ಮನೆ-ಮನೆಗೂ ಮನ-ಮನಕ್ಕೂ ಮುಟ್ಟುವ ದಾರಿ ದುರ್ಗಮವಾಗಿತ್ತು. ಆಗ ಈ ಸಂಘಟನೆಗಳು, ಹಾಗೂ ಕಾರ್ಯಕರ್ತರ ಮೂಲಕ ಇದನ್ನೇ ಆಯ್ದುಕೊಂಡು ಕಾರ್ಯಮಾಡಿದರು ಜಯದೇವಿಯವರು **ಅಕ್ಕನ ಜಯಂತಿ, ಬಸವ ಜಯಂತಿ, ನಾಡ ಹಬ್ಬ,** ಅಕ್ಕನ ಬಳಗ ಮೊದಲಾದ ವೇದಿಕೆಗಳನ್ನು ಬಳಸಿಕೊಂಡು ಕನ್ನಡ ಪ್ರಚಾರಕ್ಕೆ ತೊಡಗಿದರು. ಅವರು ತಾವು ರಚಿಸಿರುವ ಸಂಘಗಳಲ್ಲಿ ಸ್ವಯಂ ಸೇವಕ ಶಿಕ್ಷಕರನ್ನು ಇರಿಸಿಕೊಂಡಿದ್ದರು. ಇವರ ಮೂಲಕ ಕರ್ನಾಟಕದ ಗಡಿಭಾಗಗಳಲ್ಲಿ ನಡೆಯುತ್ತಿದ್ದ ಏಕೀಕರಣದ ಚಟುವಟಿಕೆಗಳ ಪ್ರಗತಿ-

ವಿಗತಿಗಳ ವರದಿ ಜಯದೇವಿಯವರಿಗೆ ತಲುಪುತ್ತಿದ್ದವು ಅವರು ಕಳಿಸಿದ ಶಿಕ್ಷಕರು, ಅಲ್ಲಲ್ಲಿಯ ಸ್ಥಿತಿಗಳನ್ನು ತಿಳಿಸುತ್ತಿದ್ದರು. ಅವರು ದುಧನಿ, ಮುಳುಗಲಿ, ನಿಂಬಾಳ, ಮಹದಲಗಿ, ಸಿನ್ನೂರು, ಅಕ್ಕಲಕೋಟೆ, ಇಟಗಿ, ಯತ್ನಳ್ಳಿ, ಭಾಲ್ಕಿ, ಮೊದಲಾದ ಸ್ಥಳಗಳಿಗೆ ಭೇಟಿ ಕೊಟ್ಟು ಜನಗಣತಿಯಲ್ಲಿ ಕನ್ನಡಿಗರು ಎದುರಿಸುತ್ತಿದ್ದ ಪ್ರಶ್ನೆಗಳನ್ನು ಅದಕ್ಕೆ ಕೊಡಬೇಕಾದ ಉತ್ತರಗಳನ್ನು ಇವರು ಜನರಿಗೆ ಕಲಿಸುತ್ತಿದ್ದ ಸಂಗತಿಯನ್ನು ೧೩-೧೨-೧೯೫೦ರ 'ನವಯುಗ' ಪತ್ರಿಕೆ ವರದಿ ಮಾಡಿದೆ. ಇದೇ ಸಂದರ್ಭ ಗಳಲ್ಲಿ ಜಯದೇವಿಯರು ಅನೇಕ ಹಳ್ಳಿಗಳಲ್ಲಿ 'ಅಕ್ಕನ ಬಳಗ'ಗಳನ್ನು ಸ್ಥಾಪನೆ ಮಾಡಿದ ವಿಷಯವು ತಿಳಿಯುತ್ತದೆ.

## ಕೆಲವು ಮಹತ್ವದ ಸಂಗತಿಗಳು

ಜಯದೇವಿಯವರು ತಮ್ಮ ಬಾಲ್ಯತನದಿಂದಲೇ ಹಲವು ಕ್ಷೇತ್ರಗಳಲ್ಲಿ ಆಸಕ್ತಿಯನ್ನು ಬೆಳೆಸಿಕೊಂಡು ಬಂದಿದ್ದರು. ಮನೆಯಲ್ಲಿದ್ದ 'ವೀರಶೈವ ಮಹಿಳಾ ಜ್ಞಾನ ಮಂದಿರ' ದ ಚಟುವಟಿಕೆಗಳ ಮೂಲಕ ಅವರು ಬಾಲ್ಯದಿಂದಲೇ ಸಾಮಾಜಿಕ ಸಂಪರ್ಕವನ್ನು ಪಡೆದಿದ್ದರು. ಬಾಲ್ಯದಿಂದಲೇ ಭಾಷಣ ಮಾಡುವುದರಲ್ಲಿ ಪ್ರಸಿದ್ಧ ವಾಗಿದ್ದ ಅವರು ಸೊಲ್ಲಾಪುರದಲ್ಲಿ ಜರುಗುತ್ತಿದ್ದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಮೇಲಿಂದ ಮೇಲೆ ಕಾಣಿಸಿಕೊಳ್ಳುತ್ತಿದ್ದರು.

ಜಯದೇವಿ ತಾಯಿ ಲಿಗಾಡೆಯವರು 'ಮಹಿಳಾ ಜ್ಞಾನ ಮಂದಿರದ' ಕಾರ್ಯದರ್ಶಿಯಾಗಿದ್ದ ಸಂದರ್ಭದಲ್ಲಿ ದೇಶದಾದ್ಯಂತ ಗಾಂಧೀಜಿಯ ತತ್ವ ಪ್ರಣಾಳಿಕೆಯ ಗಾಳಿ ಬೀಸತೊಡಗಿದಾಗ ಎಲ್ಲರ ಹಾಗೆ ಇವರೂ ಸಹ ಪ್ರಭಾವಿತರಾಗಿ ನೂಲು ತಗೆಯುವುದನ್ನು ಕಲಿತು, ತಮ್ಮ ಹದಿವಯಸ್ಸಿನಲ್ಲಿಯೇ ಖಾದಿ ಧರಿಸಲು ಆರಂಭಿಸಿದರು.

ಸಾದಾ ಜೀವನ ಉಚ್ಚ ವಿಚಾರಗಳಿರಬೇಕೆಂಬ ತತ್ವದಲ್ಲಿ ನಂಬಿಕೆಯಿಟ್ಟಿದ್ದ ಜಯದೇವಿಯವರು ಬಸವಾದಿ ಶಿವಶರಣರಂತೆ ನಡೆ ನುಡಿಯಲ್ಲಿ ಒಂದಾಗಿ ಬದುಕುವ ಪ್ರಯತ್ನಕ್ಕೆ ತೊಡಗಿದ್ದರು. ಅದನ್ನು ತಮ್ಮ ಜೀವನದಲ್ಲಿ ಸಾಧಿಸಿ ಹೋಗಿದ್ದಾರೆ ೧೯೩೮ ರಲ್ಲಿ ವೀರಶೈವ ಸಾಹಿತ್ಯ ಸಭೆಯ ಅಧ್ಯಕ್ಷಣಿಯಾಗಿ ನಂತರ ಅವರು ಸತತವಾಗಿ ಮಹಿಳಾ ಸಭೆಯಲ್ಲಿ ಸಕ್ರಿಯವಾಗಿ ಭಾಗವಹಿಸುತ್ತ ಬಂದರು. ಆಗಾಗ ಮಹಿಳಾ ಸಮ್ಮೇಳನದ ಸ್ವಾಗತಾಧ್ಯಕ್ಷಣಿಯೂ ಆಗಿ ಕಾರ್ಯ ನಿರ್ವಹಿಸಿದ್ದಾರೆ.

೨೯-೧೨-೧೯೫೦ರಂದು ಮುಂಬೈನಲ್ಲಿ ಜರುಗಿದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿಯ ಮಹಿಳಾಗೋಷ್ಠಿಯ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದರು. ೧೯೫೧ರಲ್ಲಿ 'ಕಾರ್ಮಿಕ ಸಾಕ್ಷರ ಮಂಡಳಿ'ಗೆ ಸದಸ್ಯೆಯಾಗಿದ್ದರು.

೧೯೫೫ರಲ್ಲಿ ಕರ್ನಾಟಕ ವಿಶ್ವವಿದ್ಯಾಯದ **ಸೆನೇಟರ್** ಆಗಿ ನೇಮಕಗೊಂಡಿ ದ್ದರು. ದಿನಾಂಕ ೯-೧೦-೧೯೫೫ರಿಂದ ಎರಡು ವರ್ಷಗಳಕಾಲ ಕರ್ನಾಟಕ

ವಿದ್ಯಾವರ್ಧಕ ಸಂಘದ ಉಪಾಧ್ಯಕ್ಷೆಯಾಗಿಯೂ ಸೇವೆ ಸಲ್ಲಿಸಿದ್ದಾರೆ. ಅದೇ ಸಂದರ್ಭದಲ್ಲಿ ಅವರನ್ನು ಏಕೀಕರಣಕ್ಕಾಗಿ ಹೋರಾಟ ನಡೆಸಿದ್ದ 'ಗಡಿನಾಡ ಸಿಂಹಿಣಿ' ಎಂದು ಕರೆಯಲಾಗುತ್ತಿತ್ತು.

೧೨-೧೧-೧೯೬೦ ರಂದು ಬೀದರಿನಲ್ಲಿ ಜರುಗಿದ ೪೧ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಮಹಿಳಾ ಪರಿಷತ್ತಿಗೆ ಅಧ್ಯಕ್ಷೆಯಾಗಿದ್ದರು.

೧೯೭೪ರಲ್ಲಿ ನಡೆದ ಮಂಡ್ಯದ **೪೮ನೆಯ ಕನ್ನಡ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾದರು.** ಆ ಮೂಲಕ ಕನ್ನಡ ನಾಡು, ನುಡಿಗಾಗಿ ಅವರು ನೀಡಿದ ಕೊಡುಗೆಯನ್ನು ಸ್ಮರಿಸಿ, ನಾಡ ಜನತೆಯ ಕೃತಜ್ಞತೆಯನ್ನು ಸಲ್ಲಿಸಲಾಯಿತು.

೨೭-೦೩-೧೯೭೬ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯವು ಅವರಿಗೆ ಡಿಲಿಟ್, ಪದವಿಯನ್ನಿತ್ತು ಗೌರವಿಸಿದ ಸಂಗತಿ ಕನ್ನಡಿಗರಿಗೆ ಸಂದ ಗೌರವವೆನ್ನಬೇಕು. ೧೯೭೪ ರಲ್ಲಿ ಅವರು ಕರ್ನಾಟಕ ವಿಶ್ವವಿದ್ಯಾಲಯದ ಜಾನಪದ ಸಮ್ಮೇಳನದ ಅಧ್ಯಕ್ಷ ಸ್ಥಾನವನ್ನೂ ಅಲಂಕರಿಸಿದ್ದರು.

೧೯೭೭ರಲ್ಲಿ ಜಯದೇವಿಯವರಿಗೆ ಕರ್ನಾಟಕ ಸರಕಾರದ ಕನ್ನಡ ಸಾಹಿತ್ಯ ಅಕಾಡಮಿ ಸದಸ್ಯತ್ವ ದೊರೆಯಿತು.

ಇದೇನೇ ಇರಲಿ ಜಯದೇವಿಯವರು ಜನ ಸಾಮಾನ್ಯರಿಂದ ತಾಯಿ ಎನಿಸಿಕೊಂಡು ಬದುಕಿರುವುದರಲ್ಲಿ ಅವರ ವ್ಯಕ್ತಿತ್ವವನ್ನು, ನಿರಾಶ್ರಿತರಿಗಾಗಿ ಟೊಂಕಕಟ್ಟಿ ದುಡಿದ ದಿನದಿಂದ ಪಡೆದ 'ಸಮಾಜ ಸೇವಕಿ' ಎಂಬ ಅಭಿಮಾನದ ನಾಮಾಭಿದಾನವನ್ನು, ಅವರು ಬಾಳಿ ಬಿಟ್ಟು ಹೋಗಿರುವ ಬದುಕಿನಿಂದ ಜನಮನದಲ್ಲಿ 'ಶರಣೆ ಸಜ್ಜನೆ', 'ವೀರ ಕನ್ನಡತಿ' ಎಂಬ ಗುಣಗಾನಕ್ಕೆ ಸಮಾನವಾದ ಭಿನ್ನವತ್ತಳೆ, ಸನ್ಮಾನ ಪತ್ರಗಳನ್ನು ಕಾಣಬಹುದೇ? ಇದ್ದರೆ ಅವುಗಳಿಗೂ ಜಯದೇವಿ ತಾಯಿ ಲಿಗಾಡೆಯವರು 'ಕನ್ನಡ ಕಟ್ಟಿದ' ಹಾಗು ಅವರು ಅಚ್ಚ ಕನ್ನಡಿಗರಾಗಿ ಬಾಳಿದ ದರ್ಶನ ಭಾಗ್ಯವಾಗಿದೆ ಎಂದು ಅರ್ಥೈಸಿಕೊಳ್ಳೋಣ.

## ಕನ್ನಡ ನಾಡು ನುಡಿ ಹಾಗೂ ಸಂಸ್ಕೃತಿ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳು

ಎಲ್ಲ ಬಲ್ಲವಳೆಂಬ ಇಲ್ಲವದು ಭ್ರಮೆ ಎನಗೆ
ಬಲ್ಲವರ ಪಾದ ಹಿಡಿಯುವೆ । ಬಲ್ಲಿದರು
ಕಲಿಸರಿ  ಮತ್ತು ನುಡಿಸಲಿ.

ಎಂದು ತಮ್ಮ ಸಾಧನೆಯ ವ್ಯಕ್ತಿತ್ವವನ್ನು ತೆರೆದಿಟ್ಟವರು ಜಯದೇವಿ ತಾಯಿಯವರು. ಅವರು ಕವಿಯಾಗಿರುವಂತೆ ಸಮಾಜ ಸೇವಕಿ, ಶರಣೆ ಹಾಗೂ ಕರ್ನಾಟಕ ಏಕೀಕರಣಕ್ಕೆ ದುಡಿದವರೂ ಆಗಿದ್ದಾರೆ. ತಾಯಿಯವರಲ್ಲಿ ಕನ್ನಡದ

ಅಭಿಮಾನ ಸದಾ ಜಾಗೃತವಾದುದು. "ಗಡಿಭಾಗವೆಂದರೂ। ಕಡಿಮಿಲ್ಲ ಕನ್ನಡಕೆ । ಉಡಿಯ ತುಂಬುವೆ ಕನ್ನಡ ತಾಯಿಗೆ । ಒಡವೆಯ ಇಳಿಸುವೆ ಪದಗಳ" ಎಂದು ಗಡಿನಾಡಿನಲ್ಲಿದುಕೊಂಡು ಕನ್ನಡದಿಂದಲೇ ಉಡಿಯ ತುಂಬಿ, ಕನ್ನಡ ತಾಯಿಗೆ ನುಡಿ ಒಡವೆಗಳನ್ನೇ ಇಡಿಸಿ, ಅವಳನ್ನು ನುಡಿ ಪಲ್ಲಕ್ಕಿಯಲ್ಲಿಯೇ ಸದಾ ಮೆರೆಸುವ ಹಂಬಲವಿಟ್ಟುಕೊಂಡವರು. ಕನ್ನಡ ಕಟ್ಟಲು, ಕನ್ನಡಕ್ಕಾಗಿ ಹೋರಾಡಿದ ಅವರ ಬದುಕಿನ ಅನೇಕ ಸಂದರ್ಭಗಳನ್ನು ಈ ಪದ್ಯವು ತಿಳಿಸುವುದರೊಂದಿಗೆ ಗಡಿನಾಡಾದ ಸೊಲ್ಲಾಪುರವನ್ನು ಕನ್ನಡಕ್ಕೆ ಸೇರಿಸುವ ಅವರ ಸಾಹಸದ ಮಜಲುಗಳನ್ನೂ ಈ ಪದ್ಯ ಚಿತ್ರಿಸುತ್ತದೆ.

ಬ್ರಿಟೀಷರ ಆಗಮನದ ನಂತರ ಇಪ್ಪತ್ತೆರಡು ಆಡಳಿತ ಭಾಗಗಳಲ್ಲಿ ಕನ್ನಡ ನಾಡು ಹರಿದು ಹಂಚಿಹೋಗಿತ್ತು. ಪ್ರಜಾಸತಾತ್ಮಕ ರಾಜ್ಯ ವ್ಯವಸ್ಥೆಯಲ್ಲಿಯೂ ಕನ್ನಡ – ನಾಡು ನುಡಿಗಳಿಗೆ ಅನ್ಯಾಯವಾಗುವುದು ತಪ್ಪಲಿಲ್ಲ. ಮೈಸೂರು ಸಂಸ್ಥಾನ, ಮುಂಬೈ ಕರ್ನಾಟಕ, ಕೊಡಗು ಹಾಗೂ ಮದ್ರಾಸಿನ ಕನ್ನಡಭಾಗಗಳು ಒಂದು ಗೂಡಿದ ಕರ್ನಾಟಕ ಪ್ರಾಂತ ರಚನೆಯಾಗಬೇಕೆಂಬ ನಿಲುವನ್ನು ಗಾಂಧೀಜಿ ಯವರು ತಾಳಿದ್ದರು. ಆದರೆ ಕನ್ನಡ ನಾಡಿಗೆ ಮೂರು ಕಡೆಯಿಂದ ಅಘಾತವಾಗ ತೊಡಗಿತು. ಹೀಗಾಗಿ ಅಖಂಡ ಕರ್ನಾಟಕ ಕಟ್ಟಬಯಸುವ ಕನಸು ಇಟ್ಟುಕೊಂಡಿದ್ದ ಜಯದೇವಿಯಂಥ ಮುಖಂಡರು ಹೋರಾಟದ ಕಣಕ್ಕಿಳಿಯಬೇಕಾಯಿತು. ೧೯೦೫ರಲ್ಲಿ ವಂಗ ಭಂಗ ಚಳುವಳಿ ಹೋರಾಟದ ರೂಪ ತಳೆದಾಗ ದೇಶದ ಎಲ್ಲ ಜನರ ಗಮನಕ್ಕೆ ಬಂದವು. ಆಗ ಕನ್ನಡಿಗರು ಎಚ್ಚರಗೊಂಡರೆನ್ನಬಹುದು.

## ಕರ್ನಾಟಕ ಏಕೀಕರಣಕ್ಕಾಗಿ ಹೋರಾಟ

ಒಂದು ಭಾಷೆಯನ್ನು ಮಾತನಾಡುವ ಜನರು ಒಂದೆಡೆಗೆ ಕೂಡಿ ಇರುವುದರಿಂದ ಅವರ ಸರ್ವಾಂಗೀಣ ಪ್ರಗತಿ ಹಾಗೂ ಸುಗಮ ಆಡಳಿತಕ್ಕೆ ಅನುಕೂಲವಾಗುವುದೆಂಬುದನ್ನು ಮನಗಂಡು ಕನ್ನಡಿಗರೆಲ್ಲರೂ ಒಂದುಗೂಡಲು ಆಸೆಪಟ್ಟರು. ಆದರೆ ಈ ಸಂಧರ್ಭದಲ್ಲಿ ಕನ್ನಡ ನಾಡಿಗೆ ಹೊರಗಿನ ಆಘಾತ ಗಳೊಂದಿಗೆ ಒಳಗಿನ ಕೆಲವು ಆತಂಕಗಳು ಸೇರಿಕೊಂಡು ಹಲವು ಸಮಸ್ಯೆಗಳು ಎದುರಾದವು. ಈ ಪರಿಸ್ಥಿತಿಯನ್ನು ಸುಧಾರಿಸಲು ಹಲವರು ಪ್ರಯತ್ನಿಸಿದರು. ಅವರಲ್ಲಿ ಡೆಪ್ಯೂಟಿ ಚನ್ನಬಸಪ್ಪನವರು ಪ್ರಮುಖರು. ಕನ್ನಡದ ಕುಲದೀವಿಗೆಯನ್ನು ಕಾಪಾಡಲು ಕನ್ನಡ ಶಾಲೆಗಳನ್ನು ಸ್ಥಾಪಿಸಿದರು. ಚನ್ನಬಸಪ್ಪನವರು ಅಧಿಕಾರಕ್ಕೆ ಬಂದ ಮೇಲೆ ಮುಂಬೈ ಕರ್ನಾಟಕದಲ್ಲಿದ್ದ ಶಾಲೆಗಳ ಸಂಖ್ಯೆ ೪೪ರಿಂದ ೬೬೮ಕ್ಕೆ ಏರಿತು. ಕನ್ನಡದ ತೇರನ್ನು ಸಮರ್ಥವಾಗಿ ಎಳೆಯಲು ಪ್ರಾರಂಭಿಸಿದ ಇವರು ಮಾರ್ಗ ಮಧ್ಯದಲ್ಲಿ ಬಂದ ಎಡರು ತೊಡರುಗಳನ್ನು ಅತ್ಯಂತ ಧೈರ್ಯದಿಂದ ನಿವಾರಿಸಿದರು. ೧೯೫೬ರಲ್ಲಿ ಆಡಳಿತವೆಲ್ಲ ಕನ್ನಡದಲ್ಲಿ ನಡೆಯಬೇಕೆಂದು ಘೋಷಿಸಿದರು. ಇದು ಕನ್ನಡ ಚಳುವಳಿಯ ಮೊದಲ ಕಹಳೆಯಾಯಿತು ಆಗ

ಮುಂಬೈ ಕರ್ನಾಟಕದಲ್ಲಿ ಹೇರಳವಾಗಿದ್ದ ಮರಾಠಿ ಶಾಲೆಗಳನ್ನು ಮುಚ್ಚಿಸಿ ಕನ್ನಡ ಶಾಲೆಗಳನ್ನು ತೆರೆಯಲು ಆದೇಶಿಸಿದರು. ಇದರಿಂದ ಮೊದಲ ಹಂತದಲ್ಲಿ ಕನ್ನಡದ ಬಗ್ಗೆ ಜಾಗೃತಿ ಆರಂಭವಾಯಿತು. ೧೮೯೦ರಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘವು ಸ್ಥಾಪನೆಯಾಗಿ ಕನ್ನಡದ ಚಟುವಟಿಕೆಗಳನ್ನು ಪ್ರಾರಂಭಿಸಿತು. ಅನೇಕ ಕನ್ನಡ ವಿದ್ವಾಂಸರು ಇಲ್ಲಿ ಸೇರ ತೊಡಗಿದರು. ೧೯೨೦ರಲ್ಲಿ ದಿವಾನ್ ಪಿ.ವಿ. ಮಾಧವ ರಾಯರ ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜಕೀಯ ಪರಿಷತ್ತು, ಧಾರವಾಡದಲ್ಲಿ ವೈಭವದಿಂದ ಜರುಗಿತು. ಹೀಗಾಗಿ ಇದೇ ಸಂದರ್ಭದಲ್ಲಿ ಅಖಿಲ ಭಾರತ ಕಾಂಗ್ರೆಸ್‌ನ ಕರ್ನಾಟಕ ಶಾಖೆಯು ಆರಂಭಗೊಂಡಿತು. ಆಗ ಕಿಟಲ್, ರೈಸ್, ಆರ್. ನರಸಿಂಹಾಚಾರ್ಯರ ಕೃತಿಗಳು ಕನ್ನಡಿಗರ ಭವ್ಯ ಪರಂಪರೆಯನ್ನು ತಿಳಿಸಿ, ಕನ್ನಡ ನಾಡು ನುಡಿಯ ಬಗೆಗೆ ಎಲ್ಲರಲ್ಲಿ ಗೌರವಾದರ ಪ್ರೀತಿಯನ್ನು ಹುಟ್ಟು ಹಾಕಿದವು. ೧೯೨೦ರಲ್ಲಿ ನಾಗಪುರದಲ್ಲಿ ಸಭೆ ಸೇರಿದ ಅಖಿಲ ಭಾರತ ಕಾಂಗ್ರೆಸ್, ಭಾಷಾವಾರು ಪ್ರಾಂತ ರಚನೆಯಾಗಬೇಕೆಂದು ಗೊತ್ತುವಳಿ ಸ್ವೀಕರಿಸಿತು. ಅದಕ್ಕನು ಗುಣವಾಗಿ ಭಾಷಾವಾರು ಪ್ರಾಂತದ ಹಂಬಲ ದಿನದಿಂದ ದಿನಕ್ಕೆ ಬಲವಾಗಿ ಬೆಳೆಯಲಾರಂಭಿಸಿತು.

೧೯೨೮ರಿಂದ ಕರ್ನಾಟಕ ಕಾಂಗ್ರೆಸ್ ಕಮಿಟಿಯವರು ಏಕೀಕರಣ ಚಳುವಳಿಯನ್ನು ಪ್ರಬಲಗೊಳಿಸುತ್ತ ಹೋದರು. ಸ್ವಾತಂತ್ರ್ಯ ಪೂರ್ವದಲ್ಲಿ ಕನ್ನಡಿಗರ ಲಕ್ಷ್ಯ ದೇಶದ ಸ್ವಾತಂತ್ರ್ಯದ ಹೋರಾಟದ ಕಡೆಗೇ ಇತ್ತು. ಅದೇ ಉದ್ದೇಶದಿಂದ ಇವರು ಕಾಂಗ್ರೆಸ್ಸಿಗರೊಡನೆ ಸಹಕರಿಸಿದರು. ಮುಂದೆ ಬ್ರಿಟೀಷರು ಹರಿದು ಹಂಚಿದ್ದ ಕರ್ನಾಟಕವನ್ನು ಒಂದುಗೂಡಿಸಬೇಕಾಯಿತು. ಅನಂತರದಲ್ಲಿ ಸೊಂಡೂರು, ಮುಧೋಳ, ಜಮಖಂಡಿ, ರಾಮದುರ್ಗ, ನರಗುಂದ, ಕುಂದರವಾಡಿ ಮೊದಲಾದ ಅನೇಕ ಸಂಸ್ಥಾನಗಳನ್ನು ವಿಲೀನೀಕರಣಗೊಳಿಸಬೇಕಾಯಿತು. ಮೈಸೂರು, ಕೊಡಗು, ಹೈದ್ರಾಬಾದ್ ರಾಜ್ಯಗಳು ಪ್ರತ್ಯೇಕವಾಗಿದ್ದವು. ಈ ಎಲ್ಲ ಭಾಗಗಳನ್ನು ಸೇರಿಸಿ ಅಖಂಡ ಕರ್ನಾಟಕವನ್ನು ರಚಿಸಬೇಕಾಯಿತು. ಭಾರತವು ಸ್ವಾತಂತ್ರ್ಯ ಪಡೆದ ನಂತರ ಮೈಸೂರು ಸಂಸ್ಥಾನವು ಪೂರ್ಣ ಜವಾಬ್ದಾರಿಯ ಸರಕಾರವನ್ನು ಹೊಂದಿತ್ತು. ಆಗ ಸಂಯುಕ್ತ ಕರ್ನಾಟಕ ರಾಜ್ಯ ರಚನೆಯಾಗಬೇಕೆಂದು ಜನರು ಅಲ್ಲಲ್ಲಿ ಸಭೆಗಳನ್ನು ಮಾಡಿ ಗೊತ್ತುವಳಿ ಸ್ವೀಕರಿಸಿ, ತಮ್ಮ ಬೇಡಿಕೆಗಳನ್ನು ಮುಂದಿಡಲು ಆರಂಭಿಸಿದರು. ಮುಂಬೈ, ಮದ್ರಾಸು ಶಾಸನ ಸಭೆಗಳಲ್ಲಿ ಈ ಗೊತ್ತುವಳಿಗಳು ಸ್ವೀಕೃತವಾದವು. ಆದರೆ ಮುಂದಾಲೋಚನೆಯಿಂದ ಮಹಾರಾಷ್ಟ್ರದ ಮುಂದಾಳುಗಳು ಸೊಲ್ಲಾಪುರವನ್ನು ಕರ್ನಾಟಕದಿಂದ ಬೇರ್ಪಡಿಸುವ ಕುತಂತ್ರವನ್ನು ಒಳಗೊಳಗೇ ತಯಾರಿಸಿದ್ದರು. ಆದರೂ ಕನ್ನಡಿಗರ ಗಮನಕ್ಕೆ ಬಂದಾಗ ಅವರು ಸೊಲ್ಲಾಪುರವನ್ನು ಕನ್ನಡ ನಾಡಿನದೆಂಬುದನ್ನು ಮರೆತು ಹೋಗಿದ್ದರು. ಇದು ಕರ್ನಾಟಕಕ್ಕೆ ಸೇರಬೇಕೆಂದು ಮೊದಲು ದನಿ ಎತ್ತಿದವರು ಜಯದೇವಿ ತಾಯಿ ಲಿಗಾಡೆಯವರೊಬ್ಬರೇ.

ಸೊಲ್ಲಾಪುರವು ಐತಿಹಾಸಿಕ ಸ್ಥಳ. 'ಸೊನ್ನಲಗಿ' ಎಂಬುದು ಇದರ ಪ್ರಾಚೀನ ಹೆಸರು. ೧೨ ನೆಯ ಶತಮಾನದಲ್ಲಿದ್ದ ಶ್ರೇಷ್ಠ ಶರಣ ಸಿದ್ಧರಾಮನ ಕರ್ಮಭೂಮಿ. ಬಸವಾದಿ ಶಿವಶರಣರ ಕ್ರಾಂತಿಯ ಸಫಲತೆಗೆ ವಿಶಿಷ್ಟ ಕಾಣಿಕೆಯಿತ್ತಿರುವ ಪವಿತ್ರ ನೆಲ. ಕನ್ನಡದ ಗಂಡು ಮೆಟ್ಟಿನ ಉದ್ಯಮಗಳ ನಗರ. ಇದು ಶರಣರಿಗಿಂತಲೂ ಪ್ರಾಚೀನ ಕಾಲದಿಂದಲೂ ಕರ್ನಾಟಕದ ಅವಿಭಾಜ್ಯ ಅಂಗವೆನಿಸಿತ್ತು. ಕ್ರಿ.ಶ. ಮೂರನೆಯ ಶತಮಾನದಿಂದ ೧೧೮೪ರ ವರೆಗೆ ಬಾದಾಮಿ ಚಾಲುಕ್ಯರು, ಮಾನ್ಯಕೇಟದ ರಾಷ್ಟ್ರಕೂಟರು, ದೇವಗಿರಿಯ ಯಾದವರು, ನಂತರ ಬಿಜಾಪುರದ ಆದಿಲ್‌ಷಾಹಿಗಳು ಆಳಿದ ಪಟ್ಟಣ. ಇದರ ಕನ್ನಡತನವನ್ನು ಅರಿಯಲು ಅಲ್ಲಿಯ ಪ್ರಮುಖ ಸ್ಥಳಗಳಲ್ಲಿ ಸಿಕ್ಕಿರುವ ಕನ್ನಡ ಶಾಸನಗಳೇ ಸಾಕ್ಷಿ. ಆ ಪಟ್ಟಣದ ಸುತ್ತ ಮುತ್ತಲಿರುವ ೬೮ ಲಿಂಗಗಳು, ಸಿದ್ಧರಾಮನ ಜಾತ್ರೆ ಕನ್ನಡಿಗರ ಧಾರ್ಮಿಕ ಶ್ರದ್ಧೆಯ ಸೋಪಾನವಾಗಿತ್ತು. ಅದು ಕನ್ನಡಿಗರ ಪುಣ್ಯ ಕ್ಷೇತ್ರ ಹಾಗೂ ಅಭಿಮಾನದ ಕೇಂದ್ರವೂ ಆಗಿದೆ.

ವಾರದ ಮಲ್ಲಪ್ಪನವರು ಉದ್ಯೋಗಪತಿಗಳು, ಸೊಲ್ಲಾಪುರದ ಪ್ರಗತಿಗಾಗಿ ಹಗಲಿರುಳು ಶ್ರಮಿಸಿದರು. ಅವರ ಧಾರ್ಮಿಕ ಸಂಪ್ರದಾಯಗಳು ವೀರಶೈವ ಆಚಾರ-ವಿಚಾರಗಳು ಸೊಲ್ಲಾಪುರದ ಸಾಮಾಜಿಕ, ಸಾಂಸಕೃತಿಕ ಬದುಕಿನಲ್ಲಿ ಉಳಿದು ನಿಂತವು. ನಂತರದಲ್ಲಿ ಅವರ ಮಗಳು, ಮೊಮ್ಮಗಳು ಈ ಸಂಪ್ರದಾಯ ಗಳನ್ನು, ಹಬ್ಬ-ಹರಿದಿನಗಳನ್ನು ಊಟ-ಉಪಚಾರಗಳನ್ನು, ಉಡಿಗೆ- ತೊಡಿಗೆ ಗಳನ್ನು ಕನ್ನಡಿಗರಂತೆಯೇ ಉಳಿಸಿಕೊಂಡರು. ಕಳೆದ ಶತಮಾನದ ಹಿಂದೆ ಮಾತ್ರ ಮರಾಠಿಗರು ಸೊಲ್ಲಾಪುರಕ್ಕೆ ಉದ್ಯಮಕ್ಷೇತ್ರದ ಕಾರ್ಯಕ್ಕಾಗಿ ಬಂದವರು. ಅವರಿಂದ ಯಂತ್ರೋದ್ಯಮವನ್ನು ಕಲಿಯಲು ಕನ್ನಡಿಗರೇ ಮರಾಠಿ ಭಾಷೆಯನ್ನು ಕಲಿಯಬೇಕಾಯಿತು. ರಾಜಕೀಯ ಸ್ಥಿತ್ಯಂತರಗಳ ಸಮಯದಲ್ಲಿ ಇಲ್ಲಿ ಮರಾಠಿ ಭಾಷೆಯ ಪ್ರಭಾವ ದಟ್ಟವಾಗಿ ಕನ್ನಡಿಗರಿಗೆ ಬೆಳೆಯುವ ಅವಕಾಶ ದೊರೆಯದೇ ಹೋಯಿತು. ಆದರೂ ೧೮೬೪ರ ವರೆಗೆ ಸೊಲ್ಲಾಪುರವು ಕಲಾದಗಿ ಜಿಲ್ಲೆಯ ಒಂದು ಭಾಗವಾಗಿತ್ತು. ಅನಂತರ ಇದು ಕನ್ನಡ ಮತ್ತು ಕೆಲವು ಮರಾಠಿ ತಾಲೂಕುಗಳನ್ನು ಸೇರಿಸಿಕೊಂಡು ಜಿಲ್ಲಾ ಸ್ಥಳವಾಯಿತು. ಸ್ವಾತಂತ್ರ್ಯ ನಂತರವೂ ಕೆಲವು ವರ್ಷಗಳವರೆಗೆ ಮುಂಬಯಿಯ ದಕ್ಷಿಣ ಭಾಗವಾಗಿ ಆಡಳಿತ ನಡೆಸುತ್ತಿದ್ದ ಇದನ್ನು ಕನ್ನಡ ಜಿಲ್ಲೆಯೆಂದೇ ತಿಳಿಯಲಾಗಿತ್ತು. ಆದರೆ ಭಾಷಾವಾರು ರಚನೆಯ ಸಮಯಕ್ಕೆ ಇಡೀ ಈ ಜಿಲ್ಲೆಯನ್ನು ಮರಾಠಿ ವಿಭಾಗವಾಗಿ ಸೇರಿಸಿದ್ದು ಒಂದು ವಿಪರ್ಯಾಸವೆನ್ನಬಹುದು. ಆದರೆ ಧಾರ ಆಯೋಗವು ನೇಮಕವಾಗುವ ಪೂರ್ವದಲ್ಲಿ ಮಹಾರಾಷ್ಟ್ರ ಮಂತ್ರಿಮಂಡಳದವರ ಕೈಚಳಕ ನಡೆದು ಖೇರ ಮಂತ್ರಿಮಂಡಳವು ಅಸ್ತಿತ್ವದಲ್ಲಿ ಬಂತು. ಬಾಳಾ ಸಾಹೇಬ ಖೇರರು ಅವರ ತಂದೆ ಕುಂದಗೋಳ ಸಂಸ್ಥಾನದಲ್ಲಿ ನೌಕರರಾಗಿದ್ದ ಸಂದರ್ಭದಲ್ಲಿ ಜನಿಸಿ, ಅಲ್ಲಿಯೇ

ಬೆಳೆದಿದ್ದರು. ಕನ್ನಡ ನಾಡಿನಲ್ಲಿ ಹುಟ್ಟಿ, ವಿದ್ಯಾಭ್ಯಾಸ ಪಡೆದಿದ್ದರೂ ಸಹ ಅವರಿಗೆ ಮನೆ ಮಾತು ಮರಾಠಿಯಾಗಿದ್ದರಿಂದ ಮರಾಠಿಗರ ಹಿತಕಾಯಲು ಮುಂದಾದರು. ಅಂತಹ ಒಂದು ಅಭಿಮಾನವನ್ನು ಅವರ ಸೊಲ್ಲಾಪುರದ ವಿಷಯವಾಗಿ ಮಾಡಿ ತೋರಿದರು. ಅಂದಿನ ಕನ್ನಡ ಶಾಸಕರು ಈ ಸಂಧರ್ಭವನ್ನು ಅರ್ಥಮಾಡಿ ಕೊಳ್ಳದೇ ಹೋಗಿರುವುದು ದುರಾದೃಷ್ಟವೆನ್ನಬೇಕು. ಜಯದೇವಿಯವರು ಇದರ ಬಗ್ಗೆ ಕನ್ನಡ ಶಾಸಕರು ವಿರೋಧಿಸಬೇಕೆಂದು ಒತ್ತಾಯ ಪಡಿಸಿದರೂ ಆ ಘಟನೆ ನಡೆದು ಹೋಯಿತು. ಇದನ್ನು ಖಂಡಿಸುತ್ತಾ ಜಯದೇವಿಯವರು ಗೊತ್ತುವಳಿ ಗಳನ್ನು ಕಳಿಸತೊಡಗಿದಾಗ ಸರಕಾರ ಎಸ್.ಕೆ.ಧಾರ ಆಯೋಗವನ್ನು ನೇಮಿಸಿತು.

ಈ ಆಯೋಗವು ಎಸ್.ಕೆ. ಧಾರರ ಅಧ್ಯಕ್ಷತೆಯಲ್ಲಿ ಪನ್ನಾಲಾಲ, ಜಗತ್ ನಾರಾಯಣಲಾಲರ ಸದಸ್ಯತ್ವದಲ್ಲಿ ನೇಮಿಸಲ್ಪಟ್ಟಿತ್ತು. ಸ್ವಾತಂತ್ರ್ಯಾನಂತರ ಆಂಧ್ರ, ಕೇರಳ, ಕರ್ನಾಟಕ, ಮಹಾರಾಷ್ಟ್ರ ಪ್ರಾಂತಗಳ ರಚನೆಯ ಅವಶ್ಯಕತೆಯನ್ನು ಕಂಡು ಹಿಡಿಯಲು ಈ ಆಯೋಗವನ್ನು ನೇಮಿಸಲಾಗಿತ್ತು. ಒಂದು ವೇಳೆ ಈ ಆಯೋಗವು ತಾಲ್ಲೂಕುಗಳನ್ನು ಘಟಕವಾಗಿ ಹಿಡಿದು ಭಾಷಾವಾರು ಹೊಂದಾಣಿಕೆಯನ್ನು ಮಾಡಿದ್ದರೆ, ಸೊಲ್ಲಾಪುರ ನಗರದ ಜೊತೆಗೆ, ಸೊಲ್ಲಾಪುರ ಹಾಗೂ ಅಕ್ಕಲಕೋಟ ತಾಲ್ಲೂಕುಗಳೆರಡೂ ಕರ್ನಾಟಕಕ್ಕೆ ಸೇರಿ ಹೋಗುವವೆಂಬ ಹೆದರಿಕೆ ಮರಾಠಿ ಗರಿಗಿತ್ತು. ಯಾಕೆಂದರೆ ಅಂದಿನ ಸೊಲ್ಲಾಪುರ ತಾಲ್ಲೂಕಿನ ಸುತ್ತಲೆಲ್ಲ ಐದು ಮೈಲಿನವರೆಗೆ ಕನ್ನಡದ ಸುಮಾರು ನೂರು ಹಳ್ಳಿಗಳು ಆವರಿಸಿಕೊಂಡಿದ್ದವು. ಒಂದೆಡೆ ಮಾತ್ರ ಎಂಟ್ಹತ್ತು ಮರಾಠಿ ಹಳ್ಳಿಗಳು ಇದ್ದು ನಗರದಲ್ಲಿ ಕನ್ನಡಿಗರು ಹಾಗೂ ಮರಾಠಿಗರ ಸಂಖ್ಯೆ ಸರಿಸಮವಾಗಿತ್ತು. ಒಟ್ಟು ತಾಲ್ಲೂಕಿನ ಅಂಕಿ ಸಂಖ್ಯೆಗಳನ್ನು ಅವಲೋಕಿಸಿದರೂ ಸಹ ಪ್ರತಿಶತ ಎಪ್ಪತ್ತರಷ್ಟು ಕನ್ನಡವು ಲಭ್ಯವಿತ್ತು. ಅದರಲ್ಲಿಯ ಎಂಭತ್ತು ಹಳ್ಳಿಗಳನ್ನು ಪ್ರತ್ಯೇಕಿಸಿ ದಕ್ಷಿಣ ಸೊಲ್ಲಾಪುರವೆಂದು ಕರೆದು. ಅದು ಬಹುಸಂಖ್ಯಾತ ಮರಾಠಿ ತಾಲ್ಲುಕು ಘಟಕವಾಗಿ ಪರಿವರ್ತಿಸಿದಾಗ ಅಕ್ಕಲಕೋಟ, ದಕ್ಷಿಣ ಸೊಲ್ಲಾಲಪುರದ ಎಂಭತ್ತು ಹಳ್ಳಿಗಳು ಮಾತ್ರ ಕರ್ನಾಟಕಕ್ಕೆ ಹೋಗಿ ಸೊಲ್ಲಾಪುರ ನಗರ ಮತ್ತು ಸುತ್ತ ಮುತ್ತಲಿನ ಹಳ್ಳಿಗಳು ಮಹಾರಾಷ್ಟ್ರಕ್ಕೆ ದಕ್ಕಬೇಕೆಂಬ ಉದ್ದೇಶ ಮುಂಬೈ ಮಂತ್ರಿಮಂಡಲದವರಿಗಿತ್ತು. ಜಯದೇವಿಯವರು ಈ ವಿಷಯವನ್ನು ಕಂಡುಕೊಂಡು ಕಟುವಾಗಿ ವಿರೋಧಿಸಿದರು. ಈ ಕಾರಣಕ್ಕಾಗಿ ಕೆಲವು ಕಾರ್ಯಕರ್ತರನ್ನು ಮುಂಬೈಗೆ ಕಳುಹಿಸಿದರು. ಆ ಸಂದರ್ಭದಲ್ಲಿ ನಾಲ್ವತ್ತು ಜನ ಕನ್ನಡ ಶಾಸಕರಿದ್ದರೂ ಸಹ ಅಂದಿನ ಮುಂಬೈ ವಿಧಾನ ಸಭೆಯಲ್ಲಿ ಈ ತಾಲೂಕನ್ನು ಒಡೆಯುವ ಗೊತ್ತುವಳಿಯು ಯಾವುದೇ ವಿರೋಧವಿಲ್ಲದೆ ಮಂಜೂ ರಾತಿ ಪಡೆಯಿತು. ಹೀಗಾಗಿ ಆಗಿನಿಂದಲೇ ಕನ್ನಡಿಗರು ಸೊಲ್ಲಾಪುರವನ್ನು ಕಳೆದು ಕೊಳ್ಳಬೇಕಾಯಿತು.

೧೯೪೮ರಲ್ಲಿ ಧಾರ್ ಆಯೋಗವು ತನ್ನ ವರದಿಯಲ್ಲಿ ಅದು "ಭಾಷೆಯ ಏಕತೆಯೊಂದು ಇತರ ವಿಷಯಗಳ ಜೊತೆಗೆ ಗಮನಿಸತಕ್ಕ ಮಾತಾಗಿದೆಯೇ

ಹೊರತು ಅದೇ ಮುಖ್ಯವಲ್ಲ. ಗಡಿನಾಡಿನ ಪ್ರದೇಶಗಳು ತಮ್ಮದೇ ಅವಶ್ಯಕತೆಗಳನ್ನು ಮುಂದಿಟ್ಟುಕೊಂಡು , ಸಾಮಾಜಿಕ ಮತ್ತು ಆರ್ಥಿಕ ಬದುಕಿನಲ್ಲಿ ತಮಗೆ ಅನುಕೂಲ ಆಗುವಂತೆ ಹೊಂದಿಕೊಂಡು ಬಾಳುತ್ತಿರುವುದನ್ನು ನಾವು ಹಾಳುಮಾಡದೆ ಅವರವರ ಅವಶ್ಯಕತೆಗಳನ್ನು ಅನುಲಕ್ಷಿಸಿ ಅವರವರ ಅಭಿಪ್ರಾಯಕ್ಕೆ ಬಿಡಬೇಕೆಂದು ಹೇಳಿ ಸೊಲಾಪುರವನ್ನು ಮಹಾರಾಷ್ಟ್ರಕ್ಕೆ ಸೇರಿಸಲು ಶಿಫಾರಸ್ಸು ಮಾಡಿತು. ಈ ಆಯೋಗದ ಎದುರು ಸೊಲ್ಲಾಪುರದ ಪರವಾಗಿ ಸಾಕ್ಷಿ ನುಡಿಯಲು ರಚಿಸಲಾಗಿದ್ದ ನಿಯೋಗದಲ್ಲಿ ಜಯದೇವಿಯವರೂ ಒಬ್ಬ ಸದಸ್ಯರಾಗಿದ್ದರು ಸೊಲ್ಲಾಪುರವನ್ನು ಕರ್ನಾಟಕಕ್ಕೆ ಸೇರಿಸಬೇಕೆಂಬುದು ಜಯದೇವಿಯವರ ಮುಖ್ಯ ಉದ್ದೇಶವಾಗಿತ್ತು. ಅದಕ್ಕಾಗಿ ಅವರು ಸೊಲ್ಲಾಪುರದ ಐತಿಹಾಸಿಕ, ಔದ್ಯೋಗಿಕ, ರಾಜಕೀಯ, ಸಾಹಿತ್ಯಿಕ, ಶಾಸನೋಕ್ತ ಹಾಗೂ ಭಾಷಿಕವಾದ ಮನವಿಯನ್ನು ಸಿದ್ಧಪಡಿಸಿ ಇದನ್ನು ಕನ್ನಡ ಸಂಸ್ಕೃತಿಯ ತಿರುಳು ಎಂದು ತಿಳಿಸಿದರು. ಹಾಗೆಯೇ ಧಾರ ಆಯೋಗದೆ ದುರು ಸಾಕ್ಷಿ ನುಡಿದರು. ಕೊನೆಗೆ ಅದರ ಫಲಿತಾಂಶ ಕಂಡು – "ಈ ಆಯೋಗವು ರೊಟ್ಟಿ ಬೇಡಿದ ಹೊಟ್ಟೆಗೆ ಕಲ್ಲು ಕೊಟ್ಟಂತಾಯಿತು. ಮೊಲೆ ಕುಡಿವ ಕರುವನ್ನು ಅಟ್ಟದ ಮೇಲೆ ಹಾಲು ಕೊಡುವ ಹಸುವನ್ನು ಬೆಟ್ಟದ ಮೇಲೆ ಇಟ್ಟಂತಾಯಿತೆಂದು ತಿಳಿಸಿದರಲ್ಲದೆ, ಧಾರ್ ಆಯೋಗದ ವರದಿ ಅವಾಸ್ತವಿಕವೂ, ಹಾಸ್ಯಾಸ್ಪದವು, ಅವ್ಯವಹಾರಿಕವೂ ಆಗಿದೆ ಎಂದು ಹೇಳಿದ್ದನ್ನು ೨೨.೧೨.೯೪೮ರ 'ನವಯುಗ' ದಲ್ಲಿ ವರದಿ ಮಾಡಲಾಗಿದೆ. ಇಲ್ಲಿ ಸರಳ ಉಪಾಯವೆಂದರೆ ಪ್ರಾಂತೀಕರಣ. ಈ ವಿಚಾರ ಈ ಮೇಧಾವಿಗಳಿಗೆ ಹೊಳೆಯದಿದ್ದುದು ವಿಷಾಧನೀಯ ಸಂಗತಿ. ಯಾರಿಗೆ ಏನೇ ಅನ್ನಿಸಲಿ ಕನ್ನಡಿಗರಿಗೆ ಮಾತ್ರ ಪ್ರಾಂತೀಕರಣವಿಲ್ಲದ ಸ್ವಾತಂತ್ರ್ಯವು ಬೇಕಾಗಿಲ್ಲ. ಅದನ್ನು ದೊರಕಿಸಿಕೊಳ್ಳುವುದೇ ನಮ್ಮ ಜನ್ಮ ಸಿದ್ಧ ಹಕ್ಕು ಎಂದು ಜಯದೇವಿಯವರು ಹೇಳುತ್ತಲೇ ಇದ್ದರು.

ಧಾರ್ ಆಯೋಗದ ವರದಿಯ ಪರಿಣಾಮದಿಂದುಂಟಾದ ರೀತಿಯನ್ನು ಜಯದೇವಿಯವರು ಖಂಡಿಸಿದರು. ವರದಿಯ ಪ್ರಕಾರ ಸೊಲ್ಲಾಪುರವನ್ನು ಉತ್ತರ ಸೊಲ್ಲಾಪುರ ಹಾಗೂ ದಕ್ಷಿಣ ಸೊಲ್ಲಾಪುರವೆಂದು ಎರಡು ಭಾಗಗಳನ್ನಾಗಿ ಮಾಡಲಾಯಿತು. ಇದರಿಂದ ಒಂದೇ ಊರಿನಲ್ಲಿ ಎರಡು ತಾಲ್ಲೂಕು ಕಚೇರಿಗಳು ಜನ್ಮತಾಳಿದವು. ಕನ್ನಡಿಗರ ಪ್ರಾತಿನಿಧ್ಯವನ್ನು ಹತ್ತಿಕ್ಕುವ ಸಲುವಾಗಿ ಉದ್ದೇಶ ಪೂರ್ವಕವಾಗಿ ಕನ್ನಡ–ಮರಾಠಿ ಹಳ್ಳಿಗಳನ್ನು ಸೇರಿಸಿ ಉತ್ತರ ಸೊಲ್ಲಾಪುರವನ್ನು ರಚಿಸಿದರು. ಆಗ ಜಯದೇವಿಯವರು ಹಾಗೂ ಕೆಲವು ಕನ್ನಡಾಭಿಮಾನಿಗಳು ಇದನ್ನು ಪ್ರತಿಭಟಿಸತೊಡಗಿದರು. ಜಯದೇವಿಯವರು ಅಲ್ಲಲ್ಲಿ ಸಭೆಗಳನ್ನು ಕರೆದು ಗೊತ್ತುವಳಿ ಸ್ವೀಕರಿಸಿದರು. ಮನವಿಗಳನ್ನು ಸಿದ್ಧಪಡಿಸಿದರು. ಅವುಗಳನ್ನು ಬಿ.ಜಿ. ಖೇರರಿಗೆ ಕಳಿಸಿದರು. ಆದರೆ ಧಾರರ ನೇತೃತ್ವದಲ್ಲಿ ಒಡೆದ ಸೊಲ್ಲಾಪುರ ಒಂದಾಗಲಿ ಇಷ್ಟಕ್ಕೂ ಸುಮ್ಮನಿರದ ಜಯದೇವಿಯವರು ಕೇಂದ್ರ ಸರಕಾರದ

ಕರ್ನಾಟಕ ಭಾಗದ ಮಂತ್ರಿಗಳಾಗಿದ್ದ ಆರ್.ಆರ್. ದಿವಾಕರ, ಡಿ.ಪಿ. ಕರಮರಿಕರ ಮುಂತಾದ ಕನ್ನಡದ ನೇತಾರರಿಗೆ ತಮ್ಮ ಮನವಿ, ನಿವೇದನೆಗಳನ್ನು ಕಳಿಸಿದರೂ ಈ ಮಂತ್ರಿಗಳಿಂದ ಅವರಿಗೆ ಯಾವುದೇ ರೀತಿಯಿಂದಲೂ ಸಹಾಯ ದೊರೆಯಲಿಲ್ಲ. ಇದು ಜಯದೇವಿಯವರು ಕರ್ನಾಟಕ ಏಕೀಕರಣಕ್ಕೆ ಆರಂಭದಲ್ಲಿ ಹೋರಾಡಿದ ಗಮನಾರ್ಹಸಂಗತಿ. ಆದರೆ ದಿವಾಕರರು ರಚಿಸಿದ 'ಕರ್ನಾಟಕದ ಏಕೀಕರಣ'ದ ಕತೆಯಲ್ಲಿ 'ಜಯದೇವಿತಾಯಿ' ಯ ಹೆಸರೇ ಸೇರದಿದ್ದುದು ಸೋಜಿಗದ ಸಂಗತಿ ಎನ್ನಬಹುದು.

ಧಾರ್ ಆಯೋಗವನ್ನು ಕರ್ನಾಟಕದ ಜನತೆಯು ಸಮರ್ಥವಾಗಿ ಎದುರಿಸಲು ಸಿದ್ಧವಾಗಿತ್ತು. ಆದರೆ ಆಯೋಗ ತಾನು ಕೇಳುವ ಪ್ರಶ್ನೆಗಳನ್ನು ಕುರಿತು ಸಂಶಯ ಮತ್ತು ಗೊಂದಲಕ್ಕೊಳಗಾಗಿತ್ತು. ಭಾಷಾವಾರು ಪ್ರಾಂತ ರಚನೆಯ ಕಾರ್ಯವನ್ನು ಹೇಗಾದರೂ ಮುಂದೆ ಹಾಕುವ ಉದ್ದೇಶದಿಂದಲೇ ಧಾರ್ ಆಯೋಗದ ರಚನೆಯಾಗಿದೆ ಎಂದು ಹಲವು ನಾಯಕರು ಅಭಿಪ್ರಾಯ ಪಟ್ಟರು. ನಂತರ ಬಂದ ಧಾರ್ ಆಯೋಗದ ವರದಿಯು ಸಹ ಬೇಗನೇ ಭಾಷಾವಾರು ಪ್ರಾಂತ ರಚನೆಯ ಸಮಸ್ಯೆ ನಿವಾರಿಸಿ ಪ್ರಾಂತ ರಚನೆಗೆ ಅವಕಾಶ ಮಾಡಿಕೊಡುವ ಪ್ರಾಮಾಣಿಕ ಪ್ರಯತ್ನ ಮಾಡದೆ, ಅದು ಕೇವಲ ಕಣ್ಣೊರಿಸುವ ತಂತ್ರದಂತೆ ಕಾಣಿಸ ತೊಡಗಿತು. ಸರಕಾರದ ಈ ಧೋರಣೆಯನ್ನು ಜನತೆ ವಿರೋಧಿಸತೊಡಗಿತು. ಜನತೆಯ ಅಭಿಪ್ರಾಯವನ್ನು ಕಡೆಗಣಿಸಿ ಸರಕಾರ ಸುರಕ್ಷಿತವಾಗಿ ಮುಂದುವರೆಯ ಲಾರದೆಂದು ತಿಳಿದು ೧೯೪೮ನೆಯ ಡಿಸೆಂಬರ ೧೪ ಹಾಗೂ ೧೯ರಂದು ಅಧಿವೇಶನ ನಡೆದು ಈ ಸಮಸ್ಯೆಯನ್ನು ಪುನರ್ ಪರಿಶೀಲಿಸಲು ತೀರ್ಮಾನಿಸಿ ತ್ರಿಮೂರ್ತಿ ಸಮಿತಿಯನ್ನು ರಚಿಸಲಾಯಿತು.

## ತ್ರಿಮೂರ್ತಿ ಸಮಿತಿ

ಧಾರ್ ಆಯೊಗದ ವರದಿಯನ್ನು ಪರಿಶೀಲಿಸಿ ವರದಿಮಾಡಲು ನೇಮಿಸಿದ ಸಮಿತಿಯಲ್ಲಿ ಡಾ॥ ಪಟ್ಟಾಭಿ ಸೀತಾರಾಮಯ್ಯ, ಜವಾಹರಲಾಲ ನೆಹರು ಹಾಗೂ ಸರ್ದಾರ ವಲ್ಲಭಬಾಯಿ ಪಟೇಲ ಅವರಿದ್ದರು. ಈ ಸಮಿತಿಗೆ ೩ ತಿಂಗಳೊಳಗೆ ವರದಿ ಸಲ್ಲಿಸಲು ಸೂಚಿಸಲಾಗಿತ್ತು. ಭಾಷಾವಾರು ಪ್ರಾಂತ ರಚನೆಗೆ ಸಂಬಂಧಿಸಿ ದಂತೆ, ವಿಶೇಷವಾಗಿ ಕರ್ನಾಟಕದಲ್ಲಿ ಏಕೀಕರಣ ಕುರಿತು ಪ್ರಬಲವಾದ ಬೇಡಿಕೆಯಿದ್ದ ಸಂದರ್ಭದಲ್ಲಿ ಈ ಮೂವರು ಸದಸ್ಯರು ಧಾರ್ ಆಯೋಗವನ್ನು ಪರಿಶೀಲಿಸಿ ದಿನಾಂಕ ೦೧-೦೪-೧೯೪೯ರಂದು ತನ್ನ ವರದಿಯನ್ನು ಸಲ್ಲಿಸಿತು. ಧಾರ್ ಆಯೋಗದ ವರದಿಯನ್ನು ಎತ್ತಿ ಹಿಡಿದಿದ್ದ ಈ ಸಮಿತಿಯು ಸಹ ಕರ್ನಾಟಕಕ್ಕೆ ನಿರಾಶೆಯನ್ನುಂಟು ಮಾಡಿತು. ಭಾಷಾವಾರು ಪ್ರಾಂತ ರಚನೆಯ ಅವಶ್ಯಕತೆಯನ್ನು ಈ ಸಮಿತಿಯು ಒಪ್ಪಿದ್ದರೂ ಸಹಿತ ಸದ್ಯಕ್ಕೆ ಅದರ

ಅವಶ್ಯಕತೆಯಿಲ್ಲ ಎಂದು ತೀರ್ಮಾನಿಸಿತ್ತು. ಆಂಧ್ರ ಪ್ರದೇಶದ ನಿರ್ಮಾಣಕ್ಕೆ ಒಪ್ಪಿಗೆಯಿತ್ತು ಕರ್ನಾಟಕವನ್ನು ಕಡೆಗಣಿಸಿದ ವರದಿಯನ್ನು ನೋಡಿದ ಜಯದೇವಿಯವರು ಇದನ್ನು ವಿರೋಧಿಸಿದರು.

ಈ ವಿಷಯದ ಚರ್ಚೆಗಾಗಿ ೧೯೪೯ರ ಡಿಸೆಂಬರ್ ೨೧ರಂದು ಜಯದೇವಿಯವರು ತಮ್ಮ ಅಧ್ಯಕ್ಷತೆಯಲ್ಲಿ 'ಮಹಿಳಾ ಪರಿಷತ್ತಿನ ಸಭೆ ಕರೆದರು.' ಅಲ್ಲಿ ಜೆ.ವಿ.ಪಿ. ಸಮಿತಿಯ ನಿರ್ಣಯವನ್ನು ವಿರೋಧಿಸಿ ಕರ್ನಾಟಕದ ಪ್ರತಿನಿಧಿಗಳು ಕೇಂದ್ರ ಮತ್ತು ಶಾಸನ ಸಭೆಗಳಿಗೆ ರಾಜಿನಾಮೆ ಕೊಡಬೇಕೆಂದು ಗೊತ್ತುವಳಿಗಳನ್ನು ಸ್ವೀಕರಿಸಿದರು. ಇದರಿಂದ ಪ್ರಭಾವಿತರಾದ ಕಾಡಾದಿ ನಾಗಪ್ಪಣ್ಣನವರು ರಾಜಿನಾಮೆ ನೀಡಿದ್ದಕ್ಕಾಗಿ ಅವರನ್ನು ಅಭಿನಂದಿಸಲಾಯಿತು. ಹಾಗೆಯೇ ಮೈಸೂರು ಅರಸರ ರಾಜ್ಯ ತ್ಯಾಗಕ್ಕಾಗಿ ಈ ಸಭೆಯು ಮೈಸೂರು ಮಹಿಳಾ ಬಾಂಧವರಲ್ಲಿ ವಿನಂತಿಸಿ ಕೊಂಡಿತ್ತು. ಬಳ್ಳಾರಿ, ಜಿಲ್ಲೆಯ ವಿಭಜನೆಯನ್ನು ಪ್ರತಿಭಟಿಸಿ ಖಂಡಿಸಿತು. ಆದರೂ ಆಗ ಕರ್ನಾಟಕ ಪ್ರಾಂತ ರಚನೆಯಾಗಲಿಲ್ಲ. ಸೊಲ್ಲಾಪುರದಲ್ಲಂತೂ ಕನ್ನಡ ಮಾತನಾಡುವುದೇ ಅಪರಾಧವೆಂದು ತಿಳಿಯಲಾಗುತ್ತಿದ್ದ ಆದಿನಗಳಲ್ಲಿ ಜಯದೇವಿಯವರು ಮುಂದಾಳಾಗಿ ನಿಂತು ಕನ್ನಡ ಪರವಾದ ಸಭೆ ಸಮಾರಂಭಗಳನ್ನು ನಡೆಸುತ್ತಿದ್ದುದು ಅವರ ಕನ್ನಡಭಿಮಾನಕ್ಕೆ ಹಿಡಿದ ಕನ್ನಡಿ ಎನ್ನಬಹುದು.

ಕನ್ನಡವು ಸೊಲ್ಲಾಪುರದಲ್ಲಿ ತೆರೆಮರೆಗೆ ಸರಿದು ಹೋಗಿದ್ದ ಹೊತ್ತಿನಲ್ಲಿ, ಕನ್ನಡಕ್ಕೆ, ಭಾಷೆಗೆ ತುಂಬಾ ಪ್ರತಿಕೂಲ ಪರಿಸ್ಥಿತಿಯು ಅಲ್ಲಿ ನಿರ್ಮಾಣವಾಗಿದ್ದ ಸಂದರ್ಭದಲ್ಲಿ ಜಯದೇವಿಯವರು ಅದನ್ನಲ್ಲಿ ಉಳಿಸಲು ಹೋರಾಡಿದರು. ಅವರ ಈ ಹೋರಾಟ ಕೇವಲ ಗಡಿನಾಡಿಗಾಗಿ ಮಾತ್ರವಾಗಿರದೆ, ಅದು ಅಖಂಡ ಕರ್ನಾಟಕವನ್ನು ಕಟ್ಟುವ ತುಂಬಾ ವಿಶಾಲವಾದ ಜವಾಬ್ದಾರಿಯೂ ಆಗಿತ್ತು. ಇದನ್ನು ಕಾರ್ಯಗತಗೊಳಿಸಲು ಅವರು ಸೊಲ್ಲಾಪುರದಲ್ಲಿ ಸಭೆ ನೆರವೇರಿಸಿದರು. ನಂತರ ಹುಬ್ಬಳ್ಳಿಯಲ್ಲಿ ಅಖಿಲ ಕರ್ನಾಟಕ ರಾಜ್ಯ ನಿರ್ಮಾಣ ಸಮಿತಿಗೆ ಈ ವಿಷಯವನ್ನು ಮನನ ಮಾಡಿಕೊಟ್ಟರು. ಎಲ್ಲಾ ಕಡೆಗೆ ಏಕೀಕರಣ ಸಪ್ತಾಹ, ಮೆರವಣಿಗೆ, ಸಹಿಸಂಗ್ರಹದ ಕಾರ್ಯಗಳು ಜರುಗಬೇಕೆಂದು ಸಭೆಗಳನ್ನು ಕರೆದು, ಭಾಷಣ ಮಾಡಿ, ಮುಂದಾಳುಗಳು ರಾಜಿನಾಮೆ ನೀಡುವಂತೆ ಒತ್ತಾಯಿಸಲು ಅವರು ಜನರಿಗೆ ತಿಳಿಸಿದರು.

ಜಯದೇವಿಯವರ ನೇತೃತ್ವದಲ್ಲಿ ಹೀಗೆ ಮಹಿಳಾ ಪರಿಷತ್ತಿನ ಗೊತ್ತುವಳಿಗಳ ಪ್ರಭಾವವು ಬೆಳೆಯುತ್ತ ನಡೆಯಿತು. ಇದರ ಪರಿಣಾಮದಿಂದ ಆಗ ಎಸ್. ನಿಜಲಿಂಗಪ್ಪ ಮೊದಲಾದ ಅನೇಕ ಮುಂದಾಳುಗಳು ಶಾಸನ ಸಭೆಗಳಿಗೆ ರಾಜಿನಾಮೆ ನೀಡಲು ಮುಂದಾದರು. ಈ ಸಂದರ್ಭವು ಸೊಲ್ಲಾಪುರದ ಮಹಿಳಾವರ್ಗದ ಉತ್ಸಾಹವನ್ನು ಇಮ್ಮಡಿಗೊಳಿಸಿತು. ಆಗ ಜಯದೇವಿಯವರು "ಕರ್ನಾಟಕ

ನಾಡದೇವಿಯ ಒಲುಮೆಗಾಗಿ ರಾಜಿನಾಮೆಗಳನ್ನಿತ್ತ ನಿಮ್ಮೆಲ್ಲರಿಗೂ ಧನ್ಯವಾದಗಳು. ನಿಮ್ಮ ತ್ಯಾಗದ ಈ ಗುಣ ಎಲ್ಲರಿಗು ಮಾರ್ಗದರ್ಶನವಾಗಲಿ. ನೀವೆಲ್ಲ ಸ್ಪದಂದಿಸಿದ ಕಾರ್ಯಕ್ಕೆ ಸೊಲ್ಲಾಪುರದ ಮಹಿಳೆಯರೆಲ್ಲ ಕಂಕಣಬದ್ಧರಾಗಿರಲು ತಯಾರಿದ್ದೇವೆ" ಎಂದು ಪತ್ರಿಕಾ ಹೇಳಿಕೆ ನೀಡಿದರು. ಹೀಗೆ ಜಯದೇವಿಯವರ ಸತತ ಪ್ರಯತ್ನದಿಂದ ಜೆ.ವಿ.ಪಿ. ವರದಿಯನ್ನು ವಿರೋಧಿಸುತ್ತ ಕನ್ನಡ ಜನತೆ ಇನ್ನಷ್ಟು ಜಾಗೃತರಾದರೆಂದು ಹೇಳಬಹುದು.

ಗಡಿನಾಡಿನಲ್ಲಿ ಜಯದೇವಿಯವರು ಕನ್ನಡನಾಡು, ನುಡಿಯ ರಕ್ಷಣೆಗಾಗಿ ಇನ್ನೂ ಹೆಚ್ಚಿನ ಕಾರ್ಯತತ್ಪರತೆಯಲ್ಲಿ ನಿರತರಾದರು. ಅವರು ತಮ್ಮ ವೀರಶೈವ ಮಹಿಳಾ ಜ್ಞಾನಮಂದಿರದ ವತಿಯಿಂದ ಕನ್ನಡ ಶಾಲೆಗಳನ್ನು ಆರಂಭಿಸಿದರು. ಆಗ ಸು ೩ ಲಕ್ಷಕ್ಕಿಂತ ಹೆಚ್ಚಿನ ಕನ್ನಡ ಜನಸಂಖ್ಯೆಯಿರುವ ಸೊಲ್ಲಾಪುರದ ಜನತೆಗೆ ಇದು ಸಾಕಾಗದಿದ್ದರೂ ಸಹ ಆಗ ಕನ್ನಡವು ಅಲ್ಲಿ ಜೀವಂತವಾಗಿರಲುಸ್ಥಾನ ಒದಗಿಸಿತು ಎಂಬುದನ್ನು ಮರೆಯಬಾರದು. ಇದಕ್ಕೆಲ್ಲಾ ಗೌರವ್ವಬಾಯಿ ವಾರದ ಸಂಗವ ಮಡಕೆ, ಪಂಚವ್ವ ಬಾಯಿ ಸರದಾರ ಹಾಗೂ ಜಯದೇವಿ ಬಾಯಿ ಲಿಗಾಡೆ ಮೊದಲಾದ ಹೆಣ್ಣುಮಕ್ಕಳ ಸತತ ಪ್ರಯತ್ನವೇ ಕಾರಣವೆಂದು ದಿನಾಂಕ ೧೯-೧೨-೧೯೫೬ರ 'ನವಯುಗ ಪತ್ರಿಕೆ'ಯು ತಿಳಿಸುತ್ತದೆ.

ಜೆ.ವಿ.ಪಿ. ವರದಿಯು ಪ್ರಕಟಗೊಂಡ ನಂತರ 'ಜಯದೇವಿ ತಾಯಿ ಲಿಗಾಡೆ' ಯಯವರ ನೇತೃತ್ವದಲ್ಲಿ ನಾಡಿನಾದ್ಯಂತ ಚಳುವಳಿಗಳು ನಡೆಯಲಾರಂಭಿಸಿದವು. ಅದೇ ವೇಳೆಗೆ ಆಂಧ್ರ ಪ್ರದೇಶದ ಭಾಷಾವಾರು ಪ್ರಾಂತರಚನೆಯಲ್ಲಿ. ತಮಗೆ ಅನ್ಯಾಯವಾಗಿದೆ ಎಂದು ಅಲ್ಲಿಯ ಜನತೆ ಅಂದೋಲನ ಪ್ರಾರಂಭಿಸಿದರು. ಆ ನಿಮಿತ್ತವಾಗಿ ಆಮರಣ ಉಪವಾಸ ಸತ್ಯಾಗ್ರಹ ಕೈಕೊಂಡ ನಂತರ ಶ್ರೀ ರಾಮುಲು ಪೊಟ್ಟಿ ಹುತಾತ್ಮರಾದರು. ಈ ಘಟನೆ ಭಾಷಾಭಿಮಾನಿಗಳಿಗೆ ಆದರ್ಶವಾಯಿತು. ಕನ್ನಡಕ್ಕಾಗಿ ಗಡಿ ಪ್ರದೇಶದಲ್ಲಿ ಕನ್ನಡ ಕೋಟೆಯನ್ನು ಕಟ್ಟಿದ ಜಯದೇವಿಯವರು ಹುತಾತ್ಮರಿಗೆ ಶ್ರದ್ಧಾಂಜಲಿ ಅರ್ಪಿಸುವ ಸಂದರ್ಭಗಳಲ್ಲಿ ಕನ್ನಡಿಗರ ಅಭಿಮಾನವನ್ನು ಬಡಿದೆಬ್ಬಿಸಲು ಅಲ್ಲಲ್ಲಿ ಸಂತಾಪ ಸೂಚಕ ಸಭೆಗಳನ್ನೇರ್ಪಡಿಸಿದರು.

ಅಖಂಡ ಕರ್ನಾಟಕದ ಕನಸು ಹೊತ್ತಿದ್ದ ಜಯದೇವಿಯವರಿಗೆ ಏಕೀಕರಣ ವೆನ್ನುವುದು ಶಬ್ದಾಡಂಬರದ ವೇದಿಕೆಯ ಮೇಲಿನ ಭಾಷಣವಾಗಿರಲಿಲ್ಲ. ಅದನ್ನು ನಿಜದಲ್ಲಿ ತರಬೇಕೆಂಬ ಕೊರಗು ಅವರಲ್ಲಿ ಸದಾ ಇತ್ತು. ಹಾಗಾಗಿ ಕನ್ನಡದ ಕೂಗು ಮನೆ ಮನೆಗೂ, ಮನ ಮನಕ್ಕೂ ಮುಟ್ಟಿಸುವ ಕ್ರಿಯಾತ್ಮಕ ಕೆಲಸವನ್ನು ಹಮ್ಮಿಕೊಳ್ಳ ಲಾರಂಭಿಸಿದರು. ಈ ಕಾರ್ಯಕ್ರಮ ರೂಪಿಸುವ ಚಿಂತನಶೀಲರು ಮತ್ತು ಅದನ್ನು ಕಾರ್ಯರೂಪಕ್ಕೆ ತರುವ ಕ್ರಿಯಾಶೀಲ ವ್ಯಕ್ತಿಗಳನ್ನು ಯಾವುದೇ ಚಳುವಳಿ ಬಯಸುತ್ತದೆ ಎಂಬುದು ಅವರಿಗೆ ಗೊತ್ತಿತ್ತು. ಈ ಹಿನ್ನೆಲೆಯಲ್ಲಿ ಜಯದೇವಿ

ಯವರು ಸದಾ ಕ್ರಿಯಾಶೀಲರಾಗಿರುತ್ತಿದ್ದರು. ಈ ಕಾರ್ಯಕ್ಕೆ ಅವರ ಅತ್ತೆಯರಿಂದ ಮಕ್ಕಳಿಂದ ತುಂಬು ಸಹಕಾರ ದೊರೆಯಿತು, ಕಾರಿನಲ್ಲಿ ಹಿಟ್ಟಕ್ಕಿ, ಅಡುಗೆ ಸಾಮಾನುಗಳನ್ನು ಇಟ್ಟುಕೊಂಡು, ಅತ್ತೆಯವರನ್ನು ಕರೆದುಕೊಂಡು ಪ್ರಯಾಣ ಮಾಡುತ್ತ ಗಡಿ ಹಳ್ಳಿಗಳ ಜನರಲ್ಲಿ ಕನ್ನಡ ನಾಡು ನುಡಿಯ ಬಗ್ಗೆ, ಕನ್ನಡ ಸೀಮೆಯ ಬಗ್ಗೆ ಹೇಳಿ, ಅವರಲ್ಲಿ ಏಕೀಕರಣದ ಜಾಗೃತಿಯನ್ನು ಮಾಡುತ್ತಿದ್ದರು. ಅವರ ಈ ಸೇವೆ ಕನ್ನಡ ನಿಷ್ಠಾವಂತ ವ್ಯಕ್ತಿಯ ಅನುಪಮ ಸೇವೆಯಾಗಿತ್ತು. ಅದನ್ನು ನಾಡು ನುಡಿ ಸೇವೆಯೆಂದು ಹೇಳಬಹುದು.

ಕರ್ನಾಟಕದ ಏಕೀಕರಣ ಸಮಿತಿಯವರು ಆಂಧ್ರ ಪ್ರಾಂತ ರಚನೆಯಾದ (೧೯೫೩ ಅಕ್ಟೋಬರ್ ೧ರಂದು) ನಂತರ ಸತ್ಯಾಗ್ರಹ ಮಾಡತೊಡಗಿದರು. ಉಪವಾಸ ಸತ್ಯಾಗ್ರಹದಲ್ಲಿ ನಾರಾಯಣಪೈ, ಅದರ ಗುಂಜಿ, ಶಂಕರ ಗೌಡ ಪಾಟೀಲ, ತಲ್ಲೂರ ರಾಯನಗೌಡ, ದೊಡ್ಡಮೇಟಿ ಅಂದಾನಪ್ಪ ಮುಂತಾದವರು ಸೇರಿಕೊಂಡರು. ಶಂಕರಗೌಡರು ಉಪವಾಸದ ವೀರ ಪಣತೊಟ್ಟು ಯಾರ ಮಾತಿಗೂ ಮಣಿಯದೆ ೨೫ ದಿನಗಳವರೆಗೆ ಉಪವಾಸ ಮುಂದುವರೆಸಿದರು, ಕನ್ನಡ ನಾಡಿಗಾಗಿ ತನು–ಮನ–ಧನಗಳಿಂದ ಸೇವೆ ಸಲ್ಲಿಸುತ್ತಿದ್ದ 'ಜಯದೇವಿ' ಯವರು ಸಹ ಶಂಕರ ಗೌಡರ ಉಪವಾಸ ನಿರ್ಧಾರದಿಂದ ತುಂಬಾ ನೊಂದು ಕೊಂಡರು. ಅಂದಿನ ನಿಷ್ಕ್ರಿಯ ಮುಖಂಡರ ಬಗ್ಗೆ ಬೇಜಾರು ಮಾಡಿಕೊಂಡರು. ಕೊನೆಗೆ ಜಯದೇವಿಯವರು – ತಮ್ಮ ಹೆಬ್ಬೆರಳಿನ ರಕ್ತ ಚಿನ್ಹಾಂಕಿತ ಹಾಕಿ "ಏಕೀಕರಣಕ್ಕಾಗಿ ನಾವು ನೀವು ಸೇರಿ ಹೋರಾಡೋಣ" ಎಂದು ತಿಳಿಸಿದರೆಂದು ೧೯–೦೪–೧೯೫೩ರ 'ನವಯುಗ' ಪತ್ರಿಕೆ ತಿಳಿಸಿದೆ. ಇದರಿಂದ ಜನತೆಯಲ್ಲಿ ಪ್ರಕ್ಷುಬ್ಧ ವಾತಾವರಣ ನಿರ್ಮಾಣವಾಯಿತು. ಮುಖಂಡರನ್ನು ಕಾಣಲು ಜನರು ತಮ್ಮ ಚಕ್ಕಡಿಗಾಡಿ ತೆಗೆದುಕೊಂಡು ಹೊರಟು ನಿಂತರು. ರೊಚ್ಚಿಗೆದ್ದ ಜನತೆ ಕಂಠಿಯವರನ್ನು ಕಂಡಾಗ ಅವರನ್ನು ಎಳೆದಾಡಿ ಅವರ ಅಂಗಿ ಹರಿದರು. ನಿಜಲಿಂಗಪ್ಪನವರ ಕಾರಿಗೆ ಬೆಂಕಿ ಹಚ್ಚಿದರು, ಹಳ್ಳಿಕೇರಿ ಗುದ್ಲೆಪ್ಪನವರಿಗೂ ತೊಂದರೆ ಕೊಟ್ಟರು. ಈ ಅನಾಹುತಗಳನ್ನು ಗಮನಿಸಿದ ಅಂದಿನ ಪ್ರಧಾನಿ ಜವಾಹರಲಾಲ ನೆಹರೂ ಅವರು ೨೯–೧೨–೫೩ರ ಗೊತ್ತುವಳಿ ಪ್ರಕಾರ ಪ್ರಾಂತ ಪುನರ್ರಚನಾ ಆಯೋಗವನ್ನು ರಚಿಸಿದರು. ಈ ಆಯೋಗದ ಮುಂದೆ ವರದಿ ಒಪ್ಪಿಸಲು ಹೋಗಬೇಕಾಗಿದ್ದ ಜಯದೇವಿಯವರು ಅನಾರೋಗ್ಯದಿಂದ ನರಳುತ್ತಿದ್ದ ಕಾರಣ ಅನುಪಸ್ಥಿತರಾದರು. ಹೀಗಾಗಿ ಇದೂ ಸಹ ಯಶಸ್ವಿಯಾಗಲಿಲ್ಲ. ಆ ಸಮಯದಲ್ಲಿ ಗಡಿನಾಡಿನ ಜಯದೇವಿಯವರು, ಒಳನಾಡಿನ ನಿಜಲಿಂಗಪ್ಪ, ಹಳ್ಳಿಕೇರಿ ಗುದ್ಲೆಪ್ಪ, ಕಂಠಿ ಮೊದಲಾದವರು 'ಜಯನಿಕೇತನ'ದಲ್ಲಿ ಸೇರಿ ಚರ್ಚಿಸಿ ಮುಂದಿನ ಕಾರ್ಯಕ್ರಮವನ್ನು ಯೋಚಿಸಿದರು.

ನಾಡಿನ ಹಿತಕ್ಕಾಗಿ ಮನೆತನದ ಅನೇಕ ಸಮಸ್ಯೆಗಳನ್ನು ಬದಿಗಿರಿಸಿದ ಜಯದೇವಿಯವರು ಮಗಳೊಂದಿಗೆ ವಿರಸಕಟ್ಟಿಕೊಳ್ಳುವ ಪ್ರಸಂಗವನ್ನು ತಂದು ಕೊಂಡರು. ಮಗಳು ಚೊಚ್ಚಲು ಬಸುರಿ, ಆಸ್ಪತ್ರೆ ಸೇರಿ ತಾಯಿ ಬಳಿಯಲ್ಲಿಲ್ಲದ ವ್ಯಥೆಯಿಂದ, ಹೆರಿಗೆಯ ಕಷ್ಟದಿಂದ ತುಂಬಾ ಬಳಲಿದಳು. ದಿನ ತುಂಬಿದ ಮಗಳನ್ನು ಬಿಟ್ಟು ನಾಡು ನುಡಿಯ ಸೇವೆಯಲ್ಲಿ ಅವರು ನಿರತರಾದದ್ದು ಕನ್ನಡದ ಮೇಲಿನ ಅವರ ಹೊಣೆಗಾರಿಕೆಯ ಪ್ರತೀಕವೆನ್ನಬಹುದು.

ಸೊಲ್ಲಾಪುರದ ಮಹಿಳಾಲೋಕವು ಜಯದೇವಿಯವರ ನೇತೃತ್ವದಲ್ಲಿ ಹಲವು ಗೊತ್ತುವಳಿಗಳನ್ನು ಸ್ವೀಕರಿಸುತ್ತ, ಸೂಚನೆಗಳನ್ನು ನೀಡುತ್ತ ಕನ್ನಡಿಗರಿಗೆ ಯೋಗ್ಯ ಮಾರ್ಗದರ್ಶನ ಮಾಡುತ್ತಿತ್ತು. ಕನ್ನಡಿಗರು ಎಷ್ಟೆಲ್ಲಾ ಪ್ರಯತ್ನಪಟ್ಟರೂ ಗಡಿನಾಡಿನ ಕೆಲವು ಭಾಗಗಳು ಕೈ ಬಿಟ್ಟವು. ತ್ರಿಮೂರ್ತಿಗಳ ಆಯೋಗದ ವರದಿಯಿಂದ ಸೊಲ್ಲಾಪುರ ಹಾಗೂ ಕೆಲವು ಊರುಗಳು ಡಾ॥ ಪಣ್ಣೀಕರ್ ಕೇರಳದವರಾಗಿದ್ದುದರಿಂದ ಕಾಸರಗೋಡು ಕರ್ನಾಟಕದಿಂದ ಮಾಯವಾದವು. ತ್ರಿಮೂರ್ತಿಗಳ ಆಯೋಗದ ವರದಿ ೧೦-೧೦-೫೫ರಲ್ಲಿ ಪ್ರಕಟವಾಗಿ ೧೬-೦೩-೧೯೫೬ ರಂದು ಲೋಕಸಭೆಯಲ್ಲಿ ಮಂಡಿಸಲ್ಪಟ್ಟು ರಾಜ್ಯ ವಿಧಾನ ಮಂಡಲಗಳಿಗೆ ಅಭಿಪ್ರಾಯ ಪಡೆಯಲು ಕಳಿಸಿತು. ಆಮೇಲೆ ವಿಧಾನ ಮಂಡಲಗಳ ಅಭಿಪ್ರಾಯ ತಿಳಿದುಕೊಂಡು ಅದು ಸ್ವೀಕೃತವಾಗಿ ೦೧-೧೧-೧೯೫೬ ರಿಂದ ಕನ್ನಡಿಗರಿಗೆ ಪ್ರತ್ಯೇಕ ರಾಜ್ಯ ದೊರೆಯಿತು. ಅದು 'ಮೈಸೂರು ರಾಜ್ಯ'ವೆನಿಸಿತು. 'ಕರ್ನಾಟಕ' ಹೆಸರು ಪಡೆಯಲು ಮತ್ತೆ ಹದಿನೇಳು ವರ್ಷ ಕಾಯಬೇಕಾಯಿತು.

## ಕನ್ನಡ ಕುಲ ರಕ್ಷಣೆ :

ಸೊಲ್ಲಾಪುರದ ಬಸವ್ವ ಬಾಯಿ, ವಾರದ ಗೌರವ್ವ ಬಾಯಿ ವಾರದ ಪಂಚವ್ವ ಬಾಯಿ, ಸರದಾರರೊಂದಿಗೆ ಜಯದೇವಿ ತಾಯಿ ಲಿಗಾಡೆಯವರು ಹೆಮ್ಮೆಯ ಕನ್ನಡದ ಪುತ್ರಿಯೆನಿಸಿದ್ದರು. ಈ ಎಲ್ಲ ಮಹಿಳೆಯರನ್ನು ಅಂದಿನ ಸಮಾಜ '**ಕನ್ನಡ ಕುಲ ಪಾಲಿಕೆ**'ಯರೆಂದು ಗುರುತಿಸಿತ್ತು. ಇದಕ್ಕೆ ಕಾರಣವೆಂದರೆ ಅವರ ಕರ್ನಾಟಕ ಏಕೀಕರಣದ ಹೋರಾಟವೆನ್ನಬಹುದು. ಅಂದಿನ ದಿನಗಳಲ್ಲಿ ಸೊಲ್ಲಾಪುರದಲ್ಲಿ ಕಿರ್ತನೆ, ಪುರಾಣ, ಭಜನೆ ಏರ್ಪಡಿಸುವುದರ ಜತೆಗೆ ಪ್ರೌಢ ಸ್ತ್ರೀಯರಿಗೆ ಕನ್ನಡ ಪ್ರಾಥಮಿಕ ಶಿಕ್ಷಣ ನೀಡುವುದು, ವಚನ ಸಾಹಿತ್ಯದ ನಿರಂತರ ಪಠಣಮಾಡಿಸುವುದು. ವೃದ್ಧಾಶ್ರಮಗಳಲ್ಲಿ ಹಾಗೂ ಸಭೆ ಸಮಾರಂಭಗಳಲ್ಲಿ ವಚನ ಗಾಯನ ನಡೆಸುವುದು ಇವರ ಕನ್ನಡ ಕಾರ್ಯಕ್ರಮಗಳಾಗಿದ್ದವು. ಸಿದ್ಧರಾಮನು ಶ್ರೇಷ್ಠ ಶರಣನು ಸಿದ್ಧಿ ಪುರುಷ, ಅವನು ಕನ್ನಡಿಗ ಎಂಬುದನ್ನು ಅಲ್ಲಿಯ ಕನ್ನಡಿಗರು ಮರೆಯದಂತೆ ಸೊಲ್ಲಾಪುರದಲ್ಲಿ ಜಾಗೃತಿಯನ್ನು ಇವರು ಉಂಟುಮಾಡಿದರು. ಅಲ್ಲಿಯ ಜನರಲ್ಲಿ ಸಿದ್ಧರಾಮ ಶರಣರ ಸ್ಮರಣೆಯನ್ನು ಜೀವಂತವಾಗಿಡುವ ಜೊತೆಗೆ ಕನ್ನಡವನ್ನು ಜಾಗೃತಗೊಳಿಸಿದರು.

ಜಯದೇವಿಯವರಿಗೆ ಅಖಂಡ ಕರ್ನಾಟಕ ಹಾಗೂ ಕನ್ನಡಿಗರ ಬಗೆಗೆ ಸ್ಪಷ್ಟ ಪರಿಕಲ್ಪನೆಯಿತ್ತು. ಕನ್ನಡ ಭಾಷೆಯ ಮಾತನಾಡುವ ಊರೂರುಗಳನ್ನು ಅವರು ಬಲ್ಲವರಾಗಿದ್ದರು. ಬಳ್ಳಾರಿ, ಅಕ್ಕಲಕೋಟೆ, ಕೊಲ್ಹಾಪುರ, ಬೀದರ, ಜತ್ತ, ಗಡಹಿಂಗ್ಲಜ, ಮಡಕಶಿರಾ, ಕಾಸರಗೋಡು, ನೀಲಗಿರಿ ಮೊದಲಾದ ಪ್ರದೇಶಗಳು ಕನ್ನಡ ಪ್ರದೇಶಗಳು. ಅವು ಕರ್ನಾಟಕಕ್ಕೆ ಸೇರಬೇಕೆಂದು ಜಯದೇವಿಯವರು ೧೯೫೫ರಲ್ಲಿ ಇಂದಿರಾಗಾಂಧಿಯವರು ಹುಬ್ಬಳ್ಳಿಗೆ ಬಂದಾಗ ಒತ್ತಾಯಿಸಿದ್ದರು. ಜಯದೇವಿಯವರ ಪ್ರಕಾರ ಶಿರೋಳ, ಮಂಗಳವೇಡಿ, ಹತ್ತಿಕಣಗಿಲು ಉಮರ್ಗಾ, ನಳದುರ್ಗಗಳು ಕರ್ನಾಟಕದಲ್ಲಿ ವಿಲೀನವಾಗಬೇಕಾಗಿದ್ದವು. ಆದರೆ 'ಏಕೀಕರಣ ಆಯೋಗ'ದಿಂದ ತಮ್ಮ ಬೇಡಿಕೆಗಳಿಗೆ ನ್ಯಾಯ ಸಿಗದ ಕಾರಣ ಅಲ್ಲಿಯ ಜನರು ಹಾಗೂ ಜಯದೇವಿಯವರು ನೊಂದುಕೊಂಡರು. ಆದರೆ ನಂತರದಲ್ಲಿ ಆ ಆಯೋಗದಿಂದ ತಿದ್ದುಪಡಿಗೊಂಡ ವರದಿಯಲ್ಲಿ ಹಾಗೂ ಕೆ.ಪಿ.ಸಿ.ಸಿ. ಮೂಲಕ ಸಲ್ಲಿಸಿದ ಮನವಿಯಲ್ಲಿ ಈ ಭಾಗಗಳ ಕುರಿತು ಪ್ರಸ್ತಾಪವಿಲ್ಲದ್ದು ಕಂಡು ನಿರಾಶೆ ಗೊಂಡರು. ಯಾಕೆಂದರೆ ಈ ಪ್ರದೇಶಗಳಲ್ಲಿ ಮರಾಠಿಗರ ಸಂಖ್ಯೆಗಿಂತ ಕನ್ನಡಿಗರ ಸಂಖ್ಯೆಯೇ ಹೆಚ್ಚಿತ್ತು.

ಕನ್ನಡ ಜಾಗೃತಿಗಾಗಿ ಜಯದೇವಿಯವರು ಕಂಕಣಬದ್ಧರಾಗಿದ್ದರು. ಕ್ರಿ.ಶ. ೧೯೫೦ರಲ್ಲಿ ನಾಡು ನುಡಿಗಾಗಿ– ತನು–ಮನ ಧನವನ್ನು ಅರ್ಪಿಸಲು ಕನ್ನಡ ಕೋಟೆಯನ್ನು ಸ್ಥಾಪಿಸಿದರು. ಕೈ ಬಿಟ್ಟು ಹೋದ ಕನ್ನಡ ನಾಡಿನ ಬಗ್ಗೆ ತೀವ್ರ ಅಸಮಾಧಾನಗೊಂಡರು ಸಹ ಅವರು ತಮ್ಮ ಆಶಾವಾದವನ್ನು ಉಳಿಸಿಕೊಂಡರು. **"ಸಮೃದ್ಧ ಕರ್ನಾಟಕಾಂಚಿ ರೂಪ ರೇಷಾ"** ಎಂಬ ಕಿರುಹೊತ್ತಿಗೆಯನ್ನು ಮರಾಠಿ ಯಲ್ಲಿ ಪ್ರಕಟಿಸಿ, ಮಹಾರಾಷ್ಟ್ರೀಯರ ಕಣ್ಣು ತೆರೆಸುವ ಪ್ರಯತ್ನ ಮಾಡಿದ್ದರು. ಹಾಗೂ ಅಖಂಡ ಕರ್ನಾಟಕದ ಎಲ್ಲ ಚಟುವಟಿಕೆಗಳಲ್ಲಿ ಜಯದೇವಿಯವರು ಭಾಗವಹಿಸಿ ತಮ್ಮ ನಿಖರವಾದ ಹೇಳಿಕೆಗಳನ್ನು, ಲೇಖನಗಳನ್ನು ಪ್ರಕಟಿಸುತ್ತಿದ್ದರು. ಅಷ್ಟೇ ಅಲ್ಲದೆ ಕನ್ನಡಿಗರಲ್ಲಿದ್ದ ನಿರಭಿಮಾನದ ನಿದ್ರೆ ಓಡಿಸಲು ಸ್ವಾಭಿಮಾನ ತುಂಬಲು ಅ.ಕ.ರಾ.ಸ. ಪರಿಷತ್ತಿನ ಉಪಾಧ್ಯಕ್ಷರೂ ಆಗಿದ್ದರು. ಕನ್ನಡಿಗರು ಜಾಗೃತ ರಾಗಿ ಕನ್ನಡ ನಾಡನ್ನು ಕಟ್ಟಬೇಕು ಇಲ್ಲವಾದರೆ ನಮಗೆ ಉಳಿಗಾಲವಿಲ್ಲವೆಂದು ಜನತೆಯನ್ನು ಎಚ್ಚರಿಸುವ ಕಾರ್ಯದಲ್ಲಿ ತೊಡಗಿದರು. ಗಡಿನಾಡಿನಲ್ಲಿಯ ಜಯದೇವಿಯವರ ಸಿಂಹಗರ್ಜನೆ ಕೇಳುತ್ತಿದ್ದ ಕಾರಣ, ಅವರು ಅಲ್ಲಲ್ಲಿ ಮಹಿಳಾ ಮಂಡಳಗಳನ್ನು ಹುಟ್ಟು ಹಾಕಿ ಆ ಮೂಲಕ ಪುರುಷರನ್ನು ಎಚ್ಚರಿಸುತ್ತಿದ್ದುದರಿಂದ, ಆ ಸಿಂಹಗರ್ಜನೆ ಕೇಳುತ್ತಿದ್ದ ಕಾರಣದಿಂದಲೋ ಏನೋ ಒಳನಾಡುಗಳಾದ ಬೆಳಗಾವಿ, ಬೀದರ, ಕಾರವಾರಗಳು ಕರ್ನಾಟಕಕ್ಕೆ ಉಳಿದವೆನ್ನಬೇಕು.

ಜಯದೇವಿಯವರು ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತಿನ ಪದಾಧಿಕಾರಿಗಳಾಗಿದ್ದಾಗ ೧೯೫೪ರಲ್ಲಿ ದಾವಣಗೆರೆಯ ರಾಜನ ಹಳ್ಳಿ ಛತ್ರದಲ್ಲಿ

ಸರ್ವಪಕ್ಷೀಯ ಸಭೆ ಸೇರಿ ರಾಜ್ಯ ಪುನರ್ ನಿರ್ಮಾಣ ಆಯೋಗಕ್ಕೆ ಸಲ್ಲಿಸ ಬೇಕಾಗಿದ್ದ ಮನವಿಯನ್ನು ಕುರಿತು ಚರ್ಚಿಸಲಿತ್ತು. ಕೆ.ಪಿ.ಸಿ.ಸಿ.ಯವರು ಸಿದ್ಧ ಪಡಿಸಿದ ಮನವಿಯಲ್ಲಿ ಸೊಲ್ಲಾಪುರದ ಹೆಸರನ್ನು ಕೈಬಿಟ್ಟಿದ್ದರು. ಈ ಸುದ್ದಿ ಜಯದೇವಿಯರಿಗೆ ತಿಳಿದಾಗ ಅವರು ತಮ್ಮ ನಿಯೋಗದೊಂದಿಗೆ ಆ ಸಭಾ ಮಂಟಪಕ್ಕೆ ಬಂದರು. ಆ ಸಭೆಯಲ್ಲಿ ಅ.ಕ.ರಾ.ನಿ.ಪ. ಸದಸ್ಯರೊಬ್ಬರು ದಂಡಾಧಿಕಾರಿಗಳಾಗಿ ಉಪಸ್ಥಿತರಿದ್ದರು. ಸಭೆಯಲ್ಲಿ ಮನವಿಯನ್ನು ಓದಿದ ನಂತರ ಜಯದೇವಿಯವರು ಎದ್ದು ನಿಂತು. "ಸೊಲ್ಲಾಪುರನ್ನು ಈ ಪಟ್ಟಿಯಲ್ಲಿ ಕೈಬಿಟ್ಟಿದ್ದೇಕೆ?" ಎಂದು ಪ್ರಶ್ನಿಸಿದರು. ಹತ್ತಾರು ಸಲ ಅದೇ ಪ್ರಶ್ನೆಯನ್ನು ಮತ್ತೆ ಮತ್ತೆ ದಂಡವನ್ನು ಕುಟ್ಟಿ ಕುಟ್ಟಿ ಕೇಳಿದರು. ಇಡೀ ಸಭಾಭವನವು ಪ್ರತಿಧ್ವನಿಸಿತು. ಆ ಪ್ರಶ್ನೆಗೆ ಉತ್ತರ ಹೇಳಲಾಗದ ಕೆ.ಪಿ.ಸಿ.ಸಿ ಮುಖಂಡರು ಮುಖ ಮುಖ ನೋಡಿಕೊಂಡರು. ಅದಕ್ಕೆ ಉತ್ತರಿಸಲು ಯಾರೂ ಸಿದ್ಧರಾಗಲಿಲ್ಲ. ಮುಂದೆ ಒಬ್ಬೊಬ್ಬರಾಗಿ ಎದ್ದು ನಿಂತು 'ಅಚಾತುರ್ಯವಾಯಿತು' ತಪ್ಪಿದಲ್ಲಿ ತಾಯಿಯವರು ಹೊಡೆದು ಬುದ್ಧಿಕಲಿಸಬೇಕು. ನಮ್ಮ ತಪ್ಪನ್ನು ಎತ್ತಿ ತೋರಿಸಲು ಬಂದ 'ಕನ್ನಡಾಂಬೆಯನ್ನು ಕಂಡಂತಾಯಿತು' ಎಂದು ಕೇಳುತ್ತ ನಾವು ತಪ್ಪಿದರೂ ಕ್ಷಮಿಸಬೇಕು ಎಂದುಕೇಳಿಕೊಳ್ಳತೊಡಗಿದಾಗ ಇದು ಹೊಗಳಿಕೆಯ ವೇದಿಕೆಯಲ್ಲ. ನಮ್ಮ ಪ್ರಶ್ನೆಗೆ ಇದು ಉತ್ತರವಲ್ಲ. ಎಂದು ಗುಡುಗಿದರು. ಆ ವೇದಿಕೆಯಲ್ಲಿದ್ದ ಕಂಠಿ, ಕಾರಂತ್ ಎಸ್. ನಿಜಲಿಂಗಪ್ಪ, ಕರಮತಕರಂತಹ ಮುಖಂಡರ ಮುಖ ಕಪ್ಪಾಗಿತ್ತು ಈ ರೀತಿ ಸೊಲ್ಲಾಪುರ ಕರ್ನಾಟಕದಲ್ಲಿ ಸೇರಿಸಲು ಹಗಲಿರುಳು ಶ್ರಮಿಸಿದವರು ಜಯದೇವಿಯವರು.

ಸೊಲ್ಲಾಪುರವು ಕರ್ನಾಟಕದ ಅವಿಭಾಜ್ಯ ಅಂಗವೆಂದು ಸಾರುತ್ತ ಅದನ್ನು ಅಖಂಡ ಕರ್ನಾಟಕದಲ್ಲಿ ಸೇರಿಸಲು ಸತತ ಪ್ರಯತ್ನಿಸಿದರೂ ಸಹ ಅದು ಉಳಿಯಲಿಲ್ಲ. ಆಗ ಜಯದೇವಿಯವರು ಮಹಾರಾಷ್ಟ್ರದ ಕುಟಿಲತನವನ್ನು ಖಂಡಿಸತೊಡಗಿದರು. ಸೊಲ್ಲಾಪುರವನ್ನು ಮಹಾರಾಷ್ಟ್ರಕ್ಕೆ ಸೇರಿಸಲು ಶಿಫಾರಸ್ಸು ಮಾಡಿರುವುದು ಯೋಗ್ಯ ಹಾಗೂ ಸಕಾರಣವಲ್ಲವೆಂದು ಅನೇಕ ಕನ್ನಡ ಕಟ್ಟಾಳು ಗಳು ಸಹಿ ಹಾಕಿಸಿದ ವರದಿಯೊಂದನ್ನು ದೆಹಲಿಯ ವರಿಷ್ಠರಿಗೆ ಕನ್ನಡದ ಮುಂದಾಳುಗಳಿಗೆ ಕಳಿಸಿಕೊಟ್ಟರು. ನಂತರದಲ್ಲಿ ಗಡಿನಾಡು ಕನ್ನಡಿಗರು ಹೊರನಾಡಿನವರಾಗಿ, ಮಹಾರಾಷ್ಟ್ರದ ದಬ್ಬಾಳಿಕೆಗೆ ತುತ್ತಾಗಿ ಅವಶ್ಯಕ ಸೌಲಭ್ಯ ಗಳಿಂದ ವಂಚಿತರಾಗಿ ಬದುಕುವ ಸ್ಥಿತಿಯನ್ನು ತಂದುಕೊಂಡರು. ಅಲ್ಲಿದ್ದ ಕನ್ನಡ ಶಾಲೆಗಳು ಒಂದೊಂದಾಗಿ ಮುಚ್ಚುತ್ತಾ ಹೋದಂತೆ, ಅವರು ಮರಾಠಿ ಕಲಿಯ ಬೇಕಾದ ಅನಿವಾರ್ಯತೆಯನ್ನು ಕಂಡು ಜಯದೇವಿಯವರು ಮರುಗತೊಡಗಿದರು. ಪಾಟ್ಕರ ಸಮಿತಿಯವರು ಒಂದು ಗಡಿಗಳಲ್ಲಿ ಸಂಚರಿಸಿ ಜಾಗೃತಿ ಮಾಡತೊಡಗಿ ದಾಗ, ಬೆಳಗಾವಿ, ಕಾರವಾರಗಳಲ್ಲಿಯ, ನಗರ ಸಭೆಗಳಿಗೆ ಮರಾಠಿಗರೇ ಆಯ್ಕೆಯಾಗತೊಡಗಿದಾಗ, ಪಾಟ್ಕರ ಸಮಿತಿಯ ನಂತರ ಕಾರವಾರ, ಬೆಳಗಾವಿ,

ಬೀದರಗಳನ್ನು ಮರಾಠಿಗರು ಕೇಳತೊಡಗಿದಾಗ ಜಯದೇವಿಯವರು – ೧೯೫೮ರಲ್ಲಿ ಕಾರ್ಡೋಜ್ ವಾಚನಾಲಯ ಗದಗದಲ್ಲಿ ಇಂದಿನ ನಮ್ಮ ಹೊಣೆ ವಿಷಯವಾಗಿ ಭಾಷಣ ಮಾಡುತ್ತ – "ಕನ್ನಡಿಗರು ಗಳಿಸಿದ ರಾಜ್ಯವನ್ನು ಉಳಿಸಿಕೊಂಡು ಹೋಗುವುದು ಕೂಡಾ ಅಷ್ಟೇ ಕಷ್ಟದ ಕೆಲಸವಾಗಿದೆ" ಎಂದು ಎಚ್ಚರಿಸಿದರು ಆಗ ಅಧಿಕಾರಕ್ಕಾಗಿ ಕಚ್ಚಾಡುವ ಮುಖಂಡರ ವರ್ತನೆ ಕಂಡು ಅವರು ಏಕೀಕರಣಕ್ಕಾಗಿ ಹೋರಾಡಿದ ಸಂಧರ್ಭಗಳನ್ನೆಲ್ಲ ಅಲ್ಲಿ ಮೆಲುಕುಹಾಕಿದರು. ಕನ್ನಡಿಗರು ಯಾವ ಪ್ರಯತ್ನ ಮಾಡದೆ ಸುಮ್ಮನಿರುವುದನ್ನು ಕಂಡ ಜಯದೇವಿಯವರು ತುಂಬಾ ಮನಸ್ತಾಪದಿಂದ ಅಲ್ಲಿ ಮಾತನಾಡಿದರು. 'ನೆಲ ಹೋಯಿತು ಕುಲ ಬಂದಿತು' ಎಂಬ ಅವರ ಮಾತು ನಿರ್ಭಿಡೆಯ ವಿಚಾರವಾಗಿದ್ದು ಜನರೆಲ್ಲ ಇಲ್ಲಿ ಯಾವುದೇ ಭೇದಭಾವವಿಲ್ಲದೆ ಕನ್ನಡ ನಾಡನ್ನು ಉಳಿಸಿಕೊಳ್ಳಬೇಕೆಂದು ಎಚ್ಚರಿಸಿದ್ದು ಗಮನಾರ್ಹ.

ಅಂದಿನ ದಿಗಳಲ್ಲಿ ಬೆಳಗಾಂವ. ಕಾರವಾರ, ಸೊಲ್ಲಾಪುರಗಳು ತಮ್ಮವೆಂದು ಹೋರಾಡುತ್ತಿದ್ದ ಮರಾಠಿಗರಂತೆಯೇ, ಗುಲ್ಬರ್ಗಾ, ರಾಯಚೂರು, ಬೀದರ್ ಜಿಲ್ಲೆಗಳು ತಮ್ಮವೆಂದು ಹೇಳಿಕೊಳ್ಳುತ್ತಿದ್ದ ಹೈದ್ರಾಬಾದ್ ನಿಜಾಮರ ಜೊತೆಗೂ ಜಯದೇವಿಯವರು ಪ್ರತಿಭಟನೆಗಿಳಿಯಬೇಕಾಯಿತು. ಹೈದ್ರಾಬಾದ್ ಪ್ರದೇಶ ದಲ್ಲಿಯ ನಿರಾಶ್ರಿತರಿಗಾಗಿ ಸಹಾಯಮಾಡಿ, ಜಹಗೀರ, ಜಮೀನಿನ ಮೇಲಿನ ಕಂದಾಯ ಪದ್ದತಿ ರದ್ಧತಿ ಮಾಡಿಸಿ. ಈ ಭಾಗದ ಜನರಲ್ಲಿ ಕನ್ನಡ ಜಾಗೃತಿಗೆ ಕರೆ ಕೊಟ್ಟರು. ನಿಜಾಮನ ರಾಜ್ಯದಲ್ಲಿದ್ದ ಈ ಮೂರು ಕರ್ನಾಟಕದ ಜಿಲ್ಲೆಗಳಿಗೆ ಹೋಗಿ ತಾಯಿಯವರು ಕನ್ನಡ ಪ್ರಸಾರ ಕಾರ್ಯವನ್ನು ಕೈಕೊಂಡರು. ಕನ್ನಡ ಜಾಗೃತಿ ಮೂಡಿಸಿದರು. ಆಗ ನಿಜಾಮನು ಆ ಸ್ಥಳಗಳಿಗೆ ಜಯದೇವಿಯರು ಕಾಲಿಡಕೂಡ ದೆಂದು ಆಜ್ಞೆ ಮಾಡಿದರು. ಆದರೂ ಜಯದೇವಿಯವರು ಹಿಂದೆ ಸರಿಯಲಿಲ್ಲ. ರಾಜ್ಯ ಸುತ್ತಿಹೋರಾಡುವ ಕುರಿತು ಜಾಹಿರಾಬಾದ್‌ನಲ್ಲಿ ೧೯೪೭ರಲ್ಲಿ ಬೃಹತ್ ಸಭೆಯನ್ನು ಇವರು ಸೇರಿಸಿದರು. ಆಗ ನಿಜಾಮ ಸರಕಾರ 'ಜಯದೇವಿ'ಯವರನ್ನು ಬಂಧಿಸಲಾಗಲಿಲ್ಲ. ಜಯದೇವಿಯವರ ಇಲ್ಲಿಯ ಪ್ರವಾಸದಿಂದ ಕನ್ನಡವನ್ನು ಮರೆತಿದ್ದ ಈ ಪ್ರದೇಶದ ಕನ್ನಡಿಗರಿಗೆ ನವ ಚೈತನ್ಯ ಬಂದಿತ್ತು. ಆದಿನಗಳಲ್ಲಿ ಕನ್ನಡಿಗರ ಕೂಗು ಅರಣ್ಯ ರೋಧನವಾಗಿತ್ತು. ಅವರಿಗೆ ಬೆನ್ನೆಲುಬಾಗಿ ನಿಂತ ಜಯದೇವಿಯವರು ಕನ್ನಡವನ್ನು ಇಲ್ಲಿ ನೆಲೆಗೊಳಿಸಲು ಪ್ರಯತ್ನಿಸಿದರು.

## ಕನ್ನಡ ಕಟ್ಟಿದ ಪ್ರಸಂಗಗಳು – ಸಂದರ್ಭಗಳು

ಸೊಲ್ಲಾಪುರದ ಲಿಗಾಡೆ ಮನೆತನದ ಸೊಸೆಯಾದ ಜಯದೇವಿಯವರು ಕನ್ನಡತಿ, ಮಹಾರಾಷ್ಟ್ರದಲ್ಲಿ ಕನ್ನಡ ಸೇವೆ ಸಲ್ಲಿಸಿದ 'ವೀರ ಮಹಿಳೆ' ಎಂದು ಹೆಸರಾದವರು. ತಮ್ಮ ಜೀವನವನ್ನು ಕನ್ನಡ ನಾಡು, ನುಡಿ ಕಟ್ಟಲು ಮಿಸಲಾಗಿಟ್ಟ ವರು. ಸೊಲ್ಲಾಪುರವು ಕರ್ನಾಟಕಕ್ಕೆ ಸೇರಲಿಲ್ಲವೆಂದು ನೊಂದುಕೊಂಡು,

ಕನ್ನಡದದ್ದಲ್ಲದ ನಾಡಿನಲ್ಲಿ ಬದುಕಲಾರೆನೆಂದು ಸೊಲ್ಲಾಪುರ ದಿಂದ ಬಸವ ಕಲ್ಯಾಣಕ್ಕೆ ಬಂದು ನೆಲೆಸಿದರು. ಆಯಾ ಕಾಲಕ್ಕೆ ಬಂದ ಆಯೋಗ ಗಳ ಮುಂದೆ ಕರ್ನಾಟಕ, ಕನ್ನಡ ಭಾಷೆಯ ಪರವಾಗಿ ಸಾಕ್ಷಿ ನೀಡಿದ ಮಹಿಳಾ ಸಾಹಿತಿಯವರು. ಕನ್ನಡ ಸಾಹಿತ್ಯಸಮ್ಮೆಳನದ ಪ್ರಥಮ ಮಹಿಳಾ ಅಧ್ಯಕ್ಷರಾದವರು. ಕನ್ನಡಕ್ಕೆ ಅಪಮಾನ, ಸಂಕಟ ಬಂದಾಗ ಕೆಚ್ಚೆದೆಯಿಂದ ಹೋರಾಟ ಮಾಡಿದವರು. ಆಯಾ ಪ್ರಸಂಗಗಳಲ್ಲಿ ಹಾಗು ಸಂಧರ್ಭಗಳಲ್ಲಿ ಕನ್ನಡ ಕಟ್ಟಲು ಕರೆ ಕೊಟ್ಟವರೂ ಆಗಿದ್ದಾರೆ.

ಗಡಿಭಾಗದ ಕನ್ನಡ ಹೋರಾಟಗಾರ್ತಿ. ತ್ರಿಪದಿಯಲ್ಲಿ "ಶಿವಯೋಗಿ ಸಿದ್ಧರಾಮೇಶ್ವರ ಪುರಾಣ" ರಚಿಸಿದ ಮಹಾ ಕವಿಯಿತ್ರಿ, ಶಿವಶರಣರ ಅನೇಕ ವಚನಗಳನ್ನು ಕನ್ನಡದಿಂದ ಮರಾಠಿಗೆ ಭಾಷಾಂತರ ಮಾಡಿದ ಶ್ರೇಷ್ಠ ಅನುವಾದಕ ರೆನಿಸಿದರು. 'ಶರಣೆ, ಸಮಾಜಜೀವಿ' ಎಂದೆಲ್ಲ ಹೆಸರು ಪಡೆದ ಇವರನ್ನು 'ಗಡಿನಾಡಿನ ಕನ್ನಡ ಸಿಂಹಿಣಿ' ಎಂದೂ ಕರೆಯುತ್ತಾರೆ. ಕಾವೇರಿಯಿಂದ ಗೋದಾವರಿಯವರೆಗಿದ್ದ ಕನ್ನಡ ನಾಡು ಹರಿದು ಹಂಚಿಹೋಗಿದ್ದನ್ನು ಒಂದು ಗೂಡಿಸಲು ಶ್ರಮಿಸಿದ ಅನೇಕ ಗಣ್ಯ ಕವಿಗಳಲ್ಲಿ ಜಯದೇವಿಯವರು ಪ್ರಮುಖರು. ಸರ್ದಾರ್ ವಲ್ಲಭಬಾಯಿ ಪಟೇಲರಿಂದ ಸಂಸ್ಥಾನಗಳು ವಿಲೀನಗೊಂಡವು. ಆನಂತರದಲ್ಲಿ ಕರ್ನಾಟಕವು ಮೈಸೂರು, ಮುಂಬೈ, ಹೈದ್ರಾಬಾದ್, ಮದ್ರಾಸ್, ಕೊಡಗುಗಳ ಆಡಳಿತದಲ್ಲಿ ಹಂಚಿತ್ತು. ಗೋವಾ ಪೋರ್ಚುಗೀಸರ ವಶವಾಗಿ ತನ್ನ ಕನ್ನಡತನದ ಆಸ್ತಿತ್ವವನ್ನು ಕಳೆದುಕೊಂಡಿತ್ತು. ಕನ್ನಡ ನಾಡನ್ನು ಅದರ ಭಾಷೆಯನ್ನು ಒಂದು ಆಡಳಿತದ ಸೂತ್ರದಲ್ಲಿ ತರುವುದೇ ಕರ್ನಾಟಕ ಏಕೀಕರಣ ಹೋರಾಟದ ಗುರಿಯಾಗಿತ್ತು. ಈ ಸೂತ್ರ ೧೯೫೧-೫೨ರಲ್ಲಿ ರಾಜಕಾರಣಿಗಳ ಹಿಡಿತಕ್ಕೆ ಸಿಕ್ಕಿತು. ಆಗ ಲೇಖಕರು ಕನ್ನಡ ಸಂಘಟನೆಗಳು, ಸಾಹಿತ್ಯ ಪರಿಷತ್ತುಗಳು ನಿಸ್ಸಹಾಯಕವಾದವು. ಕರ್ನಾಟಕ ಎರಡೆಂಬ ವಾದಕ್ಕೆ ಬೇಲೂರು ಸಮ್ಮೇಳನ' ಸಿಕ್ಕಿತು. ೧೯೫೨ರಲ್ಲಿ ಬೇಲೂರಿನಲ್ಲಿ ಜರುಗಿದ ಸಾಹಿತ್ಯ ಸಮ್ಮೆಳನದಲ್ಲಿ ವೀರ ಗನ್ನಡತಿ ಜಯದೇವಿಯವರು ಮೂರು ಕೋಟಿ ಕನ್ನಡಿಗರನ್ನು ಉದ್ದೇಶಿಸಿ ಮಾಡತಾಡಿದ ಪ್ರಸಂಗ ಎಚ್ಚರಿಕೆಯ ಗಂಟೆಯಂತಿತ್ತು.

ಆ ಸಮ್ಮೇಳನದ ಉದ್ಘಾಟಕರಾಗಿ ಆಗಮಿಸಿದ್ದ ಮುಖ್ಯಮಂತ್ರಿ ಕೆಂಗಲ್ ಹನುಮಂತರಾಯರು ಏಕೀಕರಣದ ವಿಷಯದ ಬಗ್ಗೆ ಚಕಾರವೆತ್ತದೇ ಇದ್ದಾಗ ಏಕೀಕರಣದ ಕನಸು ಹೊತ್ತಿದ್ದ ಜನರು, ಮುಖ್ಯ ಮಂತ್ರಿಯ ಭಾಷಣದಿಂದ ನಿರಾಶರಾದರು. ಕೆಂಗಲ್‌ರು ಈ ಬಗ್ಗೆ ಮೌನ ವಹಿಸಿದ್ದು, ಮೈಸೂರಿನವರ ಅಭಿಪ್ರಾಯವನ್ನು ಸಮರ್ಥಿಸುವಂತಿತ್ತು. ಕನ್ನಡ ನಾಡು ನುಡಿಯನ್ನು ಒಂದು ಗೂಡಿಸುವ ಉದ್ದೇಶವುಳ್ಳ ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮಲ್ಲಿಯೂ ಈ ವಿಷಯವು ಚರ್ಚೆಗೆ ಬರದೇ ಇವರುವುದನ್ನು ಗಮನಿಸಿದ ಜಯದೇವಿಯವರು

ಇದು ಕನ್ನಡಾಂಬೆಯ ದುರ್ದೈವವೆಂದೇ ಬಗೆದರು. ಆದರೆ ಅವರು ಸುಮ್ಮನಿರಲಿಲ್ಲ. ಅದೇ ಸಮ್ಮೇಳನದ ಮಹಿಳಾ ಪರಿಷತ್ತಿನಲ್ಲಿ ಭಾಗವಹಿಸಿ ಮಾತನಾಡುತ್ತು ಅವರು – "ಕರ್ನಾಟಕದ ಗತ ವೈಭವವನ್ನು ಸ್ಮರಿಸಿ ಸಂತೃಪ್ತಿ ಪಟ್ಟುಕೊಳ್ಳುವುದರ ಬದಲು ನಾಡಿನ ಐಕ್ಯತೆಗೆ ಕಂಕಣಬದ್ಧರಾಗಬೇಕೆಂದು" ಮನವರಿಕೆ ಮಾಡಿದರು. ನಮ್ಮ ನಾಡಿನವರು ನಮ್ಮ ಸಂಸ್ಕೃತಿಯವರೆಂದು ನಾನು ಗಡಿಭಾಗದ ಸೊಲ್ಲಾಪುರದಿಂದ ಮೈಸೂರಿಗೆ ಬಂದೆ. ಆದರೆ ಇಲ್ಲಿ ಕನ್ನಡಕ್ಕೆ ಮರಾಠಿಗರಿಗಿಂತ ಹೆಚ್ಚಿನ ವಿರೋಧಕರನ್ನು ಕಂಡೆ. ಮರಾಠಿಗರು ವಿರೋಧಿಸುವುದು ಸ್ವಾಭಾವಿಕ ಆದರೆ ನಮ್ಮ ಬಗ್ಗೆ ಮೈಸೂರಿನವರು ಈ ರೀತಿ ನಡೆದುಕೊಳ್ಳುವುದು ಸರಿಯಲ್ಲ ಎಂದು ನಿರ್ದಾಕ್ಷಿಣ್ಯವಾಗಿ ಖಂಡಿಸಿ ನುಡಿದು, ನಮಗೆ ಬೇರೆಯವರದು ಬೇಡ, ನಮಗೆ ಬರಬೇಕಾಗಿರುವುದನ್ನು ಉಳಿಸಿಕೊಳ್ಳೋಣ ನಮ್ಮ ಸೊಲ್ಲಾಪುರ ಹೋದರೆ ಪರವಾಗಿಲ್ಲ; ಆದರೆ ಬೇಲೂರು ಹೋದೀತು "ಮೈಸೂರಿನವರು ಎಚ್ಚರದಿಂದಿರಲಿ, ಮರಾಠಿಗರಿಗಿರುವ ತಾಯಿನುಡಿಯ ನಿಷ್ಠೆ ನಮ್ಮಲ್ಲಿ ಬರಲಿ" ಎಂದು ಸ್ವಾರ್ಥಿಗಳಿಗೆ ತಿವಿಯುತ್ತ ಜನತೆಯನ್ನು ಎಚ್ಚರಿಸಿದರು. 'ಉದಯವಾಗಲಿ ನಮ್ಮ ಚೆಲವು ಕನ್ನಡ ನಾಡು' ಎಂದು ಬರಿದೆ ಹಾಡದೆ ಚೆಲುವು ಮಾಡಿರಿ ಆನಂತರ ಆನಂದ ಪಡೆಯಿರಿ' ಎಂದೂ ಸೂಚಿಸಿದರು "ಬೇಲೂರು ಕೇಶವನ ಸಾಕ್ಷಿಯಾಗಿ ನಾನಾವ ಅಧಿಕಾರಕ್ಕೆ ಆಶಿಸಿ, ಕರ್ನಾಟಕ ಏಕೀಕರಣ ಬೇಡುತ್ತಿಲ್ಲ, ಅಗಲಿದ ಕನ್ನಡ ಜಲ, ನೆಲ ಒಂದಾಗಬೇಕೆಂಬುದು ನಮ್ಮ ಬಯಕೆಯಷ್ಟೇ. ಈ ಕಾರ್ಯಕ್ಕೆ ತಾನು ಪ್ರಾಣಾರ್ಪಣೆ ಮಾಡಲೂ ಸಿದ್ಧ" ಎಂದರು. ಎರಡು ಕರ್ನಾಟಕವಾಗುವುದು ಸರಿಯಲ್ಲ. ನಾವಿಬ್ಬರೂ ಕನ್ನಡದವರೇ ಎಂಬ ಸಂದೇಶ ನೀಡಿದರು. ನಂತರದಲ್ಲಿ ಸಮಗ್ರ ಹಳೆ ಮೈಸೂರಿನ ಭಾಗಗಳಿಗೆ ಹೋಗಿ ಜನಮನ ಒಲಿಸಿದರು. ವೈಯಕ್ತಿಕ ಹಿತಾಸಕ್ತಿಗಳಿಗೆ ಮನ್ನಣೆ ನೀಡದ ವೀರ ಕನ್ನಡತಿ ಸ್ಥಾನ ಉಳಿಸಿಕೊಂಡ ಜಯದೇವಿಯವರು ಮೈಸೂರಿನವರನ್ನು ಗೆಲ್ಲಲು ಪ್ರೇರಣೆಯಾದರು. ಆ ದಿಸೆಯಲ್ಲಿ ಒಂದೇ ಕರ್ನಾಟಕ ಕಟ್ಟಲು ಯಶಸ್ವಿಯಾದರು.

ಜಯದೇವಿಯವರ ಕನ್ನಡ ಪ್ರೇಮ ಅನುಪಮವಾದುದು. ಕರ್ನಾಟಕದ ಹಳ್ಳಿಗಳ ಜನರು ಸ್ವಭಾವತಃ ಮುಗ್ಧರು. ಅವರಿಗೆ ಏಕೀಕರಣದ ಪರಿಕಲ್ಪನೆಯಾಗಲಿ, ಕನ್ನಡ ಭಾಷೆಯ ಅವಶ್ಯಕತೆಯಾಗಲಿ ತಿಳಿದಿರಲಿಲ್ಲ. ಹಾಗೂ ಭಾಷಾಭಿಮಾನ, ನಾಡಾಭಿಮಾನಗಳೆಂದರೆ ಏನೋ ಎನ್ನುವ ರೀತಿಯಲ್ಲಿದ್ದರು. ಗಡಿಭಾಗದ ಹಳ್ಳಿಗಳ ಜನರಂತೂ ಸ್ವಾಭಾವಿಕವಾಗಿ ಎದುರು ಮಾತನಾಡುವವರ ಭಾಷೆಯಲ್ಲಿ ಮಾತನಾಡುತ್ತ ಬದುಕು ಸಾಗಿಸುತ್ತಿದ್ದರು. ಹೀಗಾಗಿ ಗಡಿನಾಡ ಕನ್ನಡಿಗರು ಪರಿಸರದ ಪ್ರಭಾವದಿಂದ ಮರಾಠಿಯನ್ನು ಮಾತನಾಡಲು ಕಲಿತಿದ್ದರು. ಎಷ್ಟೋ ಜನರಿಗೆ ತಮ್ಮ ಮಾತೃಭಾಷೆ ಯಾವುದೆಂದೂ ಸಹ ಗೊತ್ತಿರಲಿಲ್ಲ. ಹೀಗಾಗಿ

ಜನಗಣತಿಯ ಸಂದರ್ಭದಲ್ಲಿ ಗಣತಿಗೆ ಬಂದ ಮರಾಠಿ ಭಾಷಿಕ ಅಧಿಕಾರಿಗಳು, ಅಚ್ಚಗನ್ನಡದ ಜನರನ್ನು, ನಿಮಗೆ ಮರಾಠಿ ಭಾಷೆ ಬರುತ್ತದೆಯೇ? ಎಂದು ಕೇಳಿ ಬರುತ್ತದೆ ಎಂದ ತಕ್ಷಣ ಅದನ್ನೇ ಅವರ ಮಾತೃಭಾಷೆ ಕಾಲಂನಲ್ಲಿ ತುಂಬಿಕೊಂಡು ಹೋಗಿ ಆ ಹಳ್ಳಿಯನ್ನು ಮರಾಠಿ ಸಂಖ್ಯೆ ಹೆಚ್ಚಿದ್ದೂರು ಎಂದು ಸಾರುವ ಪ್ರಯತ್ನಕ್ಕಿಳಿದರು. ಈ ರೀತಿಯ ಹೊಸ ವಂಚನೆ ಕಂಡು ಕೆರಳಿದ ಜಯದೇವಿಯರು ಚಿಂತಾಕ್ರಾಂತರಾದರು. ಇದರಿಂದ ಎಚ್ಚರಗೊಂಡ ಅವರು ಈ ಕೆಲಸಕ್ಕಾಗಿ ಒಂದು ಸ್ವಯಂಸೇವಾ ಪಡೆಯನ್ನು ನಿರ್ಮಿಸಿ ಎತ್ತಿನಗಾಡಿ, ಕಾರು ಹಾಗೂ ಕಾಲ್ನಡಿಗೆಯಲ್ಲಿ ಗಡಿ ಹಳ್ಳಿಗಳಿಗೆ ಪ್ರಯಾಣ ಬೆಳೆಸಿ ಅವರಿಗೆ ಕಲಿಸಿಕೊಟ್ಟರು. ಜನಗಣತಿ ಅಧಿಕಾರಿ ಗಳು ಬಂದಾಗ ಕೇಳುವ ಪ್ರಶ್ನೆಗಳು ಹಾಗೂ ಅವು ಹೇಳಬೇಕಾದ ಉತ್ತರಗಳನ್ನು ಒತ್ತಿ ಒತ್ತಿ ಹೇಳಿ ಕಲಿಸಿದರು. ಮತ್ತು ಅರ್ಜಿಯಲ್ಲಿ ಏಳನೆಯ ನಂಬರಿನ ಕಾಲಂನಲ್ಲಿ "ಮಾತೃಭಾಷೆ" ಕನ್ನಡವೆಂದು ನಮೂದಿಸಿದ್ದನ್ನು ಖಾತ್ರಿ ಮಾಡಿಕೊಳ್ಳಬೇಕೆಂದು ಅವರಿಗೆ ತಿಳುವಳಿಕೆ ನೀಡಿದರು. ಜಯದೇವಿಯವರ ಈ ಮುಂಧೋರಣೆ ಸಾಹಸೀ ಪ್ರವೃತ್ತಿ, ನಿಸ್ವಾರ್ಥ ಸೇವೆ ಕನ್ನಡ ನಾಡು–ನುಡಿಯನ್ನು ಕಟ್ಟುವಲ್ಲಿ ಅನನ್ಯವಾಗಿರು ವುದನ್ನು ಅರಿಯಬಹುದು.

ಹೈದರಾಬಾದ್ ಕರ್ನಾಟಕದಲ್ಲಿಯೂ ಜಯದೇವಿಯವರ ಕನ್ನಡ ಸೇವೆ ಮರೆಯುವಂತಹದ್ದಲ್ಲ. ಇಲ್ಲಿ ಕನ್ನಡವು ಒಂದರ್ಥದಲ್ಲಿ ಮರೆಯಾಗಿತ್ತು. ನಿಜಾಮ ಆಳ್ವಿಕೆಯಲ್ಲಿ ಇಲ್ಲೆಲ್ಲ ಉರ್ದು ಭಾಷೆಯು ಆಡಳಿತ ದ ಭಾಷೆಯಾಗಿತ್ತು. ಶಿಕ್ಷಣದ ಮಾಧ್ಯಮವು ಉರ್ದು ಹಾಗೂ ಹಲವೆಡೆ ಮರಾಠಿಯಾಗಿತ್ತು. ಕನ್ನಡವು ಮನೆಯಲ್ಲಿ ಹೆಣ್ಣುಮಕ್ಕಳು ಮಾತ್ರ ಮಾತನಾಡುವ ಭಾಷೆಯೆನಿಸಿತ್ತು. ಹೊರಗಡೆಯ ವ್ಯವಹಾರ ವೆಲ್ಲ ಉರ್ದುದಲ್ಲಿತ್ತು. ಬರವಣಿಗೆ ಮೋಡಿ ಲಿಪಿಯಲ್ಲಿತ್ತು. ಕನ್ನಡ ಭಾಷೆಯು ಚದುರಿಹೋಗಿತ್ತು. ಈ ಭಾಗದಲ್ಲಿ ಚದುರಿದ ಕನ್ನಡಿಗರಿಗೆ ಬೆನ್ನೆಲುಬಾಗಿ ನಿಂತವರು ಜಯದೇವಿಯವರು. ನಿಜಾಮನ ಸೈನ್ಯದಿಂದ ಹಾಗೂ ಕಾಶೀಂ ರಜ್ವಿಯರ ಹಾವಳಿಯಿಂದ ತತ್ತರಿಸಿ ಹೋಗಿದ್ದ ಹಿಂದೂ ಜನ, ತಮ್ಮ ಮನೆ–ಮಾರು ಬಿಟ್ಟು ಸೊಲ್ಲಾಪುರಕ್ಕೆ ಹೋದಾಗ ಆ ನಿರಾಶ್ರಿತರಿಗೆ ಇರಲು ವ್ಯವಸ್ಥೆ ಮಾಡಿಸಿಕೊಟ್ಟು ಅವರಿಗೆ ಎಲ್ಲ ಸಹಾಯಮಾಡಲು ಮುಂದಾದರು ಜಯದೇವಿಯವರು. ಹಲವು ದಿನಗಳ ಕಾಲ ಅವರನ್ನು ಕಾಪಾಡಿದಲ್ಲದೆ, ನಂತರ ಈ ಭಾಗ ಸ್ವತಂತ್ರವಾದಾಗ ಅವರ ಮಕ್ಕಳಿಗೆ ಶಿಕ್ಷಣ ಸಿಗುವಂತೆ. ಶ್ರಮಿಸಿದರು. ಈ ಭಾಗದಲ್ಲಿ ಕನ್ನಡ ಜಾಗೃತಿಗಾಗಿ ಕನ್ನಡ ಶಾಲೆಗಳನ್ನು ತೆರೆಯುವಂತೆ ಒತ್ತಾಯಿಸಿದರು. ಇಲ್ಲಿರುವ ಮರಾಠಿ ಶಾಲೆಗಳನ್ನು ಮುಚ್ಚಿಸಿದರು. ಅಂದಿನ ಮುಖ್ಯ ಮಂತ್ರಿಯವರು ಕನ್ನಡ ಶಿಕ್ಷಕರಿಲ್ಲ ಎಂದು ಹೇಳಿದಾಗ ಜಯದೇವಿಯವರು ಸ್ವಂತ ಖರ್ಚಿನಿಂದ ಹಲವು ಶಿಕ್ಷಕರನ್ನು ನೇಮಿಸಿ ಕಳುಹಿಸಿದ್ದು, ಸಣ್ಣ ಕೆಲಸವಲ್ಲ ತಾನೇ? ಧಾರವಾಡದಲ್ಲಿ ಡೆಪ್ಯೂಟಿ ಚನ್ನಬಸಪ್ಪ, ವಿಜಾಪುರದಲ್ಲಿ ಫ.ಗು. ಹಳಕಟ್ಟಿಯವರು, ಕನ್ನಡ

ಶಾಲೆಗಳನ್ನು ಪ್ರಾರಂಬಿಸಲು ಕಾರಣವಾದಂತೆ ಹೈದರಾಬಾದ್ ಕರ್ನಾಟಕದಲ್ಲಿ ಕನ್ನಡ ಕಟ್ಟಲು ಜಯದೇವಿ ತಾಯಿ ಲಿಗಾಡೆಯವರು ಕಾರಣರಾದರು.

ಕರ್ನಾಟಕ ಏಕೀಕರಣ ಚಳುವಳಿ, ಕನ್ನಡ ಕಟ್ಟಲು ಹೋರಾಟ ಸಾಮಾಜಿಕ ಸೇವೆ ಸಲ್ಲಿಸುವ ನಿಮಿತ್ತ ಜಯದೇವಿಯವರು ಸಭೆ ಸಮಾರಂಭಗಳಲ್ಲಿ ಪಾಲ್ಗೊಳ್ಳಲು ಹೋಗುತ್ತಿರುವಾಗ ಅವರಿಗೆ ಸಂಸಾರ ಯಾವತ್ತೂ ಬಂಧನಕಾರಿ ಯಾಗಲಿಲ್ಲ. ಕನ್ನಡ ಜಾಗೃತಿಗಾಗಿ ಅಕ್ಕನ ಬಳಗ, ಮಹಿಳಾ ಮಂಡಲಗಳಲ್ಲಿ ಅಕ್ಕಮಹಾದೇವಿ ಜಯಂತಿ, ಬಸವ ಜಯಂತಿ, ರಾಷ್ಟ್ರೀಯ ಹಬ್ಬಗಳು ಹೀಗೆ ಅನೇಕ ಸಂದರ್ಭಗಳಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಕನ್ನಡಿಗರನ್ನು ಒಂದು ವೇದಿಕೆಗೆ ತಂದು ಅವರಲ್ಲಿ ಜಾಗೃತಿಮೂಡಿಸುತ್ತ ಜಯದೇವಿಯವರು ನಮ್ಮ ಸಂಸ್ಕಾರ ಸಂಸ್ಕೃತಿಗಳನ್ನು ಅವರು ಉಳಿಸಿಕೊಳ್ಳುವಂತೆ ತಿಳಿಸುತ್ತಿದ್ದರು. ಸೊಲ್ಲಾಪುರದ ಜ್ಞಾನಮಂದಿರದಲ್ಲಿ ಭಜನೆ, ಕೀರ್ತನೆ, ಬೋಧನೆ ಹಾಗೂ ಚರ್ಚೆಗಳಿಂದ ವೀರಶೈವ ಮಹಿಳೆಯರಲ್ಲಿ ವಚನ ಸಾಹಿತ್ಯಕುರಿತು ತಿಳುವಳಿಕೆ ಮೂಡಿಸಿದರು ಹಾಗೂ ವಾರದ ಮನೆತನ, ಮಡಿಕೆ ಮನೆತನ ಹಾಗೂ ಲಿಗಾಡೆ ಮನೆತನ ಹೆಣ್ಣುಮಕ್ಕಳ ಪ್ರಯತ್ನದಿಂದ ಸೊಲ್ಲಾಪುರ ವೀರಶೈವ ಮನೆತನಗಳ ಗಂಡಸರು ಮನೆಯಲ್ಲಿ ತಪ್ಪದೆ ಕನ್ನಡ ಮಾತಾಡುವಂತೆ ಆದದ್ದು, ಜಯದೇವಿ ಮೊದಲಾದವರ ಪ್ರಯತ್ನದಿಂದಲೇ ಎನ್ನಬಹುದು.

ಮೈಸೂರು ರಾಜ್ಯವೆಂದು ನಾಮಕರಣಗೊಂಡಾಗ ಅದು 'ಕರ್ನಾಟಕ'ವೆಂಬ ಹೆಸರು ಪಡೆಯಬೇಕೆಂದು ಹಿಂದಿನ ಅನೇಕ ಕವಿಗಳುಕೇಳಿಕೊಂಡ ಹಾಗೆ ಕವಿಯಿತ್ರಿ ಜಯದೇವಿಯವರೂ ಈ ಆಸೆ ಹೊಂದಿದ್ದರು. ಆ ಸಮಸ್ಯೆ ನನಸಾದಾಗ ಅದರ ಗಡಿ ಸಮಸ್ಯೆ ಇನ್ನೂ ಕನಸಾಗಿರುವುದನ್ನು ಅವರು ನೆನೆಸಿಕೊಂಡರು. ಕನ್ನಡ ಪ್ರದೇಶದ ಇನ್ನೂ ಹೆಚ್ಚಿನ ಭಾಗಗಳನ್ನು ಕಬಳಿಸುವಲ್ಲಿ ಹೊಂಚು ಹಾಕಿದ್ದ ಮರಾಠಿಗರ ಒತ್ತಾಯಕ್ಕೆ ಮಣಿದು ಬಂದ ಮಹಾಜನ ವರದಿಯನ್ನು ಕಡೆಗಣಿಸ ಕೂಡದೆಂದು ಜಯದೇವಿಯವರು ಕೇಂದ್ರ ಸರಕಾರಕ್ಕೆ ಕಳಕಳಿಯ ಮನವಿ ಮಾಡಿದ್ದರು.

೧೯೭೪ರ ಮೇ ತಿಂಗಳ ೩೧ ಹಾಗೂ ಜೂನ್ ೧ ಮತ್ತು ೨ ರಂದು ಜರುಗಿದ ೪೭ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಥಮ ಮಹಿಳಾ ಅಧ್ಯಕ್ಷಿಣಿಯಾಗಿ ಸರ್ವಾನುಮತದಿಂದ ಆಯ್ಕೆಯಾದರು, ಮಂಡ್ಯದಲ್ಲಿ ನಡೆದ ಈ ಸಮಾರಂಭದಲ್ಲಿ ಅವರು – 'ಮಹಿಳಾ ಸಾಕ್ಷರತೆ ಕಡೆಗೆ ಹೆಚ್ಚು ಗಮನ ಕೊಡಬೇಕು. ಸಾಹಿತ್ಯದಲ್ಲಿ ಜಾತಿ ಆಧಾರದ ವಿಭಾಗ ಕ್ರಮಗಳಿರಬಾರದು ಅದು ಬ್ರಾಹ್ಮಣ, ವೀರಶೈವ ಜೈನ ಎಂಬುದನ್ನು ಬಿಟ್ಟು 'ಕನ್ನಡ ಸಾಹಿತ್ಯ'ವೆಂದು ಅದನ್ನು ಕರೆಯ ಬೇಕೆಂದರು. ಆಗ ಅವರು ೬೦ರ ವಯಸ್ಸು ದಾಟಿದ್ದರೂ, ತಾವೂ ಸೇರಿಕೊಂಡು

ಕನ್ನಡಿಗರೆಲ್ಲ ನಾಡು-ನುಡಿಗೆ ದುಡಿಯಲು ಪಣತೊಡಿರಿ ಎಂದು ಹೇಳಿ ಕರ್ನಾಟಕ ಭುವನೇಶ್ವರಿಯ ತೇರು ಎಳೆಯಲು ಎಲ್ಲರನ್ನು ಪ್ರೇರೇಪಿಸಿದ್ದರು.

ಗಡಿನಾಡ ಸಿಂಹಿಣಿಯಾಗಿ ಗರ್ಜಿಸಿದ ಜಯದೇವಿಯವರು ಸದಾ ಕನ್ನಡ ಸಂಸ್ಕೃತಿ, ಕನ್ನಡ ನಾಡು, ಕನ್ನಡಭಾಷೆಯ ಬಗೆಗೆ ಆಲೋಚಿಸುತ್ತಿದ್ದರು ಅವರು ಕನ್ನಡವನ್ನು ಪ್ರಚಾರ ಮಾಡುತ್ತ, ಯಾವುದೇ ಸಂಕೋಚ ಭಾವನೆಯಿಲ್ಲದೆ ಮರಾಠಿಗರ ದೌರ್ಜನ್ಯ, ದುರಾಭಿಮಾನಗಳನ್ನು ಖಂಡಿಸುತ್ತಿದ್ದರು. ಮರಾಠಿ ಭಾಷೆ ಸಂಸ್ಕೃತಿ, ಸಾಹಿತ್ಯವನ್ನು ಕುರಿತು ಅವರು ಎಂದೂ ಎರಡು ಮಾತಾಡಿಲ್ಲ. ಅವರು ಮರಾಠಿಯಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಕನ್ನಡ ಮರಾಠಿ ಸಾಹಿತ್ಯ ಪ್ರೇಮಿಗಳಿಗೆ ಅವರು ಅಚ್ಚು ಮೆಚ್ಚಿನವರಾಗಿದ್ದರು. 'ಸಾಹಿತ್ಯ ಎರಡು ಅಪರಿಚಿತ ಆತ್ಮಗಳನ್ನು ಬೆಸೆಯಲು, ಮಾನವ ಜನಾಂಗವನ್ನು ದೇಶ-ದೇಶಗಳನ್ನು ಒಂದುಗೂಡಿಸುವ ಶಕ್ತಿ' ಎಂದು ಅವರು ತಿಳಿದಿದ್ದರು.

ಸಾಹಿತ್ಯದಲ್ಲಿ ಸಾಮಾಜಿಕ ಯಥಾರ್ಥವಾದದ ಪ್ರಜ್ಞೆ ಕಾಣಬೇಕೆಂದು ಜಯದೇವಿಯವರು ಬಯಸುತ್ತಿದ್ದರು, ಸಾಹಿತ್ಯ ಬರೀ ಆನಂದಕ್ಕಾಗಿ ಮಾತ್ರ ರಚಿತವಾಗುವಂತಿರಬಾರದು, ರಾಷ್ಟ್ರ ನಿರ್ಮಾಣದಂತಹ ಮಹತ್ತರವಾದ ಗುರಿ ಸಾಧಿಸಲು ಅದು ಸಹಾಯಕಾರಿಯಾಗಬೇಕು. ಮಾನವನ ವ್ಯಕ್ತಿತ್ವ ನಿರ್ಮಾಣ, ಸಾಮಾಜಿಕ ವಿಕಾಸತೆ, ಸರ್ವಾಂಗೀಣ ಪ್ರಗತಿ ಸಾಧಿಸಲು ಸಾಹಿತ್ಯದಲ್ಲಿ ಮಾರ್ಗ ದರ್ಶನವಿರಬೇಕೆಂಬುದು ಅವರ ಇಚ್ಛೆಯಾಗಿತ್ತು. ಸಾಹಿತಿಗಳು ಸತ್ಯ ಸಂಶೋಧನೆ ಹಾಗೂ ಜೀವನದ ಗಾಢ ಅನುಭವದಲ್ಲಿ ತಲ್ಲೀನರಾಗಿ ಸಾಹಿತ್ಯ ರಚಿಸಬೇಕು. ಅದು ಜೀವನೋಪಯೋಗಿ ಹಾಗೂ ನೀತಿ ಬೋಧಕವಾಗಿರಬೇಕೆಂದು ಅಭಿಪ್ರಾಯ ಪಟ್ಟರು. ಹೀಗೆ ಚಳುವಳಿ-ಸಾಹಿತ್ಯಿಕ ಮತ್ತು ಧಾರ್ಮಿಕ ಆಂದೋಲನಗಳ ಮೂಲಕ ನಾಡು ನುಡಿಗೆ ಆದರ್ಶವಾದ ಅಭಿಮಾನದ ಪಟ್ಟಗಟ್ಟಲು ಹೆಣಗಿದರು.

ಕನ್ನಡಕಾಗಿ ತನು-ಮನ-ಧನಗಳಿಂದ ನಿರಂತರವಾಗಿ ಸೇವೆ ಸಲ್ಲಿಸಿದ ಜಯದೇವಿ ತಾಯಿಯವರ ಲೌಕಿಕ ಮತ್ತು ಆಧ್ಯಾತ್ಮಿಕ ಜೀವನವನ್ನು ಬೇರ್ಪಡಿಸಲು ಬರುವುದಿಲ್ಲ. ಯಾಕೆಂದರೆ ಅವರದು ಶರಣ ಜೀವನ ಸಂಸಾರ ಮತ್ತು ಆದ್ಯಾತ್ಮವನ್ನು ಒಂದಾಗಿಸಿ ಬಾಳುವುದೇ ಸಾಮರಸ್ಯ. ಆ ಸಾಮರಸ್ಯವನ್ನೇ ಅವರು, ಅಂತಿಮ ಗುರಿಯಾಗಿಸಿಕೊಂಡಿದ್ದರೂ ಸಹ ತಾಯಿಯವರ ವ್ಯಕ್ತಿತ್ವವು ಬಹುಮುಖಿ ಯಾದುದು. ಅವರ ಆದರ್ಶತನ, ವ್ಯವಹಾರ ಜ್ಞಾನ, ಅಂತಃಕರಣ ತುಂಬಿದ ಮಾತೃತ್ವ, ಕನ್ನಡಕ್ಕಾಗಿ ಹೋರಾಟ ಮಾಡಿದ ವೀರತನ, ನಾಡು-ನುಡಿ-ರಾಷ್ಟ್ರದ ಬಗೆಗಿರುವ ಭಕ್ತಿ, ಅಭಿಮಾನಗಳೆಲ್ಲ ಜಯದೇವಿ ತಾಯಿಯವರ ದರ್ಶನ ಹಾಗೂ ಸಂದೇಶಗಳನ್ನು ಸಾರುವಂಥ ಅಂಶಗಳಾಗಿವೆ. ಅವರ ಸಾಹಿತ್ಯವು ಕಲ್ಪನೆಯಿಂದ ಸೃಷ್ಟಿಯಾದುದಲ್ಲ. ಅದಕ್ಕೆ ತಳಹದಿ ಅನುಭವವಾಗಿದೆ. ಕನ್ನಡಿಗರ ಜೀವನದ

ಅನಂತಮುಖದ ಅನುಭವ ಮಾಗಿ ಕಾವ್ಯವಾಗಿ ಮೂಡಿಬಂದಿದೆ. ಆ ಸಾಹಿತ್ಯದಲ್ಲಿ ಮರ್ತ್ಯದ ಬಾಳು ಮಹವಾಗಿಸುವ 'ದರ್ಶನ' ತುಂಬಿದ್ದು ಆ ದರ್ಶನ ಜಾತಿ-ಮತ ಪಂಥ-ವರ್ಗಗಳಿಂದ ದೂರವಾಗಿದೆ. ಅದೊಂದು ಸಾರ್ವಕಾಲಿಕವಾದುದು. ಸಮಕಾಲೀನ ಪ್ರಜ್ಞೆ, ಯುಗ ಧರ್ಮಗಳಿಂದ ಕೂಡಿದ ಅನುಭಾವ ಅದರಲ್ಲಿ ಹಾಸು ಹೊಕ್ಕಾಗಿದ್ದು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಹಾಗೂ ಕನ್ನಡನಾಡಿಗೆ ಜಯದೇವಿಯವರ ಕೊಡುಗೆ ಅನನ್ಯ ವಾದುದು ಎನ್ನಬಹುದು.

# ಗ್ರಂಥಋಣ


೧) ಜಯಗೀತ –ಜಯದೇವಿ ತಾಯಿ ಲಿಗಾಡೆ
ಕನ್ನಡ ಕೋಟೆ ಪ್ರಕಾಶನ ಸೊಲ್ಲಾಪುರ –೧೯೫೨

೨) ತಾಯಿಯ ಪದಗಳು – ೧೯೫೯

೩) ತಾರಕ ತಂಬುರಿ – ೧೯೬೮

೪) ಶ್ರೀ ಸಿದ್ಧರಾಮ ಪುರಾಣ – ೧೯೬೬

೫) ರಾಘವಾಂಕ ಕವಿಯ ಸಿದ್ಧರಾಮ ಚಾರಿತ್ರ್ಯ–ಸಂ. ಟಿ.ಎಲ್. ವೆಂಕಣ್ಣಯ್ಯ ಡಿ.ಎಲ್.ಎನ್.ಸಿ. ಸ್ಮಾರಕ ಗ್ರಂಥಮಾಲೆ ಮೈಸೂರು ೧೯೭೫

೬) ಜಯದೇವಿ ತಾಯಿ ಸಂ – ಸೂರ್ಯನಾರಾಯಣ ಚಡಗ, ನಂದನ ಪ್ರಕಾಶನ ಮಲ್ಲೇಶ್ವರ ಬೆಂಗಳೂರು

೭) ಜಯದೇವಿ ತಾಯಿ ಲಿಗಾಡೆ – ಡಾ. ಸರೋಜಿನಿ ಚವಲಾರ ಕನ್ನಡ ಸಾಹಿತ್ಯ ಪರಿಷತ್ತು –೧೯೯೨ ಬೆಂಗಳೂರು

೮) ಶರಣೆ ಜಯದೇವಿ ತಾಯಿ – ಡಾ ಬಿ ಎಸ್. ಸ್ವಾಮಿ ೨೦೦೬ ಬಸವತತ್ವ ಪ್ರಚಾರ ಹಾಗೂ ಸಂಸೋಧನಾ ಕೇಂದ್ರ ಪ್ರಕಾಶನ ಬೆಂಗಳೂರು

೯) ಗಡಿನಾಡು ಭಾಷಾ ಸಮಸ್ಯೆ – ಸುಬ್ಬಣ್ಣ ಅಂಬೆಸಂಗ –೨೦೦೭ ಪ್ರಸಾರಾಂಗ ಗು.ವಿ.ವಿ ಗುಲಬರ್ಗಾ

೧೦) ಬೀದರ ಜಿಲ್ಲಾ ದರ್ಶನ – ಸಂ. ಡಾ. ಸೋಮನಾಥ ಯಾಳವಾರ ಡಾ. ಪ್ರೇಮಾ ಸಿರ್ಸೆ– ಪ್ರಸಾರಂಗ . ಗು.ವಿ.ವಿ ಗುಲಬರ್ಗಾ೨೦೦೪

೧೧) ಕರ್ನಾಟಕ ಏಕೀಕರಣ ಹೋರಾಟ ಮತ್ತು ಮಹಿಳೆ – ಡಾ. ರತ್ನಶೀಲಾ ಶಿ. ಗುರಡ್ಡಿ ಅಲ್ಲಮ ಪ್ರಭು ಜನ ಕಲ್ಯಾಣ ಸಂಸ್ಥೆ – ೨೦೦೪ ಚಿಂಚಣಿ .

೧೨) ಸಿದ್ಧರಾಮೇಶ್ವರ ಪುರಾಣ ಒಂದು ಅವಲೋಕನ – ಡಾ. ಶಂಕರಣ್ಣ ಮೊಗಿ – ೧೯೯೪ ಪ್ರಸಾರಾಂಗ ಗು.ವಿ.ವಿ. ಗುಲಬರ್ಗಾ

೧೩) ಜಯದೇವಿ ತಾಯಿ ಲಿಗಾಡೆ – ಡಾ ಚನ್ನಾಂಬಿಕಾ ಪಾವಡೆ ಕ.ಸಾ.ಪ. ೧೯೯೨ ಬೆಂಗಳೂರು.

ವಿವಿಧ ಸಮಾರಂಭಗಳಲ್ಲಿ ಭಾಗವಹಿಸಿದ್ದ ಭಾವ ಚಿತ್ರಗಳು



ಜಯದೇವಿ ತಾಯಿ ಲಿಗಾಡೆ



ಹುಬ್ಬಳ್ಳಿಯಲ್ಲಿ ಶ್ರೀ ಸಿದ್ಧರಾಮೇಶ್ವರ ಪುರಾಣ ಮಹಾಕಾವ್ಯದ ಭವ್ಯ ಮೆರವಣಿಗೆ
ಚಿತ್ರದಲ್ಲಿ ತಾಯಿ ಅವರ ಮಗಳು ಸೌ॥ ಲಲ್ಲೇಶ್ವರಿ ಮೂಗಿ ಅವರನ್ನು ಕಾಣಬಹುದು.



"ಶಿವಶರಣೆ ಜಯದೇವಿತಾಯಿ"



ಜಯದೇವಿ ತಾಯಿ ಲಿಗಾಡೆ



ಪೂಜಾ ಸಮಯದಲ್ಲಿ ಜಯದೇವಿ ತಾಯಿ ಲಿಗಾಡೆ



ಅ.ನ.ಕೃ. ಸನ್ಮಾನ ಸಮಾರಂಭದಲ್ಲಿ ಜಯದೇವಿತಾಯಿ, ಶ್ರೀಮತಿ ಅ.ನ.ಕೃ., ಗುಂಡ್ಮಿ ರಾಮಕೃಷ್ಣ ಐತಾಳರು.



ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾಗಾಂಧಿ ಅವರೊಡನೆ ರಾಜ್ಯದ ಗಡಿ ಕುರಿತು ಸಮಾಲೋಚನೆ. ಮಧ್ಯದಲ್ಲಿರುವವರು ಪ್ರಭುರಾಜ ಲಿಗಾಡೆ ಅವರು.



ಉಡುಪಿಯಲ್ಲಿ ನಡೆದ ವಿಶ್ವಹಿಂದು ಪರಿಷತ್ತಿನ ಮಹಿಳಾಗೋಷ್ಠಿಯ ಅಧ್ಯಕ್ಷತೆ ವಹಿಸಿದಾಗ, ಬಲಗಡೆ ಇರುವವರು ರಾಜಮಾತೆ ವಿಜಯರಾಜೆ ಶಿಂಧೆ ಅವರು





ಕಾರ್ಯಕ್ರಮದಲ್ಲಿ 'ತಾಯಿ'ಯವರು



ಜಯನಿಕೇತನದಲ್ಲಿ ಹಿರಿಯ ರಾಜಕಾರಣಿಗಳು. ಜಯದೇವಿತಾಯಿ, ಕೇಂದ್ರ ಸರ್ಕಾರದ ಸಚಿವ ಆರ್.ಕೆ. ಖಾಡಿಲ್ಕರ್, ಮೈಸೂರಿನ ಮಾಜಿ ಶಿಕ್ಷಣ ಮಂತ್ರಿ ಎಸ್.ಆರ್. ಕಂಠಿ, ಪ್ರಭುರಾಜ ಲಿಗಾಡೆ, ಡಾ. ಬಸವರಾಜ ಲಿಗಾಡೆ



ಅಖಿಲ ಭಾರತ 48ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೀಯ ಭಾಷಣ ಮಾಡುತ್ತಿರುವ ಜಯದೇವಿ ತಾಯಿ ಲಿಗಾಡೆ.

